ಬುಧವಾರ, ಏಪ್ರಿಲ್ 26, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 115 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮರುಬಳಸಬಹುದಾದ ರಾಕೆಟ್‌ಗಳ ಸಂಶೋಧನೆಯಲ್ಲಿ ಇಸ್ರೊ ಸಾಧನೆ ಮಾಡಿದೆ

ಆಳ-ಅಗಲ
ತೂಗುಯ್ಯಾಲೆಯಲ್ಲಿ ‘ಸಿಂಧೂ ಜಲ ಒಪ್ಪಂದ’

ಎಸ್ಸೆಸ್ಸೆಲ್ಸಿ: ಮೇ 15ರ ಒಳಗೆ ಫಲಿತಾಂಶ 4

ಕೇರಳದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಚಾಲನೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,130 ▲	17,769 ▲	₹62,120 (ಬೆಂಗಳೂರು) ▲	₹76,700 (ಬೆಂಗಳೂರು) ▲	81.95 ▼

ಪ್ರಚಾರ: ಕನ್ನಡ ಅಸ್ಮಿತೆಯ ಅಬ್ಬರ

ಚುನಾವಣಾ ಅಖಾಡದಲ್ಲಿ ಪ್ರಚಾರ ರಂಗೇರುತ್ತಿದ್ದಂತೆ ಕನ್ನಡ ಅಸ್ಮಿತೆಯ ಪ್ರಶ್ನೆ ಮತ್ತೆ ಮುನ್ನೆಲೆಗೆ ಬಂದಿದೆ. ಅಭಿವೃದ್ಧಿಗಾಗಿ ಕರ್ನಾಟಕವನ್ನು ಮತ್ತೆ ಮೋದಿ ಅವರ ಕೈಗೆ ಕೊಡುವಂತೆ ಅಮಿತ್ ಶಾ ಅವರು ಹೇಳಿರುವುದು ವಿವಾದದ ಕಿಡಿ ಹೊತ್ತಿಸಿದೆ. ಪ್ರಿಯಾಂಕಾ ಗಾಂಧಿ,ದೇವೇಗೌಡ ಅಸ್ಮಿತೆಯ ಪ್ರಶ್ನೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ.

‘ಪ್ರಧಾನಿ ಕೈಯಲ್ಲಿ ಕರ್ನಾಟಕ ಭವಿಷ್ಯ’

ಬಾಗಲಕೋಟೆ: ‘ಇದು ಕೇವಲ ನಾಲ್ಕಾರು ಶಾಸಕರು, ಸಚಿವರನ್ನು ಆಯ್ಕೆ ಮಾಡುವ ಚುನಾವಣೆಯಲ್ಲ. ಕರ್ನಾಟಕದ ಭವಿಷ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಕೈಯಲ್ಲಿಡುವ ಚುನಾವಣೆಯಾಗಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಜಿಲ್ಲೆಯ ಬನಹಟ್ಟಿಯಲ್ಲಿ ಮಂಗಳವಾರ ನಡೆದ ಬಿಜೆಪಿ ಅಭ್ಯರ್ಥಿಗಳ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಬರುವ ಚುನಾವಣೆಯಲ್ಲಿ ಮೋದಿ ನೇತೃತ್ವದಲ್ಲಿ ಕರ್ನಾಟಕದಲ್ಲಿ ಪೂರ್ಣ ಬಹುಮತದೊಂದಿಗೆ ಡಬಲ್ ಎಂಜಿನ್ ಸರ್ಕಾರ ರಚನೆಗೆ ಮುಂದಾಗಿ’ ಎಂದು ಮನವಿ ಮಾಡಿದರು.

‘ಇದು ರಾಜ್ಯವನ್ನು ಸಂಪೂರ್ಣ ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಚುನಾವಣೆಯಾಗಿದೆ. ಸಭೆಯಲ್ಲಿರುವ ಜನರಿಗಿಂತ ಎರಡು ಪಟ್ಟು ಜನರು ಹೊರಗಡೆ ರಸ್ತೆಯಲ್ಲಿ ಇದ್ದಾರೆ. ಜನರನ್ನು ನೋಡಿದರೆ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಬರಲಿದೆ ಎಂದು ಗೊತ್ತಾಗುತ್ತದೆ’ ಎಂದು ಹೇಳಿದರು.

‘ಕರ್ನಾಟಕದ ಭವಿಷ್ಯವನ್ನು ಮೋದಿ ಅವರ ಕೈಯಲ್ಲಿ ಕೊಡುವ ಚುನಾವಣೆ ಎಂಬ ಸತ್ಯವನ್ನೇ ಹೇಳಿದ್ದೀರಿ. ದೆಹಲಿಯಲ್ಲಿ ಕುಳಿತು ರಾಜ್ಯಗಳನ್ನು ಆಳಲು ಇದು ರಾಜಪ್ರಭುತ್ವ ಅಲ್ಲ, ಪ್ರಜಾಪ್ರಭುತ್ವ. ಕನ್ನಡಿಗರಿಗೆ ಇದೆಂತಹ ಅವಮಾನ. ಕರ್ನಾಟಕದ ಭವಿಷ್ಯವನ್ನು ನೋಡಿಕೊಳ್ಳಲು ಒಬ್ಬ ಕನ್ನಡಿಗನೂ ಇಲ್ಲದಷ್ಟು ನಿಮ್ಮ ಪಕ್ಷ ದಿವಾಳಿ ಆಗಿದೆಯೇ?

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

‘ಕಾಂಗ್ರೆಸ್ ರಿವರ್ಸ್ ಗೇರ್ ಸರ್ಕಾರ ಆಗಿದೆ. ಅವರು ಬಂದರೆ ಅಭಿವೃದ್ಧಿ ರಿವರ್ಸ್ ಗೇರ್‌ನಲ್ಲಿ ಹೋಗಲಿದೆ. ಕಾಂಗ್ರೆಸ್ ತಪ್ಪಾಗಿ ಅಧಿಕಾರಕ್ಕೆ ಬಂದರೂ ಎಲ್ಲ ಕಾಲದಲ್ಲಿಯೂ ದಾಖಲೆಯಾಗುವಂತಹ ಭ್ರಷ್ಟಾಚಾರ ಹೆಚ್ಚಾಗುತ್ತದೆ. ತುಷ್ಟೀಕರಣ, ಪರಿವಾರ ರಾಜಕಾರಣ, ರಾಜ್ಯದಲ್ಲಿ ಗಲಭೆ ಹೆಚ್ಚಾಗಲಿದೆ. ಇದೆಲ್ಲ ನಿಮಗೆ ಬೇಕಾ’ ಎಂದು ಶಾ ಪ್ರಶ್ನಿಸಿದರು.



‘ಕನ್ನಡಿಗರಿಗೆ ಮೋದಿ ಆಶೀರ್ವಾದ ಬೇಕಿಲ್ಲ’

ಮೈಸೂರು: ‘ಮತ ಹಾಕದಿದ್ದರೆ ನರೇಂದ್ರ ಮೋದಿಯವರ ಆಶೀರ್ವಾದ ಸಿಗುವುದಿಲ್ಲವೆಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಅಹಂಕಾರದಿಂದ ಹೇಳಿದ್ದಾರೆ. ಇದು ಬಸವಣ್ಣ, ಕುವೆಂಪು ಅವರ ನಾಡು. ಅವರ ಆಶೀರ್ವಾದವಿರುವಾಗ ಮೋದಿ ಆಶೀರ್ವಾದ ಬೇಕಾಗಿಲ್ಲ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಗುಡುಗಿದರು.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಹೆಳವರ ಹುಂಡಿಯಲ್ಲಿ ಮಂಗಳವಾರ ನಡೆದ ಪ್ರಚಾರಸಭೆಯಲ್ಲಿ ಮಾತನಾಡಿದ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿಕೆಗೆ ತಿರುಗೇಟು ನೀಡಿದರು.

‘ಈ ಚುನಾವಣೆಯಲ್ಲಿ ಮೋದಿ ಸೇರಿದಂತೆ ಯಾವ ನಾಯಕರೂ ಮುಖ್ಯರಲ್ಲ. ಕರ್ನಾಟಕದ ಜನರಷ್ಟೇ ಮುಖ್ಯ. ನಿಮ್ಮ ಅನುಭವದ ಮೇಲೆ, ಯೋಚಿಸಿ ಮತ ಚಲಾಯಿಸಿ. ಲೂಟಿಕೋರ ಸರ್ಕಾರವನ್ನು ತೆಗೆದು ಹಾಕಿ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ’ ಎಂದು ಕೋರಿದರು

ನಂದಿನಿ ವರ್ಸಸ್ ಅಮೂಲ್ ಕುರಿತು ಪ್ರಸ್ತಾಪಿಸಿದ ಅವರು, ‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ‘ನಂದಿನಿ’ ಬ್ರ್ಯಾಂಡ್‌ಗೆ ಬಲ ತುಂಬುವ ಕೆಲಸ ಮಾಡಲಾಗುವುದು. ಹೊರರಾಜ್ಯದ ಹಾಲು ಉತ್ಪಾದಕ ಸಹಕಾರಿ ಸಂಘಕ್ಕೆ ರಾಜ್ಯದಲ್ಲಿ ಹಾಲು ಮಾರಲು ಅವಕಾಶ ನೀಡುವುದಿಲ್ಲ’ ಎಂದೂ ಹೇಳಿದರು.

‘ರಾಜ್ಯದಲ್ಲಿ ಈ ಹಿಂದೆ ಹೆಚ್ಚುವರಿ ಹಾಲು ಉತ್ಪಾದನೆಯಾಗುತ್ತಿತ್ತು. ಕೆಎಂಎಫ್ ಅನ್ನು ದುರ್ಬಲಗೊಳಿಸಲು ಬೇಕಂತಲೇ ಹಾಲು ಉತ್ಪಾದನೆ ಕುಂಠಿತವಾಗುವಂತೆ ನೋಡಿಕೊಳ್ಳಲಾಗಿದೆ’ ಎಂದು ಪ್ರಿಯಾಂಕಾ ದೂರಿದರು.

‘ತಮಿಳರನ್ನು ನೋಡಿ ನಾವು ಕಲಿಯಬೇಕು’

ಪಿರಿಯಾಪಟ್ಟಣ/ ಕೆ.ಆರ್.ನಗರ (ಮೈಸೂರು ಜಿಲ್ಲೆ): ‘ತಮಿಳುನಾಡಿನ ಜನರನ್ನು ನೋಡಿ ನಾವು ಕಲಿಯುವುದು ಬಹಳಷ್ಟಿದೆ. ಅಲ್ಲಿ ಕಾಂಗ್ರೆಸ್, ಬಿಜೆಪಿ ಇಲ್ಲ. ಜನ ಪ್ರಾದೇಶಿಕ ಪಕ್ಷಕ್ಕೆ ಮನ್ನಣೆ ನೀಡಿದ್ದಾರೆ. ಅಭಿವೃದ್ಧಿಗಾಗಿ ಇಲ್ಲಿಯೂ ಜೆಡಿಎಸ್ ಬೆಂಬಲಿಸಬೇಕು’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಪಿರಿಯಾಪಟ್ಟಣದಲ್ಲಿ ಮಂಗಳವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿ, ‘ಪಂಚರತ್ನ ಯೋಜನೆ ಜಾರಿಗೆ ತಂದರೆ, ರೈತರು, ಕೃಷಿ ಕಾರ್ಮಿಕರು, ಎಲ್ಲ ಸಮುದಾಯಗಳಿಗೆ ಅನುಕೂಲವಾಗಲಿದೆ’ ಎಂದರು.

‘ಜೆಡಿಎಸ್ 25 ಸ್ಥಾನ ಗೆಲ್ಲುವುದಿಲ್ಲ ಎಂದು ಮೈಸೂರು ಭಾಗದ ಕಾಂಗ್ರೆಸ್ ನಾಯಕರೊಬ್ಬರು ಲಘುವಾಗಿ ಮಾತನಾಡುತ್ತಿದ್ದಾರೆ. ಅನ್ನಭಾಗ್ಯ, ಕ್ಷೀರ ಭಾಗ್ಯ ಕೊಟ್ಟೆ ಎಂದು ಹೇಳಿಕೊಳ್ಳುವವರು, ಸಮ್ಮಿಶ್ರ ಸರ್ಕಾರವಿದ್ದಾಗ, ರೈತರ ಸಾಲ ಮನ್ನಾ ಮಾಡಲು ಹಣ ಎಲ್ಲಿಂದ ತರುತ್ತೀರಿ ಎಂದು ಕಾಲೆಳೆದಿದ್ದರು’ ಎಂದು ಸಿದ್ದರಾಮಯ್ಯ ವಿರುದ್ಧ ಟೀಕಾಪ್ರಹಾರ ನಡೆಸಿದರು. ‘ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಯಾದಾಗಲೂ ನಾವು ಯಾರ ಮನೆ ಬಾಗಿಲಿಗೂ ಹೋಗಿರಲಿಲ್ಲ. ಕಾಂಗ್ರೆಸ್‌ನವರೇ ನಮ್ಮ ಮನೆ ಬಾಗಿಲಿಗೆ ಬಂದು ಬೆಂಬಲ ನೀಡಿದರು. ಹಟದಿಂದ ಸರ್ಕಾರ ರಚಿಸಿ, ನಂತರ ತೆಗೆದರು’ ಎಂದು ಆರೋಪಿಸಿದರು.

ಪಕ್ಷದ ಅಭ್ಯರ್ಥಿ ಕೆ.ಮಹದೇವ್ ಕುರಿತು ಮಾತನಾಡಿದ ಅವರು, ‘90 ವರ್ಷ ವಯಸ್ಸಿನಲ್ಲಿಯೂ ನಾನು ಚುನಾವಣೆ ಪ್ರಚಾರ ಮಾಡುತ್ತಿದ್ದೇನೆ. ಗಟ್ಟಿಮುಟ್ಟಾಗಿರುವ ನೀವು ಇದೇ ನನ್ನ ಕೊನೇ ಚುನಾವಣೆ ಎಂದು ಹೇಳಬಾರದು’ ಎಂದು ಉತ್ತೇಜಿಸಿದರು.

ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರ ಮತ್ತೊಮ್ಮೆ ಭರವಸೆ

ಮುಸ್ಲಿಮರ ಮೀಸಲಾತಿ ಯಾವುದೇ ಕ್ರಮ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ಮಾರ್ಚ್ 27ರ ಸರ್ಕಾರಿ ಆದೇಶದಂತೆ ಯಾವುದೇ ನೇಮಕಾತಿಗಳು ನಡೆಯುವುದಿಲ್ಲ ಎಂದು ಸಾಲಿಸಿಟರ್ ಜನರಲ್ ಅವರೇ ಹೇಳಿದ್ದಾರೆ. ಹೀಗಾಗಿ ಯಾವುದೇ ಪೂರ್ವಾಗ್ರಹ ಬೇಕಿಲ್ಲ
ಸುಪ್ರೀಂ ಕೋರ್ಟ್ ಪೀಠ

ನವದೆಹಲಿ: ಹಿಂದುಳಿದ ವರ್ಗದ ಕೋಟಾದಲ್ಲಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಹಿಂಪಡೆದು, ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ಮರುಹಂಚಿಕೆ ಮಾಡಿರುವ ಮಾರ್ಚ್ 27ರ ಆದೇಶದ ಮೇಲೆ ಸದ್ಯ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮತ್ತೊಮ್ಮೆ ಭರವಸೆ ನೀಡಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ.ನಾಗರತ್ನ ಅವರನ್ನು ಒಳಗೊಂಡ ನ್ಯಾಯಪೀಠವು ರಾಜ್ಯ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮನವಿಯನ್ನು ಪರಿಗಣನೆಗೆ ತೆಗೆದುಕೊಂಡಿತು. ಪ್ರಕರಣದ ಮುಂದಿನ ವಿಚಾರಣೆಯನ್ನು ಮೇ 9ಕ್ಕೆ ಮುಂದೂಡಿತು.

‘ಮಾರ್ಚ್ 27ರ ಆದೇಶದ ಆಧಾರದ ಮೇಲೆ ಯಾವುದೇ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾತಿ ನೀಡುವುದಿಲ್ಲ ಮತ್ತು ಯಾವುದೇ ಉದ್ಯೋಗಗಳಿಗೆ ನೇಮಕಾತಿ ಮಾಡುವುದಿಲ್ಲ’ ಎಂದು ಸರ್ಕಾರ ಹಿಂದಿನ ವಿಚಾರಣೆಯ ವೇಳೆ ಭರವಸೆ ನೀಡಿತ್ತು.

‘ಮೆಹ್ತಾ ಅವರು ವಿಚಾರಣೆಯನ್ನು ಮುಂದೂಡಲು ಕೋರಿದ್ದರಿಂದ ಹಿಂದಿನ ವ್ಯವಸ್ಥೆಯು ಮುಂದಿನ ವಿಚಾರಣೆಯವರೆಗೆ ಮುಂದುವರಿಯಲಿದೆ’ ಎಂದು ನ್ಯಾಯಪೀಠ ಆದೇಶಿಸಿತು.

ಸಾಲಿಸಿಟರ್ ಜನರಲ್ ನೀಡಿದ ಭರವಸೆಯಂತೆ ಯಾವುದೇ ನೇಮಕಾತಿ ನಡೆಯುವುದಿಲ್ಲ ಹಾಗೂ ರಾಜ್ಯ ಸರ್ಕಾರದ ಹೇಳಿಕೆಗಳಿಗೆ ಪೂರ್ವಾಗ್ರಹ ಪೀಡಿತವಾಗದೆ ಮುಂದಿನ ವಿಚಾರಣೆ ನಡೆಸಲಾಗುವುದು ಎಂದು ಪೀಠ ಹೇಳಿತು.

ಆರಂಭದಲ್ಲಿ ತುಷಾರ್ ಮೆಹ್ತಾ, ರಾಜ್ಯ ಸರ್ಕಾರದ ಪ್ರತಿಕ್ರಿಯೆಯನ್ನು ದಿನದಲ್ಲಿ ಸಲ್ಲಿಸುವುದಾಗಿ ತಿಳಿಸಿದರು. ‘ಸರ್ಕಾರದ ಪ್ರತಿಕ್ರಿಯೆಯನ್ನು ಇಂದು ಸಲ್ಲಿಸುತ್ತೇನೆ. ಆದರೆ, ಒಂದು ವೈಯಕ್ತಿಕ ಸಮಸ್ಯೆ ಇದೆ. ಸಾಂವಿಧಾನಿಕ ಪೀಠದಲ್ಲಿ ಸಲಿಂಗ ವಿವಾಹದ ಕುರಿತು ವಿಚಾರಣೆ ನಡೆಯುತ್ತಿದೆ. ನಾನು ಅಲ್ಲಿ ವಾದ ಮಂಡಿಸಬೇಕಿದೆ. ಹೀಗಾಗಿ, ಈ ಪ್ರಕರಣದ ವಿಚಾರಣೆಯನ್ನು ಇನ್ನೊಂದು ದಿನ ಇರಿಸಿ’ ಎಂದು ಕೋರಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ ಈ ಪ್ರಸ್ತಾವಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ‘ವಿಚಾರಣೆ ಯನ್ನು ಈಗಾಗಲೇ ನಾಲ್ಕು ಬಾರಿ ಮುಂದೂಡಲಾಗಿದೆ. ಇದರಿಂದ ಅರ್ಜಿದಾರರಿಗೆ ತೊಂದರೆಯಾಗುತ್ತದೆ’ ಎಂದೂ ಗಮನ ಸೆಳೆದರು.

ನ್ಯಾಯಾಲಯ ನೀಡಿರುವ ಮಧ್ಯಂತರ ಆದೇಶ ಅರ್ಜಿದಾರರ ಪರವಾಗಿದೆ ಎಂದು ಮೆಹ್ತಾ ಹೇಳಿದರು. ಮುಂದಿನ ವಿಚಾರಣೆಯವರೆಗೆ ಮಾರ್ಚ್ 27ರ ಆದೇಶದ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂಬ ಮೆಹ್ತಾ ಅವರ ಹೇಳಿಕೆಯನ್ನು ದಾಖಲಿಸುವಂತೆ ದವೆ ಅವರು ಪೀಠವನ್ನು ಕೋರಿದರು. ಇದಕ್ಕೆ ಪೀಠ ಒಪ್ಪಿಗೆ ಸೂಚಿಸಿತು.

5ನೇ ಪುಟ ನೋಡಿ

ಮಂಜೂರು ಅಧಿಸೂಚನೆ 6 ತಿಂಗಳ ಹಿಂದೆಯೇ ರದ್ದು

42,114 ಹೆಕ್ಟೇರ್ ಭೂ ಹಕ್ಕಿಗೆ ವಿಘ್ನ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗಳಿಗೆ ಮಂಜೂರು ಮಾಡಿದ್ದ ಎಲ್ಲ ಅಧಿಸೂಚನೆಗಳನ್ನು 6 ತಿಂಗಳ ಹಿಂದೆ ರದ್ದುಪಡಿಸಿದ್ದ ರಾಜ್ಯ ಸರ್ಕಾರ, ಈಗ ಆರ್‌ಟಿಸಿ (ಪಹಣಿ), ಮ್ಯುಟೇಷನ್‌ಗಳಲ್ಲಿ ‘ಅರಣ್ಯ ಭೂಮಿ’ ಎಂದು ನಮೂದಿಸುವ ಇಂಡೀಕರಣ ಕೆಲಸವನ್ನು ಕೈಗೊಂಡಿದೆ.

ಅರಣ್ಯೇತರ ಚಟುವಟಿಕೆಗಳಿಗೆ 1978ರ ನಂತರ ಮಂಜೂರಾದ 42,114 ಹೆಕ್ಟೇರ್ ಭೂ ಪ್ರದೇಶದ ಇಂಡೀಕರಣ ಕಾರ್ಯವನ್ನು ಮೊದಲ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಮನೆಗಳು, ಜನವಸತಿ ಗ್ರಾಮಗಳು, ಸಾಗುವಳಿ ಜಮೀನು ಸೇರಿದಂತೆ ಹಕ್ಕುಪತ್ರ, ಸಾಗುವಳಿಯ ಆರ್‌ಟಿಸಿಗಳಲ್ಲೂ ‘ಅರಣ್ಯಭೂಮಿ’ ಎಂದು ನಮೂದಾಗಲಿದೆ. ಹೀಗೆ ನಮೂದಾದ ಮನೆ, ಕೃಷಿ ಜಮೀನಿನ ಮೇಲಿನ ಒಡೆತನವನ್ನು ಜನರು ಕಳೆದುಕೊಳ್ಳಲಿದ್ದಾರೆ.

ಶರಾವತಿ ಸೇರಿದಂತೆ ಸರ್ಕಾರದ ವಿವಿಧ ಯೋಜನೆಗಳಿಂದ ನಿರಾಶ್ರಿತರಾದವರ ಪುನರ್ವಸತಿಗಾಗಿ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಕರ್ನಾಟಕ ಅರಣ್ಯ ಕಾಯ್ದೆ 1963ರ 28ನೇ ನಿಯಮದ ಅನ್ವಯ ದತ್ತವಾದ ಅಧಿಕಾರ ಚಲಾಯಿಸಿ, ರಾಜ್ಯ ಸರ್ಕಾರ ಅರಣ್ಯ ಭೂಮಿಯನ್ನು ಡಿ–ನೋಟಿಫಿಕೇಶನ್ ಮಾಡಿತ್ತು.

ಕೇಂದ್ರ ಸರ್ಕಾರದ ಅನುಮತಿ ಪಡೆಯದೆ ಅರಣ್ಯ ಭೂಮಿಯನ್ನು ಸಂರಕ್ಷಿತ ಪ್ರದೇಶದಿಂದ ಕೈಬಿಡಲಾಗಿದೆ (ಡಿ–ನೋಟಿಫಿಕೇಶನ್). ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರಕ್ಕಿಂತ ಕಡಿಮೆ ಅರಣ್ಯ ಇದ್ದರೂ, ಇಂಡೀಕರಣ ಕಾರ್ಯ ಕೈಗೊಂಡಿಲ್ಲ ಎಂದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಗಿರೀಶ್ ಆಚಾರ್ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್, ಕಂದಾಯ ಇಲಾಖೆಗೆ ಅರಣ್ಯ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಸರ್ಕಾರ 1963 ಹಾಗೂ 1980ರ ಅರಣ್ಯ ಕಾಯ್ದೆಯ ನಿಯಮಗಳನ್ನು ಪಾಲಿಸಿಲ್ಲ. ಕೇಂದ್ರದ ಅನುಮತಿ ಪಡೆಯದೇ ಡಿ–ನೋಟಿಫಿಕೇಶನ್ ಮಾಡಲಾಗಿದೆ. ಇದು ಕಾನೂನು ಬಾಹಿರ ಎಂದು ತೀರ್ಪು ನೀಡಿತ್ತು.

4ನೇ ಪುಟ ನೋಡಿ

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
SANDHILIN
ತಯಾರಕರು
SDM AYURVEDA PHARMACY
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

ಮಂಡ್ಯ: ನಾಲೆಯಲ್ಲಿ ಮುಳುಗಿ ಐವರ ಸಾವು

ಪ್ರಜಾವಾಣಿ ವಾರ್ತೆ

ಮಂಡ್ಯ: ರಂಜಾನ್ ರಜೆಗೆಂದು ಸಂಬಂಧಿಕರ ಮನೆಗೆ ಬಂದಿದ್ದ ಎರಡು ಕುಟುಂಬಗಳ ಐವರು, ತಾಲ್ಲೂಕಿನ ದೊಡ್ಡಕೊತ್ತಗೆರೆ ಗ್ರಾಮದ ಬಳಿ ಮಂಗಳವಾರ ವಿಶ್ವೇಶ್ವರಯ್ಯ ನಾಲೆಯ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಬೆಂಗಳೂರಿನ ನೀಲಸಂದ್ರ ಬಡಾವಣೆಯ ಅನೀಷಾ ಬೇಗಂ (34), ಅವರ ಮಗಳು ಮೆಹತಾಬ್ (10), ಅಮಾನುಲ್ಲಾ ಎಂಬುವರ ಮಕ್ಕಳಾದ ತಸ್ಮಿಯಾ (22), ಅಫೀಕಾ (22) ಮತ್ತು ಅಶ್ರಕ್ (28) ಮೃತಪಟ್ಟವರು.

ಹಬ್ಬದ ಆಚರಣೆ ಮುಗಿದ ನಂತರ ಅವರೆಲ್ಲ ತಾಲ್ಲೂಕಿನ ಹಲ್ಲೇಗೆರೆಯ ಸಂಬಂಧಿಕರ ಮನೆಗೆ ಬಂದಿದ್ದರು. ನಾಲೆ ಬಳಿ ಆಟವಾಡುತ್ತಿದ್ದ ಮೆಹತಾಬ್ ನೀರಿಗೆ ಬಿದ್ದಿದ್ದಾಳೆ. ಆಕೆಯನ್ನು ರಕ್ಷಿಸಲು ತೆರಳಿದಾಗ ಇತರರೂ ಸುಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಬಂದ ಬಸರಾಳು ಠಾಣೆ ಪೊಲೀಸರು ಅಗ್ನಿಶಾಮಕ ದಳದ ಸಿಬ್ಬಂದಿಯೊಂದಿಗೆ ಮೂವರ ಮೃತದೇಹಗಳನ್ನು ಹೊರಕ್ಕೆ ತೆಗೆದಿದ್ದು, ಇನ್ನೆರಡು ಮೃತದೇಹಗಳ ಪತ್ತೆಗಾಗಿ ಶೋಧ ನಡೆದಿದೆ.

‘ನೀರಿನ ಹರಿವಿನ ವೇಗ ಹೆಚ್ಚಾಗಿದ್ದು ಮೃತದೇಹಗಳು ಕೊಚ್ಚಿ ಹೋಗಿರಬಹುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಬಸರಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಡಾನ್‌ನಿಂದ ಹೊರಟ ಭಾರತದ ಮೊದಲ ತಂಡ

ನವದೆಹಲಿ/ಖಾರ್ಟೂಮ್ (ಎಪಿ/ಎಎಫ್‌ಪಿ/ಪಿಟಿಐ): ಹಿಂಸಾಚಾರ ಪೀಡಿತ ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರ ಮೊದಲ ತಂಡವನ್ನು ಹೊತ್ತ ನೌಕಾಪಡೆಯ ‘ಐಎನ್‌ಎಸ್ ಸುಮೇಧ’ ನೌಕೆಯು ಪೋರ್ಟ್ ಸುಡಾನ್‌ನಿಂದ ಹೊರಟಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. 12

INDIAN ACADEMY
Degree College - Autonomous
Re-Accredited by NAAC 'A++' Grade, Affiliated to Bengaluru North University
ADMISSION OPEN NOW
UG PROGRAMMES
• B.Com - ACCA • B.Sc. Life Sciences
• BBA Industry Integrated • B.Sc. Physical Sciences
• BBA Business Analytics • B.Sc. Data Science
• BBA International • BA Humanities
• BCA
PG PROGRAMMES • M.Sc. • M.Com. • M.Com.(FA)
www.iadc.ac.in
Scan for Admission
INDIAN ACADEMY PRE-UNIVERSITY COLLEGE
Recognized as Grade 'A' PU College by Pre-University Education Board, Govt of Karnataka
• PCMB • PCMC • PCME • CSBA
• CEBA • HEBA • MEBA • MSBA
With K-CET, JEE and NEET Coaching
www.indianacademy.edu.in
Scan for Admission
080 - 67458900 | 9901110757
E-Mail: admissions@indianacademy.edu.in
Campus Address: Hennur Main Road, Kalyan Nagar Post, Bangalore - 560 043.

‘ಸಲಿಂಗ ಮದುವೆ: ಸಂಸತ್ತಿಗೇ ಕಾಯ್ದೆ ರಚಿಸುವ ಅಧಿಕಾರ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮದುವೆ, ವಿಚ್ಛೇದನ ಹಾಗೂ ಉತ್ತರಾಧಿಕಾರದಂತಹ ವಿಷಯಗಳ ಕುರಿತು ಶಾಸನ ರೂಪಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇದೆ. ಹೀಗಾಗಿ, ಸಲಿಂಗ ಮದುವೆಗೆ ನ್ಯಾಯಾಲಯ ಮಾನ್ಯತೆ ನೀಡುವುದು ಹೇಗೆ ಎಂದು ಸುಪ್ರೀಂಕೋರ್ಟ್ ಮಂಗಳವಾರ ಪ್ರಶ್ನಿಸಿದೆ.

ವಿಶೇಷ ವಿವಾಹ ಕಾಯ್ದೆಯನ್ನು ಪ್ರಸ್ತಾಪಿಸಿದ ಸುಪ್ರೀಂಕೋರ್ಟ್, ದತ್ತು ಪಡೆದುಕೊಳ್ಳುವುದು, ಉತ್ತರಾಧಿಕಾರ ಒಳಗೊಂಡಂತೆ ವೈಯಕ್ತಿಕ ಕಾನೂನುಗಳ ಮೇಲೆ ಈ ಕಾಯ್ದೆಯು ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯಪಟ್ಟಿತು.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ಮಂಗಳವಾರವೂ ಮುಂದುವರಿಯಿತು. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಂವಿಧಾನ ಪೀಠ ಅರ್ಜಿ ವಿಚಾರಣೆ ನಡೆಸಿತು.

‘ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳಲ್ಲಿನ ವಿಷಯಗಳಿಗೆ ಸಂಬಂಧಿಸಿ ಮಧ್ಯಪ್ರವೇಶಿಸಲು ಸಂಸತ್ತಿಗೆ ಮಾತ್ರ ಅಧಿಕಾರ ಇದೆ ಎಂಬುದನ್ನು ನೀವು ಅಲ್ಲಗಳೆಯಲಾರಿರಿ’ ಎಂದು ಅರ್ಜಿದಾರರ ಪರ ವಕೀಲರನ್ನು ಉದ್ದೇಶಿಸಿ ನ್ಯಾಯಪೀಠ ಹೇಳಿತು.

‘ಸಮವರ್ತಿ ಪಟ್ಟಿಯಲ್ಲಿರುವ 5ನೇ ಅಂಶವು ಮದುವೆ ಹಾಗೂ ವಿಚ್ಛೇದನ ಕುರಿತು ವಿವರಣೆ ನೀಡುತ್ತದೆ. ಹೀಗಾಗಿ ಈ ವಿಷಯದಲ್ಲಿ ನ್ಯಾಯಾಲಯ ಮಧ್ಯಪ್ರವೇಶಿಸುವುದಕ್ಕೆ ಅವಕಾಶ ಎಲ್ಲಿದೆ ಎಂಬುದೇ ನಮ್ಮ ಪ್ರಶ್ನೆ. ಈ ವಿಷಯ ಕುರಿತು ನ್ಯಾಯಾಲಯ ನಿರ್ಣಯಿಸಲು ಹೇಗೆ ಸಾಧ್ಯ?’ ಎಂದು ಹೇಳಿತು.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಮೇನಕಾ ಗುರುಸ್ವಾಮಿ, ‘ಈ ವಿಷಯ ಕುರಿತು ನಿರ್ಣಯ ಕೈಗೊಳ್ಳುವ ಅಧಿಕಾರ ಸಂಸತ್ತಿಗೆ ಇದೆ ಎಂಬುದಾಗಿ ಸರ್ಕಾರ ಹೇಳಲು ಸಾಧ್ಯವಿಲ್ಲ’ ಎಂದರು.

‘ಸಮುದಾಯವೊಂದರ ಹಕ್ಕುಗಳ ಉಲ್ಲಂಘನೆಯಾದಾಗ, ಸಂವಿಧಾನದ 32ನೇ ವಿಧಿಯಲ್ಲಿ ಹೇಳಿರುವಂತೆ ಸಂವಿಧಾನ ಪೀಠದ ಮೊರೆ ಹೋಗುವ ಅಧಿಕಾರ ವಂಚಿತ ಸಮುದಾಯಕ್ಕೆ ಇದೆ’ ಎಂದು ಪ್ರತಿಪಾದಿಸಿದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾ ಮತ
ಜನತಂತ್ರದ ಹಬ್ಬ

‘ಹಣ, ಮದ್ಯ ಹಂಚದೇ ಚುನಾವಣೆ; ಇದು ನಮ್ಮ ವಾಗ್ದಾನ’ 6
ರಾಜ್ಯ ಸರ್ಕಾರದಿಂದ ₹1.5 ಲಕ್ಷ ಕೋಟಿ ಲೂಟಿ: ಪ್ರಿಯಾಂಕಾ 6
ವ್ಯಕ್ತಿ– ಪಕ್ಷ ನಿಷ್ಠೆಯ ನಡುವೆ ಜೀಕಾಟ: ಗೊಂದಲದಲ್ಲಿ ಮತದಾರ 7
‘ಕಾಂಗ್ರೆಸ್ ಪ್ರೇಕ್ಷಕರಿಲ್ಲದ ನಾಟಕ ಕಂಪನಿ’ 7

RAMAIAH UNIVERSITY OF APPLIED SCIENCES
UGC U/S 2(F) OF UGC ACT 1956
Applied Brilliance Makes all the Difference
NMC NBA ACCREDITATION AICTE BAR COUNCIL OF INDIA DENTAL COUNCIL OF INDIA PHARMACY COUNCIL OF INDIA
PROVIDING QUALITY EDUCATION IN EXCELLENCE 62 YEARS RAMAIAH GROUP OF INSTITUTIONS
ADMISSIONS OPEN 2023-24
Faculty of Engineering & Technology
B.Tech. | M.Tech.
Faculty of Art & Design
B.Des. • Product Design • Fashion Design • Interaction Design
M.Des. • Product Design • Fashion Design
Faculty of Mathematical & Physical Sciences
B.Sc. (Hons.) • Physics, Chemistry, Mathematics
M.Sc. • Physics • Mathematics • Analytical Chemistry • Organic Chemistry • Industrial Chemistry
Faculty of Hospitality Management and Catering Technology
BHM Bachelor of Hotel Management
Faculty of Pharmacy
B.Pharm. Bachelor of Pharmacy Pharm.D Doctor of Pharmacy
M.Pharm. • Pharmacognosy • Pharmacy Practice • Pharmaceutics • Pharmacology • Pharmaceutical Chemistry
Faculty of Dental Sciences
BDS Bachelor of Dental Surgery
MDS Master of Dental Surgery
Ramaiah Medical College
MBBS | MD/MS | DM/M.Ch
Ramaiah College of Physiotherapy
BPT | MPT
PG Diploma in Facility Management
Ph.D. Programs
Faculty of Life & Allied Health Sciences
B.Sc. (Hons.) • Biotechnology • Food Processing and Technology
B.Sc. (Hons.) • Cardiac Care Technology • Optometry • Dialysis Therapy Technology • Medical Radiology and Imaging Technology • Anesthesia and Operation Theatre Technology
M.Sc. • Biotechnology • Molecular & Cellular Biology • Food Science & Technology • Food Nutrition and Dietetics
MHA Masters in Hospital Administration
MPH Master of Public Health
School of Social Sciences
BA / B.Sc. (Hons.) in Economics
B.Sc. (Hons.) • Data Sciences & Analytics • Psychology
M.A. in Public Policy
Faculty of Management and Commerce
B.Com. (Hons.) • Accounting & Finance BBA
MBA • Marketing Management • Human Resource Management • Operations Management • Financial Management • Small Business & Entrepreneurship • Business Analytics • Banking & Financial Services • Hospitality Management • Pharma Business Management
School of Law
B.Sc. LL.B. (Hons.) | B.A. LL.B. (Hons.)
Ramaiah Institute of Nursing Education & Research
B.Sc. Nursing | M.Sc. Nursing
Post Basic B.Sc. Nursing
Other Programs B.Voc. in • Product Design & Modelling • Culinary Operation • Mechatronics • Retail Management
All UG,PG and Ph.D. Programs are approved by Statutory Bodies
Ranked As... ACCREDITED A+ Ramaiah Medical College | nirf ALL INDIA RANKING 2022 38th Ramaiah Medical College 14th Faculty of Dental Sciences 62nd Faculty of Pharmacy | ARIIA ATAL RANKING OF INSTITUTIONS ON INNOVATION ACHIEVEMENTS
APPLY NOW RUAS AT ADMISSIONS TEST
UG & PG Programmes
For details and registration scan this QR Code (OR) visit website: https://admissions.msruas.ac.in/
Test Dates : 25th - 30th April, 2023
Gnanagangothri Campus (GGC): University House, New BEL Road, MSR Nagar, Bengaluru - 560 054.
Ramaiah Technology Campus (RTC), Peenya : #470-P, Peenya Industrial Area, Peenya 4th Phase, Bengaluru - 560 058.
801 000 4444
admissions23@msruas.ac.in
www.msruas.ac.in

ರುದ್ರೇಶ್ವರ ತರುಣ ಸಂಘದ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ನೆಲಮಂಗಲ: ವಿವಿಧ ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಇಲ್ಲಿನ ಶ್ರೀ ರುದ್ರೇಶ್ವರ ತರುಣ ಸಂಘಕ್ಕೆ ಈಗ ಶತಮಾನೋತ್ಸವದ ಸಂಭ್ರಮ.

ಎಂ.ಗುಬ್ಬಿ ಹುಚ್ಚಪ್ಪ

'ಬಿಟ್ಟು ಹೋಗುವ ಮುನ್ನ ಏನನ್ನಾದರು ಕೊಟ್ಟು ಹೋಗಬೇಕು' ಎನ್ನುವ ಮಹತ್ವಾಕಾಂಕ್ಷೆಯ ಎಂ.ಗುಬ್ಬಿ ಹುಚ್ಚಪ್ಪ ಅವರು ಸಮಾನ ಮನಸ್ಕ ಗೆಳೆಯರ ತಂಡ ಕಟ್ಟಿಕೊಂಡು 1923ರ ಏ. 20ರಂದು ಈ ಸಂಘ ಸ್ಥಾಪಿಸಿದ್ದರು.

ಸಂಘದ ವತಿಯಿಂದ ಪ್ರಥಮವಾಗಿ ಜಯದೇವ ಗ್ರಂಥಾಲಯ ಸ್ಥಾಪಿಸಲಾಯಿತು. ಮರು ವರ್ಷವೇ 1924ರಲ್ಲಿ ಜಯದೇವ ಹಾಸ್ಟೆಲ್ ಸ್ಥಾಪಿಸಿ 10 ಎಕರೆ ಜಮೀನನ್ನು ಗುಬ್ಬಿ ಹುಚ್ಚಪ್ಪ ಅವರು ದಾನ ಮಾಡಿದರು. ಇದರಿಂದ ಪ್ರೇರಿತರಾದ ಸಮಾಜದ ಇತರ ಪ್ರಮುಖರು ಸೇರಿ 30 ಎಕರೆ ಜಮೀನು ದಾನ ನೀಡಿದರು. ಒಟ್ಟು 40 ಎಕರೆ ಜಮೀನಿನಿಂದ ಬರುವ ಉತ್ಪನ್ನಗಳಿಂದ ಹಾಸ್ಟೆಲ್‌ನ ವಸತಿ, ಊಟೋಪಚಾರ ವ್ಯವಸ್ಥೆ ಮಾಡಲಾಯಿತು. ಎಲ್ಲ ಜನಾಂಗದ ಬಡ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶ ನೀಡಲಾಯಿತು, 1980ರವರೆಗೂ ನಿರಂತರವಾಗಿ ನಡೆದು 50 ವರ್ಷ ಶಿಕ್ಷಣ ಅಪೇಕ್ಷಿತರ ಭವಿಷ್ಯಕ್ಕೆ ನಾಂದಿಯಾಯಿತು.

ಮುಖ್ಯಾಂಶಗಳು

- 50 ವರ್ಷ ಶಿಕ್ಷಣ ಅಪೇಕ್ಷಿತರ ಭವಿಷ್ಯಕ್ಕೆ ನಾಂದಿಯಾಗಿದೆ
- ವಿವಿಧ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿರುವ ಸಂಘ

ರುದ್ರೇಶ್ವರ ದೇವಾಲಯದ ಆಡಳಿತ ನಿರ್ವಹಣೆಗೆ ರುದ್ರೇಶ್ವರ ಸ್ವಾಮಿ ದೇವಾಲಯ ಟ್ರಸ್ಟ್ ಹೆಸರಿನ ದತ್ತಿ ಸ್ಥಾಪಿಸಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಯಿತು. ಶಿವಗಂಗೆಯ ಮೇಲಣಗವಿಮಠದ ಮಲಯಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎನ್.ಜಿ.ರುದ್ರಮೂರ್ತಿ ಅವರ ನಾಯಕತ್ವದಲ್ಲಿ ನಡೆಸಿ ಅಪೂರ್ವ ದಾಖಲೆಯನ್ನೇ ನಿರ್ಮಿಸಿದೆ.

ಪ್ರಸ್ತುತ ರುದ್ರೇಶ್ವರ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆದಿದ್ದು, ಗರ್ಭಗುಡಿಯ ಮೇಲೆ ಗೋಪುರ ನಿರ್ಮಿಸಲಾಗಿದೆ. ಮಂಗಳವಾರ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಡಾ. ಚಂದ್ರಶೇಖರ ಶಿವಚಾರ್ಯ ಶ್ರೀಗಳು ಶಿಖರ ಕಳಸಾರೋಹಣ ಮಾಡಿದರು ಮತ್ತು ಸಿದ್ಧಾಂತ ಶಿಖಾಮಣಿ ಪಾರಾಯಣ ಮಾಡಲಾಯಿತು. 26ರಂದು ಸಂಜೆ 5ಕ್ಕೆ 'ಶತರುದ್ರನಮನ' ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. 27ರಂದು ಶ್ರೀಗಳ ಇಷ್ಟಲಿಂಗ ಮಹಾಪೂಜೆಯೊಂದಿಗೆ ಶತಮಾನೋತ್ಸವ ಸಮಾರಂಭ ನಡೆಯಲಿದೆ.

ಬಿಬಿಎಂಪಿ, ಎನ್‌ಜಿಒಗಳ ಸಹಯೋಗ: ನಲವತ್ತಕ್ಕೂ ಹೆಚ್ಚು ಸಾರ್ವಜನಿಕ ಸ್ಥಳಗಳಿಗೆ ಹೊಸ ರೂಪ

ಕಸ ಸುರಿಯುವ ಪ್ರದೇಶವೀಗ ಸುಂದರ ತಾಣ

• ಶಿವರಾಜ್ ಮೌರ್ಯ

ಕಸ ಸುರಿಯುತ್ತಿದ್ದ ಪ್ರದೇಶ

ಮಾರ್ಷಲ್‌ಗಳ ಶ್ರಮದಿಂದ ಕಸ ಸುರಿಯುವ ಪ್ರದೇಶ ಸ್ವಚ್ಛಗೊಂಡಿದ್ದು, ಗೋಡೆಗೆ ಬಣ್ಣ ಬಳಿದು ಅಂದಗೊಳಿಸಲಾಗಿದೆ.

ಕೆ.ಆರ್.ಪುರ: ನಿತ್ಯ ಕಸ ಸುರಿಯುವ ಪ್ರದೇಶಗಳಾಗಿ ಮಾರ್ಪಾಡಾಗಿ ಜನರಿಗೆ ಕಿರಿಕಿರಿ ಎನಿಸಿದ್ದ ನಲವತ್ತಕ್ಕೂ ಹೆಚ್ಚು ಸಾರ್ವಜನಿಕ ಸ್ಥಳಗಳು ಸ್ವಚ್ಛ, ಸುಂದರ ಗಮನ ಸೆಳೆಯುವ ತಾಣಗಳಾಗಿ ಪರಿವರ್ತನೆಗೊಂಡಿವೆ.

ಮಹದೇವಪುರ ವಲಯದ ಕೆ.ಆರ್.ಪುರ ಬಿಬಿಎಂಪಿ ವಿಭಾಗದ ಸಹಯೋಗದಲ್ಲಿ ಕಸ ಸುರಿಯುವ ಪ್ರದೇಶಗಳಲ್ಲಿ ಪೌರ ಕಾರ್ಮಿಕರು, ಮಾರ್ಷಲ್, ಎನ್‌ಜಿಒಗಳ ಸಹಕಾರದಿಂದ ಕಸ ಸುರಿಯುವ ಜಾಗದಲ್ಲಿ ಜನರಿಗೆ ಕಸ ಸುರಿಯದಿರುವ ಬಗ್ಗೆ ಅರಿವು ಮೂಡಿಸುವ ಮೂಲಕ ಆ ಸ್ಥಳಗಳ ಸೌಂದರ್ಯಕ್ಕೆ ಕೈ ಜೋಡಿಸುವ ಕೆಲಸ ಆಗುತ್ತಿದೆ.

ಮಹದೇವಪುರದ ಮೇಲ್ಸೇತುವೆ ಬಳಿಯ ಸ್ಥಳವೂ ಕಸದ ತಾಣವಾಗಿತ್ತು. ಕಸ ಸುರಿಯು ತ್ತಿದ್ದರಿಂದ ನಿತ್ಯ ಜನರಿಗೆ ತೊಂದರೆ ಆಗುತ್ತಿತ್ತು. ಮಹದೇವಪುರ ಸುತ್ತಲ ಪ್ರದೇಶಗಳಿಂದ ಕೋಳಿ ತ್ಯಾಜ್ಯ, ಸಲೂನ್‌ಶಾಪ್‌ಗಳ ತ್ಯಾಜ್ಯ, ಕಟ್ಟಡಗಳ ತ್ಯಾಜ್ಯ ಸುರಿಯಲಾಗುತ್ತಿತ್ತು. ಇದು, ಬಿಬಿಎಂಪಿಗೆ ತಲೆನೋವಾಗಿ ಪರಿಣಮಿಸಿತ್ತು.

ಈ ಬಗ್ಗೆ ಕ್ರಮ ಕೈಗೊಂಡ ಬಿಬಿಎಂಪಿ ಬೆಳಿಗ್ಗೆ, ಸಂಜೆ ಮತ್ತು ರಾತ್ರಿ ವೇಳೆ ಕಸ ಸುರಿಯುವ ಸ್ಥಳಗಳಲ್ಲಿ ಮಾರ್ಷಲ್‌ಗಳನ್ನು ನೇಮಿಸಿ ಕಸ ಹಾಕುವವರಿಗೆ ದಂಡ ವಿಧಿಸುವುದು, ಜನರಿಗೆ ಮನವರಿಕೆ ಮಾಡಲು ಮುಂದಾದರೂ ಸಮಸ್ಯೆ ಬಗೆಹರಿದಿರಿಲ್ಲ. ಸಂಖ್ಯೆ ಕಡಿಮೆಯಾಗಿರಲಿಲ್ಲ. ಆದರೂ, ಪಟ್ಟು ಬಿಡದ ಮಾರ್ಷಲ್ ತಂಡ ಸ್ವಚ್ಛಗೊಳಿಸಿ-ಗೋಡೆ ಅಂದಗೊಳಿಸಿದೆ. ಸಾರ್ವಜನಿಕರೇ ಮೆಚ್ಚುಗೆ ವ್ಯಕ್ತಪಡಿಸಿ ಕಸ ಸುರಿಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು.

'ಮಹದೇವಪುರ ಮೇಲ್ಸೇತುವೆ ಬಳಿಯ ಸ್ಥಳ ನಿತ್ಯಕಸ ಸುರಿಯುವ ಪ್ರದೇಶವಾಗಿದ್ದರಿಂದ ಕಾಯಿಲೆ ಹರಡುವ ತಾಣವಾಗಿತ್ತು. ಬಿಬಿಎಂಪಿ ಗಮನಕ್ಕೆ ಬಂದ ನಂತರ ಮಾರ್ಷಲ್‌ಗಳ ಮೂಲಕ ಕಸ ಸುರಿಯದಂತೆ ಜಾಗೃತಿ ಮೂಡಿಸಲಾಯಿತು. ಈ ಜಾಗವನ್ನು ಎಂಟು ಜನರ ಮಾರ್ಷಲ್ ತಂಡ ಸ್ವಚ್ಛಗೊಳಿಸಿತು. ಇದರಿಂದ, ಈಗ ಯಾರೂ ಕಸ ಎಸೆಯುತ್ತಿಲ್ಲ' ಎಂದು ಮಾರ್ಷಲ್ ಗಿರೀಶ್ ಅವರು ಹೇಳಿದರು.

'ಅಗ್ಲಿ ಇಂಡಿಯನ್ ಎನ್ನುವ ಸರ್ಕಾರೇತರ ಸಂಸ್ಥೆ ಗೋಡೆಗೆ ಬಣ್ಣ ಬಳಿದು ಅಂದಗೊಳಿಸುವ ಕಾರ್ಯಕ್ಕೆ ಕೈ ಜೋಡಿಸಿದೆ. ಬಿಬಿಎಂಪಿ ಪೂರ್ಣ ಸಹಕಾರ ನೀಡಿದೆ. ಕೆ.ಆರ್.ಪುರ ಕ್ಷೇತ್ರದ 9 ವಾರ್ಡ್‌ಗಳಲ್ಲಿ ನಲವತ್ತಕ್ಕೂ ಹೆಚ್ಚು ಕಡೆ ಕಸ ಸುರಿಯುವ ಪ್ರದೇಶಗಳನ್ನು ಹುಡುಕಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿದ್ದೇವೆ' ಎಂದು ಮಾರ್ಷಲ್ ಉಸ್ತುವಾರಿಯಾಗಿರುವ ಜಾನ್ ವಿಲಿಯಂ ಅವರು ಮಾಹಿತಿ ನೀಡಿದರು.

Government of Madhya Pradesh
Office of the Engineer-in-Chief
Water Resources Department,
Jal Sansadhan Bhawan, Tulsi Nagar, Bhopal (M.P.)
Email Id: ceproc.encwrd.bpl@nic.in
Tel: 0755-2767635 Fax: 0755-2552406

N.I.T. No. 983/2023-24/E-in-C/e-tendering — Bhopal, Dated 18.04.2023

Bids for following works are invited on website **https://www.mptenders.gov.in** Last Date of purchase/download of Bid Document and submission of bid is **10.05.2023, 17:30 hrs.** Any amendment/modification can be seen only on the website. Detailed N.I.T. and other details can be viewed on above mentioned website.

S. No.	Tender No.	Work	District	Amount (Lakhs)
1.	2023_WRD_268674	On Turnkey Basis:- Construction of Sip Amber Phase-II Pressurized Micro Lift Irrigation project, as per detailed scope of work but not limited to that.	Sehore	18529.51

G-11870/23 — Sd/- Chief Engineer (Procurement)

ಸೂಜಿ ರಹಿತ ಲಸಿಕೆ ಅಭಿಯಾನ

ಬೆಂಗಳೂರು: ವಿಶ್ವ ರೋಗನಿರೋಧಕ ಸಪ್ತಾಹದ ಅಂಗವಾಗಿ ಆಸ್ಟರ್ ಆರ್‌ವಿ ಆಸ್ಪತ್ರೆಯು ಮಕ್ಕಳು ಮತ್ತು ವಯಸ್ಕರಿಗೆ ಇದೇ 30ರವರೆಗೆ ಸೂಜಿ ರಹಿತ ಲಸಿಕೆ ಅಭಿಯಾನವನ್ನು ಹಮ್ಮಿಕೊಂಡಿದೆ. ಇದಕ್ಕಾಗಿ 'ಜೆಟ್ ಇಂಜೆಕ್ಷನ್' ಬಳಸಿಕೊಳ್ಳಲಾಗುತ್ತಿದೆ. ಸೂಜಿಗೆ ಹೆದರಿ ಕೆಲವರು ಲಸಿಕೆ ಪಡೆಯಲು ಹಿಂದೇಟು ಹಾಕುತ್ತಾರೆ. ಹೀಗಾಗಿ ನೋವು ರಹಿತವಾಗಿ ಲಸಿಕೆ ಒದಗಿಸಲು ಕ್ರಮವಹಿಸಲಾಗಿದೆ. ಕೋವಿಡ್ ಸೇರಿ ವಿವಿಧ ಲಸಿಕೆ ಪಡೆಯಬಹುದು. 6 ತಿಂಗಳು ಮೇಲ್ಪಟ್ಟವರಿಗೆ ನೀಡುವ ಎಲ್ಲ ಲಸಿಕೆ ಲಭ್ಯವಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಸಲಹೆಗಾರ್ತಿ ಡಾ. ಸುಜಾತಾ ತ್ಯಾಗರಾಜನ್ ತಿಳಿಸಿದ್ದಾರೆ.

'ಗ್ರಾಮೀಣ ರೈತರ ಆರ್ಥಿಕತೆಗೆ ಅಪಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ರೈತರಿಗೆ ಮಾರಕವಾದ ಕೃಷಿ ಕಾನೂನುಗಳನ್ನು ಜಾರಿಗೊಳಿಸಿ, ರೈತರ ಆರ್ಥಿಕತೆಗೆ ಅಪಾಯತಂದೊಡ್ಡಿದೆ' ಎಂದು ಆರ್ಥಿಕ ತಜ್ಞ ಡಾ. ಪ್ರಕಾಶ್ ಕಮ್ಮರಡಿ ಸೋಮವಾರ ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃಷಿ ಕ್ಷೇತ್ರದ ರಿಪೋರ್ಟ್ ಕಾರ್ಡ್ ಬಿಡುಗಡೆಗೊಳಿಸಿದ ಅವರು, 'ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿದ್ದರಿಂದ ಹಲವು ಎಪಿಎಂಸಿಗಳು ಮುಚ್ಚುವ ಹಂತಕ್ಕೆ ತಲುಪಿವೆ. ಇದರಿಂದಾಗಿ ಬೆಲೆ ಸ್ಥಿರೀಕರಣ, ಕನಿಷ್ಠ ಬೆಂಬಲ ಬೆಲೆ ಅನುಷ್ಠಾನಕ್ಕೂ ತೊಂದರೆಯಾಗಿದೆ' ಎಂದು ಹೇಳಿದರು.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

'ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವಿಚಾರದಲ್ಲಿ ಸರ್ಕಾರಕ್ಕೆ ಬದ್ಧತೆ ಇಲ್ಲ. ಎಂಎಸ್‌ಪಿ ನಿಗದಿಗೆ ಕೈಪಿಡಿಯಂತಿದ್ದ ರಾಜ್ಯ ಕೃಷಿ ಬೆಲೆ ಆಯೋಗದ ವರದಿಯನ್ನು ಸರ್ಕಾರ ಮೂಲೆಗೆ ತಳ್ಳಿದೆ. ಕನಿಷ್ಠ ಬೆಂಬಲ ಬೆಲೆ ಕುರಿತ ರೈತರ ಬೇಡಿಕೆಗೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ಪರಿಣಾಮವಾಗಿ ಭೂಮಿ ಅಕ್ರಮ ಖರೀದಿ ಪ್ರಕರಣಗಳು ಸಕ್ರಮಗೊಂಡವು. ಆರ್ಥಿಕ ಬಲಾಢ್ಯರು ಅಡೆತಡೆಯಿಲ್ಲದೆ ಕೃಷಿಭೂಮಿ ಕೊಳ್ಳಲು ಇದು ಅನುವು ಮಾಡಿದೆ. ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿ ಕೃಷಿಕರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದೆ. ಇದರಿಂದಾಗಿ ರೈತರಲ್ಲಿ ಹಸು ಸಾಕಣೆ ಆಸಕ್ತಿಯೇ ಕುಗ್ಗಿ ಹೋಗಿದೆ' ಎಂದು ಅವರು ಹೇಳಿದರು

ಕೃಷಿ ತಜ್ಞರಾದ ಕೆ.ಪಿ.ಸುರೇಶ್, ಸಿದ್ಧಾರ್ಥ ಜೋಶಿ, ವತ್ಸಲಾ, ವಿ.ಗಾಯತ್ರಿ ಈ ಸಂದರ್ಭದಲ್ಲಿದ್ದರು.

ಜೈಪುರದಲ್ಲಿ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಬೆಂಗಳೂರಿನ ಡಾ.ಪ್ರಿಯಾಂಕ ಅವರು 'ವೋಗ್‌ಸ್ಟಾರ್ ಇಂಡಿಯಾ 2023' ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಪ್ರಸ್ತುತ ಇವರು ಮಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉದ್ಯೋಗಿ

'ಅಭಿವೃದ್ಧಿಗೆ ಡಬಲ್ ಎಂಜಿನ್ ಸರ್ಕಾರ'

ಕೆ.ಆರ್.ಪುರ: 'ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ' ಎಂದು ತ್ರಿಪುರದ ಮಾಜಿ ಮುಖ್ಯಮಂತ್ರಿ ಬಿಪ್ಲಾವ್ ಕುಮಾರ್ ದೇಬ್ ಹೇಳಿದರು.

ಮಹದೇವಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಂಜುಳಾ ಅರವಿಂದ ಲಿಂಬಾವಳಿ ಪರವಾಗಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರು. 'ಡಬಲ್ ಎಂಜಿನ್ ಸರ್ಕಾರದಿಂದ ಹಲವು ಅಭಿವೃದ್ಧಿಗಳಾಗಿದ್ದು, ಮತ್ತಷ್ಟು ಅಭಿವೃದ್ಧಿಗೆ ಬಿಜೆಪಿ ಗೆಲ್ಲಿಸಬೇಕಿದೆ' ಎಂದರು. ನಗರಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಮಾಜಿ ಅಧ್ಯಕ್ಷ ರಾಜಾ ರೆಡ್ಡಿ ಇದ್ದರು.

ಅಂಜನಾಪುರದಲ್ಲಿ ಕಾಣಿಸಿಕೊಂಡಿದ್ದ ಹೆಬ್ಬಾವಿನೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರಿನಾ ಸಿಕ್ಕಲಿಗರ್ ಹಾಗೂ ವನ್ಯಜೀವಿ ಸಂರಕ್ಷಕರು

ಅಂಜನಾಪುರ: ಹೆಬ್ಬಾವು ರಕ್ಷಣೆ

ಬೆಂಗಳೂರು: ಅಂಜನಾಪುರದಲ್ಲಿ ಕಾಣಿಸಿಕೊಂಡಿದ್ದ ಇಂಡಿಯನ್ ರಾಕ್ ಪೈತಾನ್ (ಹೆಬ್ಬಾವು) ಅನ್ನು ರಕ್ಷಿಸಿರುವ ಬಿಬಿಎಂಪಿ ಅರಣ್ಯ ವಿಭಾಗದ ವನ್ಯಜೀವಿ ಸಂರಕ್ಷಕರು ಅದನ್ನು ರಕ್ಷಿಸಿ, ಆವಾಸ ಸ್ಥಾನಕ್ಕೆ ಬಿಡಲಾಗಿದೆ.

ಕುಂಬತ್ತಳ್ಳಿ ಅಂಜನಾಪುರದ ರಾಹಿದಾಸ್ ಅವರು ಏ.25ರ ತಡರಾತ್ರಿ ಕರೆ ಮಾಡಿ ಹೆಬ್ಬಾವು ಇರುವುದನ್ನು ಗಮನಕ್ಕೆ ತಂದರು. ವನ್ಯಜೀವಿ ಸಂರಕ್ಷಕರು ಸ್ಥಳಕ್ಕೆ ಭೇಟಿ ನೀಡಿ 6ರಿಂದ 7 ಅಡಿ ಉದ್ದದ ಹೆಬ್ಬಾವನ್ನು ಕಂಡರು. ಪ್ರಾಣಿ ಕಲ್ಯಾಣ ಪರಿಪಾಲಕ ಪ್ರಸನ್ನ ಕುಮಾರ್ ನೇತೃತ್ವದಲ್ಲಿ ಹಾವು ಹಿಡಿದು, ಆವಾಸ ಸ್ಥಾನಕ್ಕೆ ಬಿಡಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸರಿನಾ ಸಿಕ್ಕಲಿಗರ್ ತಿಳಿಸಿದರು.

ವನ್ಯಜೀವಿಗಳು, ವನ್ಯ ಪ್ರಾಣಿಗಳಿಂದ ಸಾರ್ವಜನಿಕರಿಗೆ ಆಗುವ ತೊಂದರೆ ನಿವಾರಿಸಲು ವನ್ಯಜೀವಿ ಸಂರಕ್ಷಣೆಯ ಕುರಿತು (ಹಾವುಗಳು, ಕೋತಿ, ಪಕ್ಷಿಗಳು ಹಾಗೂ ಇತರೆ) ಬರುವ ದೂರುಗಳಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ಹಾವುಗಳು ಬಿಸಿಲಿನ ತಾಪಕ್ಕೆ ಹೊರಬರುತ್ತಿದ್ದು ಯಾರೂ ಹಾನಿಯುಂಟುಮಾಡದೆ ಬಿಬಿಎಂಪಿ ಅರಣ್ಯ ವಿಭಾಗದ ವನ್ಯಜೀವಿ ತಂಡಗಳಿಗೆ ಕರೆ ಮಾಡಿ ತಿಳಿಸಬೇಕು. ಸಹಾಯವಾಣಿ 080-22221188 ಕರೆ ಮಾಡಿ ತಿಳಿಸಬೇಕು ಎಂದು ಕೋರಿದರು.

ಮಲೇರಿಯಾ ಪ್ರಕರಣ ಇಳಿಕೆ

ಬೆಂಗಳೂರು: ಮಲೇರಿಯಾ ಪ್ರಕರಣಗಳು ರಾಜ್ಯದಲ್ಲಿ ಇಳಿಮುಖವಾಗಿದ್ದು, ಈ ವರ್ಷ 11 ಮಂದಿ ಮಾತ್ರ ಈ ಜ್ವರದಿಂದ ಬಳಲಿದ್ದಾರೆ.

'ಶೂನ್ಯ ಮಲೇರಿಯಾ ಗುರಿ ತಲುಪೋಣ: ನವೀನ ವಿಧಾನಗಳನ್ನು ಅಳವಡಿಸಿ ಅನುಷ್ಠಾನಗೊಳಿಸೋಣ' ಎಂಬ ಘೋಷವಾಕ್ಯದೊಂದಿಗೆ ಆರೋಗ್ಯ ಇಲಾಖೆಯು ಮಂಗಳವಾರ 'ವಿಶ್ವ ಮಲೇರಿಯಾ ದಿನ' ಕಾರ್ಯಕ್ರಮ ಆಯೋಜಿಸಿತ್ತು. 2018ರಲ್ಲಿ ರಾಜ್ಯದಲ್ಲಿ 5,289 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದವು.

'2030ರ ವೇಳೆಗೆ ಮಲೇರಿಯಾ ಮುಕ್ತಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ರಾಜ್ಯದಲ್ಲಿ ನಿಗದಿತ ಸಮಯದೊಳಗೆ ಮಲೇರಿಯಾ ನಿವಾರಣೆಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಗ್ರಾಮ ಮತ್ತು ಸಂಸ್ಥೆಗಳ ಮಟ್ಟದಲ್ಲಿ ಕೀಟನಾಶಕಗಳು ಮತ್ತು ಜೈವಿಕ ನಿಯಂತ್ರಣ ಕ್ರಮಗಳ ಮೂಲಕ ರೋಗವಾಹಕಗಳ ನಿಯಂತ್ರಣ ಮಾಡಲಾಗುತ್ತಿದೆ. ಮುನ್ನೆಚ್ಚರಿಕೆಯಾಗಿ ಯಾವುದೇ ಜ್ವರ ಇದ್ದರೂ ರಕ್ತಪರೀಕ್ಷೆ ಮಾಡಿಸಿಕೊಳ್ಳಬೇಕು. ಮಲೇರಿಯಾ ದೃಢಪಟ್ಟಲ್ಲಿ ಚಿಕಿತ್ಸೆ ಪಡೆಯಬೇಕು' ಎಂದು ಇಲಾಖೆ ಹೇಳಿದೆ.

ಕ್ರಿಕೆಟ್: ಫೈನಲ್‌ಗೆ ಆರ್‌ವಿಸಿಇ, ಎಂಎಸ್‌ಆರ್‌ಐಟಿ

ಬೆಂಗಳೂರು: ಆತಿಥೇಯ ಎಂಎಸ್‌ಆರ್‌ಐಟಿ ಮತ್ತು ಆರ್‌ವಿಸಿಇ ತಂಡಗಳು, ಅಂತರ ಎಂಜಿನಿಯರಿಂಗ್ ಕಾಲೇಜು ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯಗಳಲ್ಲಿ ತಮ್ಮ ಎದುರಾಳಿಗಳನ್ನು ಏಳು ವಿಕೆಟ್‌ಗಳಿಂದ ಸೋಲಿಸಿದವು. ಗೆದ್ದ ಈ ಎರಡು ತಂಡಗಳು ಫೈನಲ್‌ನಲ್ಲಿ ಆಡುವ ಅರ್ಹತೆ ಗಳಿಸಿಕೊಂಡವು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಜ್ರ ಮಹೋತ್ಸವದ ಅಂಗವಾಗಿ ಈ ಟೂರ್ನಿ ನಡೆ ಯುತ್ತಿದೆ. ಫೈನಲ್ಸ್ ಇದೇ 28ರಂದು ನಡೆಯಲಿದೆ.

ಸರ್ ಎಂವಿಐಟಿ ಮೈದಾನದಲ್ಲಿ ಟಾಸ್ ಗೆದ್ದು ಬ್ಯಾಟ್ ಮಾಡಿದ ಜಿವಿಟಿ ತಂಡ ನಿಗದಿತ 30 ಓವರುಗಳಲ್ಲಿ 8 ವಿಕೆಟ್‌ಗೆ 151 ರನ್ ಗಳಿಸಿತು. ನೀರಜ್ ವಿ.ಪಿ. 61 ರನ್ ಗಳಿಸಿದರು. ಪ್ರಣವ್ 13 ರನ್ನಿಗೆ 4 ವಿಕೆಟ್ ಪಡೆದರು. ಇದಕ್ಕೆ ಉತ್ತರವಾಗಿ ಆರ್‌ವಿಸಿಇ ತಂಡ 23.3 ಓವರುಗಳಲ್ಲಿ 3 ವಿಕೆಟ್‌ಗೆ 153 ರನ್ ಬಾರಿಸಿತು. ನೀರಜ್ 46 ಮತ್ತು ಲೋಚನ್ ಅಪ್ಪಣ್ಣ 43 ರನ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಬಿಎಂಎಸ್‌ಸಿಇ ತಂಡ 20.2 ಓವರುಗಳಲ್ಲಿ 115 ರನ್ನಿಗೆ ಕುಸಿಯಿತು. ಎಂಎಸ್‌ಆರ್‌ಐಟಿ ತಂಡ ಯಶ್ ನೆರಳೆರಕರ್ ಅವರ 50 ರನ್‌ಗಳ ನೆರವಿನಿಂದ 13 ಓವರುಗಳಲ್ಲಿ 3 ವಿಕೆಟ್‌ಗೆ 116 ರನ್ ಬಾರಿಸಿತು.

ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023
ಚುನಾವಣಾಧಿಕಾರಿಗಳ ಕಾರ್ಯಾಲಯ,
178-ಹೊಸಕೋಟೆ ವಿಧಾನಸಭಾ ಕ್ಷೇತ್ರ, ಬೆಂ.ಗ್ರಾ.ಜಿಲ್ಲೆ
ದೂರವಾಣಿ ಸಂಖ್ಯೆ:080-27931237. Email ID : rohoskote2023@gmail.com

ಸಂಖ್ಯೆ:ಇ.ಎಲ್.ಎನ್:ಸಿಆರ್:-66/2022-23 — **ದಿನಾಂಕ**: 24-04-2023

ಪ್ರಕಟಣೆ

ವಿಷಯ :- ವಿಧಾನಸಭಾ ಸಾರ್ವತ್ರಿಕ ಚುನಾವಣೆ2023-ರ ಸಂಬಂಧ -178 ಹೊಸಕೋಟೆ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳ ಲೆಕ್ಕ ಪತ್ರ/ದಾಖಲೆಗಳ ತಪಾಸಣೆಯ ವಿವಿಧ ಹಂತದ ದಿನಾಂಕವನ್ನು ನಿಗಧಿಪಡಿಸಿರುವ ಬಗ್ಗೆ.

ಉಲ್ಲೇಖ :- ಜನತಾ ಪ್ರಾತಿನಿಧ್ಯ ಅಧಿನಿಯಮ 1951ರ 77ನೇ ಪ್ರಕರಣದಂತೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭಾ ಚುನಾವಣಾ ಅಭ್ಯರ್ಥಿಯು, ತಾನು ನಾಮಪತ್ರ ಸಲ್ಲಿಸಿದ ದಿನಾಂಕ ಹಾಗೂ ಚುನಾವಣಾ ಫಲಿತಾಂಶ ಘೋಷಣೆಯಾದ ದಿನಾಂಕದ ನಡುವೆ (ಎರಡು ದಿನಾಂಕಗಳು ಸೇರಿದಂತೆ) ಅಭ್ಯರ್ಥಿಯಾಗಲೀ ಅಥವಾ ಅವರ ಏಜೆಂಟ್ ಯಾಗಲೀ ಸ್ಪರ್ಧಿಸಿದ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಚುನಾವಣಾ ಏಜೆಂಟ್ ನ್ನು ಭರಿಸಿದ ಅಥವಾ ಅಧಿಕೃತಗೊಳಿಸಿದ ಎಲ್ಲಾ ವೆಚ್ಚದ ಲೆಕ್ಕವನ್ನು ಪ್ರತ್ಯೇಕವಾಗಿ ಮತ್ತು ಸರಿಯಾಗಿ ಇಟ್ಟುಕೊಳ್ಳುವುದು ಅಗತ್ಯವಾಗಿದೆ.

ಮೇಲಿನ ವಿವರದಂತೆ ನಿರ್ವಹಿಸಲಾಗಿರುವ ಚುನಾವಣಾ ವೆಚ್ಚದ ಲೆಕ್ಕಪತ್ರ ಮತ್ತು ದಾಖಲೆಗಳ (ರಶೀದಿ/ಬಿಲ್ಲುಗಳು) ತಪಾಸಣೆಯನ್ನು ಉಲ್ಲೇಖಿತ ಅಧಿನಿಯಮದನ್ವಯ 3 ಭಾರಿ ಚುನಾವಣಾ ವೆಚ್ಚ ವೀಕ್ಷಕರಿಂದ/ಅಧಿಕೃತವಾಗಿ ನಿಯೋಜಿಸಿದ ಅಧಿಕಾರಿಯಿಂದ ಲೆಕ್ಕ ತಪಾಸಣೆಯನ್ನು ಮಾಡಿಸಬೇಕಾಗಿರುತ್ತದೆ. ಆದ್ದರಿಂದ 178-ಹೊಸಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಉಮೇದುವಾರಿಕೆ ಸಲ್ಲಿಸಿರುವ ಅಭ್ಯರ್ಥಿಗಳ ವಿವಿಧ ಹಂತದ ಲೆಕ್ಕ ಪತ್ರ/ದಾಖಲೆಗಳ ತಪಾಸಣೆಗೆ ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

ಕ್ರ. ಸಂ	ಅಭ್ಯರ್ಥಿಯ ಹೆಸರು	ಹಂತ -1		ಹಂತ -2		ಹಂತ -3	
		ದಿನಾಂಕ	ಸಮಯ	ದಿನಾಂಕ	ಸಮಯ	ದಿನಾಂಕ	ಸಮಯ
1	ಎನ್ ನಾಗರಾಜು	26-04-2023.	ಬೆಳಿಗ್ಗೆ 10:15	01-05-2023	ಬೆಳಿಗ್ಗೆ 10:15	07-05-2023.	ಮಧ್ಯಾಹ್ನ 4:30
2	ಪ್ರಶಾಂತ್ ಸುಬ್ರಮಣಿ	26-04-2023.	ಬೆಳಿಗ್ಗೆ 10:45	01-05-2023	ಬೆಳಿಗ್ಗೆ 10:45	07-05-2023.	ಮಧ್ಯಾಹ್ನ 4:00
3	ಡಿ ಎಂ ಲಕ್ಷ್ಮೀನಾರಾಯಣ	26-04-2023.	ಬೆಳಿಗ್ಗೆ 11:15	01-05-2023	ಬೆಳಿಗ್ಗೆ 11:15	07-05-2023.	ಮಧ್ಯಾಹ್ನ 3:30
4	ಶರತ್ ಕುಮಾರ್ ಬಚ್ಚೇಗೌಡ	26-04-2023.	ಬೆಳಿಗ್ಗೆ 11:45	01-05-2023	ಬೆಳಿಗ್ಗೆ 11:45	07-05-2023.	ಮಧ್ಯಾಹ್ನ 3:00
5	ರಮೇಶ ಚಕ್ರವರ್ತಿ	26-04-2023.	ಮಧ್ಯಾಹ್ನ 12:15	01-05-2023	ಮಧ್ಯಾಹ್ನ 12:15	07-05-2023.	ಮಧ್ಯಾಹ್ನ 1:15
6	ಶರತ್‌ಬಚ್ಚೇಗೌಡ	26-04-2023.	ಮಧ್ಯಾಹ್ನ 12:45	01-05-2023	ಮಧ್ಯಾಹ್ನ 12:45	07-05-2023.	ಮಧ್ಯಾಹ್ನ 12:45
7	ಎಂ ಶ್ರೀಮತಿ	26-04-2023.	ಮಧ್ಯಾಹ್ನ 1:15	01-05-2023	ಮಧ್ಯಾಹ್ನ 1:15	07-05-2023.	ಮಧ್ಯಾಹ್ನ 12:15
8	ಬಿ ಸೊಣ್ಣಪ್ಪ ಗೌಡ	26-04-2023.	ಮಧ್ಯಾಹ್ನ 3:00	01-05-2023	ಮಧ್ಯಾಹ್ನ 3:00	07-05-2023.	ಬೆಳಿಗ್ಗೆ 11:45
9	ಅಜಯ್ ಕುಮಾರ್ ರೆಡ್ಡಿ ಆಡಲಾ	26-04-2023.	ಮಧ್ಯಾಹ್ನ 3:30	01-05-2023	ಮಧ್ಯಾಹ್ನ 3:30	07-05-2023.	ಬೆಳಿಗ್ಗೆ 11:15
10	ಪಿ ಆರ್ ಅನುಷ	26-04-2023.	ಮಧ್ಯಾಹ್ನ 4:00	01-05-2023	ಮಧ್ಯಾಹ್ನ 4:00	07-05-2023.	ಬೆಳಿಗ್ಗೆ 10:45
11	ಜೆ ಅಶೋಕ	26-04-2023.	ಮಧ್ಯಾಹ್ನ 4:30	01-05-2023	ಮಧ್ಯಾಹ್ನ 4:30	07-05-2023.	ಬೆಳಿಗ್ಗೆ 10:15
12	ಈರೇಗೌಡ (mtb)	27-04-2023.	ಬೆಳಿಗ್ಗೆ 10:15	02-05-2023.	ಬೆಳಿಗ್ಗೆ 10:15	06-05-2023.	ಮಧ್ಯಾಹ್ನ 4:30
13	ಅಂಬುಜ	26-04-2023.	ಮಧ್ಯಾಹ್ನ 4:55	01-05-2023	ಮಧ್ಯಾಹ್ನ 4:55	06-05-2023.	ಮಧ್ಯಾಹ್ನ 4:55
14	ನವೀನ್‌ಕುಮಾರ್	27-04-2023.	ಬೆಳಿಗ್ಗೆ 10:45	02-05-2023.	ಬೆಳಿಗ್ಗೆ 10:45	06-05-2023.	ಮಧ್ಯಾಹ್ನ 4:00
15	ಎನ್ ನಾಗರಾಜ್	27-04-2023.	ಬೆಳಿಗ್ಗೆ 11:15	02-05-2023.	ಬೆಳಿಗ್ಗೆ 11:15	06-05-2023.	ಮಧ್ಯಾಹ್ನ 3:30
16	ಟಿ ನಾಗರಾಜು	27-04-2023.	ಬೆಳಿಗ್ಗೆ 11:45	02-05-2023.	ಬೆಳಿಗ್ಗೆ 11:45	06-05-2023.	ಮಧ್ಯಾಹ್ನ 3:00
17	ಕಪಾಲಿ ನಾರಾಯಣಸ್ವಾಮಿ ಜಿ	27-04-2023.	ಮಧ್ಯಾಹ್ನ 12:15	02-05-2023.	ಮಧ್ಯಾಹ್ನ 12:15	06-05-2023.	ಮಧ್ಯಾಹ್ನ 1:15
18	ನಿತೀಶ್ ಟಿ ಡಿ ಪುರುಷೊತ್ತಮ್	27-04-2023.	ಮಧ್ಯಾಹ್ನ 12:45	02-05-2023.	ಮಧ್ಯಾಹ್ನ 12:45	06-05-2023.	ಮಧ್ಯಾಹ್ನ 12:45
19	ವಿ ನಿತೇಶ್ ಕುಮಾರ್	27-04-2023.	ಮಧ್ಯಾಹ್ನ 1:15	02-05-2023.	ಮಧ್ಯಾಹ್ನ 1:15	06-05-2023.	ಮಧ್ಯಾಹ್ನ 12:15
20	ಎಸ್ ಆರ್ ರಘುನಾಥ್	27-04-2023.	ಮಧ್ಯಾಹ್ನ 1:45	02-05-2023.	ಮಧ್ಯಾಹ್ನ 1:45	06-05-2023.	ಬೆಳಿಗ್ಗೆ 11:45
21	ಶರತ್ ಕುಮಾರ್ ಕೆ	27-04-2023.	ಮಧ್ಯಾಹ್ನ 3:00	02-05-2023.	ಮಧ್ಯಾಹ್ನ 3:00	06-05-2023.	ಬೆಳಿಗ್ಗೆ 11:15
22	ಎಚ್ ಟಿ ಶಶಿಕುಮಾರ್	27-04-2023.	ಮಧ್ಯಾಹ್ನ 3:30	02-05-2023.	ಮಧ್ಯಾಹ್ನ 3:30	06-05-2023.	ಬೆಳಿಗ್ಗೆ 10:45
23	ಸುರೇಶ್ ಕೆ	27-04-2023.	ಮಧ್ಯಾಹ್ನ 4:00	02-05-2023.	ಮಧ್ಯಾಹ್ನ 4:00	06-05-2023.	ಬೆಳಿಗ್ಗೆ 10:15

ಮೇಲಿನ ಕೋಷ್ಟಕದಲ್ಲಿ ನಿಗದಿಪಡಿಸಿರುವ ದಿನಾಂಕದಂದು ಚುನಾವಣಾ ಲೆಕ್ಕಗಳಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರ ಮತ್ತು ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಚುನಾವಣಾ ಏಜೆಂಟ್‌ರು ತಪ್ಪದೇ ಹಾಜರಾಗಿ ಲೆಕ್ಕ ತಪಾಸಣೆ ಮಾಡಿಸಿಕೊಳ್ಳುವುದು. ತಪ್ಪಿದ್ದಲ್ಲಿ ಚುನಾವಣಾ ನಿಯಮಾನುಸಾರ ಹಾಗೂ ಭಾರತದ ದಂಡ ಸಂಹಿತೆ 1860 ರ ಕಲಂ, 171-I ರಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಯಪಡಿಸಿದೆ.

"ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ"
"Nothing like Voting, I Vote for sure"

ಸಹಿ/-
ಚುನಾವಣಾಧಿಕಾರಿ,
178-ಹೊಸಕೋಟೆ ವಿಧಾನಸಭಾ ಕ್ಷೇತ್ರ

DIPR/CP/AAA/20/23-24

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. ECN-TRD-04-2023-RT ದಿನಾಂಕ: 18.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಅಸ್ತಿತ್ವದಲ್ಲಿರುವ ಎಲ್ ಸಿ ಗೇಟ್‌ಗಳಿಗೆ ಬದಲಾಗಿ ವಿವಿಧ ಆರ್ ಓಬಿ /ಆರ್ ಯುಬಿಗಳಿಗೆ ಓಎಚ್ ಇ ಮಾರ್ಪಾಡುಗಳು.	ರೂ. 1,81,97,710.20

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11-05-2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್‌ಡಿ/ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್

PUB/39/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SAN-LIN_Sig 2023-24-01 ದಿನಾಂಕ: 20.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಾಮಗಾರಿಯ ಹೆಸರು:	ರೂ. 15,82,65,402.36

ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದ ಗದಗ-ವಾಡಿ ವಿಭಾಗದ ನಡುವೆ ಹೊಸ ಮಾರ್ಗಕ್ಕೆ ಸಂಬಂಧಿಸಿದಂತೆ ಸಂಗನಾಳ, ಯಲಬುರ್ಗಾ, ಹನುಮಾಪುರ ಮತ್ತು ಲಿಂಗನಬಂಡಿ ನಿಲ್ದಾಣಗಳಲ್ಲಿ ಹೊರಾಂಗಣ ಸಿಗ್ನಲಿಂಗ್ ಕಾಮಗಾರಿ ಸೇರಿದಂತೆ ಎಲೆಕ್ಟ್ರಾನಿಕ್ ಇಂಟರ್ಲಾಕಿಂಗ್ ವ್ಯವಸ್ಥೆಯನ್ನು ಒದಗಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11-05-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ನಿರ್ಮಾಣ / ಹುಬ್ಬಳ್ಳಿ

PUB/38/AAV/PRB/SWR/2023-24

S.W.Railways SWRRLY SWRRLY

PUBLIC NOTICE

Public at large are hereby informed that our client Mr. Mohammed Mufseer, S/o. Muhammed Muzammil, residing at No.7054, Tower - 7, 5th Floor, Prestige Bagamane, Temple Bells Apartment, Jawaregowda Road, Rajarajeshwari Nagar, Bangalore - 560098 is intending to purchase the Schedule Property from Mr. A. R. Alagappan, S/o.Mr. Ram P.N.

Therefore, people who are having Objections or claims with respect to the Schedule Property are hereby called upon to submit their Objections / claims within Fifteen days from the date of this notice.

SCHEDULE PROPERTY

All that piece and parcel of residential property bearing Corporation No. 3/1 (Old No.2/1), Ashley Park Road, situated at Brunton Road, Bangalore, measuring East by 50 Ft., West by 50 Ft., North by 68 Ft., and South by 71 Ft., totally measuring 3475 Sq. Ft., and bounded on:- East by : Site No.54, West by:Ashley Road / Brunton Road, North by : Remaining portion of Site No.2/1, South by :Site No.2C.

M.G.C. & Co.,
Advocates and Solicitors
No.66, 4th Cross, Xavier Layout,
Behind Vijay Kiran Apartment
Bangalore - 560047
Ph. No.25546276
Mob:9449400145

Bangalore
Date:25.04.2023

PUBLIC NOTICE

Public at large are hereby informed that our clients M/s. LEAGUE VENTURES, A Partnership firm, having its registered Office at Flat No.G2, Road No.34, Aditya Elegance, Jubilee Hills, Hyderabad, Telangana-500 075, represented by its Partner, Mr. B. PAVAN KUMAR REDDY, aged about 41 years, S/o Sri. B. Ramana Reddy, are intending to purchase the Schedule 'A' and 'B' Properties from its rightful owner Mr. C.R. Manohar, S/o. Sri. P. Rangaswamy, residing R/at No.36, GL Residency, Bagalur Mainr Road, Sarjapura Village and Post, Anekal Taluk, Bangalore - 562125.

Therefore, people who are having Objections or claims with respect to the Schedule Properties are hereby called upon to submit their Objections / claims within Ten days from the date of this notice.

SCHEDULE A PROPERTY

All that piece and parcel of land measuring to an extent of 01 Acre 13 Guntas in Sy. No.357/1, situated at Bidaraguppe Village, Attibele Hobli, Anekal Taluk, Bangalore Urban District and bounded on:-

East by	West by	North by	South by
Land in Sy. No.357/2,	Land in Sy. No.348/2,	Land in Sy. No.357/1,	Government Pond.

SCHEDULE B PROPERTY

Item No.1: All that piece and parcel of land measuring to an extent of 01 Acre in Sy. No.348/2 (Old Sy. No.348), situated at Bidaraguppe Village, Attibele Hobli, Anekal Taluk, Bangalore Urban District and bounded on:-

East by	West by	North by	South by
Land belonging to Sathya narayana	Attibele Sarjapura Road	Remaining Land in same Survey Number, the Item No.1	Remaining land in same Survey Number, the Item No.4

Item No.2: All that piece and parcel of land measuring to an extent of 01 Acre in Sy. No.348/2 (Old Sy. No.348), situated at Bidaraguppe Village, Attibele Hobli, Anekal Taluk, Bangalore Urban District and bounded on:-

East by	West by	North by	South by
Land belonging to Sathyanarayana	Attibele Sarjapura Road	Remaining Land in same Survey Number, the Item No.3	Remaining land in same Survey Number, the Item No.2

Item No.3: All that piece and parcel of land measuring to an extent of 23 Guntas in Sy. No.348/2 (Old Sy. No.348), situated at Bidaraguppe Village, Attibele Hobli, Anekal Taluk, Bangalore Urban District and bounded on:-

East by	West by	North by	South by
Land belonging to Sathyanarayana	Attibele Sarjapura Road	Survey Number 348/1	Remaining land in same Survey Number, the Item No.1

Item No.4: All that piece and parcel of land measuring to an extent of 23 Guntas in Sy. No.348/2 (Old Sy. No.348), situated at Bidaraguppe Village, Attibele Hobli, Anekal Taluk, Bangalore Urban District and bounded on:-

East by	West by	North by	South by
Land belonging to Sathyanarayana	Attibele Sarjapura Road	Remaining Land in same Survey Number, the Item No.3	Remaining land in measuring 2.04 Guntas retained by Thimmalappa and Others

M.G.C. & Co., Advocates and Solicitors
No.66, 4th Cross, Xavier Layout,
Behind Vijay Kiran Apartment, Bangalore - 560047
Ph. No.25546276, Mob:9449400145

Bangalore
Date:25.04.2023

ಪ್ರೀತಿಗಾಗಿ ಜಗಳ, ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿ ಸಾನು ಉರಂಗ್ ಎಂಬವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಆತನ ಸ್ನೇಹಿತ ಗೌತಮ್ ತಟಿ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

'ಅಸ್ಸಾಂನ ಸಾನು, 2022 ರಲ್ಲಿ ನಗರಕ್ಕೆ ಬಂದಿದ್ದರು. ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮದೇ ಊರಿನ ಸ್ನೇಹಿತನಾದ ಗೌತಮ್ ಜೊತೆ ಕೊಠಡಿಯಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಸಾನು ಹಾಗೂ ಗೌತಮ್ ಇಬ್ಬರೂ ತಮ್ಮ ಊರಿನ ಒಬ್ಬರೇ ಯುವತಿ ಇಷ್ಟ ಪಡುತ್ತಿದ್ದರು. ಪ್ರೀತಿಸಲು ಪ್ರಯತ್ನಿಸುತ್ತಿದ್ದರು. ಅದೇ ವಿಚಾರವಾಗಿ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು. ಯುವತಿ ತಂಟೆಗೆ ಹೋಗದಂತೆ ಇಬ್ಬರೂ ಪರಸ್ಪರ ಕೂಗಾಡಿ ಹೊಡೆದಾಡಿಕೊಳ್ಳುತ್ತಿದ್ದರು' ಎಂದು ತಿಳಿಸಿದರು.

ಕೊಲೆ ಮಾಡಿ ಕಥೆ ಕಟ್ಟಿದ್ದ: 'ಸಾನು ಹಾಗೂ ಗೌತಮ್ ಸೋಮವಾರ ರಾತ್ರಿ ಒಟ್ಟಿಗೆ ಮದ್ಯ ಕುಡಿದಿದ್ದರು. ಯುವತಿ ಪ್ರೀತಿಯ ವಿಚಾರವಾಗಿ ಇಬ್ಬರ ನಡುವೆ ಪುನಃ ಜಗಳ ಶುರುವಾಗಿತ್ತು' ಎಂದು ಪೊಲೀಸರು ಹೇಳಿದರು.

'ಮದ್ಯದ ಅಮಲಿನಲ್ಲಿದ್ದ ಗೌತಮ್, ಸಾನು ಮೇಲೆ ಹಲ್ಲೆ ಮಾಡಿ ಉಸಿರುಗಟ್ಟಿಸಿ ಕೊಂದಿದ್ದ. ತಡರಾತ್ರಿ ಮೃತದೇಹವನ್ನು ಕಟ್ಟಡದ ಮಹಡಿಗೆ ಒಯ್ದು ಅಲ್ಲಿಂದ ತಳ್ಳಿದ್ದ. ಕಾಲು ಜಾರಿ ಬಿದ್ದು ಸಾನು ಮೃತಪಟ್ಟಿರುವುದಾಗಿ ಕಥೆ ಕಟ್ಟಿದ್ದ. ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿಗೂ ಸುಳ್ಳು ಹೇಳಿದ್ದ' ಎಂದು ಪೊಲೀಸರು ತಿಳಿಸಿದರು.

'ದೇಹದ ಮೇಲಿನ ಗಾಯದ ಗುರುತು ನೋಡಿ ಅನುಮಾನ ಬಂದಿತ್ತು. ಗೌತಮ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ' ಎಂದು ಪೊಲೀಸರು ತಿಳಿಸಿದರು.

ಅತ್ಯಾಚಾರ: ಅಪರಾಧಿಗೆ 10 ವರ್ಷ ಜೈಲು

ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದ ಅಪರಾಧಿ ವಿ.ದೇವರಾಜ್ ಎಂಬವನಿಗೆ ತ್ವರಿತ ವಿಶೇಷ ಕೋರ್ಟ್ (ಎಫ್‌ಟಿಎಸ್‌ಸಿ 4ನೇ) ಪೋಕ್ಸೊ ಕಾಯ್ದೆಯಡಿ 10 ವರ್ಷ ಸಜೆ, ₹ 10 ಸಾವಿರ ದಂಡ ವಿಧಿಸಿ ಆದೇಶಿಸಿದೆ.

2018ರ ನ. 12ರಂದು ಹೊಸಕೋಟೆಯಲ್ಲಿ ಕೃತ್ಯ ನಡೆದಿತ್ತು. ಮದುವೆ ಆಗುವುದಾಗಿ ನಂಬಿಸಿ ಬಾಲಕಿಯನ್ನು ಮನೆಗೆ ಕರೆದೊಯ್ದು ಕೃತ್ಯ ಎಸಗಿದ್ದ. ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶರಾದ ಎ.ಕೆ. ನಾಗರಾಜಪ್ಪ ಅವರು ಆದೇಶ ಪ್ರಕಟಿಸಿದರು. ಸಂತ್ರಸ್ತೆಗೆ ₹ 4 ಲಕ್ಷ ಪರಿಹಾರ ನೀಡುವಂತೆಯೂ ತಿಳಿಸಿದ್ದಾರೆ. ಸರ್ಕಾರಿ ವಕೀಲ ಆರ್. ರವಿಚಂದ್ರ ವಾದ ಮಂಡಿಸಿದ್ದರು.

ಅಪರಾಧ ಸುದ್ದಿಗಳು

ಲಾರಿ–ಮೊಪೆಡ್ ಡಿಕ್ಕಿ: ಪೇಂಟರ್ ಸಾವು

ಬೆಂಗಳೂರು: ನಾಯಂಡಹಳ್ಳಿ ಜಂಕ್ಷನ್ ನಲ್ಲಿ ಮಂಗಳವಾರ ಬೆಳಿಗ್ಗೆ ಟಿವಿಎಸ್ ಮೊಪೆಡ್ ಹಾಗೂ ಲಾರಿ ನಡುವೆ ಮಂಗಳವಾರ ಅಪಘಾತ ಸಂಭವಿಸಿದ್ದು, ಮೊಪೆಡ್ ಸವಾರ ಮೊಹಮ್ಮದ್ ರಫೀಕ್ (20) ಮೃತಪಟ್ಟಿದ್ದಾರೆ.

'ರಾಯಚೂರು ಜಿಲ್ಲೆಯ ಮಸ್ಕಿಯ ರಫೀಕ್, ಪೇಂಟರ್ ಆಗಿದ್ದರು. ಕೆಲ ತಿಂಗಳ ಹಿಂದೆ ನಗರಕ್ಕೆ ಬಂದಿದ್ದು, ಯಶವಂತಪುರದಲ್ಲಿ ವಾಸವಿದ್ದರು' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

'ರಫೀಕ್ ಅವರು ಮೊಪೆಡ್‌ನಲ್ಲಿ ನಾಯಂಡಹಳ್ಳಿಯತ್ತ ಹೊರಟಿದ್ದರು. ಸ್ನೇಹಿತ ಗೊರಕ್ ಹಿಂಬದಿ ಕುಳಿತಿದ್ದರು. ಟ್ರಕ್ ಡಿಕ್ಕಿ ಹೊಡೆದು ತೀವ್ರ ಗಾಯಗೊಂಡು ರಫೀಕ್ ಮೃತಪಟ್ಟಿದ್ದಾರೆ. ಗೊರಕ್ ಅವರಿಗೂ ಗಾಯವಾ ಗಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದರು.

'ಲಾರಿ ಚಾಲಕನ ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಅಪಘಾತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕ ಲಾರಿ ಬಿಟ್ಟು ಪರಾರಿಯಾಗಿದ್ದ. ಸಂಜೆ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಬೀಗ ಮುರಿದು ಕಳವು

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರ ಬೀಗ ಮುರಿದು ₹ 20 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಲಾಗಿದೆ.

'ಮಾರುತಿ ಬಡಾವಣೆ ನಿವಾಸಿ, ಕ್ಯಾಟರಿಂಗ್ ಕೆಲಸ ಮಾಡುವ ಮುರುಳಿಕೃಷ್ಣ ಭಟ್ ಮನೆಯಲ್ಲಿ ಕಳ್ಳತನ ನಡೆದಿದೆ. 400 ಗ್ರಾಂ ಚಿನ್ನಾಭರಣ ಹಾಗೂ 4 ಕೆ.ಜಿ ಬೆಳ್ಳಿ ಸಾಮಗ್ರಿ ಕಳವಾಗಿದೆ' ಎಂದು ಅವರು ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು. 'ಪತ್ನಿ ಆರೋಗ್ಯ ಸಮಸ್ಯೆಯಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಮುರುಳಿಕೃಷ್ಣ ಅವರು ಮಗನ ಜೊತೆ ಏ. 17ರಂದು ಮಂಗಳೂರಿಗೆ ಹೋಗಿದ್ದಾಗ ಕೃತ್ಯ ನಡೆದಿದೆ' ಎಂದರು.

ಕಳವು: 'ಮಿಸ್ಟರ್ ಆಂಧ್ರ' ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಸರ ಕಿತ್ತೊಯ್ಯುತ್ತಿದ್ದ ಪ್ರಕರಣದಲ್ಲಿ ಗಿರಿನಗರ ಠಾಣೆ ಪೊಲೀಸರು ಬಂಧಿಸಿರುವ ಆರೋಪಿ ಸೈಯದ್ ಸೈಯದ್ ಬಾಷಾ, ಬಾಷಾ ದೇಹದಾರ್ಢ್ಯ ಸ್ಪರ್ಧೆಯಲ್ಲಿ 'ಮಿಸ್ಟರ್ ಆಂಧ್ರ' ಪ್ರಶಸ್ತಿ ಪಡೆದಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ.

ಗಿರಿನಗರ ಮುಖ್ಯರಸ್ತೆಯಲ್ಲಿ ಮಾರ್ಚ್ 22ರಂದು ಮಹಿಳೆಯೊಬ್ಬರ ಚಿನ್ನದ ಸರ ಕಿತ್ತೊಯ್ಯಲಾಗಿತ್ತು.

ಈ ಪ್ರಕರಣದಲ್ಲಿ ಆಂಧ್ರ ಪ್ರದೇಶದ ಕಡಪಾ ಜಿಲ್ಲೆಯ ಸೈಯದ್ ಬಾಷಾ (34), ಶೇಖ್ ಅಯೂಬ್ (32) ಅವರನ್ನು ಬಂಧಿಸಿದ್ದು, ₹ 6 ಲಕ್ಷ ಮೌಲ್ಯದ ಎರಡು ಚಿನ್ನದ ಸರ ಹಾಗೂ ಎರಡು ಬೈಕ್ ಜಪ್ತಿ ಮಾಡಲಾಗಿದೆ.

'ಆರೋಪಿ ಸೈಯದ್ ಬಾಷಾ, ದೇಹದಾರ್ಢ್ಯ ಪಟು. ಈತನಿಗೆ 'ಮಿಸ್ಟರ್ ಆಂಧ್ರ' ಬಿರುದು ಸಹ ಬಂದಿತ್ತು. ಸಹಚರರ ಜೊತೆ ಆಗಾಗ ನಗರಕ್ಕೆ ಬರುತ್ತಿದ್ದ ಸೈಯದ್ ಬಾಷಾ, ಲಾಡ್ಜ್‌ನಲ್ಲಿ ಉಳಿದು ಕೃತ್ಯ ಎಸಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

'ಶೂನ್ಯ ನೆರಳು' ಕೌತುಕ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಜರುಗಿದ ಸೂರ್ಯನ 'ಶೂನ್ಯ ನೆರಳು' ಕೌತುಕವನ್ನು ಜನರು ಕಣ್ತುಂಬಿಕೊಂಡರು.

ಜವಾಹರ್‌ಲಾಲ್ ನೆಹರು ತಾರಾಲಯ, ಪುರಭವನ ಎದುರು, ಅಪಾರ್ಟ್‌ಮೆಂಟ್ ಸಮುಚ್ಚಯ, ಶಾಪಿಂಗ್ ಮಾಲ್‌ಗಳ ಆವರಣ, ಇತರೆಡೆ ಸೇರಿದ್ದ ಜನ, ಕೌತುಕ ವೀಕ್ಷಣೆಗೆ ಕಾಯುತ್ತಿದ್ದರು. ಪೋಷಕರು ಮಕ್ಕಳಿಗೆ ಕೌತುಕ ತೋರಿಸಲು ಉತ್ಸುಕರಾಗಿದ್ದರು.

ಮಧ್ಯಾಹ್ನ 12.17ರ ಸುಮಾರಿಗೆ ಸೂರ್ಯನ ಕಿರಣಗಳು ಭೂಮಿಗೆ ಬಿದ್ದಾಗ, ಶೂನ್ಯ ನೆರಳು ಖಗೋಳ ಕೌತುಕ ಜರುಗಿತು.

ಈ ಸಂದರ್ಭದಲ್ಲಿ ಮನುಷ್ಯರು ಹಾಗೂ ಇತರೆ ವಸ್ತುಗಳ ನೆರಳು, ಅಕ್ಕ–ಪಕ್ಕದಲ್ಲಿ ಕಾಣಿಸಲಿಲ್ಲ. ಕೆಲವರು ಪರಸ್ಪರ ಕೈ ಕೈ ಹಿಡಿದುಕೊಂಡು ಮಾನವ ಸರಪಳಿ ನಿರ್ಮಿಸಿ, ಶೂನ್ಯ ನೆರಳು ಕೌತುಕವನ್ನು ಪರೀಕ್ಷಿಸಿದರು.

ನಗರದ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಮಂಗಳವಾರ ಸೇರಿದ್ದ ಮಕ್ಕಳು 'ಶೂನ್ಯ ನೆರಳು' ಕೌತುಕವನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಈ ಖಗೋಳ ಕೌತುಕದ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡ ಜನ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಸೇರಿದ್ದ ಶಾಲಾ ವಿದ್ಯಾರ್ಥಿಗಳಿಗೆ ಕೌತುಕವನ್ನು ತೋರಿಸಿದ ವಿಜ್ಞಾನಿಗಳು, ವೈಜ್ಞಾನಿಕ ವಿವರಣೆ ನೀಡಿದರು.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ ಶ್ರೀರಾಮ ನವಮಿ ಸಂಗೀತೋತ್ಸವ: ಪಿಟೀಲು ವಾದನ: ಆದಿತಿ, ಅರುಂಧತಿ, ಗಾಯನ: ಭಾರ್ಗವಿ ವೆಂಕಟರಾಮ್, ಪಿಟೀಲು: ಎಚ್.ಕೆ. ವೆಂಕಟರಾಮ್, ಮೃದಂಗ: ಆನೂರು ಅನಂತಕೃಷ್ಣ ಶರ್ಮಾ, ಘಟ: ಗಿರಿದತ್ ಉಡುಪ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲೆಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ಕೊಳಲು ವಾದನ: ವಿಜಯ್ ಗೋಪಾಲ್, ಪಿಟೀಲು: ಸುಮನ್ ಮಂಜುನಾಥ್, ಮೃದಂಗ: ವಿಜಯ್ ನಟೇಸನ್, ಘಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಮಾನಸಿ ಪ್ರಸಾದ್, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಸಿ. ಚೆಲುವರಾಜು, ಘಟ: ಎಸ್. ಶ್ರೀಶೈಲನ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಸವೇಶ್ವರ ಜಯಂತಿ ಆಚರಣೆ: ಅತಿಥಿಗಳು: ಎಸ್.ಆರ್. ಕೇಶವ, ಶ್ರೀಕಂಠಯ್ಯ, ಅಧ್ಯಕ್ಷತೆ: ರಾಧಾಕೃಷ್ಣ, ಆಯೋಜನೆ ಮತ್ತು ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಜೆ.ಸಿ. ನಗರ, ಬೆಳಿಗ್ಗೆ 10.30

ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಜಾಗೃತಿ ಕುರಿತು ಸಂವಾದ: ತ್ರಿಲೋಚನ್ ಶಾಸ್ತ್ರಿ, ಕವಿತಾ ರತ್ನಾ, ಹರೀಶ ನರಸಪ್ಪ, ಕಾತ್ಯಾಯಿನಿ ಚಾಮರಾಜ್, ವಿನಯ್ ಶ್ರೀನಿವಾಸ್, ಆಯೋಜನೆ: ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್, ಸ್ಥಳ: ಸ್ಟುಡೆಂಟ್ಸ್ ಕ್ರಿಶ್ಚಿಯನ್ ಮೂವ್‌ಮೆಂಟ್ ಆಫ್ ಇಂಡಿಯಾ ಹೌಸ್, ಮಿಷನ್ ರಸ್ತೆ, ಸಂಪಂಗಿರಾಮ ನಗರ, ಮಧ್ಯಾಹ್ನ 3

'ಕರ್ನಾಟಕ ಜಾಬ್ ರಿಪೋರ್ಟ್': ಅತಿಥಿಗಳು: ಕೆ. ಉಲ್ಲಾಸ್ ಕಾಮತ್, ಅಕ್ಷತಾ ಎಂ., ಲೋಹಿತ್ ಭಾಟಿಯಾ, ರೋಸ ಅಬ್ರಾಹಮ್, ಚಿದಂಬರ್ ಸರ್‌ದೇಶಪಾಂಡೆ, ಆಯೋಜನೆ: ಎಫ್‌ಐಸಿಸಿಐ, ಸ್ಥಳ: ಹೋಟೆಲ್ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಸಂಜೆ 4ರಿಂದ

ಕನ್ನಡ ಸಂಘದ ಸುವರ್ಣ ವರ್ಷಾಚರಣೆ, ಎನ್. ವಿದ್ಯಾಶಂಕರ್ ಅವರ 'ಸಿನಿಮಾ–ಕಲೆ–ಸಂಸ್ಕೃತಿ' ಪುಸ್ತಕ ಬಿಡುಗಡೆ: ವಿಜಯಾ, ಅಧ್ಯಕ್ಷತೆ: ಅನಿಲ್ ಜೋಸೆಫ್ ಪಿಂಟೊ, ಪುಸ್ತಕ ಪರಿಚಯ: ಎನ್. ಮನು ಚಕ್ರವರ್ತಿ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಯೂನಿವರ್ಸಿಟಿ ಕನ್ನಡ ಸಂಘ, ಹೊಸೂರು ರಸ್ತೆ, ಸಂಜೆ 4

ಪ್ರವಚನ ವಾಹಿನಿ: 'ಸಮಾಜಕ್ಕೆ ರಾಮಾನುಜರ ಕೊಡುಗೆ', ಉಪನ್ಯಾಸ: ಗೋಪಾಲ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಭಾರತ–ಚೀನಾ ರಕ್ಷಣಾ ಸಚಿವರ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಚೀನಾದ ರಕ್ಷಣಾ ಸಚಿವ ಜನರಲ್ ಲೀ ಶಾಂಫ್‌ಫು ಗುರುವಾರ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಗಾಲ್ವಾನ್ ಕಣಿವೆ ಬಳಿ ಮೂರು ವರ್ಷದ ಹಿಂದೆ ನಡೆದಿದ್ದ ಸೇನಾ ಸಂಘರ್ಷದ ನಂತರ ಉಭಯ ದೇಶಗಳ ನಡುವಣ ಗಡಿ ಬಿಕ್ಕಟ್ಟು ಉಲ್ಬಣಿಸಿತ್ತು. ಮಿಲಿಟರಿ ಹಂತದಲ್ಲಿ 18 ಸುತ್ತುಗಳ ಮಾತುಕತೆ ನಡೆದಿತ್ತು. ಈಗ ಉಭಯ ದೇಶಗಳ ಸಚಿವರು ಇದೇ ಮೊದಲ ಬಾರಿಗೆ ಮುಖಾಮುಖಿಯಾಗಲಿದ್ದಾರೆ.

ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ನಿಕಟವರ್ತಿ ಆಗಿರುವ ಲೀ ಅವರು ಶಾಂಘೈ ಸಹಕಾರ ಸಂಘಟನೆಯ ವಿದೇಶಾಂಗ ಸಚಿವರ ಪರಿಷತ್ತಿನ ಸಭೆಗಾಗಿ ಭಾರತಕ್ಕೆ ಆಗಮಿಸುತ್ತಿದ್ದು, ರಾಜನಾಥ್ ಅವರನ್ನು ಭೇಟಿಯಾಗುವರು.

ಸಿಐಡಿ ಡಿಜಿಪಿ ಸಂಧು 30ರಂದು ನಿವೃತ್ತಿ

ಪಿ.ಎಸ್ ಸಂಧು

ಬೆಂಗಳೂರು: ಸಿಐಡಿಯ ಡಿಜಿಪಿ ಪಿ.ಎಸ್ ಸಂಧು ಅವರು ಇದೇ 30 ರಂದು ಸೇವೆಯಿಂದ ನಿವೃತ್ತರಾಗಲಿದ್ದು, ಬೀಳ್ಕೊಡುಗೆ ನಿಮಿತ್ತ ಕೋರಮಂಗಲದ ಕೆಎಸ್‌ಆರ್‌ಪಿ ಮೈದಾನದಲ್ಲಿ ಇದೇ 26ರಂದು ಬೆಳಿಗ್ಗೆ 8 ಗಂಟೆಗೆ ಪೊಲೀಸ್ ಇಲಾಖೆಯಿಂದ ಪರೇಡ್ ಹಮ್ಮಿಕೊಳ್ಳಲಾಗಿದೆ.

ಪವನಜಿತ್ ಸಿಂಗ್ ಸಂಧು, 1989ರಲ್ಲಿ ಐಪಿಎಸ್ ಸೇವೆಗೆ ಆಯ್ಕೆ ಆಗಿದ್ದರು. ಶಿವಮೊಗ್ಗ ಜಿಲ್ಲೆಯ ಹೆಚ್ಚುವರಿ ಎಸ್ಪಿ ಆಗಿ ವೃತ್ತಿ ಆರಂಭಿಸಿದ್ದರು. ಪಣಂಬೂರು, ಕೊಡಗು, ಕಲಬುರಗಿ ಎಸ್ಪಿ ಆಗಿ ಕೆಲಸ ಮಾಡಿದ್ದರು.

ನಿಯೋಜನೆ ಮೇರೆಗೆ ಸಿಬಿಐ, ಬಿಎಸ್‌ಎಫ್, ರಾಷ್ಟ್ರೀಯ ಸೈನಿಕ ಕಾಲೇಜು ಹಾಗೂ ಕೇಂದ್ರ ಗುಪ್ತ ದಳದಲ್ಲೂ ಕರ್ತವ್ಯ ನಿರ್ವಹಿಸಿದ್ದರು.

ಸಿಐಡಿ ಡಿಜಿಪಿ ಆದ ನಂತರ, ಪಿಎಸ್‌ಐ ನೇಮಕಾತಿ ಅಕ್ರಮ ಸೇರಿ ಹಲವು ಪ್ರಕರಣಗಳ ತನಿಖೆಯ ನೇತೃತ್ವ ವಹಿಸಿದ್ದರು.

ಪಂಚಾಯತ್ ರಾಜ್ ಕ್ಷೇತ್ರದ ಸಮಗ್ರ ಸಾಹಿತ್ಯ

'ಗ್ರಾಮ ಸುರಾಜ್ಯ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ ಸುರಾಜ್ಯ ಕೃತಿಯು ಕರ್ನಾಟಕ ಪಂಚಾಯತ್ ರಾಜ್ ಕ್ಷೇತ್ರದ ಸಮಗ್ರ ಸಾಹಿತ್ಯ ಒಳಗೊಂಡಿದ್ದು, ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬರು ಓದಬೇಕು' ಎಂದು ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಸ್. ಮೀನಾಕ್ಷಿ ಸುಂದರಂ ಹೇಳಿದರು.

ಪಂಚಾಯತ್ ರಾಜ್ ಇಲಾಖೆಯ ನಿವೃತ್ತ ನಿರ್ದೇಶಕ ಎಂ.ಕೆ. ಕೆಂಪೇಗೌಡ ಅವರ 'ಗ್ರಾಮ ಸುರಾಜ್ಯ' ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಎಂ.ಕೆ. ಕೆಂಪೇಗೌಡ ಅವರು ತಮ್ಮ ಮೂರು ದಶಕಗಳ ಪಂಚಾಯತ್ ರಾಜ್ ಕ್ಷೇತ್ರದ ಅನುಭವ ಹಾಗೂ ಆಳವಾದ ಅಧ್ಯಯನದಿಂದ ಕರ್ನಾಟಕ ಪಂಚಾಯತ್ ರಾಜ್ ಇಲಾಖೆಯ ಹಿನ್ನೆಲೆ, ನಡೆದುಬಂದ ದಾರಿ, ಪ್ರಚಲಿತ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಈ ಪುಸ್ತಕವನ್ನು ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳು ಮತ್ತು ಗ್ರಂಥಾಲಯದಲ್ಲಿ ಲಭ್ಯವಿರುವಂತೆ ಮಾಡಬೇಕು' ಎಂದು ಹೇಳಿದರು.

ಪಂಚಾಯತ್ ರಾಜ್ ಇಲಾಖೆಯ ನಿವೃತ್ತ ನಿರ್ದೇಶಕ ಎಂ.ಕೆ. ಕೆಂಪೇಗೌಡ ಅವರ 'ಗ್ರಾಮ ಸುರಾಜ್ಯ' ಕೃತಿಯನ್ನು ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಸ್. ಮೀನಾಕ್ಷಿ ಸುಂದರಂ ಬಿಡುಗಡೆಗೊಳಿಸಿದರು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಎಲ್.ಕೆ. ಅತೀಕ್, ಆಯುಕ್ತರಾದ ಶಿಲ್ಪಾನಾಗ್ ಪ್ರೊ. ಎಂ. ಕೃಷ್ಣೇಗೌಡ ಇದ್ದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಮಾತನಾಡಿ, 'ಕಳೆದ ಮೂರು ದಶಕಗಳಿಂದ ನಮ್ಮ ಪಂಚಾಯತ್‌ಗಳು ಸಶಕ್ತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಿದ್ದು, ವಿಕೇಂದ್ರೀಕರಣ ಆಡಳಿತದಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದೆ' ಎಂದು ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಮಾತನಾಡಿ, 'ಕರ್ನಾಟಕ ಪಂಚಾಯತ್ ರಾಜ್ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಮ್ಮ ರಾಜ್ಯವು ಹಲವಾರು ಉತ್ತಮ ಪ್ರಯೋಗಗಳನ್ನು ಮಾಡಿದೆ. ಆದರೂ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಚಯಿಸುವ ಪುಸ್ತಕಗಳ ಕೊರತೆಯಿತ್ತು. ಅದನ್ನು ಎಂ.ಕೆ. ಕೆಂಪೇಗೌಡ ಅವರ ಗ್ರಾಮ ಸುರಾಜ್ಯ ಕೃತಿಯು ನೀಗಿಸಿದೆ' ಎಂದು ಹೇಳಿದರು.

ಪಿಯುಸಿ: ಬಿಬಿಎಂಪಿ ಕಾಲೇಜಿಗೆ ಶೇ 63.18 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬಿಬಿಎಂಪಿ ಕಾಲೇಜುಗಳು ಶೇ 63.18ರಷ್ಟು ಫಲಿತಾಂಶ ದಾಖಲಿಸಿವೆ. ಒಟ್ಟು 2,974 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 1,879 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ವಿಜ್ಞಾನ ವಿಭಾಗದ 303 ವಿದ್ಯಾರ್ಥಿಗಳಲ್ಲಿ 147 ಮಂದಿ ಪಾಸಾಗಿದ್ದಾರೆ. 13 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. ಶೇ 48.51 ರಷ್ಟು ಫಲಿತಾಂಶ ಬಂದಿದೆ. ವಾಣಿಜ್ಯ ವಿಭಾಗದಲ್ಲಿ 1,858 ವಿದ್ಯಾರ್ಥಿಗಳಲ್ಲಿ, 1,285 ಮಂದಿ ಪಾಸಾಗಿದ್ದರೆ, 120 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. ಶೇ 54.37 ರಷ್ಟು ಫಲಿತಾಂಶ ಬಂದಿದೆ. ಕಲಾ ವಿಭಾಗದಲ್ಲಿ 813 ವಿದ್ಯಾರ್ಥಿಗಳಲ್ಲಿ, 442 ಮಂದಿ ಪಾಸಾಗಿದ್ದರೆ, 15 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. ಶೇ 63.18 ರಷ್ಟು ಫಲಿತಾಂಶ ಬಂದಿದೆ.

ಮತ್ತಿಕೆರೆ ಗೋಕುಲದಲ್ಲಿರುವ ಬಿಬಿಎಂಪಿ ಬಾಲಕಿಯರ ಪಿಯು ಕಾಲೇಜಿನ 124 ವಿದ್ಯಾರ್ಥಿಗಳಲ್ಲಿ 16 ಮಂದಿ ಡಿಸ್ಟಿಂಕ್ಷನ್ ಪಡೆದು, ಒಟ್ಟಾರೆ ಶೇ 74 ರಷ್ಟು ಫಲಿತಾಂಶ ದಾಖಲಿಸಿದೆ ಎಂದು ಪ್ರಾಂಶುಪಾಲ ಎನ್. ಆನಂದ್ ತಿಳಿಸಿದ್ದಾರೆ. ಬಿಬಿಎಂಪಿಯ 16 ಪಿಯು ಕಾಲೇಜುಗಳ ಪೈಕಿ ಕ್ಲೀವ್‌ಲ್ಯಾಂಡ್ ಟೌನ್, ಡಿಸ್ಪೆನ್ಸರಿ ರಸ್ತೆ, ಕಸ್ತೂರ ಬಾ ನಗರ, ಮಾಗಡಿ ರಸ್ತೆ, ಶ್ರೀರಾಮಪುರ ಕಾಲೇಜುಗಳಲ್ಲಿ ಮಾತ್ರ ವಿಜ್ಞಾನ ವಿಭಾಗವಿದೆ. 16 ಕಾಲೇಜುಗಳ ಒಟ್ಟಾರೆ ಫಲಿತಾಂಶದಲ್ಲಿ ಬೈರವೇಶ್ವರನಗರದ ಕಾಲೇಜು ಶೇ 93.06ರಷ್ಟು ಫಲಿತಾಂಶ ಪಡೆದು ಪ್ರಥಮ ಸ್ಥಾನದಲ್ಲಿದೆ. ಹೇರೋಹಳ್ಳಿ (ಶೇ 80), ಪಾದರಾಯನಪುರ (ಶೇ 80), ಶ್ರೀರಾಮಪುರ (75.89), ಮತ್ತಿಕೆರೆ (74) ಮತ್ತು ಕಾವೇರಿಪುರ ನಂತರದ ಸ್ಥಾನದಲ್ಲಿವೆ. ಟಾಸ್ಕರ್ ಟೌನ್ ಕಾಲೇಜು ಶೇ 11.67ರಷ್ಟು ಫಲಿತಾಂಶ ಪಡೆದು ಕೊನೆಯ ಸ್ಥಾನದಲ್ಲಿದೆ.

KLE ACADEMY OF HIGHER EDUCATION AND RESEARCH, BELAGAVI
(Deemed-to-be-University)
Accredited at A+ Grade by NAAC (3rd Cycle) | Placed in Category 'A' by MoE (GoI)
FACULTY RECRUITMENT
Applications are Invited from eligible candidates for the Post of
ASSISTANT PROFESSOR/ PHARMACIST
at KLE COLLEGE OF PHARMACY, BELAGAVI, HUBBALLI & BENGALURU
A Constituent Unit's of the KAHER, Belagavi. in the Departments of
• PHARMACOLOGY • PHARMACEUTICS
• PHARMACEUTICAL CHEMISTRY
• PHARMACEUTICAL ANALYSIS • PHARMACY PRACTICE
• HOSPITAL PHARMACY • PHARMACOVIGILANCE
• ANTI RETROVIRAL THERAPY CENTRE (ART)
For Further Details & Application Form Scan/ log on to www.kledeemeduniversity.edu.in
0831- 2444 444
Last Date for Submission of Application: 11th May 2023
Date: 26/04/2023 Sd/- Registrar

Supported by MINISTRY OF JAL SHAKTI, DEPARTMENT OF WATER RESOURCES, RIVER DEVELOPMENT & GANGA REJUVENATION
Indian Plumbing Association 30 — Redefining Plumbing Standards — 30 Years in Service to the Nation
Supported by Ministry of Housing and Urban Affairs, Government of India
Largest ever Plumbing Show
PLUMBEX India® 2023
Bringing Industry Together
Thursday, Friday & Saturday
27TH, 28 TH, & 29TH APRIL 2023
Time: 11:00am to 06:30pm
Bengaluru International Exhibition Centre (BIEC)
1 LAC SQ. FEET | 100+ EXHIBITORS | 40+ START-UPS
3 Sessions with Domain Experts & Policy Makers
Net Zero Water | Water Use Efficiency | Modern Day Plumbing
Meet & Greet leading professionals & industrialists
Visitor ENTRY FREE
*To and Fro Free Shuttle service will be available between Nagasandra Metro Station and BIEC from 10:00am to 6:30pm
www.indianplumbing.org

NISSAN
NISSAN MAGNITE
BE CELEBRATED, ON EVERY DRIVE.

WATCH THE TVC
RANGE STARTS @ ₹5 99 900*/-
CVT STARTS @ ₹9 99 900*/-
RATE OF INTEREST 6.99%*
AVAIL BENEFITS UP TO ₹50 000*/-
#BIGBOLDBEAUTIFUL
TO KNOW MORE 8879509258
REQUEST A CALL BACK
First-in-segment Around View Monitor
Wireless Connectivity to Android Auto & Apple CarPlay
First-in-segment 17.78 cm TFT Advanced Drive Assist Display
Global NCAP 4 Star Safety Rating
• Electronic Stability Program (ESP)
• Traction Control System (TCS)
• Hill Start Assist (HSA)
• Tyre Pressure Monitoring System (TPMS)
• Hydraulic Brake Assist (HBA)
Book Nissan Magnite | www.nissan.in | /NissanIndia | /Nissan _ India | ALSO AVAILABLE IN CSD. | For Dealership Enquiries Contact: dealer.management@email.nissan.in
AUTHORIZED NISSAN DEALERS: KARNATAKA: BANGALORE: BRIGADE ROAD: SURYA NISSAN- 9731161303, HOSUR ROAD: SURYA NISSAN- 9731161784, KANAKAPURA ROAD: SURYA NISSAN- 9731161104, HBR LAYOUT: SURYA NISSAN- 9731161202, WHITEFIELD: SURYA NISSAN- 9731161885, HOSPET: RAYSLINE NISSAN- 9108992650, BELGAUM: SWASTI NISSAN- 9731162374, HUBLI: SWASTI NISSAN- 9731162488, MYSORE: HONNASSIRI NISSAN- 9731153151.
*Terms & conditions apply. All prices ex-showroom Delhi. Features may vary from variant to variant. Colours are indicative only and may vary due to printing constraints. Accessories shown may not be part of standard fitment. The scheme is applicable on vehicles invoiced on or before 30th April' 23. Please visit your nearest Nissan dealer for more information.
NISSAN FINANCE

ಮುಸ್ಲಿಂ ಮೀಸಲು ಇತರರಿಗೆ ಹಂಚಿಕೆಯನ್ನು ಪ್ರಶ್ನಿಸಿದ ರಣದೀಪ್ ಸುರ್ಜೇವಾಲಾ

‘ಸರ್ಕಾರ ಏಕೆ ಸಮರ್ಥಿಸಿಕೊಳ್ಳಲಿಲ್ಲ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಸ್ಲಿಂ ಸಮುದಾಯಕ್ಕೆ ಒಬಿಸಿ ಕೋಟಾದಲ್ಲಿ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಇತರ ಜಾತಿಗಳಿಗೆ ಹಂಚಿಕೆ ಮಾಡಿದ ನಿರ್ಧಾರವನ್ನು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಯಾಕೆ ಸಮರ್ಥಿಸಲಿಲ್ಲ’ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರಶ್ನಿಸಿದ್ದಾರೆ.

ಸುರ್ಜೇವಾಲಾ

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಲಿಂಗಾಯತರು ಮತ್ತು ಒಕ್ಕಲಿಗರಿಗೆ ಮೀಸಲಾತಿ ಹಾಗೂ ಎಸ್‌ಸಿ-ಎಸ್‌ಟಿ ಸಮುದಾಯಕ್ಕೆ ಒಳ ಮೀಸಲಾತಿ ಹೆಚ್ಚಳ ಕುರಿತ ತನ್ನ ಆದೇಶ ಕುರಿತು ಬೊಮ್ಮಾಯಿ ಸರ್ಕಾರ ಪ್ರಮಾಣಪತ್ರ ಸಲ್ಲಿಸಲು ವಿಫಲವಾಗಿದೆ. ಹಾಗಾಗಿ, ಸದ್ಯಕ್ಕೆ ಮೀಸಲು ಆದೇಶ ಜಾರಿ ಮಾಡುವುದಿಲ್ಲ ಎಂದು ಸರ್ಕಾರವು ಕೋರ್ಟ್‌ನಲ್ಲಿ ಹೇಳಿದೆ’ ಎಂದಿದ್ದಾರೆ.

‘ಬೊಮ್ಮಾಯಿರವರೇ ನಿಮಗೆ ಒಂದು ಕ್ಷಣವೂ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯುವ ಹಕ್ಕು ಇಲ್ಲ. ಕೂಡಲೇ ರಾಜೀನಾಮೆ ನೀಡಿ. ಪ್ರಧಾನಿಯವರೇ ಮತ್ತು ಗೃಹ ಸಚಿವರೇ ತಕ್ಷಣ ಕರ್ನಾಟಕ ತೊರೆಯಿರಿ’ ಎಂದಿದ್ದಾರೆ.

‘ಮೀಸಲಾತಿಯ ವಿಚಾರಗಳಲ್ಲಿ ಏಕೆ ಮೋಸದ ಆಟ ಆಡಿದ್ದೀರಿ? ಇದೇ ಮಾರ್ಚ್ 14ರಂದು ಸಂಸತ್ತಿನಲ್ಲಿ ಎಸ್‌ಸಿ,ಎಸ್‌ಟಿ ಮೀಸಲು ಹೆಚ್ಚಳ ಆದೇಶವನ್ನು ಮೋದಿ ಸರ್ಕಾರ ತಿರಸ್ಕರಿಸಿದ್ದು ಯಾಕೆ? ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಕಾನೂನನ್ನು ಕೇಂದ್ರ ಸರ್ಕಾರವು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಏಕೆ ಸೇರಿಸಲಿಲ್ಲ? ಎಸ್‌ಸಿ, ಎಸ್‌ಟಿ, ಒಬಿಸಿ, ಲಿಂಗಾಯತರು, ಒಕ್ಕಲಿಗರು ಮತ್ತು ಇತರರ ನಿರೀಕ್ಷೆ ಪೂರೈಸಲು ಶೇ 50 ಮೀಸಲಾತಿ ಮಿತಿಯನ್ನು ಹೆಚ್ಚಿಸಲು ಏಕೆ ನಿರಾಕರಿಸುತ್ತಿದ್ದೀರಿ? ಧ್ರುವೀಕರಣದ ನೆಪದಲ್ಲಿ ನೀವು ಅಲ್ಪಸಂಖ್ಯಾತರ ಮೀಸಲಾತಿಯನ್ನು ಏಕೆ ಅಲ್ಲಾಡಿಸುತ್ತಿದ್ದೀರಿ’ ಎಂದೂ ಸುರ್ಜೇವಾಲಾ ಪ್ರಶ್ನಿಸಿದ್ದಾರೆ.

(ರಾಯಚೂರು ವರದಿ): ‘ಮೀಸಲಾತಿಯನ್ನು ಧರ್ಮದ ಆಧಾರದಲ್ಲಿ ಕೊಡುವುದಿಲ್ಲ. ಜಾತಿಯ ಆಧಾರದಲ್ಲಿ ನೀಡಲಾಗುತ್ತಿದೆ. ಮುಸ್ಲಿಂ ಎನ್ನುವ ಕಾರಣಕ್ಕೆ ಮೀಸಲಾತಿ ಸಿಗುವುದಿಲ್ಲ. ಹಿಂದುಳಿದ ಮುಸಲ್ಮಾನರಿಗೆ ಮೀಸಲಾತಿ ಇದೆ’ ಎಂದು ಕೇಂದ್ರ ಬುಡಕಟ್ಟು ವ್ಯವಹಾರ ಸಚಿವ ಅರ್ಜುನ್ ಮುಂಡಾ ಹೇಳಿದರು.

ಅರ್ಜುನ್ ಮುಂಡಾ

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಮೀಸಲಾತಿ ವಿಷಯದಲ್ಲಿ ಸಾಮಾಜಿಕ ನ್ಯಾಯ ಕೊಡುವ ಕೆಲಸ ಮಾಡಿದ್ದು, ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ. ಡಬಲ್ ಎಂಜಿನ್ ಸರ್ಕಾರದ ಪ್ರಯೋಜನವನ್ನು ಬಡವರಿಗೆ ತಲುಪಲಿದೆ. ಪ್ರಧಾನಿ ನರೇಂದ್ರ ಮೋದಿ ಪರಿಶಿಷ್ಟರನ್ನು ಕೇಂದ್ರೀಕರಿಸಿ ಅನೇಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ್ದಾರೆ. ದೇಶದಲ್ಲಿ ಬಡತನ ನಿವಾರಣೆ ಹಾಗೂ ಅಭಿವೃದ್ಧಿ ವಿಷಯಗಳಲ್ಲಿ ಪ್ರಧಾನಿ ಸರಿಯಾದ ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಎಲ್ಲ ಜನರಲ್ಲಿ ಸ್ವಾಭಿಮಾನ ತುಂಬುವ ಕೆಲಸ ಮಾಡುತ್ತಿದ್ದಾರೆ’ ಎಂದರು.

‘ಕೋರ್ಟ್ ಆದೇಶ; ಬಿಜೆಪಿಗೆ ಕಪಾಳಮೋಕ್ಷ’

‘ಮೀಸಲಾತಿ ಹಂಚಿಕೆ ವಿಚಾರದಲ್ಲಿ ರಾಜ್ಯ ಬಿಜೆಪಿ ಸರ್ಕಾರ ಗಿಮಿಕ್ ಮಾಡಿದೆ. ಜನರಿಗೆ ಏನೋ ತೋರಿಸಿ, ನಾವು ನಿಮಗೆ ಕೊಡುಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿದೆ. ಮೀಸಲು ಆದೇಶ ಜಾರಿ ಮಾಡಲು ಸಾಧ್ಯವಾಗದಿರುವುದು ಅವರಿಗೆ (ಬಿಜೆಪಿ) ಕಪಾಳ ಮೋಕ್ಷ’ ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮುಸ್ಲಿಂ ಸಮುದಾಯದ ಶೇ 4 ಮೀಸಲಾತಿ ಕಿತ್ತುಕೊಂಡು ಇತರ ಸಮುದಾಯಕ್ಕೆ ನೀಡಿದ್ದಕ್ಕೆ ಕೋರ್ಟ್‌ನಿಂದ ಸರಿಯಾದ ಉತ್ತರ ಸಿಕ್ಕಿದೆ. ಬಿಜೆಪಿಯವರು ವೈಜ್ಞಾನಿಕವಾಗಿ ವರದಿ ತೆಗೆದುಕೊಳ್ಳದೇ ಏಕಾಏಕಿಯಾಗಿ ಈ ತೀರ್ಮಾನ ಮಾಡಿದ್ದರು’ ಎಂದು ಆರೋಪಿಸಿದರು.

‘ಧರ್ಮ ಆಧಾರಿತವಾಗಿ ಮೀಸಲಾತಿ ಕೊಡುವುದು ಸಂವಿಧಾನದಲ್ಲಿ ಇಲ್ಲ’ ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಅವರಿಗೆ ಜ್ಞಾನದ ಕೊರತೆ ಇದೆ. ಕ್ರೈಸ್ತ, ಬೌದ್ಧ, ಜೈನ ಸಮುದಾಯಗಳಿಗೆ ಮೀಸಲಾತಿಯಿದೆ. ಅದನ್ನು ಯಾಕೆ ತೆಗೆದಿಲ್ಲ. ಹೀಗಾಗಿ, ಇದು ಧರ್ಮದ ಆಧಾರಿತ ಮೀಸಲಾತಿ ಅಲ್ಲ. ಹಿಂದುಳಿದ ವರ್ಗವೆಂಬ ಕಾರಣಕ್ಕೆ ನೀಡಿದ ಮೀಸಲಾತಿ. ಅವರಿಗೆ ಹಿಂದೂ- ಮುಸ್ಲಿಂ ಮಾತ್ರ ಕಾಣಿಸುತ್ತದೆ. ಬೆಂಕಿ ಹಚ್ಚುವ ಕೆಲಸ ಮಾತ್ರ ಅವರಿಗೆ ಗೊತ್ತಿದೆ ಹೊರತು, ಸಮಾಜದ ಉದ್ಧಾರ ಮಾಡುವ ಉದ್ದೇಶವಿಲ್ಲ’ ಎಂದರು.

ಎಸ್ಸೆಸ್ಸೆಲ್ಸಿ: ಮೇ 15ರ ಒಳಗೆ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಇದೇ 24ರಿಂದ ಆರಂಭವಾಗಿದ್ದು, ಮೇ 15ರ ಒಳಗೆ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೇಳಿದೆ.

ರಾಜ್ಯದ 8.42 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಇದೇ 15ರವರೆಗೆ 3,305 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು.

‘ಜಿಲ್ಲಾ ಕೇಂದ್ರಗಳಲ್ಲೂ ಮೌಲ್ಯಮಾಪನಕ್ಕೆ ವ್ಯವಸ್ಥೆ ಮಾಡಲಾಗಿದ್ದು, 63 ಸಾವಿರ ಶಿಕ್ಷಕರನ್ನು ಬಳಸಿಕೊಳ್ಳಲಾಗಿದೆ. ಚುನಾವಣಾ ಕಾರ್ಯದ ಮಧ್ಯೆಯೂ ಶಿಕ್ಷಕರು ಮೌಲ್ಯಮಾಪನ ಕಾರ್ಯದಲ್ಲಿ ತೊಡಗಿದ್ದಾರೆ’ ಎಂದು ಮಂಡಳಿ ಅಧ್ಯಕ್ಷ ರಾಮಚಂದ್ರನ್ ಹೇಳಿದರು.

ಸುದ್ದಿ 2 ನಿಮಿಷ

17ನೇ ಲೋಕಸಭೆ: ₹ 801 ಕೋಟಿ ಮೊತ್ತ ಉಳಿತಾಯ

ನವದೆಹಲಿ (ಪಿಟಿಐ): ‘ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಕೈಗೊಂಡ ಇ-ವಾಹನಗಳ ಬಳಕೆ, ಕಾಗದರಹಿತ ವ್ಯವಸ್ಥೆ ಯಂತಹ ಉಪಕ್ರಮಗಳಿಂದಾಗಿ 17ನೇ ಲೋಕಸಭೆಯ ನಾಲ್ಕು ವರ್ಷಗಳಲ್ಲಿ ಒಟ್ಟು ₹801.46 ಕೋಟಿ ಉಳಿತಾಯ ಮಾಡಲಾಗಿದೆ’ ಎಂದು ಸಂಸತ್ತಿನ ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

‘ಲೋಕಸಭೆಯ ಸೆಕ್ರೆಟರಿಯೇಟ್ 2021-22ನೇ ಹಣಕಾಸು ವರ್ಷದಲ್ಲಿ ₹258.47 ಕೋಟಿ ಹಾಗೂ 2022-23ನೇ ಹಣಕಾಸು ವರ್ಷದಲ್ಲಿ ₹132.60 ಕೋಟಿ ಉಳಿಸಿದೆ’ ಎಂದು ಹೇಳಿದ್ದಾರೆ.

‘12ನೇ ಲೋಕಸಭೆಗೆ ಹಂಚಿಕೆಯಾಗಿದ್ದ ಒಟ್ಟು ಅನುದಾನದಲ್ಲಿ ₹7.01 ಕೋಟಿ, 13ನೇ ಲೋಕಸಭೆಗೆ (1999-2004) ಹಂಚಿಕೆಯಾಗಿದ್ದ ಅನುದಾನದಲ್ಲಿ ₹99.52 ಕೋಟಿ ಉಳಿತಾಯ ಮಾಡಲಾಗಿತ್ತು. 14, 15 ಮತ್ತು 16ನೇ ಲೋಕಸಭೆಗಳಿಗೆ ಹಂಚಿಕೆಯಾಗಿದ್ದ ಅನುದಾನದಲ್ಲಿ ಕ್ರಮವಾಗಿ ₹145.07 ಕೋಟಿ, ₹94.17 ಕೋಟಿ ಹಾಗೂ ₹461 ಕೋಟಿ ಉಳಿಸಲಾಗಿತ್ತು. ಸಂಸತ್ತಿನ ಅಧಿವೇಶನಗಳನ್ನು ಕೋವಿಡ್‌ನಿಂದಾಗಿ ಮೊಟಕುಗೊಳಿಸಿದ್ದರಿಂದ ಹಾಗೂ ಸ್ಪೀಕರ್ ಬಿರ್ಲಾ ಅವರು ಕೈಗೊಂಡ ಕ್ರಮಗಳಿಂದಾಗಿ 17ನೇ ಲೋಕಸಭೆಗೆ ಹಂಚಿಕೆಯಾಗಿದ್ದ ಅನುದಾನದಲ್ಲಿ ದಾಖಲೆಯ ಮೊತ್ತ ಉಳಿತಾಯವಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ದಕ್ಷಿಣ ಒಳನಾಡಿನ ಮೂರು ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ 48 ಗಂಟೆಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು ಗಾಳಿಯು ಪ್ರತಿಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಚಾಮರಾಜನಗರ, ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಮುನ್ನೆಚ್ಚರಿಕೆ ನೀಡಿದೆ.

ಬಳ್ಳಾರಿ, ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು, ವಿಜಯನಗರ, ರಾಮನಗರ ಜಿಲ್ಲೆಯ ಅಲ್ಲಲ್ಲಿ ಜೋರು ಮಳೆಯಾಗಲಿದೆ. ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಬೀದರ್, ಬೆಳಗಾವಿ, ರಾಯಚೂರು, ಕಲಬುರಗಿ ಹಾಗೂ ಯಾದಗಿರಿಯಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ತುಮಕೂರು ಜಿಲ್ಲೆಯ ಕುಣಿಗಲ್ 6 ಸೆಂ.ಮೀ, ಮೈಸೂರು ಜಿಲ್ಲೆಯ ಸರಗೂರು 5, ಹಾಸನ ಜಿಲ್ಲೆಯ ಕೊಣನೂರು 2, ಮಂಡ್ಯದ ಮದ್ದೂರು ಹಾಗೂ ತುಮಕೂರು ಜಿಲ್ಲೆಯ ಶಿರಾದಲ್ಲಿ 1 ಸೆಂ.ಮೀ ಮಳೆಯಾಗಿದೆ.

ಮೈಸೂರು, ಕೊಡಗಿನಲ್ಲಿ ಬಿರುಗಾಳಿ, ಆಲಿಕಲ್ಲು ಮಳೆ

ಪಿರಿಯಾಪಟ್ಟಣ ತಾಲ್ಲೂಕಿನ ನೇರಳೆಕುಪ್ಪೆ ಗ್ರಾಮದಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದಿದೆ

ಮೈಸೂರು, ಹಾಸನ, ಕೊಡಗು ಮತ್ತು ಮಂಡ್ಯದಲ್ಲಿ ಸೋಮವಾರ ರಾತ್ರಿ ಆಲಿಕಲ್ಲು, ಬಿರುಗಾಳಿ, ಮಿಂಚು ಗುಡುಗಿನಿಂದ ಕೂಡಿದ ಬಿರುಸಿನ ಮಳೆಯಾಗಿದೆ. ಮಂಗಳವಾರವೂ ಬಿರುಸಿನ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ನೇರಳೆಕುಪ್ಪೆ ಮತ್ತು ಅರೇನಹಳ್ಳಿ ಸುತ್ತಮುತ್ತ ಭಾರಿ ಗಾತ್ರದ ಆಲಿಕಲ್ಲು ಸಹಿತ ಮಳೆಯಾಗಿದ್ದು, ಮಾವು ಮತ್ತು ತಂಬಾಕು ಸಸಿ ಮಡಿಗಳಿಗೆ ಹಾನಿಯಾಗಿದೆ. ಬೆಟ್ಟದಪುರ ಸಮೀಪದ ಆನಿವಾಳು ಗ್ರಾಮದಲ್ಲಿ ವಿದ್ಯುತ್ ಕಂಬ ಹಾಗೂ ತೆಂಗಿನ ಮರ ರಸ್ತೆಗೆ ಉರುಳಿ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಎಚ್.ಡಿ.ಕೋಟೆ ತಾಲ್ಲೂಕಿನ ದಮ್ಮನಕಟ್ಟೆ ಅಂತರಸಂತೆ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬಿರುಗಾಳಿಯಿಂದ ಕೂಡಿದ ಮಳೆ ಸುರಿಯಿತು. ಗಾಳಿಯ ರಭಸಕ್ಕೆ ಕೆಲವೆಡೆ ಬಾಳೆ ತೋಟಗಳಿಗೆ ಹಾನಿಯಾಗಿದೆ. ಅಂತರಸಂತೆ ಗ್ರಾಮದ ಜಯರಾಮು ಅವರ ಹೊಲದಲ್ಲಿ ಮುಸುಕಿನ ಜೋಳ ನೆಲಕಚ್ಚಿದೆ. ಮಡಿಕೇರಿ ತಾಲ್ಲೂಕಿನ ನೆಲ್ಯಹುದಿಕೇರಿ, ಕರಡಿಗೋಡು, ಗುಹ್ಯ, ನಂಜರಾಯಪಟ್ಟಣದಲ್ಲಿ ಬಿರುಗಾಳಿ, ಆಲಿಕಲ್ಲು ಮಳೆಯಾಗಿದೆ. ಗೋಣಿಕೊಪ್ಪಲು ಪಟ್ಟಣ, ಟಿ.ಶೆಟ್ಟಿಗೇರಿ, ಸಿದ್ಧಾಪುರ ಭಾಗದಲ್ಲಿ ಗುಡುಗು ಸಹಿತ ಅರ್ಧ ಗಂಟೆ ಬಿರುಸಿನ ಮಳೆ ಸುರಿಯಿತು. ಕುಶಾಲನಗರ, ಸೋಮವಾರಪೇಟೆ, ವಿರಾಜಪೇಟೆ ತಾಲ್ಲೂಕಿನ ಕೆಲವೆಡೆಯೂ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ನಾಗಮಂಗಲ ಪಟ್ಟಣ ಹಾಗೂ ಸುತ್ತಮುತ್ತಲಿನ ಸುಮಾರು 15 ಹಳ್ಳಿಗಳಲ್ಲಿ ಸೋಮವಾರ ರಾತ್ರಿ 10ರಿಂದ ತಡರಾತ್ರಿ 1 ಗಂಟೆಯವರೆಗೂ ಗುಡುಗುಮಿಂಚು ಸಹಿತ ಮಳೆಯಿಂದಾಗಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಹಾಸನ ನಗರದಲ್ಲಿ ಮಧ್ಯಾಹ್ನ ಸುಮಾರು 40 ನಿಮಿಷಗಳ ಕಾಲ ಧಾರಾಕಾರ ಮಳೆ ಸುರಿಯಿತು.

ಯಾದಗಿರಿ ಜಿಲ್ಲೆಯ ಗುರುಮಠಕಲ್‌ನಲ್ಲಿ ಆಲಿಕಲ್ಲು ಮಳೆಯಾಗಿದ್ದು, ಅಲ್ಲಲ್ಲಿ ಮರಗಳು ಧರೆಗುರುಳಿವೆ. ಗೂಡಂಗಡಿಗಳು ನೆಲಕ್ಕುರುಳಿವೆ.

ಕೆಲವೆಡೆ ಬೆಳೆ ಹಾನಿ • ನೆಲಕ್ಕುರುಳಿದ ವಿದ್ಯುತ್ ಕಂಬ: ಸಂಚಾರಕ್ಕೆ ತೊಂದರೆ

ರಾಜ್ಯದ ವಿವಿಧೆಡೆ ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ಕುಶಾಲನಗರದಲ್ಲಿ ಮಂಗಳವಾರ ಮಧ್ಯಾಹ್ನ ಸಾಧಾರಣ ಮಳೆ ಸುರಿಯಿತು

ಬೆಂಗಳೂರು: ಅತಿಯಾದ ಉಷ್ಣತೆಯಿಂದ ಬಳಲಿದ್ದ ರಾಜ್ಯದ ಕೆಲವು ಭಾಗಗಳಲ್ಲಿ ಮಂಗಳವಾರ ಮಳೆಯಾಗಿದ್ದು, ತಂಪೆರೆದಿದೆ. ದಕ್ಷಿಣ ಕನ್ನಡ, ಚಿಕ್ಕಮಗಳೂರು, ಮೈಸೂರು, ಕೊಡಗು, ಹಾಸನ, ಚಿತ್ರದುರ್ಗ ಮತ್ತು ಕೊಪ್ಪಳ ಜಿಲ್ಲೆ ಸೇರಿದಂತೆ ವಿವಿಧೆಡೆ ಮಂಗಳವಾರ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಕಡಬ ಮತ್ತು ಬೆಳ್ತಂಗಡಿ ತಾಲ್ಲೂಕು ಹಾಗೂ ಕುಕ್ಕೆ ಸುಬ್ರಹ್ಮಣ್ಯದ ಸುತ್ತಮುತ್ತ ಒಂದು ಗಂಟೆಗೂ ಹೆಚ್ಚುಕಾಲ ಗಾಳಿ- ಗುಡುಗು ಸಹಿತ ಧಾರಾಕಾರ ಮಳೆಯಾಯಿತು.

ಸುಳ್ಯ ತಾಲ್ಲೂಕಿನ ಕೊಲ್ಲಮೊಗ್ರು ಕಲ್ಮಕಾರು, ಹರಿಹರ ಪಲ್ಲತ್ತಡ್ಕ, ಐನೆಕಿದು, ಗುತ್ತಿಗಾರು, ಬಳ್ಪ, ಯೇನೆಕಲ್ಲು, ಕೈಕಂಬ, ಪಂಜ ಸೇರಿದಂತೆ ಕೆಲವೆಡೆ ಉತ್ತಮ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಳಸ ಭಾಗದಲ್ಲಿ ಉತ್ತಮ ಬುಧವಾರ ಉತ್ತಮ ಮಳೆಯಾಗಿದೆ. ಚಿಕ್ಕಮಗಳೂರು ನಗರ, ಕೈಮರ, ಅಲ್ಲಂಪುರ, ಆಲ್ದೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಮಂಗಳವಾರ ಮಧ್ಯಾಹ್ನ 3ರಿಂದ ಎರಡು ಗಂಟೆ ಕಾಲ ಮಳೆಯಾಗಿದೆ. ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಹಾಗೂ ಹೊರಕೆರೆ ದೇವರಪುರ ಭಾಗದಲ್ಲಿ ಹದ ಮಳೆಯಾಗಿದೆ. ಹಿರಿಯೂರು ಹಾಗೂ ಚಳ್ಳಕೆರೆ ತಾಲ್ಲೂಕಿನಲ್ಲಿ ತುಂತುರು ಮಳೆ ಸುರಿದಿದೆ.

ದಾವಣಗೆರೆ ಜಿಲ್ಲೆಯ ನ್ಯಾಮತಿ ಮತ್ತು ಹೊನ್ನಾಳಿ ತಾಲ್ಲೂಕಿನಲ್ಲಿ ಸಂಜೆ ಗುಡುಗು, ಸಿಡಿಲು ಸಹಿತ ಸಾಧಾರಣ ಮಳೆಯಾಗಿದೆ.

ಸಿಡಿಲಿನಿಂದ ಮಹಿಳೆ ಸಾವು

ಸಿಡಿಲಿನಿಂದಾಗಿ ಮಹಿಳೆಯೊಬ್ಬರು ಸಾವಿಗೀಡಾಗಿದ್ದು, ಮೂವರು ಗಾಯಗೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಶಾಡಲಗೇರಿ ಗ್ರಾಮದಲ್ಲಿ ಸಿಡಿಲಿಗೆ ರೈತ ಮಹಿಳೆ ಶಾಂತಮ್ಮ ದುರುಗಪ್ಪ ಕಮತರ (60) ಸಾವಿಗೀಡಾದರು.

ಅದೇ ಗ್ರಾಮದಲ್ಲಿ ನಡೆದ ಪ್ರತ್ಯೇಕ ಘಟನೆಯಲ್ಲಿ ಸಿಡಿಲಿನ ರಭಸಕ್ಕೆ ಫಕೀರಸಾಬ್ ನೈನಾಪುರ, ರಂಜಾನಬೀ ನೈನಾಪುರ ಹಾಗೂ ಶಿವಪ್ಪ ಆರಿ ಎಂಬುವವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಹನುಮನಾಳ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಲಾಗಿದೆ.

ಫಕೀರಸಾಬ್ ಅವರಿಗೆ ಸೇರಿದ 6 ಕುರಿಗಳು ಸಿಡಿಲಿಗೆ ಸ್ಥಳದಲ್ಲೇ ಮೃತಪಟ್ಟಿವೆ. ಹನುಮನಾಳ ಸುತ್ತಮುತ್ತ ಬಿರುಗಾಳಿ, ಸಿಡಿಲು ಗುಡುಗಿನ ಅಬ್ಬರದೊಂದಿಗೆ ಮಳೆಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



2024 ರ ಲೋಕಸಭೆ ಚುನಾವಣೆಗೆ ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರ ನೇತೃತ್ವದಲ್ಲಿ ಎನ್‌ಡಿಎ ಹೊರತು ಪಡಿಸಿದ ಪಕ್ಷಗಳು ಒಟ್ಟುಗೂಡುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಬೆಂಗಳೂರಿನಲ್ಲಿ ಮಂಗಳವಾರ ಬಸವ ವೇದಿಕೆ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಾಹಿತಿ ಜಿ.ವಿ.ರೇಣುಕಾ ರಾಜಶೇಖರ್ (ವಚನ ಸಾಹಿತ್ಯ ಶ್ರೀ), ಜಿ.ಎಸ್.ಜಯದೇವ (ಬಸವಶ್ರೀ) ಡಾ.ಪ್ರದೀಪ್ ಕುಮಾರ್ ಹೆಬ್ರಿ (ವಚನ ಸಾಹಿತ್ಯ ಶ್ರೀ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ರಾಜ್ಯ ಹಸಿರು ನ್ಯಾಯಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಸುಭಾಷ್ ಬಿ.ಅಡಿ, ಬಸವ ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ, ಉಪಾಧ್ಯಕ್ಷ ಎಸ್. ಷಡಕ್ಷರಿ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್, ಬೆಳಗಾವಿ ಜಿಲ್ಲೆಯ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ

– ಪ್ರಜಾವಾಣಿ ಚಿತ್ರ

ಸತ್ಯಪಾಲ್ ಮಲಿಕ್ ತಿರುಗೇಟು

ಜೈಪುರ (ಪಿಟಿಐ): ರಾಜ್ಯಪಾಲ ಹುದ್ದೆ ತೊರೆದ ನಂತರ 2019ರ ಪುಲ್ವಾಮ ಭಯೋತ್ಪಾದಕ ದಾಳಿ ಕುರಿತು ಪ್ರಶ್ನೆ ಎತ್ತುತ್ತಿದ್ದೇನೆ ಎಂದು ಹೇಳುವುದು ತಪ್ಪು ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಹೇಳಿದ್ದಾರೆ.

ರಾಜಸ್ಥಾನದ ಸಿಕಾರ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಾಳಿ ನಡೆದ ದಿನವೂ ಈ ಬಗ್ಗೆ ಧ್ವನಿ ಎತ್ತಿದ್ದೆ’ ಎಂದು ವರು ಹೇಳಿದರು.

ಕೇಂದ್ರ ಸಚಿವ ಅಮಿತ್ ಶಾ ಅವರ, ‘ನಮ್ಮ ಜೊತೆಗಿನ ಸಂಬಂಧ ಕಡಿದುಕೊಂಡ ನಂತರ ಮಲಿಕ್ ಆರೋಪ ಮಾಡುತ್ತಿದ್ದಾರೆ’ ಎಂಬ ಹೇಳಿಕೆಗೆ ತಿರುಗೇಟು ನೀಡಿ ಹೀಗೆ ಪ್ರತಿಕ್ರಿಯಿಸಿದರು.

42,114 ಹೆಕ್ಟೇರ್ ಭೂ ಹಕ್ಕಿಗೆ ವಿಘ್ನ

ಒಂದನೇ ಪುಟದಿಂದ...

ತೀರ್ಪಿನ ಒಂದೂವರೆ ವರ್ಷದ ನಂತರ ಸರ್ಕಾರ 1978ರಿಂದ 2019ರವರೆಗೆ ಹೊರಡಿಸಿದ್ದ 56 ಅಧಿಸೂಚನೆಗಳನ್ನು ರದ್ದುಪಡಿಸಿತ್ತು.

ಅಧಿಸೂಚನೆ ರದ್ದಾಗಿರುವುದರಿಂದ ಅರಣ್ಯೇತರ ಚಟುವಟಿಕೆಗಳಿಗೆ ಮಂಜೂರು ಮಾಡಿದ್ದ ಭೂಮಿಯನ್ನು ಮರಳಿ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕು. ಇಂಡೀಕರಣ ಮಾಡಿಕೊಡಬೇಕು ಎಂದು ಅರಣ್ಯ ಇಲಾಖೆ ಕಂದಾಯ ಇಲಾಖೆಗೆ ಪತ್ರ ಬರೆದಿತ್ತು. ‘ಕೋರ್ಟ್ ಆದೇಶದ ಪ್ರಕಾರ ಅಗತ್ಯಕ್ರಮ ಕೈಗೊಂಡು ಇಡೀಕರಣ ಕಾರ್ಯ ಪೂರ್ಣಗೊಳಿಸುವಂತೆ’ ಕಂದಾಯ ಇಲಾಖೆ ಎಲ್ಲ ಜಿಲ್ಲಾಧಿಕಾರಿಗಳಿಗೂ ಸುತ್ತೋಲೆ ಹೊರಡಿಸಿದ್ದು, ಅಧಿಕಾರಿಗಳ ಸಮಿತಿ ರಚಿಸಲಾಗಿದ್ದು, ಇಂಡೀಕರಣಕ್ಕೆ ಚಾಲನೆ ನೀಡಲಾಗಿದೆ.

‘ಅರಣ್ಯೇತರ ಚಟುವಟಿಕೆಗಳಿಗೆ ಅರಣ್ಯದ ಭೂಮಿ ಮಂಜೂರು ಮಾಡಿದರೆ ಪರ್ಯಾಯ ಭೂಮಿ ನೀಡದೇ ಇರುವುದು ಸಮಸ್ಯೆಯ ಮೂಲ’ ಎನ್ನುತ್ತಾರೆ ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಜಶೇಖರ್.

ಇಂಡೀಕರಣ ಮಾಡಿದರೆ ಸಾಲದು, ನಿಯಮಬಾಹಿರವಾಗಿ ನಡೆದುಕೊಂಡ ಅಧಿಕಾರಿಗಳು, ಜನಪ್ರತಿನಿಧಿಗಳ ವಿರುದ್ಧ ಕ್ರಮ ಜರುಗಿಸಬೇಕು.
ಗಿರೀಶ್ ಆಚಾರ್, ಪಿಐಎಲ್ ಅರ್ಜಿದಾರ

ಜಿಲ್ಲೆ	ಇಂಡೀಕರಣವಾಗುವ ಭೂಮಿ (ಹೆಕ್ಟೇರ್‌ಗಳಲ್ಲಿ)
ಶಿವಮೊಗ್ಗ	12,086.76
ಮೈಸೂರು	12,385.89
ಶಿರಸಿ	2112.92
ಚಿಕ್ಕಮಗಳೂರು	1137.37
ಧಾರವಾಡ	4037.30
ಕೊಡಗು	174.24
ಬಳ್ಳಾರಿ	1006.93
ಹಾಸನ	174.24
ಕಲಬುರಗಿ	4350.30
ಬೆಳಗಾವಿ	183.39
ದಕ್ಷಿಣ ಕನ್ನಡ	64.34
ಬೆಂಗಳೂರು	1556.29
ಒಟ್ಟು	42,114.09

ಇಂಡೀಕರಣ ಎಂದರೇನು?

ಅರಣ್ಯೇತರ ಚಟುವಟಿಕೆ, ಒತ್ತುವರಿ ಮತ್ತಿತರ ಕಾರಣಗಳಿಂದ ಕೈಬಿಟ್ಟು ಹೋಗಿದ್ದ ಅರಣ್ಯಭೂಮಿಯನ್ನು ಒಟ್ಟುಗೂಡಿಸಿ, ಆರ್‌ಟಿಸಿ, ಮ್ಯುಟೇಷನ್ ಮತ್ತಿತರ ಕಂದಾಯ ದಾಖಲೆಗಳಲ್ಲಿ ಮರು ನಮೂದಿಸುವ ಪ್ರಕ್ರಿಯೆಯನ್ನು ಇಂಡೀಕರಣ ಎಂದು ಕರೆಯಲಾಗುತ್ತದೆ. ಕಂದಾಯ ಇಲಾಖೆಯಲ್ಲಿದ್ದ ಭೂ ಒಡೆತನ ಅರಣ್ಯ ಇಲಾಖೆಗೆ ಸೇರುತ್ತದೆ. ಇದರಿಂದ ಪ್ರಸ್ತುತ ಇರುವ ಅರಣ್ಯ ಭೂಮಿಯ ಖಚಿತ ವಿಸ್ತೀರ್ಣ, ವ್ಯಾಪ್ತಿಯ ಮಾಹಿತಿ ದೊರೆಯುತ್ತದೆ.

ಕೋರ್ಟ್ ಆದೇಶದ ಪ್ರಕಾರ ಸಹಜವಾಗಿ ಅದು ಅರಣ್ಯ ಇಲಾಖೆಯ ಅಧೀನಕ್ಕೆ ಒಳಪಡುತ್ತದೆ. ಪ್ರಕ್ರಿಯೆಗಳನ್ನು ಕಂದಾಯ ಇಲಾಖೆ ಪೂರ್ಣಗೊಳಿಸುತ್ತಿದೆ.
ರಾಜ್ ಕಿಶೋರ್ ಸಿಂಗ್
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಆರ್‌ಟಿಸಿಯಲ್ಲಿ ಅರಣ್ಯಭೂಮಿ ಎಂದು ನಮೂದಿಸಿದರೆ ಜನರಿಗೆ ಭೂ ಹಕ್ಕು ಇರುವುದಿಲ್ಲ. ಲಕ್ಷಾಂತರ ಜನರು ಮತ್ತೆ ಬೀದಿಗೆ ಬೀಳುತ್ತಾರೆ.
ಭರತ್ ಮೂರ್ತಿ ರಾವ್
ವಕೀಲರು, ಶಿವಮೊಗ್ಗ

ಮರುಳಸಿದ್ದೇಶ್ವರ ರಥೋತ್ಸವ

ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ಅಸಂಖ್ಯ ಭಕ್ತರ ನಡುವೆ ಮಂಗಳವಾರ ಸಂಜೆ ವಿಜೃಂಭಣೆಯಿಂದ ಜರುಗಿತು

ಪ್ರಜಾವಾಣಿ ಚಿತ್ರ: ಕೆ.ಎಂ. ರವಿಕುಮಾರ

ಇದೇ 27ಕ್ಕೆ ಕಾರ್ಯಕರ್ತರ ಜತೆ ಮೋದಿ ಸಂವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಇದೇ 27ರಂದು ಬಿಜೆಪಿಯ 50 ಲಕ್ಷ ಕಾರ್ಯಕರ್ತರ ಜತೆ ವರ್ಚುವಲ್ ಮೂಲಕ ಸಂವಾದ ನಡೆಸಲಿದ್ದಾರೆ ಎಂದು ಬಿಜೆಪಿಯ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ತಿಳಿಸಿದರು.

ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ರಾಜ್ಯದ 58,112 ಮತಗಟ್ಟೆಗಳಲ್ಲಿ, 1,680 ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಈ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಮಾಜಿ ಸಚಿವ ಇನಾಮದಾರ ನಿಧನ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಮಾಜಿ ಸಚಿವ, ಕಾಂಗ್ರೆಸ್‌ನ ಹಿರಿಯ ನಾಯಕ ಡಿ.ಬಿ. ಇನಾಮದಾರ (73) ಅವರು ಬೆಂಗಳೂರಿನ ಮಣಿಪಾಲ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಗಿನ ಜಾವ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ ಅವರ ಹುಟ್ಟೂರು ನೇಗಿನಹಾಳ ಗ್ರಾಮಕ್ಕೆ ತರಲಾಗುವುದು. ಅಲ್ಲಿನ ಶಾಲಾ ಮೈದಾನದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. ಮಧ್ಯಾಹ್ನ 12ರ ನಂತರ ಅಂತ್ಯಕ್ರಿಯೆ ನೆರವೇರಿಸಲಾಗುವುದು. ಅವರ ತಂದೆ– ತಾಯಿ ಸಮಾಧಿಗಳ ಪಕ್ಕದಲ್ಲೇ ಸಮಾಧಿ ಮಾಡಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇನಾಮದಾರ ಅವರು ಭಾರಿ ಶ್ರೀಮಂತ ಕುಟುಂಬದಲ್ಲಿ 1950ರ ಜುಲೈ 2ರಂದು ಜನಿಸಿದರು. 1983ರಲ್ಲಿ ತಮ್ಮ 33ನೇ ವಯಸ್ಸಿನಲ್ಲಿ ಪ್ರಥಮ ಬಾರಿ ಶಾಸಕರಾದರು. ಬಳಿಕ 1985, 1994, 1999 ಹಾಗೂ 2013 ಹೀಗೆ ಐದು ಬಾರಿ ಶಾಸಕರಾಗಿದ್ದರು.

1983ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರದಲ್ಲಿ ಮೊದಲ ಬಾರಿ ಸಚಿವರಾಗಿದ್ದ ಅವರು ಗಣಿ ಮತ್ತು ಭೂ ವಿಜ್ಞಾನ ಖಾತೆಯನ್ನು ನಿರ್ವಹಿಸಿದ್ದರು. 1985ರಲ್ಲಿ ಆರೋಗ್ಯ ಸಚಿವರಾಗಿ, 1999ರಲ್ಲಿ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಹಾಗೂ 2000ರಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಖಾತೆ ನಿಭಾಯಿಸಿದ್ದರು.

ಸದ್ಯ ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕ ಸಮಿತಿಯ ವಸತಿ ಸೈನಿಕ ಶಾಲೆಯ ಚೇರ್ಮನ್ ಆಗಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಸರ್ಕಾರಿ ಗೌರವ: ಬೊಮ್ಮಾಯಿ

‘ಡಿ.ಬಿ. ಇನಾಮದಾರ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ನಡೆಸಲು ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೇಗಿನಹಾಳದಲ್ಲಿರುವ ಡಿ.ಬಿ.ಇನಾಮದಾರ ಅವರ ಮನೆಗೆ ಮಂಗಳವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಇನಾಮದಾರ ಪ್ರಗತಿಪರ ಚಿಂತಕರಾಗಿದ್ದರು. ಉತ್ತರ ಕರ್ನಾಟಕದ ಬಗ್ಗೆ ಕಳಕಳಿ ಹೊಂದಿದ್ದರು. ಮುಂಬೈ ಕರ್ನಾಟಕ ಹೆಸರು ‘ಕಿತ್ತೂರು ಕರ್ನಾಟಕ’ವಾಗಿ ಬದಲಾಗಬೇಕೆಂದು ಬಯಸಿದವರಲ್ಲಿ ಅವರೂ ಒಬ್ಬರು. ನಾನು ಇದನ್ನು ಘೋಷಿಸಿದಾಗ ಬಹಳ ಸಂತಸಪಟ್ಟಿದ್ದರು’ ಎಂದು ಸ್ಮರಿಸಿದರು.

ಆದಾಯಕ್ಕಿಂತ ಹೆಚ್ಚು ಆಸ್ತಿ ಆರೋಪ: ಲಾಕರ್‌ಗಳ ತೆರೆದು ಪರಿಶೀಲನೆ

ಮಂಗಳವಾರವೂ ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೇರಿದಂತೆ ಎಂಟು ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮಂಗಳವಾರವೂ ರಾಜ್ಯದ ವಿವಿಧೆಡೆ ಶೋಧ ನಡೆಸಿದರು.

ರಾಜ್ಯದ 34 ಸ್ಥಳಗಳ ಮೇಲೆ ಸೋಮವಾರ ದಾಳಿ ಮಾಡಿದ್ದ ಲೋಕಾಯುಕ್ತ ಪೊಲೀಸರು, ಶೋಧ ನಡೆಸಿದ್ದರು. ಕೆಲವು ಅಧಿಕಾರಿಗಳ ಆಸ್ತಿ ವಿವರಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳು ಲಭ್ಯವಾಗಿದ್ದವು. ಅವುಗಳನ್ನು ಆಧರಿಸಿ ಮಂಗಳವಾರವೂ ಶೋಧ ನಡೆಸಲಾಗಿದೆ.

‘ಕೆಲವು ಅಧಿಕಾರಿಗಳಿಗೆ ಸೇರಿದ ಬ್ಯಾಂಕ್ ಲಾಕರ್‌ಗಳನ್ನು ತೆರೆದು ಪರಿಶೀಲಿಸಲಾಗಿದೆ. ಆಪಾದಿತರು ವಿವಿಧೆಡೆ ಸ್ಥಿರಾಸ್ತಿ ಹೊಂದಿರುವ ಕುರಿತ ಮಾಹಿತಿ ಆಧರಿಸಿ ತನಿಖೆ ನಡೆಸಲಾಗಿದೆ. ವಶಕ್ಕೆ ಪಡೆದಿರುವ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಅಧಿಕಾರಿಗಳ ಆಸ್ತಿ ವಿವರ

ಗಂಗಾಧರಯ್ಯ ಕೆ.ಎಲ್ (ಬಿಬಿಎಂಪಿಯ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ): ಬೆಂಗಳೂರಿನ ವಿವಿಧೆಡೆ 14 ಫ್ಲ್ಯಾಟ್, ನೆಲಮಂಗಲದಲ್ಲಿ 5 ಎಕರೆ ಜಮೀನು, ಮಲ್ಲೇಶ್ವರದಲ್ಲಿ ನಿವೇಶನ, ₹ 73 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ, ವಜ್ರದ ಆಭರಣಗಳು, ₹ 1.47 ಕೋಟಿ ನಗದು, ವಿದೇಶಿ ಕರೆನ್ಸಿ, ₹ 50 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು.

ಐ.ಎಂ. ನಾಗರಾಜ (ನಿವೃತ್ತ ಡಿಸಿಎಫ್): ಶಿವಮೊಗ್ಗ ನಗರದಲ್ಲಿ ಒಂದು ಮನೆ, ಮಳಿಗೆ, ನಾಲ್ಕು ವಾಣಿಜ್ಯ ಸಂಕೀರ್ಣ, ಎಂಟು ನಿವೇಶನ, ಎರಡು ಸರ್ವೀಸ್ ಸ್ಟೇಷನ್, ಅನುಪಿನಕಟ್ಟೆಯಲ್ಲಿ 10 ಎಕರೆ ತೋಟ ಮತ್ತು ತೋಟದ ಮನೆ, ಬೆಂಗಳೂರಿನಲ್ಲಿ ಒಂದು ಫ್ಲ್ಯಾಟ್, ನಾಲ್ಕು ಕಾರು, ಒಂದು ದ್ವಿಚಕ್ರ ವಾಹನ, ₹ 16 ಲಕ್ಷ ಮೌಲ್ಯದ ಚಿನ್ನಾಭರಣ.

ಎನ್.ಜೆ. ನಾಗರಾಜ (ತಹಶೀಲ್ದಾರ್, ಹೊಳಲ್ಕೆರೆ): ಶಿಕಾರಿಪುರದಲ್ಲಿ ಒಂದು ಮನೆ, ನಿಂಬಾಪುರ ಗ್ರಾಮದಲ್ಲಿ ಮನೆ, ಚನ್ನಗಿರಿ ತಾಲ್ಲೂಕಿನಲ್ಲಿ ಕೃಷಿ ಜಮೀನು, ಕುಟುಂಬದ ಸದಸ್ಯರ ಹೆಸರಿನಲ್ಲಿ ಸ್ಥಿರಾಸ್ತಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಹೂಡಿಕೆ.

ವೆಂಕಟೇಶಪ್ಪ (ಇ.ಒ, ಬಾಗೇಪಲ್ಲಿ ತಾಲ್ಲೂಕು ಪಂಚಾಯಿತಿ): ಬಂಗಾರಪೇಟೆಯಲ್ಲಿ ಒಂದು ಮನೆ, ಒಂದು ನಿವೇಶನ, ಒಂದು ನಿರ್ಮಾಣ ಹಂತದಲ್ಲಿರುವ ಮನೆ, ತಿಪ್ಪದೊಡ್ಡನಹಳ್ಳಿಯಲ್ಲಿ ಮನೆ, 14 ಎಕರೆ ಜಮೀನು, ಹಾರ್ಡ್‌ವೇರ್ ಮಳಿಗೆ, ಕೋಳಿ ಸಾಕಾಣಿಕೆಯ ನಾಲ್ಕು ಶೆಡ್, 550 ಗ್ರಾಂ. ಚಿನ್ನ, 3.5 ಕೆ.ಜಿ. ಬೆಳ್ಳಿ, ಎರಡು ಕಾರು.

ಹುಸೇಬ್ ಸಾಬ್ (ಇ.ಇ, ಜೆಸ್ಕಾಂ, ಬಳ್ಳಾರಿ): ಬಳ್ಳಾರಿ ಮತ್ತು ಹೊಸಪೇಟೆಯಲ್ಲಿ ತಲಾ ಒಂದು ಮನೆ, ಹೊಸಪೇಟೆಯಲ್ಲಿ ಒಂದು ನಿವೇಶನ, ಹಡಗಲಿ ತಾಲ್ಲೂಕಿನಲ್ಲಿ 6 ಎಕರೆ 20 ಗುಂಟೆ ಜಮೀನು, ಸಿದಿಗಿನಮೂಲ ಗ್ರಾಮದಲ್ಲಿ ಒಂದು ಮನೆ, ನಾಲ್ಕು ಕಾರು, 1.4 ಕೆ.ಜಿ. ಚಿನ್ನ, ₹ 23.69 ಲಕ್ಷ ನಗದು.

ಟಿ. ಹನುಮಂತಯ್ಯ (ಎಇಇ, ರಾಜಕಾಲುವೆ ವಿಭಾಗ, ಬಿಬಿಎಂಪಿ): ಹಿರಿಯೂರು ತಾಲ್ಲೂಕಿನ ಬೋಚಾಪುರ ಗ್ರಾಮದಲ್ಲಿ 25 ಎಕರೆ 23 ಗುಂಟೆ ಅಡಿಕೆ ತೋಟ, ತೋಟದ ಮನೆ, ಕೋಳಿ ಸಾಕಾಣಿಕೆಯ ಎರಡು ಶೆಡ್, ಹಿರಿಯೂರಿನಲ್ಲಿ ಎರಡು ನಿವೇಶನ, ಬೆಂಗಳೂರಿನಲ್ಲಿ ಒಂದು ಮನೆ, ಒಂದು ಕಾರು.

ಸುರೇಶ್ ಮೇಡ (ಇಇ, ಸಣ್ಣ ನೀರಾವರಿ ಇಲಾಖೆ, ಬೀದರ್): ಬೀದರ್‌ನಲ್ಲಿ ಎರಡು ಮನೆ, ಮೂರು ನಿವೇಶನ, ಮೂರು ಕಾರು, ಮೂರು ದ್ವಿಚಕ್ರ ವಾಹನ, 1.8 ಕೆ.ಜಿ. ಚಿನ್ನ, 6.6 ಕೆ.ಜಿ. ಬೆಳ್ಳಿ, ₹ 45 ಲಕ್ಷ ಮೌಲ್ಯದ ಜೀವವಿಮಾ ಪಾಲಿಸಿ ಬಾಂಡ್‌ಗಳು.

ವಿಜಯಕುಮಾರಸ್ವಾಮಿ (ಉಪ ತಹಶೀಲ್ದಾರ್, ಮುಡುಬಿ ಹೋಬಳಿ, ಬಸವಕಲ್ಯಾಣ): ಬೀದರ್‌ನಲ್ಲಿ ಒಂದು ಮನೆ, ಬೀದರ್ ಮತ್ತು ಬಸವಕಲ್ಯಾಣದಲ್ಲಿ 15 ನಿವೇಶನ, ಒಂದು ಆಟೋ ಗ್ಯಾರೇಜ್, ಎರಡು ಕಾರು, ಒಂದು ದ್ವಿಚಕ್ರ ವಾಹನ.

ತೆಲಂಗಾಣ ಸರ್ಕಾರ ಸಲ್ಲಿಸಿದ್ದ ಮಸೂದೆ ಕುರಿತ ಅರ್ಜಿ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಅಭಿಮತ

ರಾಜ್ಯಪಾಲರಿಂದ ತ್ವರಿತ ನಿರ್ಧಾರ ಅಗತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರು, ತಮ್ಮ ಮುಂದೆ ಬರುವ ಮಸೂದೆಗಳ ಕುರಿತು ತ್ವರಿತವಾಗಿ ನಿರ್ಧಾರ ಕೈಗೊಳ್ಳಬೇಕು. ಇಂಥ ಸಂದರ್ಭದಲ್ಲಿ, ಸಂವಿಧಾನದ 200(1) ವಿಧಿಯಲ್ಲಿನ ‘ಸಾಧ್ಯವಾದಷ್ಟು ತ್ವರಿತವಾಗಿ’ ಎಂಬ ಉಲ್ಲೇಖವನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ-ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ನ್ಯಾಯಪೀಠ, ‘ಸಾಧ್ಯವಾದಷ್ಟು ತ್ವರಿತವಾಗಿ ಎಂಬುದು ಸಂವಿಧಾನದಲ್ಲಿ ಮಹತ್ವದ ಉದ್ದೇಶ ಹೊಂದಿದೆ. ರಾಜ್ಯಪಾಲರು ಸೇರಿದಂತೆ ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರು ಗಮನದಲ್ಲಿಟ್ಟುಕೊಳ್ಳಬೇಕು’ ಎಂದು ಹೇಳಿತು.

ವಿಧಾನಸಭೆಯಲ್ಲಿ ಅಂಗೀಕರಿಸಲಾದ ಹತ್ತು ಮಸೂದೆಗಳು ರಾಜ್ಯಪಾಲರ ಅಂಕಿತಕ್ಕಾಗಿ ಕಾಯುತ್ತಿವೆ. ಮಸೂದೆಗಳಿಗೆ ಅಂಕಿತ ಹಾಕುವಂತೆ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಅವರಿಗೆ ನಿರ್ದೇಶನ ನೀಡುವಂತೆ ಕೋರಿ ತೆಲಂಗಾಣ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಿಲೇವಾರಿ ಮಾಡಿತು.

ಇದಕ್ಕೂ ಮುನ್ನ, ಸಾಲಿಸಿಟರ್ ಜನರಲ್ ಮೆಹ್ತಾ ಹಾಗೂ ಹಿರಿಯ ವಕೀಲ ದುಷ್ಯಂತ್ ದವೆ ನಡುವೆ ಕಾವೇರಿದ ಚರ್ಚೆ ನಡೆಯಿತು.

ತೆಲಂಗಾಣ ರಾಜ್ಯಪಾಲರ ಪರ ಹಾಜರಿದ್ದ ಮೆಹ್ತಾ, ‘ಸದ್ಯ ಯಾವುದೇ ಮಸೂದೆ ಅಂಕಿತಕ್ಕೆ ಬಾಕಿ ಉಳಿದಿಲ್ಲ. ಮಸೂದೆಗಳ ಕುರಿತು ನಿರ್ಧರಿಸುವಾಗ ಆದಷ್ಟು ತ್ವರಿತವಾಗಿ ಎಂಬ ನ್ಯಾಯಪೀಠದ ಅಭಿಪ್ರಾಯವನ್ನು ಆದೇಶದಲ್ಲಿ ಉಲ್ಲೇಖಿಸುವ ಅಗತ್ಯ ಇರಲಿಲ್ಲ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಜೆಐ, ‘ಈ ರಾಜ್ಯಪಾಲರನ್ನೇ (ತಮಿಳಿಸೈ ಸೌಂದರರಾಜನ್) ಉದ್ದೇಶಿಸಿ ನಾವು ಈ ಮಾತನ್ನು ಹೇಳಿಲ್ಲ. ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರು ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಹೇಳಿದ್ದೇವೆ’ ಎಂದು ಹೇಳಿದರು.

‘ಇದರ ಉಲ್ಲೇಖ ಅಗತ್ಯವಿರಲಿಲ್ಲ. ನಾನು ಇದಕ್ಕಿಂತ ಹೆಚ್ಚಿಗೇನೂ ಹೇಳುವುದಿಲ್ಲ. ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸಲು ಇಚ್ಛಿಸುವುದಿಲ್ಲ’ ಎಂದು ಮೆಹ್ತಾ ಹೇಳಿದರು.

ತೆಲಂಗಾಣ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ದುಷ್ಯಂತ್ ದವೆ, ‘ಸೂಕ್ತ ನಿರ್ದೇಶನ ಇರುವ ಆದೇಶವನ್ನು ಹೊರಡಿಸುವ ಮೂಲಕ ಈ ವಿಷಯಕ್ಕೆ ಅಂತ್ಯ ಹಾಡಬೇಕು’ ಎಂದು ಕೋರಿದರು.

‘ಮಧ್ಯಪ್ರದೇಶದಲ್ಲಿ ರಾಜ್ಯಪಾಲರು ಮಸೂದೆಗಳಿಗೆ ಒಂದು ವಾರದೊಳಗೆ ಅಂಕಿತ ಹಾಕುತ್ತಾರೆ. ಗುಜರಾತಿನಲ್ಲಿ ಒಂದು ತಿಂಗಳ ಒಳಗೆ ಹಾಕಲಾಗುತ್ತದೆ. ತೆಲಂಗಾಣದಲ್ಲಿ ವಿರೋಧ ಪಕ್ಷ ನೇತೃತ್ವದ ಸರ್ಕಾರ ಇರುವುದರಿಂದ ಮಸೂದೆಗಳಿಗೆ ಅಂಕಿತ ಹಾಕುವುದು ವಿಳಂಬವಾಗುತ್ತಿದೆ’ ಎಂದ ದವೆ ಆರೋಪಿಸಿದರು.

ಈ ಮಾತಿಗೆ ಆಕ್ಷೇಪಿಸಿದ ಮೆಹ್ತಾ, ‘ಒಂದು ವಿಷಯವನ್ನು ಈ ರೀತಿಯಾಗಿ ಸಾರ್ವತ್ರೀಕರಣಗೊಳಿಸಲಾಗದು’ ಎಂದರು.

ಆಗ, ‘ನೀವು ಕೇಂದ್ರ ಸರ್ಕಾರದಿಂದ ನೇಮಕವಾದವರು. ಹೀಗಾಗಿ, ನೀವು ಒಂದು ವಿಷಯವನ್ನು ಸಾರ್ವತ್ರೀಕರಣಗೊಳಿಸಬಾರದು’ ಎಂದು ದವೆ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ, ‘ನ್ಯಾಯಾಲಯದಲ್ಲಿ ಕೂಗಾಡಿದರೆ ಯಾವುದೇ ಪ್ರಯೋಜನವಾಗದು’ ಎಂದರು.

‘ಪ್ರತಿ ಬಾರಿ ನಾನು ನ್ಯಾಯಪೀಠದ ಮುಂದೆ ಹಾಜರಾದಾಗ, ಅವರಲ್ಲಿ (ಮೆಹ್ತಾ) ನನ್ನ ಕುರಿತು ಅಸಹನೆ ಕಂಡು ಬರುತ್ತದೆ. ಅವರು ಬಹಳ ಕೀಳುಮಟ್ಟಕ್ಕೆ ಇಳಿದಿದ್ದಾರೆ. ನನ್ನ 44 ವರ್ಷಗಳ ವಕೀಲಿ ವೃತ್ತಿಯಲ್ಲಿಯೇ ಇಂಥದ್ದನ್ನು ನೋಡಿಲ್ಲ’ ಎಂದು ದವೆ ಅವರು ಆರೋಪಿಸಿದರು.

ಮುಸ್ಲಿಮರ ಮೀಸಲಾತಿ ಯಾವುದೇ ಕ್ರಮ ಸದ್ಯಕ್ಕಿಲ್ಲ

ಒಂದನೇ ಪುಟದಿಂದ...

ಏಪ್ರಿಲ್ 18ರಂದು ಪೀಠದ ಮುಂದೆ ಹಾಜರಾಗಿದ್ದ ತುಷಾರ್ ಮೆಹ್ತಾ, ‘ರಾಜ್ಯ ಸರ್ಕಾರದ ಪ್ರತಿಕ್ರಿಯೆ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ಬೇಕು. ಮೀಸಲಾತಿಯನ್ನು ಹಿಂಪಡೆದ ನಿರ್ಧಾರವನ್ನು ಇನ್ನೂ ಒಂದು ವಾರದವರೆಗೆ ಜಾರಿಗೊಳಿಸುವುದಿಲ್ಲ’ ಎಂದು ಹೇಳಿದ್ದರು. ಬಳಿಕ ವಿಚಾರಣೆಯನ್ನು ಏಪ್ರಿಲ್ 25ಕ್ಕೆ ಮುಂದೂಡಲಾಗಿತ್ತು.

ಮುಸ್ಲಿಮರ ಶೇ 4ರಷ್ಟು ಮೀಸಲಾತಿ ಹಿಂಪಡೆದ ಕರ್ನಾಟಕ ಸರ್ಕಾರದ ಮಾರ್ಚ್ 27ರ ಆದೇಶ ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ‘ಮುಸ್ಲಿಮರನ್ನು ಒಬಿಸಿ ಪಟ್ಟಿಯಿಂದ ಕೈಬಿಟ್ಟಿರುವುದು ಕಾನೂನುಬಾಹಿರ ಮತ್ತು ಆರ್ಥಿಕವಾಗಿ ದುರ್ಬಲ ವರ್ಗದ ಪಟ್ಟಿಗೆ ಸೇರಿಸಿರುವುದು ಕೂಡ ಕಾನೂನಿಗೆ ವಿರುದ್ಧ’ ಎಂದು ಅರ್ಜಿದಾರರು ದೂರಿದ್ದರು.

ಏಪ್ರಿಲ್ 14ರಂದು ಪ್ರಕರಣದ ವಿಚಾರಣೆ ನಡೆಸಿದ್ದ ಪೀಠವು, ‘ರಾಜ್ಯ ಸರ್ಕಾರದ ನಿರ್ಧಾರವು ದೋಷಪೂರಿತ ಹಾಗೂ ಪ್ರಮಾದದಿಂದ ಕೂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ’ ಎಂದು ಹೇಳಿತ್ತು. ‘ಹಿಂದುಳಿದ ವರ್ಗದ ಶಾಶ್ವತ ಆಯೋಗದ ಅಂತಿಮ ವರದಿಗೆ ಕಾಯದೆ ಮಧ್ಯಂತರ ವರದಿಯ ಆಧಾರದಲ್ಲಿ ಮೀಸಲಾತಿ ಕೋಟಾವನ್ನು ಹಿಂಪಡೆಯುವ ಅಗತ್ಯ ಏನಿತ್ತು’ ಎಂದೂ ಪ್ರಶ್ನಿಸಿತ್ತು.

ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತುಕೊಂಡು, ಅದನ್ನು ಲಿಂಗಾಯತರಿಗೆ ಹಾಗೂ ಒಕ್ಕಲಿಗರಿಗೆ ತಲಾ ಶೇ 2ರಷ್ಟು ಹಂಚುವ ನಿರ್ಣಯವನ್ನು ಕರ್ನಾಟಕ ಸರ್ಕಾರ ಮಾಡಿತ್ತು. ಮುಸ್ಲಿಮರನ್ನು ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ಸೇರಿಸುವ ನಿರ್ಧಾರವನ್ನೂ ತೆಗೆದುಕೊಂಡಿತ್ತು.

ದೋಣಿಗಳ ಲಂಗರು... 61 ದಿನಗಳ ಮೀನುಗಾರಿಕೆ ನಿಷೇಧ ಮಂಗಳವಾರದಿಂದ ಆರಂಭವಾಗಿದ್ದು ಚೆನ್ನೈನ ಕಾಸಿಮೇಡು ಮೀನುಗಾರಿಕಾ ಬಂದರಿನಲ್ಲಿ ದೋಣಿಗಳು ಲಂಗರು ಹಾಕಿದ್ದವು – ಎಎಫ್‌ಪಿ ಚಿತ್ರ

‘ಸಲಿಂಗ ಮದುವೆ: ಸಂಸತ್ತಿಗೇ ಕಾಯ್ದೆ ರಚಿಸುವ ಅಧಿಕಾರ’

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಕಾನೂನು ರೂಪಿಸುವ ಬಾಧ್ಯತೆ ಸಂಸದರ ಮೇಲಿರುವಾಗ, ಇಂಥದೇ ಕಾನೂನನ್ನು ರೂಪಿಸಲಾಗುತ್ತದೆ ಎಂದು ಊಹಿಸಿಕೊಳ್ಳಲು ಸಾಧ್ಯವೇ? ಈ ಕುರಿತು ಆದೇಶ ಹೊರಡಿಸಬಹುದೇ?’ ಎಂದಿತು.

‘ವಿಶಾಖ ವಿರುದ್ಧ ರಾಜಸ್ಥಾನ ಸರ್ಕಾರ’ ಪ್ರಕರಣವನ್ನು ಪ್ರಸ್ತಾಪಿಸಿದ ನ್ಯಾಯಪೀಠ, ‘ಉದ್ಯೋಗ ಸ್ಥಳಗಳಲ್ಲಿ ಮಹಿಳೆ ಮೇಲೆ ನಡೆಯುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಕಾನೂನಿನಲ್ಲಿನ ನ್ಯೂನತೆಗಳನ್ನು ಸರಿಪಡಿಸುವಂತೆ ಸೂಚಿಸಲಾಗಿತ್ತು. ಈ ವಿಷಯ ಕುರಿತು ಶಾಸಕಾಂಗವೇ ಕ್ರಮ ತೆಗೆದುಕೊಳ್ಳಬೇಕು’ ಎಂದಿತು.

‘ಪತಿ ಮತ್ತು ಪತ್ನಿ ಬದಲಾಗಿ ದಂಪತಿ ಎಂದು ಕರೆದು, ವ್ಯಕ್ತಿ ಎಂಬುದಕ್ಕೆ ಪುರುಷ ಮತ್ತು ಮಹಿಳೆ ಎಂದು ಬಳಸುತ್ತೇವೆ ಎಂದು ಭಾವಿಸಿ. ಇಬ್ಬರು ಹಿಂದೂ ಮಹಿಳೆಯರು ಅಥವಾ ಪುರುಷರು ಮದುವೆಯಾದಾಗ, ಅವರಿಬ್ಬರ ಪೈಕಿ ಒಬ್ಬರು ಮೃತರಾಗುತ್ತಾರೆ ಎಂದಿಟ್ಟುಕೊಳ್ಳಿ. ಹಿಂದೂ ಉತ್ತರಾಧಿಕಾರ ಕಾಯ್ದೆ ಪ್ರಕಾರ, ಹಿಂದೂ ಪುರುಷ ಮೃತಪಟ್ಟ ಸಂದರ್ಭದಲ್ಲಿ ಆ ವ್ಯಕ್ತಿ ಬರೆದಿಟ್ಟ ಮೃತ್ಯುಪತ್ರದ ಪ್ರಕಾರವೇ ಆಸ್ತಿಯನ್ನು ಭಾಗ ಮಾಡಲಾಗುತ್ತದೆ. ಮಹಿಳೆ ಮತ್ತು ಪುರುಷರಿಗೆ ಹಂಚಿಕೆಯಾಗುವ ಆಸ್ತಿ ಕುರಿತು ಕಾನೂನಿನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಅದೇ, ಉಯಿಲು ಬರೆದಿಟ್ಟ ನಂತರ ಮಹಿಳೆ ಮೃತಪಟ್ಟರೆ, ಉತ್ತರಾಧಿಕಾರಕ್ಕೆ ಬೇರೆಯೇ ವಿಧಾನವಿದೆ’ ಎಂದು ನ್ಯಾಯಪೀಠ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲೆ ಮನೇಕಾ ಗುರುಸ್ವಾಮಿ, ‘ಸಂವಿಧಾನ ಖಾತ್ರಿಪಡಿಸಿರುವ ಹಕ್ಕಿನಿಂದ ನಮ್ಮನ್ನು ವಂಚಿಸುವುದಕ್ಕೆ ಸಂಸತ್ತು ಕಾರಣವಾಗಬಾರದು’ ಎಂದರು.

‘ವಿಶೇಷ ವಿವಾಹ ಕಾಯ್ದೆಯಡಿ ಮಾನ್ಯತೆ ನೀಡಬೇಕು ಎಂಬುದಷ್ಟೇ ನಮ್ಮ ಕಕ್ಷಿದಾರರ ಬೇಡಿಕೆಯಾಗಿದೆ’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

‘ವಿಶೇಷ ವಿವಾಹ ಕಾಯ್ದೆ ಹಾಗೂ ವೈಯಕ್ತಿಕ ಕಾನೂನುಗಳು ಒಂದಕ್ಕೊಂದು ತಳಕು ಹಾಕಿಕೊಂಡಿವೆ. ವಿಶೇಷ ವಿವಾಹ ಕಾಯ್ದೆಯಲ್ಲಿ ಮಾಡುವ ಯಾವುದೇ ಬದಲಾವಣೆ ವೈಯಕ್ತಿಕ ಕಾನೂನುಗಳ ಮೇಲೆ ಪರಿಣಾಮ ಬೀರುತ್ತದೆ. ವಿಶೇಷ ವಿವಾಹ ಕಾಯ್ದೆಯನ್ನು ಲಿಂಗ ತಟಸ್ಥವಾಗಿರುವಂತೆ ರೂಪಿಸಲಾಗಿದೆ’ ಎಂದಿತು. ‘ಅರ್ಜಿದಾರರು ತಮ್ಮ ಸಮುದಾಯದ (ಎಲ್‌ಜಿಬಿಟಿಕ್ಯೂ-ಐಎ) ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಾರೆಯೇ’ ಎಂದು ಪ್ರಶ್ನಿಸಿದ ನ್ಯಾಯಪೀಠ, ‘ತಾವು ಬದುಕು ರೀತಿಯನ್ನು ಸಂರಕ್ಷಿಸಿಕೊಳ್ಳುವವರು ಇರಬಹುದು’ ಎಂದು ಕೇಳಿತು.

‘ಸಲಿಂಗ ಮದುವೆ ವ್ಯಾಖ್ಯಾನದಡಿ ಬರಲು ಇಚ್ಛಿಸುವವರು ಇದರ ವ್ಯಾಪ್ತಿಗೆ ಬರಬಹುದು. ಬೇಡವಾದವರು ಬರಬೇಕಿಲ್ಲ’ ಎಂದು ವಕೀಲೆ ಮೇನಕಾ ಹೇಳಿದರು. ಒಬ್ಬ ವ್ಯಕ್ತಿಯ ಲಿಂಗತ್ವ ಅನನ್ಯತೆ ಅಥವಾ ಲೈಂಗಿಕ ಆಸಕ್ತಿ ಏನೇ ಇದ್ದರೂ, ಆತನಿಗೆ ಕುಟುಂಬವನ್ನು ಹೊಂದುವ ಹಕ್ಕು ಇದೆ. ಈ ಹಕ್ಕು ಸಂವಿಧಾನದ 21ನೇ ವಿಧಿ ವ್ಯಾಪ್ತಿಯಲ್ಲಿ ಇರಬೇಕು ಎಂದು ಮತ್ತೊಬ್ಬ ವಕೀಲರು ಹೇಳಿದರು.

ಸಿಸೋಡಿಯಾ ವಿರುದ್ಧ ಪೂರಕ ಚಾರ್ಜ್‌ಶೀಟ್

ಮನೀಶ್ ಸಿಸೋಡಿಯಾ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧನದಲ್ಲಿರುವ ದೆಹಲಿ ಮಾಜಿ ಉಪಮುಖ್ಯಮಂತ್ರಿ, ಎಎಪಿ ನಾಯಕ ಮನೀಶ್ ಸಿಸೋಡಿಯಾ ಮತ್ತು ಇತರ ಮೂವರ ವಿರುದ್ಧ ಸಿಬಿಐ, ದೆಹಲಿ ವಿಶೇಷ ನ್ಯಾಯಾಲಯಕ್ಕೆ ಮಂಗಳವಾರ ಪೂರಕ ಆರೋಪಪಟ್ಟಿ ಸಲ್ಲಿಸಿದೆ.

ವಿಶೇಷ ಸಿಬಿಐ ನ್ಯಾಯಾಲಯದ ನ್ಯಾಯಾಧೀಶ ಎಂ.ಕೆ. ನಾಗ್‌ಪಾಲ್ ಅವರು ಆರೋಪಪಟ್ಟಿ ಪರಿಗಣಿಸಲು ಮೇ 12ರಂದು ದಿನ ನಿಗದಿಪಡಿಸಿದರು.

ಅಬಕಾರಿ ನೀತಿ ಹಗರಣದಲ್ಲಿ ಭಾರಿ ಪಿತೂರಿ ಇರುವುದರಿಂದ ಪ್ರಕರಣದ ತನಿಖೆಯನ್ನು ಮುಕ್ತವಾಗಿರಿಸಲಾಗಿದೆ. ಹಗರಣದಲ್ಲಿ ಯಾರದ್ದೆಲ್ಲ ಪಾತ್ರವಿದೆ ಎನ್ನುವುದರ ಪತ್ತೆಗೆ ತನಿಖೆ ಮುಂದುವರಿದಿದೆ ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಹೈದರಾಬಾದ್ ಮೂಲದ ಲೆಕ್ಕಪರಿಶೋಧಕ ಬುಚ್ಚಿ ಬಾಬು ಗೋರಂಟ್ಲಾ, ಮದ್ಯದ ವ್ಯಾಪಾರಿ ಅಮನದೀಪ್ ಸಿಂಗ್ ಧಲ್ ಮತ್ತು ಅರ್ಜುನ್ ಪಾಂಡೆ ಎಂಬವರನ್ನು ಆರೋಪಿಗಳಾಗಿ ಸಿಬಿಐ ಹೆಸರಿಸಿದೆ.

ಅಬಕಾರಿ ಮಾಜಿ ಆಯುಕ್ತ ಆರವ್ ಗೋಪಿ ಕೃಷ್ಣ ಅವರ ಹೆಸರನ್ನು ಆರೋಪ ಪಟ್ಟಿಯ 12ನೇ ಕಾಲಂನಲ್ಲಿ ನಮೂದಿಸಿದ್ದು, ಇವರ ಪಾತ್ರದ ಬಗ್ಗೆಯೂ ಶಂಕೆ ಇದೆ. ಆದರೆ, ಇವರ ವಿರುದ್ಧ ವಿಚಾರಣೆ ನಡೆಸಲು ಸಾಕಷ್ಟು ಪುರಾವೆಗಳಿಲ್ಲವೆಂದು ಸಿಬಿಐ ಉಲ್ಲೇಖಿಸಿದೆ.

ಸಿಸೋಡಿಯಾ ಮತ್ತು ಅಮನದೀಪ್ ಧಲ್ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಬುಚ್ಚಿ ಬಾಬುಗೆ ಕಳೆದ ಮಾರ್ಚ್ 6ರಂದು ಜಾಮೀನು ದೊರೆತಿದೆ. ಪಾಂಡೆಯನ್ನು ಈ ಪ್ರಕರಣದಲ್ಲಿ ಸಿಬಿಐ ಇನ್ನೂ ಬಂಧಿಸಿಲ್ಲ.

ಕಳೆದ ಫೆಬ್ರುವರಿ 26ರಂದು ಸಿಸೋಡಿಯಾರನ್ನು ಬಂಧಿಸಿದ್ದ ಸಿಬಿಐ, 58 ದಿನಗಳ ನಂತರ ಆರೋಪ ಪಟ್ಟಿ ಸಲ್ಲಿಸಿತ್ತು. ಇದರಿಂದ ಸಿಸೋಡಿಯಾ ಅವರಿಗೆ ಜಾಮೀನು ಸಿಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಚೀನಾ ಗಡಿ: ಮಾಣಾ ‘ಭಾರತದ ಮೊದಲ ಗ್ರಾಮ’

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಭಾರತ–ಚೀನಾ ಗಡಿ ಬಳಿಯ ಮಾಣಾ ಗ್ರಾಮದ ಪ್ರವೇಶದ ಬಳಿ ‘ಭಾರತದ ಮೊದಲ ಗ್ರಾಮ’ ಎಂದು ಬರೆದಿರುವ ಫಲಕವನ್ನು ಗಡಿ ರಸ್ತೆ ಸಂಸ್ಥೆ (ಬಿಆರ್‌ಒ) ಹಾಕಿದೆ.

ಈ ಕುರಿತು ಟ್ವೀಟ್ ಮಾಡಿರುವ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಧಾಮಿ ಅವರು, ‘ಮಾಣಾ ಇನ್ನು ಮುಂದೆ ದೇಶದ ಕೊನೆಯ ಗ್ರಾಮವಲ್ಲ, ಅದು ಮೊದಲ ಗ್ರಾಮ’ ಎಂದಿದ್ದಾರೆ. ‘ಗಡಿ ಪ್ರದೇಶಗಳ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ’ ಎಂದು ಹೇಳಿದ್ದಾರೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಚಮೋಲಿ ಗ್ರಾಮಕ್ಕೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ‘ಗಡಿ ಬಳಿಯ ಗ್ರಾಮಗಳನ್ನು ಸಾಮಾನ್ಯವಾಗಿ ದೇಶದ ಕೊನೆಯ ಗ್ರಾಮಗಳು ಎಂದು ಕರೆಯಲಾಗುತ್ತದೆ. ಆದರೆ ಅವು ಕೊನೆಯ ಗ್ರಾಮಗಳಲ್ಲ, ಮೊದಲ ಗ್ರಾಮಗಳು’ ಎಂದು ಅವರು ಹೇಳಿದ್ದರು.

ಪಿಎಂ ಕೇರ್ಸ್ ನಿಧಿ ಆರ್‌ಟಿಐ ವ್ಯಾಪ್ತಿಗೆ ಏಕಿಲ್ಲ?

ನವದೆಹಲಿ (ಪಿಟಿಐ): ‘ಪಿಎಂ ಕೇರ್ಸ್ ನಿಧಿಯಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳ ಪಾಲು ಶೇ 60ರಷ್ಟಿದೆ. ಹೀಗಿದ್ದರೂ ಇದನ್ನು ಆರ್‌ಟಿಐ ವ್ಯಾಪ್ತಿಗೆ ಏಕೆ ತಂದಿಲ್ಲ’ ಎಂದು ಕಾಂಗ್ರೆಸ್ ಮಂಗಳವಾರ ಪ್ರಶ್ನಿಸಿದೆ.

‘ಪಿಎಂ ಕೇರ್ಸ್‌ಗೆ ₹5,000 ಕೋಟಿಯಷ್ಟು ಮೊತ್ತ ದೇಣಿಗೆಯಾಗಿ ನೀಡಲಾಗಿದೆ. ಹೀಗಾಗಿ ಈ ಹಣದ ಕುರಿತು ಹೆಚ್ಚಿನ ಪಾರದರ್ಶಕತೆ ಅಗತ್ಯ. ಇದನ್ನು ಆರ್‌ಟಿಐ ವ್ಯಾಪ್ತಿಗೂ ಒಳಪಡಿಸಬೇಕು’ ಎಂದು ಕಾಂಗ್ರೆಸ್ ವಕ್ತಾರ ಅಭಿಷೇಕ್ ಸಿಂಘ್ವಿ ಒತ್ತಾಯಿಸಿದ್ದಾರೆ.

ನೇಮಕಾತಿ ಹಗರಣ: ಎಫ್‌ಐಆರ್ ದಾಖಲು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ನಗರ ಪಾಲಿಕೆಗಳ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್ ಆದೇಶದ ಅನುಸಾರ ಸಿಬಿಐ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಇದೇ 21ರಂದು ಸಿಬಿಐಗೆ ಹೈಕೋರ್ಟ್ ಆದೇಶ ನೀಡಿತ್ತು. ಮರುದಿನವೇ ಸಿಬಿಐ ಎಫ್‌ಐಆರ್ ದಾಖಲಿಸಿದೆ. ಆಕಾಂಕ್ಷಿಗಳ ಅಂಕಗಳನ್ನು ತಿರುಚಿದ ಆರೋಪದ ಮೇಲೆ ಒಎಂಆರ್ ಶೀಟ್‌ಗಳ ಮುದ್ರಣ ಮತ್ತು ಮೌಲ್ಯಮಾಪನ ನಿರ್ವಹಣೆ ಹೊಣೆ ಹೊತ್ತಿದ್ದ ಅಯಾನ್ ಸಾಲಿ ಮತ್ತು ಅವರ ಎಬಿಎಸ್ ಇನ್ಫೊಫೋನ್ ಪ್ರೈ.ಲಿ. ಕಂಪನಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಇದೇ 28ರಂದು ವರದಿ ನೀಡುವಂತೆ ಸಿಬಿಐಗೆ ಕೋರ್ಟ್ ಸೂಚಿಸಿದೆ.

ಸೌರ ಡೆಕಾಥ್ಲಾನ್ ಸ್ಪರ್ಧೆ: ಬಾಂಬೆ ಐಐಟಿಗೆ 2ನೇ ಸ್ಥಾನ

ವಾಷಿಂಗ್ಟನ್ (ಪಿಟಿಐ): ಬಿಸಿಲು ಮತ್ತು ತೇವಾಂಶ ಇರುವ ವಾತಾವರಣದಲ್ಲಿ ಗಾಳಿಯ ಗುಣಮಟ್ಟವನ್ನು ಸುಧಾರಿಸಲು ನವೀನ ತಂತ್ರಜ್ಞಾನಗಳ ಬಳಕೆಯೊಂದಿಗೆ ಮುಂಬೈನಲ್ಲಿ ಮನೆ ನಿರ್ಮಿಸಿದ್ದಕ್ಕಾಗಿ ಬಾಂಬೆ ಐಐಟಿ ವಿದ್ಯಾರ್ಥಿಗಳ ತಂಡವು ಅಮೆರಿಕದಲ್ಲಿ ನಡೆದ ಸೌರ ಡೆಕಾಥ್ಲಾನ್ ಸ್ಪರ್ಧೆ ‘2023 ಬಿಲ್ಡ್ ಚಾಲೆಂಜ್’ನಲ್ಲಿ ಎರಡನೇ ಸ್ಥಾನ ಗಳಿಸಿದೆ.

ಬಾಂಬೆ ಐಐಟಿಯ ‘ಶೂನ್ಯ’ ಎಂಬ ತಂಡ ಅಭಿವೃದ್ಧಿಪಡಿಸಿದ ವಿವಾನ್ ಎಂಬ ವಿನ್ಯಾಸ ಈ ಗೌರವಕ್ಕೆ ಪಾತ್ರವಾಗಿದೆ. ಅಮೆರಿಕದ ಇಂಧನ ಇಲಾಖೆಯು ನಡೆಸುವ ಸೌರ ಡೆಕಾಥ್ಲಾನ್, ವಿದ್ಯಾರ್ಥಿಗಳಿಗಾಗಿ ದೀರ್ಘಸಮಯದವರೆಗೆ ನಡೆಸುವ ಸ್ಪರ್ಧೆಯಾಗಿದೆ.

ಶೂನ್ಯ ಶಕ್ತಿ ಬಳಕೆಯ ಮನೆಯನ್ನು ನಿರ್ಮಿಸಿದ್ದಕ್ಕಾಗಿ ಬಾಲ್ ಸ್ಟೇಟ್ ವಿಶ್ವವಿದ್ಯಾಲಯವು ಮೊದಲ ಸ್ಥಾನ ಗಳಿಸಿತು. ದಿ ಯುನಿವರ್ಸಿಟಿ ಆಫ್ ಬ್ರಿಟಿಷ್ ಕೊಲಂಬಿಯಾ

2024ರ ಚುನಾವಣೆಯಲ್ಲಿ ಜೋ ಬೈಡನ್ ಮತ್ತೆ ಸ್ಪರ್ಧೆ



ಜೋ ಬೈಡನ್

ವಾಷಿಂಗ್ಟನ್ (ಎಎಫ್‌ಪಿ): ‘2024ರಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಮರು ಸ್ಪರ್ಧಿಸಲಿದ್ದೇನೆ’ ಎಂದು ಡೆಮಾಕ್ರಟಿಕ್ ಪಕ್ಷದ ನಾಯಕ ಹಾಗೂ ಹಾಲಿ ಅಧ್ಯಕ್ಷ ಜೋ ಬೈಡನ್ ಅವರು ಮಂಗಳವಾರ ಘೋಷಿಸಿದ್ದಾರೆ.

‘ಪ್ರತಿ ಪೀಳಿಗೆಯೂ ಪ್ರಜಾಪ್ರಭುತ್ವಕ್ಕಾಗಿ ನಿಲ್ಲಬೇಕಾದ ಹಾಗೂ ತಮ್ಮ ಮೂಲಭೂತ ಸ್ವಾತಂತ್ರ್ಯಕ್ಕಾಗಿ ನಿಲ್ಲಬೇಕಾದ ಕ್ಷಣವೊಂದು ಇರುತ್ತದೆ. ಇದು ನಮ್ಮ ಕ್ಷಣ ಎಂದು ನಾನು ಭಾವಿಸುತ್ತೇನೆ. ಆದ್ದರಿಂದಲೇ ಮುಂಬರಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದೇನೆ. ಕೈಗೆತ್ತಿಕೊಂಡ ಕೆಲಸ ಮುಗಿಸಲು ಇನ್ನೊಂದು ಅವಧಿ ಬೇಕು’ ಎಂದು 80 ವರ್ಷದ ಬೈಡನ್ ಅವರು ಟ್ವಿಟರ್ ಮೂಲಕ ತಿಳಿಸಿದ್ದಾರೆ.

ತಮ್ಮ ಮೊದಲ ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಶಾಸಕಾಂಗದಲ್ಲಿ ದೊಡ್ಡ ಗೆಲುವು ಸಾಧಿಸಿದ ನಂತರ ಮತ್ತು ಮಹತ್ವದ ವಿದೇಶಾಂಗ ನೀತಿ ಹೋರಾಟಗಳನ್ನು ಜಯಿಸಿದ ಫಲವಾಗಿ ಡೆಮಾಕ್ರಟಿಕ್ ಪಕ್ಷದೊಳಗೆ ಬೈಡನ್ ಅವರಿಗೆ ಪ್ರತಿಸ್ಪರ್ಧಿಗಳು ಯಾರೂ ಇಲ್ಲದಂತಾಗಿದೆ.

ಒಂದು ವೇಳೆ ಎರಡನೇ ಬಾರಿಗೆ ಬೈಡನ್ ಅಧ್ಯಕ್ಷರಾಗಿ ಆಯ್ಕೆಯಾದರೆ ಅವರು ಅಧಿಕಾರ ಕೊನೆಗೊಳಿಸುವ ವೇಳೆಗೆ ಅವರಿಗೆ 86 ವರ್ಷ ವಯಸ್ಸಾಗಿರುತ್ತದೆ. ಫೆಬ್ರುವರಿಯಲ್ಲಿ ನಡೆಸಲಾದ ವೈದ್ಯಕೀಯ ಪರೀಕ್ಷೆಯಲ್ಲಿ, ಅವರು ಅಧ್ಯಕ್ಷ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥರಾಗಿದ್ದಾರೆ ಎಂಬುದು ಕಂಡುಬಂದಿತ್ತು. ಆದರೆ, ಬೈಡನ್ ಅವರ ಪರ ಒಲವು ಹೊಂದಿರುವ ಮತದಾರರು ಸೇರಿದಂತೆ ಅನೇಕರು ಅವರಿಗೆ ತುಂಬಾ ವಯಸ್ಸಾಗಿದೆ ಎಂದು ಭಾವಿಸುತ್ತಿದ್ದಾರೆ.

ಈ ಕುರಿತು ಎನ್‌ಬಿಸಿ ಸುದ್ದಿಸಂಸ್ಥೆ ಕಳೆದ ವಾರಾಂತ್ಯದಲ್ಲಿ ನಡೆಸಿದ ಸಮೀಕ್ಷೆಯೊಂದನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಶೇ 70ರಷ್ಟು ಅಮೆರಿಕನ್ನರು ಬೈಡನ್ ಅವರು ಮರುಸ್ಪರ್ಧಿಸಬಾರದು ಎಂದು ಹೇಳಿದ್ದಾರೆ. ಈ ಪೈಕಿ ಶೇ 51ರಷ್ಟು ಮಂದಿ ಡೆಮಾಕ್ರಟ್ಸ್ ಬೆಂಬಲಿಗರು ಎಂಬುದು ವಿಶೇಷ.

ಕಮಲಾ ಹ್ಯಾರಿಸ್ ಸಹ ಸ್ಪರ್ಧೆ

ಕಮಲಾ ಹ್ಯಾರಿಸ್

ವಾಷಿಂಗ್ಟನ್ (ಪಿಟಿಐ): ‘ಬೈಡನ್ ಮತ್ತು ನಾನು ಅಪೂರ್ಣವಾಗಿರುವ ಕಾರ್ಯಗಳನ್ನು ಪೂರ್ಣಗೊಳಿಸಲು ಕಾಯುತ್ತಿದ್ದೇವೆ. ರಾಷ್ಟ್ರವನ್ನು ಕಾಪಾಡಲು ನಾವು ಮುಂಬರಲಿರುವ ಚುನಾವಣೆಯೆಂಬ ಯುದ್ಧದಲ್ಲಿ ಗೆಲ್ಲುತ್ತೇವೆ ಹಾಗೂ ಶ್ವೇತಭವನದಲ್ಲಿ ಇನ್ನೂ ನಾಲ್ಕು ವರ್ಷಗಳ ಕಾಲ ಅಮೆರಿಕದ ಜನರಿಗೆ ಸೇವೆ ಸಲ್ಲಿಸುತ್ತೇವೆ’ ಎಂದು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಮಂಗಳವಾರ ಹೇಳಿದ್ದಾರೆ. ಈ ಮೂಲಕ ಕಮಲಾ ಅವರು ಮತ್ತೊಮ್ಮೆ ತಾವು ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

‘ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು, ಪ್ರಗತಿ ಕಾರ್ಯವನ್ನು ಮುಂದುವರಿಸಲು ಎಲ್ಲರೂ ಒಗ್ಗೂಡಬೇಕು’ ಎಂದು ಅವರು ಅಮೆರಿಕದ ನಾಗರಿಕರನ್ನು ಕೋರಿದ್ದಾರೆ.

ಪಿಎಫ್‌ಐ ಪ್ರಕರಣ: ಡಿಫಾಲ್ಟ್ ಜಾಮೀನು ತಿರಸ್ಕರಿಸಿದ ವಿಚಾರ

ವಿಶೇಷ ನ್ಯಾಯಾಲಯದ ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ಐವರು ಸದಸ್ಯರಿಗೆ ಡಿಫಾಲ್ಟ್ ಜಾಮೀನು ನೀಡಬೇಕೆಂಬ ಮನವಿ ತಿರಸ್ಕರಿಸಿ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿದ್ದ ಎನ್‌ಐಎ ವಿಶೇಷ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಆರೋಪಿಗಳಾದ ಮೊಹಮ್ಮದ್ ಬಿಲಾಲ್ ಸೇರಿದಂತೆ ಐವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೋಕ್ ಆರಾಧೆ ಮತ್ತು ವಿಜಯಕುಮಾರ್ ಎ. ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಎನ್‌ಐಎ ಕಾಯ್ದೆ–2008ರ ಕಲಂ 22 (1)ರ ಅಡಿ ರಾಜ್ಯ ಸರ್ಕಾರವು ಒಂದು ಅಥವಾ ಹೆಚ್ಚಿನ ವಿಶೇಷ ನ್ಯಾಯಾಲಯ ಸ್ಥಾಪಿಸಬಹುದಾಗಿದೆ. ಈ ದಿಸೆಯಲ್ಲಿ ಬೆಂಗಳೂರಿನ 49ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಎನ್‌ಐಎ ವಿಶೇಷ ಕೋರ್ಟ್ ಆಗಿ ಕಾರ್ಯ ನಿರ್ವಹಿಸಲಿದೆ ಎಂದು ರಾಜ್ಯ ಸರ್ಕಾರವು 2012ರ ಜುಲೈ 19ರಂದು ಆದೇಶಿಸಿದೆ. ಹೀಗಾಗಿ, ಆರೋಪಿಗಳ ಡಿಫಾಲ್ಟ್ ಜಾಮೀನು (ನಿಗದಿತ ಅವಧಿಯಲ್ಲಿ ಕೋರ್ಟ್‌ಗೆ ಅಂತಿಮ ವರದಿಯನ್ನು ಸಲ್ಲಿಸದೇ ಹೋದಲ್ಲಿ ಸಂವಿಧಾನಾತ್ಮಕವಾಗಿ ತಂತಾನೇ ಲಭ್ಯವಾಗುವ ಜಾಮೀನು ಹಕ್ಕು) ಮತ್ತು ರಿಮ್ಯಾಂಡ್ ಅವಧಿ ವಿಸ್ತರಣೆ ಕೋರಿದ ಅರ್ಜಿಗಳ ವಿಚಾರಣೆ ನಡೆಸುವ ಅಧಿಕಾರ ವ್ಯಾಪ್ತಿಯನ್ನು ಈ ಎನ್‌ಐಎ ವಿಶೇಷ ನ್ಯಾಯಾಲಯ ಹೊಂದಿದೆ. ಹೀಗಾಗಿ, ಈ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ನೀಡಿರುವ ಆದೇಶ ಸೂಕ್ತವಾಗಿದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಅರ್ಜಿದಾರರಾದ ಮೊಹಮ್ಮದ್ ಬಿಲಾಲ್, ಮೊಹಮ್ಮದ್ ರಫೀಕ್, ಅಬ್ಬಾಸ್ ಕೀನ್ಯಾ, ಅಕ್ಬರ್ ಸಿದ್ದಿಕಿ ಮತ್ತು ಮೊಹಮ್ಮದ್ ರಫೀಕ್ ಎಂಬುವರನ್ನು ಮಂಗಳೂರಿನ ಪಣಂಬೂರು ಠಾಣೆಯ ಪೊಲೀಸರು ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾದ ಆರೋಪಕ್ಕೆ ಸಂಬಂಧಿಸಿದಂತೆ 2022ರ ಅಕ್ಟೋಬರ್ 12ರಂದು ಬಂಧಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಹಾಜರುಪಡಿಸಿದ್ದರು.

ನ್ಯಾಯಾಲಯವು ಅರ್ಜಿದಾರರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಇವರ ವಿರುದ್ಧ ಯುಎಪಿಎ ಕಾಯ್ದೆ–1967 (ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ) ಮತ್ತು ಭಾರತೀಯ ದಂಡ ಸಂಹಿತೆ–1860ರ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿತ್ತು. ಮ್ಯಾಜಿಸ್ಟ್ರೇಟ್ ಕೋರ್ಟ್ ಈ ಪ್ರಕರಣವನ್ನು 2022ರ ಡಿಸೆಂಬರ್ 28ರಂದು ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಿತ್ತು.

ವಿಶೇಷ ನ್ಯಾಯಾಲಯವು 2023ರ ಜನವರಿ 9ರಂದು ಅರ್ಜಿದಾರರ ರಿಮ್ಯಾಂಡ್ ಅವಧಿಯನ್ನು 90ರಿಂದ 180 ದಿನಗಳಿಗೆ ವಿಸ್ತರಿಸಿತ್ತು. ಈ ಹಿನ್ನೆಲೆಯಲ್ಲಿ ಆರೋಪಿಗಳು, ‘ತನಿಖಾಧಿಕಾರಿ ಅಂತಿಮ ವರದಿಯನ್ನು 90 ದಿನಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ’ ಎಂಬ ಕಾರಣ ಮುಂದುಮಾಡಿ ಡಿಫಾಲ್ಟ್ ಜಾಮೀನು ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಜನವರಿ 17ರಂದು ವಜಾಗೊಳಿಸಲಾಗಿತ್ತು. ಈ ಆದೇಶ ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

16 ಸ್ಥಳಗಳಲ್ಲಿ ಎನ್‌ಐಎ ಶೋಧ

ನವದೆಹಲಿ/ಪಟ್ನಾ: ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಿಹಾರ, ಗೋವಾ, ಉತ್ತರ ಪ್ರದೇಶ ಹಾಗೂ ಪಂಜಾಬ್‌ನ 16 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಬಿಹಾರದ ಫುಲ್ವಾರಿ ಶರೀಫ್‌ನಲ್ಲಿ, ನಿಷೇಧಿತ ಪಿಎಫ್‌ಐನ ಘಟಕ ನಡೆಸಿತ್ತು ಎನ್ನಲಾದ ವಿಧ್ವಂಸಕ ಕೃತ್ಯ ಕುರಿತು ನಡೆಸುತ್ತಿರುವ ತನಿಖೆ ಭಾಗವಾಗಿ ಈ ಶೋಧ ಕೈಗೊಳ್ಳಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಡಿಜಿಟಲ್ ಸಾಧನಗಳು, ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು, ಪಿಎಫ್‌ಐನ ಅಪರಾಧ ಕೃತ್ಯಗಳನ್ನು ಸಮರ್ಥಿಸುವ ದಾಖಲೆಗಳು ಹಾಗೂ ಒಂದು ಲಕ್ಷ ಮುಖಬೆಲೆಯ ಭಾರತೀಯ ನೋಟುಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SRI VENKATESHWARA College, Tavarekere, Madiwala Requires Commerce, Physics, Maths, History Faculty Preferred PhD,UGC NET/KSET Secretary:- 9886447657. Mail:nagajois@gmail.com

ST. FRANCIS COLLEGE
Affiliated to Bengaluru City University
Approved by AICTE
P.B.No.3417, 3rd Block, 8th Main, Koramangala, Bengaluru-560034.
Tel: 080-25531037/38 www.stfranciscollege.edu.in

FACULTY RECRUITMENT

Applications are invited for the post of Professors/ Associate/ Assistant Professors

Course	Qualification	Experience
B.C.A & M.C.A (Computer Science)	PG with NET/SLET/ Ph.D. minimum of 55% is required at PG level	Above 3 Years

Job Location: Koramangala, Bengaluru

Interested and Eligible Candidates may send their resume along with recent passport size photograph, copies of qualification and experience certificate to the Email-ID:
admin@stfranciscollege.edu.in
director@stfranciscollege.edu.in
By mentioning the post on or before 30.04.2023.

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE

PRINCIPAL/VICE PRINCIPAL/COORDINATORS
Candidates possessing with brilliant academy records, HOD & Subject Experts. Post Graduate with 5 to 10 Years experience and leadership qualities in reputed institution.

ADMIN MANAGER/IT MANAGER/ TRANSPORT MANAGER/PT TEACHERS
Having experience in the relevant field.

Remuneration: at par with the institutional standard. With additional facilities like food & transport in the gross package.

APPLY IMMEDIATELY
Applying candidates should clearly specify the Position Applied for, branch Opted with updated resume
Contact : 9886084799
centralhr.nbgi@gmail.com

CENTRAL MANUFACTURING TECHNOLOGY INSTITUTE (CMTI)
Tumkur Road, Bengaluru – 560 022
(An Autonomous R&D Institute under Ministry of Heavy Industries, Govt. of India)
Advt No: 03/2023

Recruitment on Contract Basis through Walk-In Interview

The CMTI is a premier Institute of National repute, devoted to Research in various aspects of Applied Manufacturing Science. CMTI is executing various sponsored projects & is looking for the following candidates to work in the projects.

Sl No	Name of the Post	Stipend (per Month)	No.of Posts
1.	Project Assistant- I	Rs. 18,000/-	07
2.	Project Assistant- II	Rs. 20,000/-	10
3.	Data Entry Operator cum Assistant -I	Rs. 20,000/-	02
4.	Project Fellow	Rs. 25,000/-*	34

*The Stipend of Project Fellow varies based on the experience.

For Interview Dates: Please refer to the Advertisement in the Institute Website.

The engagement is purely temporary on Contractual basis OR Co-Terminus with the project. Interested and those who are eligible may register their names along with the application (in the format) duly filled between 09:00 to 09:30 Hrs on the respective dates at CMTI.

Other relevant details about the posts, nature of jobs, etc., are available in the Institute website:www.cmti.res.in. Any amendment to this Advertisement will be notified in the Institute Website.

Chief Administrative Officer

SHANTHINIKETHANA ENGLISH SCHOOL- GIRINAGAR Requires STAFF- Trained / Experienced/ Fresher's can also apply. Age<45 Years. 1) VICE PRINCIPAL, ACADEMIC HEAD, COORDINATOR: Female candidate with minimum 4 years of leadership experience, post graduate with B.Ed. 2) CENTRE HEAD: ECCE qualified with min 4 years of teaching experience & 2 years worked as Academic Coordinator 3) TEACHERS: English & Social Studies, Computer, Art & Yoga. 4) SUPERVISOR: Graduate with good English communication skill & 2 Wheeler must. Age<35 Years 5) SCHOOL BUS DRIVERS: Experienced with valid heavy duty license. 6) ATTENDERS: Male & Female. Walk-in: 26th to 29th April- Timings: 10 am- 4 pm. Submit resume with recent photograph. SHANTHINIKETHANA SCHOOL, 1341/A, 8th 'C' Cross, 8th Main, Girinagar 2nd Phase, Bengaluru-85. Phone: 7760202693/ 080-26721334, 26420794. E-mail: hrdsgps@gmail.com; www.shanthinikethana.in.

BGS BLOOMFIELD HIGH
[Recognised by the Govt of Karnataka]
No.38, 6th Cross, 3rd Block, Thyagarajanagar, Basavanagudi, B'lore-28

POSTS CALLED:
HIGH SCHOOL TEACHERS for English, Mathematics, Science(Physics) & Social Studies subjects.
- PHYSICAL EDUCATION M.P.ED.
- ART & CRAFT TEACHER (FINE ARTS GRADUATE)

Trained dynamic teachers with good communication skill and minimum experience of 3 years in relevant field can mail their resume to careers.bloomfield@gmail.com on or before 26th April 2023.

APPLY IMMEDIATELY:
Contact : 080-26763777, 9448528484
bloomfieldadm@gmail.com, Web: bgsbloomfield.com

NSVK HOLY MOTHER NURSERY, PRIMARY & HIGH SCHOOL
Near Water Tank, Jeevanbhima Nagar, Bengaluru-560075
email : avk.nsvk@gmail.com
Ph : 080 25260178 / 9900016544

REQUIRES
01. HEAD MASTER
02. PRIMARY TEACHERS FOR ALL SUBJECTS
03. HIGH SCHOOL TEACHERS FOR ALL SUBJECTS
04. P.T. TEACHER
05. ACCOUNTANT
06. CLERK WITH EXPERIENCE IN KSEB & EDUCATION DEPARTMENT ONLINE
07. SECURITY

WALK-IN-INTERVIEW @ THE ABOVE ADDRESS on 29/04/2023 Saturday Between 10.00AM to 2.00PM
-Chairman

WANTED BSC BEd BA BEd PUC DEd TEACHERS for Priya English Primary and High School, Lingarajpuram, Bangalore- 560084. Contact:- 080- 25490668/ 9880142823.

WANTED TEACHERS with BA/MA (Eng/SS) Salary upto 28000/- Contact Sidhartha International School, Peenya,Dasarahalli. Contact 9620100046 / 9964670328.

Marketing & Sales

WANTED MANAGERS, Teamleaders, Sales Executives and Telecallers to work in Jayanagar & Central City. Earn upto 20000-30000. Call 7406432056

Accounts & Finance

ADVERTISEMENT FOR THE POST OF ACCOUNTS CLERK AT URC

Applications are invited for post of Accounts Clerk at Unit Run Cateen, Command Hospital Air Force with the following details.
Educational Qualification: Bachelor of Commerce, with a minimum of two years experience.
Pay Scale: Starting with Rs. 17,284/- and will be revised from time to time.
Age: Less than 35 yrs as on 30 Jun 2023. However age relaxation up to 05 years will be given for Ex-serviceman.
Selected candidate will be under one year probation period followed by four years of Temporary employment. On satisfactory completion of five years, candidate will be considered as a permanent staff of Unit Run Canteen. Selected candidate will have to deposit a Security deposit of Rs 10,000/-
Candidates need to submit the following documents in a closed Envelope addressed to **OFFICER IN CHARGE, UNIT RUN CANTEEN, COMMAND HOSPITAL AIR FORCE, AGRAM (POST), BENGALURU-560007, Tel: 080-29913097**
- Application typed/hand written in an A4 sheet, with passport size photo affixed on it & duly attested by a Gazetted Officer.
- Self Resume.
- Self attested Photo copy of Aadhar card.
- Certificates of self attested Copies of Educational Qualification.
- Two passport size photos.
- Self addressed an envelope affixed with 10 rupees stamp.

Character certificate signed by Gazetted officer.
Application submission Last Date is 30-05-2023

HOLY ANGEL'S High School Hampinagar, Vijayanagar, Bengaluru 560104. Phone: 23404465/23202042 holyangels.highschoolrpclayout@gmail.com Requires Experienced Trained Teachers to handle Primary, Higher Primary, High School and Music Teacher for the Academic year 2023-2024. STATE & ICSE. Qualification: B.A/B.Sc.,B.Ed, M.A/M.Sc.,M.Ed. Only English medium candidates need apply.

WANTED PRIMARY and HIGH SCHOOL TEACHERS for immediate appointment. Subjects: NTT Teacher,MATHS, SCIENCE (CBZ),PE and Computer.Contact: St.YASH PUBLIC SCHOOL. Kempegowdanagar, Magadi Main-road, Bangalore-91 Phone:7204347583, 7204347584

GURUKULA INTERNATIONAL SCHOOL Requires, NURSERY, NTT, English, Maths, EVS, Kannada and Computer Teachers for Primary and Lady Accountant with Kannada Typing. 9th Cross, Near Magadi Road Metro Station, Bangalore-23. 7829338292 7676676629

REQUIRED ACCOUNTANT cum Assistant Manager above 40 years, with good experience in Tally, MS Office and administration for an Apartment Association in 560061. Apply to: scaoa.acts@gmail.com

HRD & Admin

ಬೇಕಾಗಿದ್ದಾರೆ
ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಗೆ
ಕಾರ್ಯನಿರ್ವಹಣಾಧಿಕಾರಿ
ಹುದ್ದೆಗೆ (Executive Officer) ಪದವಿದರ ವೀರಶೈವ/ ಲಿಂಗಾಯಿತ, **ಆಡಳಿತ ವಿಭಾಗದಲ್ಲಿ** ಅನುಭವವುಳ್ಳ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ. **ನಿವೃತ್ತ ಸರಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದವರು, ಸೈನಿಕರು ಮತ್ತು ನಿವೃತ್ತ ಪೊಲೀಸ್ ಅಧಿಕಾರಿಗಳು ಕೂಡ ಅರ್ಜಿಗಳನ್ನು ಸಲ್ಲಿಸಬಹುದು.** ಅರ್ಹತೆ ಮತ್ತು ಅನುಭವಗಳನ್ನು ಆಧರಿಸಿ ವೇತನ ನಿಗಧಿಪಡಿಸ ಲಾಗುವುದು. ಅರ್ಜಿಗಳನ್ನು ನಾಮ ನಿರ್ದೇಶನಗಳನ್ನು **ದಿನಾಂಕ 10-05-2023 ರೊಳಗಾಗಿ ಕೆಳಗಿನ ವಿಳಾಸಕ್ಕೆ ಸಲ್ಲಿಸುವುದು.**
ಕಾರ್ಯದರ್ಶಿಗಳು,
ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ,
ನಂ.88, ಜಿ.ಟಿ.ರಸ್ತೆ, ನಗರ ರೈಲು ನಿಲ್ದಾಣದ ಹತ್ತಿರ, ಬೆಂಗಳೂರು–23
ದೂ: 080-2287 9665
ಮೊ. 98440 45744
ಸಹಿ/-, ಗೌ. ಕಾರ್ಯದರ್ಶಿಗಳು

Hospital & Medical Jobs

REQUIRED A Jr Dentist for a reputed hospital in Richmond Road, Bangalore, passed BDS with minimum 1 year experience. Having Basic knowledge of surgeries and tooth extraction. Capable to evaluate & perform procedures, understanding of dental hygiene, equipments & tools. A pleasant and compassionate personality. Excellent salary + perks. Freshers Can apply. Resume to: biovision1@yahoo.com

REQUIRED
ADVOCATES (3 Nos) having practice of more than 2 years with knowledge of reading and writing english language. Interested persons may be pleased to contact the undersigned.
LEGAL ASSISTANT aged about 40 years or above, having work experience in Advocate's Office may pleased to contact the undersigned.
V B Shivakumar, Advocate, M/s. VBS Law Inc., No. 230, 1st Floor, Yajaman Complex, 4th Main Road, Chamarajpet, Bangalore-018. Ph: 080-26678443, 22426644 Mobile: 98861 17443

Multiple Vacancy

EXCELLENT OPPORTUNITY for career oriented Experienced Front Office Executive with exposure to Accounts , Computers, Construction, Secretarial & Travel task for Immediate Placement @ HAEID, Rajajinagar. Minimum CTC RS. 4,00,000/- per Annum. Immediate placement. WhatsApp Resumes @ +91 9880007134 Or +91 9901777134 Or email onhaeidhn@yahoo.com

Part-Time Jobs

EARN 30K-2L/ Month Age 35-60 VRS, Housewife, Retired People & Self Employee. Bangalore, Jayanagar: 7899493370

Wanted

WANTED FEMALE Office Assistant Below 40Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

WANTED OFFICE Boys (Field Work), for advt. agency near Hanumathnagar- 6361942572, 9243402739

REAL ESTATE BUYING

General

General

UNLOCK THE Value of your Mortgaged/NPA Land with our short-term funding. We specialize in releasing Residential, Commercial and Industrial Land, Which We then sell at Best Market Price. www.vernadevelopers.com 9353128035, 9916310226

Commerical

Nagarabhavi

REQUIRED 50,000 Sq.Ft. SPACE FOR PURCHASE
50,000 Sqft carpet area with 2 level of parking space
Preferred for G+2/G+3 Floors Less than 10 years old building
Contact: BSS MICRO FINANCE LIMITED Nagarbhavi, Bangalore Mob: 8147292434
BSS Microfinance Limited

REAL ESTATE SELLING

Commercial Building

Multiple Locations

COMMERCIAL PROPERTY for sale next to silver Jubilee park police station measuring 35*76 east facing,suitable for godown and showroom.For more details contact. 9341256746

Residential/ Commercial

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH FACING CONTACT OWNER 9844018823

Sites

Intl Airport Road

SALE 55000 sft 'North' facing 180feet width @ Rs.1600/-sft Bangalore North, Sugata Main Road, Hunsamaranahalli Village. Call VERNA DEVELOPERS, MG Road,9916310226/ 9844056596. www.vernadevelopers.com

PUBLIC NOTICE

PUBLIC NOTICE

This is to inform the General Public that my client has agreed to purchase the property described in the schedule below from **G.ARUN KUMAR S/o. late. N. GOPALA REDDY** residing at No.3, Tharalu Estate, Tharalu Village, Bengaluru-560082. If any persons /s has/have any claim / right, title and interest in the schedule property or have any objections, can lodge the complaint same with the undersigned with documentary proof, within One (7 Days) Weeks from the date of publication of the notice. If no claim / objection exists and my client will proceed to complete the sale transaction. Any Claims/ objections received beyond the stipulated period will not be entertained.

SCHEDULE

All that piece and parcel of the immovable property being agricultural dry Land bearing Sy. No. 35/2 measuring 02 acres17 guntas, and Sy. No. 36/7 measuring 25 guntas, totally measuring 03 acres 02 guntas, situated at THARALU Village, Uttarahalli Hobli, Bengaluru South Taluk, Bengaluru Urban District.

Sd.by
Shashidhar Gowda
No.16, Shree Guru Kaarunya, 1st Main,Durganagar Layout, Bengaluru-560059.
M. No.88848 55000
Bangalore
Date :26/04/2023

PERSONAL

Change of Name

ಹೆಸರು ಬದಲಾವಣೆ
ಡ್ಯಾನಿಯಲ್.ಎಂ ವಯಸ್ಸು 48 ವರ್ಷ, ಬಿನ್ ಲೇಟ್ ಮುನಿಯಪ್ಪ, ವಾಸ: ನಂ.138, 5ನೇ ಮುಖ್ಯರಸ್ತೆ, ಎ.ಕೆ. ಕಾಲೋನಿ, ದೊಮ್ಮಲೂರು, ಬೆಂಗಳೂರು–560071 ನಾನು ನನ್ನ ಹೆಸರನ್ನು **ಡ್ಯಾನಿಯಲ್.ಎಂ** ಇಂದ **ನಾಗರಾಜ್.ಎಂ** ಎಂದು ಬಿ.ವಿ.ನಾಗಭೂಷಣ, ನೋಟರಿ, ಬೆಂಗಳೂರು ಇವರ ಸಮ್ಮುಖದಲ್ಲಿ ದಿನಾಂಕ: 24/04/2023 ರಂದು ಪ್ರಮಾಣ ಪತ್ರದ ಮೂಲಕ ಬದಲಾಯಿಸಿಕೊಂಡಿರುತ್ತೇನೆ.

KRITHIK SRIVASTA M B, S/o. 1384561M, Ex-Hav, Balasubramanya M P R/a. #5, 6th Cross, 1st Block, Akshayanagar, Bangalore-16, have changed my name from M B KRITHIK SRIVATSA to KRITHIK SRIVATSA M B, affidavit dated 25.04.2023 before notary L. Gopalakrishna, Bangalore.

I, M B HEMALATHA W/o. 1384561M, Ex-Hav, Balasubramanya M P, R/a. #5, 6th Cross, 1st Block, Akshayanagar, Bangalore-16, declare that my D.O.B is wrongly mentioned in my Spouse's Service records as 18.01.1971. Correct D.O.B is 19.01.1971, affidavit dated 25.04.2023 before notary L. Gopalakrishna Bangalore.

TOURS & TRAVEL

Holiday Package Tours

AMAZING THAILAND with Plumeria Holidays. 4 Day trip with flight ticket, 4* stay, All meals & Sightseeing. Departure from Bangalore 18th May & 22nd June. Call: 9449753888/ 7356968411

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

COMPUTER TEACHERS required for ARYAN PRESIDENCY SCHOOL, 283, 13th 'A' Main Road, behind Ambedkar Institute of Technology Balachandra Layout 13th Block, 2nd Stage, Naagarabhaavi, BENGALURU-560072. 1) PRIMARY AND HIGHER PRIMARY- Qual: Basic degree in any field with computer knowledge. 2) HIGH SCHOOL-with excellent knowledge in JAVA (min 2 years teaching exp). Qual: MCA/ BCA/ B.Sc (CS). WALK-IN INTERVIEW ON:- 26-04-2023 Email resume to: info@ilmedu.org Contact: 9845103787

KIRAN CONVENT AND HIGH SCHOOL, Hegganahalli, Bangalore-91, Wanted TRAINED TEACHERS to Handle MATHS, SCIENCE and KANNADA for ENGLISH MEDIUM. Contact: 9845552214 9900608243

NEW OXFORD High School 5th Block, Bhashyam Circle, Rajajinagar, Bangalore-10, Requires Mathematics, English, Hindi, Kannada, and Nursery Teachers, Helpers: 9740470654

HERITAGE PUBLIC SCHOOL, Srinidhi Layout, J.P.Nagar 8th Phase, Konanakunte, Bengaluru-62, Requires: Hindi Teachers For High School, Maths, Science, Social & English Teachers For Middle & Primary School, PE Teachers and Kindergarten Teachers. Attractive Salary.Call: 080-26322111, 9901733776.

CAMLIN ENGLISH SCHOOL 6th 'C' Main Hampinagara Vijayanagar 2nd Stage Bangalore-104. Requires TEACHERS B.Sc., B.Ed. (Maths, Science) B.A., B.Ed. (English, Kannada, Social) TCH/D.Ed., NTT, Computers, Drawings, SECURITY GUARD, ATTENDER, AYA SCHOOL BUS DRIVER. Contact immediately/ Apply: 080-23301363

WANTED ADMINISTRATOR, TEACHERS, To Teach English Social Maths Science Computer in English Medium Classes Contact: Sree Manjunatha Vidyalaya Magadiroad, Tollgate, Bangalore- 560023. 080-23350778, 9448074071, 9480608715.

WANTED PRINCIPAL For STATE BOARD SCHOOL In JP.Nagar. Send CV: applyedujobs@gmail.com

VIDYAVAHINI ENGLISH SCHOOL Anandnagar-24 R.T.Nagar Post, Ph: 9008396542/ 080-23538869 Requires Trained Teachers for Primary & High School Forward your CV to principalvves@srsect.edu.in 9343865939/ 8792614131

ART &-DANCE TEACHERS needed for Chitrakoota CBSE School in Nagarbhavi, Kengeri Ring Road, with High Salary. Call: 7829647333

WANTED LECTURERS in Physics, Chemistry Economics, Commerce English, Kannada, Computer Science, Hindi, Physical Education and Librarian for Vidyavana PU College Tirumalashettyhalli, Whitefield, Bengaluru. Email: vidyavanahr@gmail.com WhatsApp: 9663389388

QUALIFIED EXPERIENCED teachers required for the post of English, Social Science- B.A, B.Ed, Physics- B.Sc, B.Ed, Preprimary- NTT, MTT, Music Teacher (Vocal) for a reputed school in Rajajinagar with 1- 3 years experience. Contact: 9538888151/ 8861959123.

FRANK PUBLIC SCHOOL, JP.Nagar 6th phase, requires HIGH SCHOOL ENGLISH, HINDI TEACHERS PRIMARY SCHOOL TEACHERS. COMPUTER SCIENCE TEACHER. Email: rumysud@gmail.com WhatsApp 7019301626

FEMALE HOME Tuter Required for 8th, 6th,1st standard ICSC Students at HSR Layout. 9845087569.

General

VACUUM BASED Equipment Manufacturing Company requires QUALITY ASSURANCE ENGINEER, Qualification: BE Mechanical with NDE Level II Experience: 5 to 6 years, MARKETING ASSISTANT- Any Degree Reply to Email: accounts@vtvacuumtech.com

JOIN A reputable security services company. Seeking experienced professionals for General Manager Business Development Officer, and Accountant roles. Attractive salaries offered. Apply now! f2india2020@gmail.com 8147713339

WANTED TURNER, DRO cum MILLING OPERATOR, HELPER cum DELIVERY BOY. 'MACHINE SPARES' Peenya 3rd phase, Bangalore-58 Contact: 9886001712, 9483399000

REQUIRED EXPERIENCED Data mining Operators. Full time Job. Per sheet basis. Work place Seshadripuram. Contact Joshi 9343305749

Situation Required

Ayu Health
Quality Healthcare Made Easy
ನರ್ಸ್ ನೇಮಕ ಡ್ರೈವ್
27 ಏಪ್ರಿಲ್, 2023
ಬೆಳಿಗ್ಗೆ 11 ರಿಂದ
ಟೆಲಿಫೋನಿಕ್ ಸಂದರ್ಶನ
40+ ಮುಕ್ತ ಸ್ಥಾನಗಳು
NABH ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ನಿಯೋಜನೆ
ಈಗ ಅನ್ವಯಿಸು
080 694 51367
960 694 1968

Engg/ Production Technical

"WANTED DIPLOMA candidate from ECE, EEE and CSE, with Experience of 0/2Years only. Contact:Yukthi Datasoft Pvt.Ltd. 7795734869/ 9986934382"

MORE Classifieds Ads on Subsequent Pages

EDUCATION CORNER

ಕ್ಲಾಸಿಫೈಡ್ಸ್

ADMISSIONS OPEN for 2023 - 24
Pre - primary
NEW LIGHT INTERNATIONAL SCHOOL
81519 13535, 88613 23887
93423 09285
Address: No. 46, Landson Infrastructure, FERNS ASPEN HEIGHTS, 90mtr International Airport Cargo Rd, Betweeen BK Halli - Bagalur B'lore North - 562 149

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege

ADMISSIONS OPEN 2023 - 2024

COURSES OFFERED
B.Com BBA BCA B.Sc B.A.
ROUNAQH

impact GROUP OF INSTITUTIONS — IIMS — ICEAS — IMPACT SCHOOL OF ARCHITECTURE

B.E / B.Tech in (CET Code: E139)
- Artificial Intelligence & Machine Learning Engineering
- Automation & Robotics
- Computer Science Engineering
- Computer Science Engg with Data Science
- Computer Science Engg with Cyber Security
- Civil Engineering
- Electronics & Communication Engineering
- Mechanical Engineering

M.Tech - CSE, Thermal Engineering

Impact Institute of Management Studies
- BBA - (Aviation, Logistics, Logistic + Aviation)
- B.COM - (ACCA, CMA, Logistics)
- BCA - (Cloud Computing & Ethical Hacking, Digital Forensic & Cyber Security, Artificial Intelligence)
- B.Sc - Interior Design

Masters in Business Administration (MBA) - BCU, VTU

WHY IMPACT ? ◆ Excellent faculty ◆ Safe green campus in the heart of Bengaluru ◆ Globally recognised certificates from top industry bodies ◆ Simulation & real life projects * Assured placements * Paid internships

ARCHITECTURE CET Code: E224 | ComedK: E166
◆ B.Arch
◆ M.Arch (Digital Architecture)

IMP-23407

Call: +91 8050011855, 8880810015 Web: www.impact.ac.in
Impact Campus, Sahakaranagar Post, Kodigehalli, Bengaluru-560092

RV Institute of Management
Autonomous Institution, Affiliated to Bengaluru City University | Approved by AICTE, NAAC 'A+' Accredited
Go, change the world
Autonomous Institution of Excellence
in collaboration with
Boston IT Solutions India Pvt. Ltd
is launching an
Industry-Curated Certification
Course on
'PREDICTIVE ANALYTICS USING R'
from May 2023

COURSE DETAILS
- Venue: Centre for Business Analytics, RV Institute of Management, Jayanagar, Bengaluru
- Eligibility: Graduates from any discipline
- Mode : Hybrid * Duration: 2 Months
- Fees : Rs. 10,000/- inclusive of GST
- Timings for session: 6.30 pm to 9.00 pm (From Monday to Friday) - Practical

Scan QR code for Course details, to register & pay the fee

Contact Person : Prof. Mithun D J
Mob: 9844284240 Ph: 08042540300
Website : www.rvim.edu.in

2nd PU Failed?
Don't be left behind!
A golden opportunity to study degree under any University this academic year and save one precious year of your life.
BE, MBBS, BSc, BBA, BCA
and other degrees
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
8800883871

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ಅಭ್ಯರ್ಥಿಗಳು ಏನಂತಾರೆ..?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಆದಿತ್ಯ ಕೆ.ಎ.** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಉದಯ್ ಗರುಡಾಚಾರ್ (ಬಿಜೆಪಿ)

‘ಎಲ್ಲ ಸಮುದಾಯಕ್ಕೂ ನ್ಯಾಯ ಒದಗಿಸಿದ ತೃಪ್ತಿ’

● **ಯಾವ ಕಾರಣಕ್ಕೆ ಮತದಾರರು ನಿಮ್ಮನ್ನು ಬೆಂಬಲಿಸಬೇಕು?**

ಶಾಸಕನೆಂದರೆ ಜನರ ಸೇವಕ. ಕಳೆದ ಸಾಲಿನಲ್ಲಿ ಶೇ 80ರಷ್ಟು ಕೆಲಸ ಪೂರ್ಣಗೊಳಿಸಿದ್ದೇನೆ. ಉಳಿದ ಕಾಮಗಾರಿಗಳು ಪೂರ್ಣಗೊಳ್ಳಬೇಕಿದ್ದರೆ ನಾನು ಮರು ಆಯ್ಕೆಗೊಳ್ಳಬೇಕಿದೆ.

● **ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂತಹದ್ದು?**

ಕ್ಷೇತ್ರದ ಜನರಿಗೆ ನನ್ನ ಮೇಲೆ ವಿಶ್ವಾಸವಿದೆ. ಕಳೆದ ಅವಧಿಯಲ್ಲಿ ಮೊದಲ ವರ್ಷ ವಿರೋಧ ಪಕ್ಷದಲ್ಲಿದ್ದೆವು. ಅಧಿಕಾರಕ್ಕೆ ಬಂದ ಬಳಿಕ ಮತ್ತೆರಡು ವರ್ಷ ಕೋವಿಡ್–19 ಬಾಧಿಸಿತ್ತು. ಎರಡು ವರ್ಷ ಮಾತ್ರ ಕೆಲಸ ಮಾಡಲು ಅವಕಾಶ ಸಿಕ್ಕಿತ್ತು. ಈ ಅವಧಿಯಲ್ಲೇ ಸಾಕಷ್ಟು ಕೆಲಸ ಮಾಡಿದ್ದೇನೆ. ಒಳಚರಂಡಿ ವ್ಯವಸ್ಥೆ ಸುಧಾರಿಸಲಾಗಿದೆ. ಮತ್ತೊಂದು ಬಾರಿ ಅವಕಾಶ ಲಭಿಸಿದರೆ ಕ್ಷೇತ್ರವು ಸಂಪೂರ್ಣ ಅಭಿವೃದ್ಧಿ ಹೊಂದಲಿದೆ.

● **ಹಾಲಿ ಶಾಸಕರಾಗಿ ತೃಪ್ತಿ ತಂದ ಕೆಲಸ ಯಾವುದು?**

ನನ್ನ ಅವಧಿಯಲ್ಲಿ ಚಿಕ್ಕಪೇಟೆಯಲ್ಲಿ ಶಾಂತಿ ನೆಲೆಸಿತ್ತು. ಯಾವುದೇ ಗಲಭೆಗೆ ಅವಕಾಶ ನೀಡಲಿಲ್ಲ. ಎಲ್ಲ ಸಮುದಾಯವನ್ನೂ ಒಟ್ಟಿಗೆ ಕರೆದೊಯ್ಯುವ ಕೆಲಸ ಮಾಡಿದ್ದೇನೆ. ಯಾರೇ ಮನೆ ಹಾಗೂ ಕಚೇರಿಗೆ ಬಂದರೂ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಿಕೊಟ್ಟಿದ್ದೇನೆ. ಆ ತೃಪ್ತಿ ನನಗಿದೆ.

● **ನಿಮ್ಮ ಎದುರಾಳಿಯ ಬಗ್ಗೆ?**

ಚುನಾವಣೆಯ ವೇಳೆ ಎಲ್ಲರೂ ಸಹಜವಾಗಿಯೇ ಸವಾಲು ನೀಡುತ್ತಾರೆ. ಕಾಂಗ್ರೆಸ್‌ನ ಆರ್.ವಿ.ದೇವರಾಜ್ ಅವರು ಪ್ರಬಲ ಪೈಪೋಟಿ ಒಡ್ಡುತ್ತಿದ್ದಾರೆ. ಕೆಜಿಎಫ್ ಬಾಬು ಅವರನ್ನೂ ಕಡೆಗಣಿಸುವಂತಿಲ್ಲ. ಕ್ಷೇತ್ರದಲ್ಲಿ 65 ಸಾವಿರ ಅಲ್ಪಸಂಖ್ಯಾತ ಮತಗಳಿವೆ. ಆ ಮತಗಳು ನಿರ್ಣಾಯಕವಾಗಲಿವೆ. ನನ್ನ ಮೇಲೆ ಹೆಚ್ಚಿನವರು ವಿಶ್ವಾಸ ಇಟ್ಟಿದ್ದಾರೆ.

ಆರ್.ವಿ.ದೇವರಾಜ್ (ಕಾಂಗ್ರೆಸ್)

‘ಜನ ನನ್ನ ಕೆಲಸ ಮರೆತಿಲ್ಲ’

● **ಕ್ಷೇತ್ರದ ಬಂಡಾಯ ನಿಮಗೆ ಹಿನ್ನಡೆ ತರುವುದೇ?**

ಬಂಡಾಯವು ಇಲ್ಲ, ಏನೂ ಇಲ್ಲ. ಒಡಕು ಮೂಡಿಸಲು ಬಿಜೆಪಿ ಅಭ್ಯರ್ಥಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಸಹ ಪಕ್ಷದ ಪರ ಕೆಲಸ ಮಾಡುತ್ತಿದ್ದಾರೆ. ಕೆಜಿಎಫ್ ಬಾಬು ಮನೆಯಲ್ಲಿ ಮತದಾರರ ಗುರುತಿನ ಚೀಟಿಗಳು ಸಿಕ್ಕಿವೆ. ಅವರ ಮೇಲೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ.

● **ನಿಮ್ಮ ನಿಜವಾದ ಎದುರಾಳಿ ಯಾರು?**

ನನ್ನ ಎದುರಾಳಿ ಬಿಜೆಪಿ ಅಭ್ಯರ್ಥಿ ಮಾತ್ರ.

● **ಯಾವ ಕಾರಣಕ್ಕೆ ಜನರು ನಿಮಗೇ ಮತ ಹಾಕಬೇಕು?**

ಅಧಿಕಾರದಲ್ಲಿ ಇಲ್ಲದ ಅವಧಿಯಲ್ಲೂ ಕ್ಷೇತ್ರದಲ್ಲಿ ಜಾತಿ, ಧರ್ಮದ ತಾರತಮ್ಯ ಮಾಡದೆ ನೆರವು ನೀಡುತ್ತಿದ್ದೇನೆ. ಕಲಾಸಿಪಾಳ್ಯ ಬಸ್ ನಿಲ್ದಾಣದ ಹಿಂದೆ ನನ್ನ ಶ್ರಮವಿದೆ. ಬೆಂಗಳೂರು ವೈದ್ಯಕೀಯ ಕಾಲೇಜಿನ ಅಭಿವೃದ್ಧಿಯಲ್ಲೂ ನನ್ನ ಪಾತ್ರವಿದೆ. ಕೆಂಪಾಬುದಿ, ಭೈರಸಂದ್ರ ಕೆರೆಗಳ ಅಭಿವೃದ್ಧಿ ಮಾಡಿದ್ದು ನಾನು. ಉದ್ಯಾನ, ಆಟದ ಮೈದಾನ ಸರ್ಕಾರಿ ಶಾಲೆಗಳ ನವೀಕರಣ ಮಾಡಿದ್ದೇನೆ. ಜಯದೇವ, ಕಿದ್ವಾಯಿ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ರಾಜೀವ್ ಗಾಂಧಿ ಹೃದ್ರೋಗ ಆಸ್ಪತ್ರೆಗೆ ಅನುದಾನ ತಂದಿದ್ದೇ ನಾನು. ಕ್ಷೇತ್ರದ ಜನರು ನನ್ನ ಕೆಲಸಗಳನ್ನು ಇಂದಿಗೂ ಮರೆತಿಲ್ಲ.

● **ನಿಮಗಿರುವ ಬೆಂಬಲ ಎಂಥದ್ದು?**

ಪ್ರಚಾರದ ವೇಳೆ ಉತ್ತಮ ಬೆಂಬಲ ಸಿಗುತ್ತಿದೆ. ಕೋವಿಡ್ ವೇಳೆ ಕ್ಷೇತ್ರದ ಜನರ ಕಣ್ಣೀರು ಒರೆಸಿದ್ದೇನೆ. ಕಲಾಸಿಪಾಳ್ಯದ ಮಾರುಕಟ್ಟೆ ಸ್ಥಳಾಂತರ ಹಾಗೂ ಗಾಂಧಿ ಬಜಾರ್ ಮಾರುಕಟ್ಟೆ ನವೀಕರಣಕ್ಕೆ ನನ್ನ ಗೆಲುವು ಕ್ಷೇತ್ರದ ಜನರಿಗೆ ಅಗತ್ಯವಿದೆ.

ಬ್ರಿಜೇಶ್ ಕಾಳಪ್ಪ (ಆಮ್ ಆದ್ಮಿ ಪಕ್ಷ)

‘ಕ್ಷೇತ್ರಕ್ಕೆ ಹೊಸ ಮೆರುಗು ನೀಡುವೆ’

● **ಯಾವ ಕಾರಣಕ್ಕೆ ನಿಮ್ಮನ್ನು ಮತದಾರರು ಬೆಂಬಲಿಸಬೇಕು?**

ನನ್ನ ಮೇಲೆ ಒಂದೇ ಒಂದು ಕಳಂಕವೂ ಇಲ್ಲ. ಶುದ್ಧಹಸ್ತ. ಅದೇ ಕಾರಣಕ್ಕೆ ಕ್ಷೇತ್ರದ ಮತದಾರರು ಎಲ್ಲೆಡೆ ಅಭೂತಪೂರ್ವ ಸ್ವಾಗತ ನೀಡುತ್ತಿದ್ದಾರೆ. ಇತರೆ ಅಭ್ಯರ್ಥಿಗಳ ಮೇಲೆ ಸಾಕಷ್ಟು ಆಪಾದನೆಗಳಿವೆ.

● **ಕ್ಷೇತ್ರದ ಜನರಿಗೆ ನಿಮ್ಮ ಭರವಸೆಗಳು ಏನು?**

ವ್ಯಾಪಾರಸ್ಥರು ಇರುವ ಕ್ಷೇತ್ರವಿದು. ಬಹುಭಾಷಿಕರು ನೆಲೆಸಿದ್ದಾರೆ. ಕ್ಷೇತ್ರದಲ್ಲಿ ಜನದಟ್ಟಣೆ ಹಾಗೂ ವಾಹನದಟ್ಟಣೆ ಇದೆ. ಇದರಿಂದ ಸಮಸ್ಯೆಯಾಗುತ್ತಿದೆ. ಗೆದ್ದರೆ ದೆಹಲಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸುತ್ತೇನೆ. ನಾಡಪ್ರಭು ಕೆಂಪೇಗೌಡ ಅವರು ನಿರ್ಮಿಸಿದ್ದ ಚಿಕ್ಕಪೇಟೆಯಲ್ಲಿ ಗತವೈಭವ ಉಳಿಸಿಕೊಂಡೇ ಹೊಸ ಮೆರುಗು ನೀಡುತ್ತೇನೆ. ಲಾಲ್‌ಬಾಗ್‌ನಲ್ಲಿ ಬೆಳಿಗ್ಗೆ ನಡಿಗೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಉದ್ಯಾನವನ್ನೂ ಅಭಿವೃದ್ಧಿ ಪಡಿಸುತ್ತೇನೆ.

● **ನಿಮ್ಮ ಎದುರಾಳಿ ಯಾರು?**

ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳ ಬಗ್ಗೆ ಜನರಿಗೆ ವಿಶ್ವಾಸ ಇಲ್ಲ. ಇಬ್ಬರೂ ಕುಗ್ಗಿ ಹೋಗಿದ್ದಾರೆ. ಉದಯ್ ಗರುಡಾಚಾರ್ ಮೇಲೆ ಬಿಜೆಪಿ ಕಾರ್ಯಕರ್ತರಿಗೇ ವಿಶ್ವಾಸವಿಲ್ಲ. ಕಾಂಗ್ರೆಸ್ ಮುಖಂಡರಲ್ಲಿ ಭಿನ್ನಾಭಿಪ್ರಾಯ ಇದೆ. ಅಭ್ಯರ್ಥಿ ಆರ್.ವಿ.ದೇವರಾಜ್ ಪರ ಯಾರೂ ಕೆಲಸ ಮಾಡುತ್ತಿಲ್ಲ. ಸದ್ಯಕ್ಕೆ ನನ್ನ ಎದುರಾಳಿ ಪಕ್ಷೇತರ ಅಭ್ಯರ್ಥಿ ಯೂಸುಫ್ ಪರೀಫ್ ಅಲಿಯಾಸ್ ಕೆಜಿಎಫ್ ಬಾಬು. ನನ್ನ ಹಾಗೂ ಬಾಬು ನಡುವೆ ಹೋರಾಟ ನಡೆಯುತ್ತಿದೆ. ಆದರೆ, ಬಾಬು ಅವರ ಮನೆ ಮೇಲೆ ನಡೆದ ಇ.ಡಿ ದಾಳಿ ವೇಳೆ ಮತದಾರರ ಗುರುತಿನ ಚೀಟಿಗಳು ಪತ್ತೆಯಾಗಿವೆ. ಆಯೋಗ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆರ್.ಅಶೋಕ ಅವರು ಚುನಾವಣೆ ಪ್ರಚಾರದ ವೇಳೆ ಮಗುವೊಂದನ್ನು ಎತ್ತಿಕೊಂಡು ಸಂತೈಸಿದರು (ಎಡಚಿತ್ರ) ಗೋವಿಂದರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉಮೇಶ್ ಶೆಟ್ಟಿ ಮಾಗಡಿ ರಸ್ತೆಯ ಟೋಲ್‌ಗೇಟ್ ಬಳಿ ಬೆಂಬಲಿಗರೊಂದಿಗೆ ರೋಡ್ ಶೋ ನಡೆಸಿದರು. ಸಚಿವ ವಿ. ಸೋಮಣ್ಣ ಜೊತೆಗಿದ್ದರು.

ಮತದಾರರ ಮನ ಗೆಲ್ಲಲು ಬೈಕ್ ರ್‍ಯಾಲಿ, ಮನೆ ಮನೆ ಪ್ರಚಾರ

ಪ್ರಚಾರ ಬಿರುಸು; ಓಲೈಕೆ ಜೋರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲೂ ಚುನಾವಣೆ ಪ್ರಚಾರ ಬಿರುಸುಗೊಂಡಿದೆ. ರಾಜಧಾನಿಯ ಅಖಾಡಕ್ಕೆ ನಾಯಕರು ಧುಮುಕಿದ್ದಾರೆ. ಅಭ್ಯರ್ಥಿಗಳಿಗೆ ಹೊಸ ಹುರುಪು ಬಂದಿದ್ದು ರೋಡ್ ಶೋ, ಬೈಕ್ ರ್‍ಯಾಲಿ, ಮನೆ ಮನೆ ಪ್ರಚಾರದ ಮೂಲಕ ಮತಸೆಳೆಯಲು ಕಸರತ್ತು ನಡೆಸುತ್ತಿದ್ದಾರೆ.

ಚಿಕ್ಕಪೇಟೆ ಕ್ಷೇತ್ರದಲ್ಲಿ ಬಿಜೆಪಿಯಿಂದ ಬೈಕ್ ಜಾಥಾ ನಡೆಯಿತು. ಸಾವಿರಕ್ಕೂ ಹೆಚ್ಚು ಬೈಕ್‌ಗಳಲ್ಲಿ ಬೆಂಬಲಿಗರು ಭಾಗವಹಿಸಿದ್ದರು. ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ರೀತುರಾಜ್ ಸಿನ್ಹಾ, ಅಭ್ಯರ್ಥಿ ಉದಯ್ ಬಿ. ಗರುಡಾಚಾರ್ ಚಾಲನೆ ನೀಡಿದರು.

‘ಕ್ಷೇತ್ರದಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಮತ ನೀಡಿ. ಎಲ್ಲ ವರ್ಗದ ಜನರಿಗೆ ಸಮಾನವಾಗಿ ಯೋಜನೆಗಳನ್ನು ರೂಪಿಸಿ ಆರ್ಥಿಕವಾಗಿ ಸಬಲರಾಗಿ ಮಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಶ್ರಮಿಸಿದೆ’ ಎಂದು ಉದಯ ಗರುಡಾಚಾರ್ ಹೇಳಿದರು.

ಬೈಕ್ ರ್‍ಯಾಲಿಯು ಅಶೋಕ ಪಿಲ್ಲರ್, ಆರ್.ವಿ.ಟೀಚರ್ ಕಾಲೇಜ್, ಬಸವನಗುಡಿ ರಸ್ತೆ, ರಾಮಕೃಷ್ಣ ಆಶ್ರಮ, ಉಮಾ ಟಾಕೀಸ್, ಚಾಮರಾಜಪೇಟೆ 5ನೇ ಕ್ರಾಸ್, ಕಿಮ್ಸ್ ಆಸ್ಪತ್ರೆ, ಮಾರುಕಟ್ಟೆ ರಸ್ತೆ, ವಿಕ್ಟೋರಿಯಾ ಆಸ್ಪತ್ರೆ ರಸ್ತೆ, ಅವೆನ್ಯೂ ರಸ್ತೆ ಎದುರು, ಎಸ್.ಜೆ.ಪಿ ರಸ್ತೆ, ಮಿಷನ್ ರಸ್ತೆ, ಸುಬ್ಬಯ್ಯ ವೃತ್ತ, ಎಂ.ಟಿ. ಆರ್, ಲಾಲ್‌ಬಾಗ್ ಗೇಟ್, ಮಿನರ್ವ ವೃತ್ತ, ಬಸಪ್ಪ ವೃತ್ತದ ಮೂಲಕ ಸಾಗಿ ಸಜ್ಜನ್ ರಾವ್ ವೃತ್ತದಲ್ಲಿ ಮುಕ್ತಾಯವಾಯಿತು.

ಕಾಂಗ್ರೆಸ್ ಅಬ್ಬರದ ಪ್ರಚಾರ

ಬೆಂಗಳೂರು ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ.ರಮೇಶ್ ಅವರು ಹೆನ್ನಾಗರ, ಬೇಗೂರು, ಗೊಟ್ಟಿಗೆರೆ, ಬನ್ನೇರುಘಟ್ಟ ವ್ಯಾಪ್ತಿಯಲ್ಲಿ ಅಬ್ಬರದ ಪ್ರಚಾರ ನಡೆಸಿದರು.

ಬಳಿಕ ಮಾತನಾಡಿದ ರಮೇಶ್, ‘ಕ್ಷೇತ್ರದಲ್ಲಿ ನೂರಾರು ಕೈಗಾರಿಕೆಗಳಿವೆ. ಮಾಲೀಕರ ಮನವೊಲಿಸಿ ಸಾವಿರಾರು ಯುವಕರಿಗೆ ಉದ್ಯೋಗ ಕಲ್ಪಿಸಲಾಗುವುದು. ಹೈಟೆಕ್ ಮಾದರಿ ಸರ್ಕಾರಿ ಶಾಲಾ- ಕಾಲೇಜು ನಿರ್ಮಾಣ, ಕ್ಷೇತ್ರದ ಮೂರು ಕಡೆ ಕನಿಷ್ಠ 200 ಹಾಸಿಗೆಯುಳ್ಳ ಆಸ್ಪತ್ರೆ, ಡಯಾಲಿಸಿಸ್ ಕೇಂದ್ರ, ಕ್ರೀಡಾಂಗಣಗಳ ನಿರ್ಮಾಣ, ಉದ್ಯಾನ ಅಭಿವೃದ್ಧಿಪಡಿಸಲಾಗುವುದು’ ಎಂದು ಭರವಸೆ ನೀಡಿದರು.

ಸೋಮಣ್ಣ, ಅಣ್ಣಾಮಲೈ ಅಖಾಡಕ್ಕೆ

ಗೋವಿಂದರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಕೆ. ಉಮೇಶ್ ಶೆಟ್ಟಿ ಅವರ ಪರ ಸಚಿವ ವಿ. ಸೋಮಣ್ಣ, ಸಂಸದ ತೇಜಸ್ವಿ ಸೂರ್ಯ, ರಾಜ್ಯ ಸಹ ಉಸ್ತುವಾರಿ ಅಣ್ಣಾಮಲೈ, ಅರುಣ್ ಸೋಮಣ್ಣ, ಚುನಾವಣಾ ಉಸ್ತುವಾರಿಗಳಾದ ಜೀವರಾಜ್ ಚೌಹಾಣ್ ಅವರು ಮಂಗಳವಾರ ಪ್ರಚಾರ ನಡೆಸಿದರು.

ಗಣೇಶನ ದೇವಸ್ಥಾನ, 6ನೇ ಬ್ಲಾಕ್, ರಾಜಾಜಿನಗರ ಜೈಮುನಿರಾವ್ ಸರ್ಕಲ್, ಅಗ್ರಹಾರ ದಾಸರಹಳ್ಳಿ, ಪ್ರಶಾಂತನಗರ ಸರ್ಕಲ್, ಮೂಡಲಪಾಳ್ಯ, ನಾಗರಬಾವಿ, ನಾಯಂಡಹಳ್ಳಿಯಲ್ಲಿ ಪ್ರಚಾರ ನಡೆಸಿದರು.

ವಿ.ಸೋಮಣ್ಣ ಮಾತನಾಡಿ, ‘ನಾನು ಚುನಾವಣೆಗೆ ಸ್ಪರ್ಧಿಸಿರುವುದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ. ವರುಣಾ ಕ್ಷೇತ್ರದಲ್ಲಿ ಸಾವಿರಾರು ಜನರನ್ನು ಭೇಟಿಯಾಗಿದ್ದು, ಉತ್ತಮ ಸ್ಪಂದನೆ ಸಿಕ್ಕಿದೆ’ ಎಂದರು.

‘ಕಾಂಗ್ರೆಸ್ ಪಕ್ಷ ಮುಳುಗುವ ಹಡಗು, ನೂರಾರು ಎಕರೆ ಭೂಕಬಳಿಕೆ ಮಾಡಿದ ವ್ಯಕ್ತಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ. ಕಾಂಗ್ರೆಸ್ ಶಾಸಕರಿಂದ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಕೋವಿಡ್ ವೇಳೆ ಆ ಪಕ್ಷದವರು ಎಲ್ಲಿಗೆ ಹೋಗಿದ್ದರು’ ಎಂದು ಅವರು ಪ್ರಶ್ನಿಸಿದರು.



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಹೆನ್ನಾಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್.ಕೆ. ರಮೇಶ್ ಮತಯಾಚನೆ ಮಾಡಿದರು

ಕಣದಲ್ಲಿ ಉಳಿದ ಅಭ್ಯರ್ಥಿಗಳು

ಬೆಂಗಳೂರು: ವಿಧಾನಸಭೆ ಚುನಾವಣೆಯ ನಾಮಪತ್ರ ವಾಪಸ್ ಪಡೆಯುವ ಪ್ರಕ್ರಿಯೆ ಸೋಮವಾರ ಮುಕ್ತಾಯವಾಗಿದ್ದು, ನಗರದ 16 ವಿಧಾನಸಭಾ ಕ್ಷೇತ್ರಗಳಲ್ಲಿ ಅಂತಿಮ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ವಿವರ

151– ಕೆ.ಆರ್.ಪುರ (12)	
ಬಿಜೆಪಿ	ಬಿ.ಎ. ಬಸವರಾಜ್
ಕಾಂಗ್ರೆಸ್	ಡಿ.ಕೆ. ಮೋಹನ್
ಜೆಡಿಎಸ್	ಸಿ. ವೆಂಕಟಾಚಲಪತಿ
ಆಮ್ ಆದ್ಮಿ ಪಾರ್ಟಿ	ಡಾ. ಕೇಶವ ಕುಮಾರ್
ಸಿಪಿಎಂ	ಎಂ. ನಂಜೇಗೌಡ
ಸಿಪಿಐ(ಮಾರ್ಕ್ಸಿಸ್ಟ್–ಲೆನಿನಿಸ್ಟ್ ಲಿಬರೇಶನ್)	ಪಿ.ಪಿ. ಅಪ್ಪಣ್ಣ
ಕರ್ನಾಟಕ ರಾಷ್ಟ್ರ ಸಮಿತಿ	ಆರೋಗ್ಯ ಸ್ವಾಮಿ
ಜನಸ್ಪಂದನ ಪಾರ್ಟಿ	ಎಂ.ಪಿ. ಜಗನ್ನಾಥ ರಾವ್
ಉತ್ತಮ ಪ್ರಜಾಕೀಯ	ಮಾದೇಶ ಎನ್
ಜೈ ಮಹಾಭಾರತ್	ಎನ್. ಶ್ರೀನಿವಾಸ್
ಪಕ್ಷೇತರರು: ಜಯಲಕ್ಷ್ಮಿ ಮುತ್ತುಸಾಮಿ, ಶಿವ ಸಿ.	

152– ಬ್ಯಾಟರಾಯನಪುರ (17)	
ಬಿಜೆಪಿ	ತಮ್ಮೇಶ್ ಗೌಡ ಎಚ್.ಸಿ
ಕಾಂಗ್ರೆಸ್	ಕೃಷ್ಣ ಬೈರೇಗೌಡ
ಜೆಡಿಎಸ್	ನಾಗರಾಜ್ ಗೌಡ ಪಿ
ಆಮ್ ಆದ್ಮಿ ಪಾರ್ಟಿ	ಗಿರೀಶ್ ಕೆ
ಇಂಡಿಯನ್ ಲೇಬರ್ ಪಾರ್ಟಿ (ಅಂಬೇಡ್ಕರ್ ಫುಲೆ)	ನಜಿರ್ ಅಹಮದ್
ಕರ್ನಾಟಕ ರಾಷ್ಟ್ರ ಸಮಿತಿ	ಪ್ರತಾಪ್ ಆರ್
ನವರಂಗ್ ಕಾಂಗ್ರೆಸ್	ಮಕ್ಸೂದ್ ಅಹ್ಮದ್
ರಾಷ್ಟ್ರೀಯ ಜನಹಿತ	ಮಂಜುನಾಥ ಚಾರಿ ಕೆ
ಸಾರ್ವಜನಿಕ ಆದರ್ಶ ಸೇನಾ	ಬ್ರಿಗೇಡಿಯರ್ ರವಿ ಮುನಿಸ್ವಾಮಿ
ಉತ್ತಮ ಪ್ರಜಾಕೀಯ	ರಹೀಂ ಕೆ.ಆರ್. ಹಳ್ಳಿ
ಅಖಿಲ ಭಾರತ್ ಹಿಂದು ಮಹಾಸಭಾ	ರಂಜಿತ ಎನ್
ಸಮಾಜವಾದಿ ಪಾರ್ಟಿ	ಸಂಪೂರ್ಣ ಗೌಡ
ಪಕ್ಷೇತರರು: ಖಲೀದ್ ಖಾನ್, ಟಿ. ದಾಸಪ್ಪ, ನಾಗರಾಜ ಜಿ, ರಮೇಶ ಎಂ, ವೆಂಕಟ್‌ರಾಮು ಕೆ.ವಿ.	

153– ಯಶವಂತಪುರ (14)	
ಬಿಜೆಪಿ	ಎಸ್.ಟಿ. ಸೋಮಶೇಖರ್
ಕಾಂಗ್ರೆಸ್	ಎಸ್. ಬಾಲ್‌ರಾಜ್ ಗೌಡ
ಜೆಡಿಎಸ್	ಟಿ.ಎನ್. ಜವರಾಯಿಗೌಡ
ಬಿಎಸ್‌ಪಿ	ಗೋವಿಂದಯ್ಯ
ಆಮ್ ಆದ್ಮಿ	ಶಶಿಧರ್ ಸಿ
ಉತ್ತಮ ಪ್ರಜಾಕೀಯ	ಉದಯ್‌ಕುಮಾರ್
ಸಮಾಜವಾದಿ	ನಾಗರಾಜ ಕೆ.ಎಸ್
ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ	ನಾಗರಾಜು ಸಿ.ಆರ್
ಕರ್ನಾಟಕ ರಾಷ್ಟ್ರ ಸಮಿತಿ	ರವಿಕುಮಾರ್ ವಿ
ಯಂಗ್‌ಸ್ಟಾರ್ ಎಂಪವರ್‌ಮೆಂಟ್	ಶಕೀಲಾ ಬಾನು
ರಾಷ್ಟ್ರೀಯ ಸಮಾಜ ದಳ	ಶೀಲಾ ಎಸ್
ಪಕ್ಷೇತರರು: ಜಿ. ಉದಯಶಂಕರ್, ಶಶಿರೇಖಾ ಎಚ್.ಕೆ, ಹಂಸ ಸಿ.ಕೆ.	

155– ದಾಸರಹಳ್ಳಿ (15)	
ಬಿಜೆಪಿ	ಎಸ್. ಮುನಿರಾಜು
ಕಾಂಗ್ರೆಸ್	ಜಿ. ಧನಂಜಯ
ಜೆಡಿಎಸ್	ಆರ್. ಮಂಜುನಾಥ
ಆಮ್ ಆದ್ಮಿ ಪಾರ್ಟಿ	ಕೀರ್ತನ್ ಕುಮಾರ್ ಮಂಜಪ್ಪ
ಬಿಎಸ್‌ಪಿ	ಪೂಜಾರಿ ಚಿಕ್ಕಣ್ಣ
ಉತ್ತಮ ಪ್ರಜಾಕೀಯ ಪಾರ್ಟಿ	ಅಶ್ವಥ್ ಕುಮಾರ್
ಲೋಕ್ ಶಕ್ತಿ	ಈಶ್ವರಯ್ಯ ಕೆ.ಎಸ್
ಕರ್ನಾಟಕ ರಾಷ್ಟ್ರ ಸಮಿತಿ	ಶ್ರೀಕುಮಾರ್ ಟಿ
ಇಂಡಿಯನ್ ಮೂಮೆಂಟ್	ಎಂ. ಸ್ನೇಹ
ಪಕ್ಷೇತರರು: ಕಲ್ಪನ ಎ.ವಿ, ಎನ್. ಮಂಜುನಾಥ, ಮಂಜುನಾಥ್ ಆರ್, ಆರ್. ಮಂಜುನಾಥ, ಸವಿತಾ ಟಿ.ಪಿ, ಸುಮಂತ್ ಪಿ.ಎನ್.	

175– ಬೊಮ್ಮನಹಳ್ಳಿ (14)	
ಬಿಜೆಪಿ	ಸತೀಶ್ ರೆಡ್ಡಿ ಎಂ
ಕಾಂಗ್ರೆಸ್	ಉಮಾಪತಿ ಎಸ್. ಗೌಡ
ಜೆಡಿಎಸ್	ನಾರಾಯಣ ರಾಜು ಕೆ
ಬಿಎಸ್‌ಪಿ	ಉಮಾಪತಿ ಬಾಬು ಎನ್
ಆಮ್ ಆದ್ಮಿ ಪಾರ್ಟಿ	ಸೀತಾರಾಮ್ ಗುಂಡಪ್ಪ
ಕರ್ನಾಟಕ ರಾಷ್ಟ್ರ ಸಮಿತಿ	ನಂದಾ ರೆಡ್ಡಿ
ಉತ್ತಮ ಪ್ರಜಾಕೀಯ	ಮಮತಾ ಆರ್
ನವ ಭಾರತ್ ಸೇನಾ	ಶಿವರಾಂ ಕೋಟೆಗೌಡ
ಪಕ್ಷೇತರರು: ಅಬ್ದುಲ್ ಖಾದರ್ ಜೆ.ಎಸ್.ವೈ (ಅಯಾಜ್), ಆದಿಲ್ ಪಾಷ ಎಸ್, ಅಂತೋಣಿ ರಾಜ್ ಜೆ, ನಿಜಾಮುದ್ದೀನ್, ಸತೀಶ್ ರೆಡ್ಡಿ, ಸತೀಶ್ ರೆಡ್ಡಿ ಎಂ.	

156– ಮಹಾಲಕ್ಷ್ಮಿ ಲೇಔಟ್ (12)	
ಬಿಜೆಪಿ	ಕೆ. ಗೋಪಾಲಯ್ಯ
ಕಾಂಗ್ರೆಸ್	ಎಸ್. ಕೇಶವಮೂರ್ತಿ
ಜೆಡಿಎಸ್	ಕೆ.ಸಿ. ರಾಜಣ್ಣ
ಬಿಎಸ್‌ಪಿ	ಎನ್. ನಾರಾಯಣಸ್ವಾಮಿ ನವಕೋಟಿ
ಆಮ್ ಆದ್ಮಿ ಪಾರ್ಟಿ	ಶಾಂತಲಾ ದಾಮ್ಲೆ
ಕರ್ನಾಟಕ ರಾಷ್ಟ್ರ ಸಮಿತಿ	ಅಮಿತ್ ರೆಬೆಲ್ಲೊ
ಇಂಡಿಯನ್ ಮೂಮೆಂಟ್	ಅಶ್ವತ್ (ಅಶೋಕ್)
ದೇಶ ಪ್ರೇಮ ಪಾರ್ಟಿ	ಚೇತನ್ ಆರ್
ಅಖಿಲ ಭಾರತ ಹಿಂದೂ ಮಹಾಸಭಾ	ಎಸ್. ಮುರಳಿ
ಉತ್ತಮ ಪ್ರಜಾಕೀಯ	ಲಕ್ಷ್ಮೀನಾರಾಯಣ ಎಂ.ಆರ್ (ವಿಜಯ್ ನಾರಾಯಣ)
ಕರ್ನಾಟಕ ಪ್ರಜ್ಞಾವಂತ ಜನತಾ ಪಾರ್ಟಿ	ಶ್ರೀನಿವಾಸಮೂರ್ತಿ
ಪಕ್ಷೇತರ	ಎನ್. ಗಿರೀಶ್ ಗೌಡ

157– ಮಲ್ಲೇಶ್ವರ (11)	
ಬಿಜೆಪಿ	ಡಾ. ಅಶ್ವತ್ಥನಾರಾಯಣ ಸಿ.ಎನ್.
ಕಾಂಗ್ರೆಸ್	ಅನುಪ್ ಅಯ್ಯಂಗಾರ್
ಜೆಡಿಎಸ್	ಉತ್ಕರ್ಷ್ ಎ.
ಬಿಎಸ್‌ಪಿ	ಅಬ್ದುಲ್ ಸುಹೇಲ್ ಅಹಮದ್
ನ್ಯಾಷನಲ್ ಪೀಪಲ್ಸ್	ಡಾ. ಹೆಬ್ಬಿ ಸುನೀಲ್‌ಕುಮಾರ
ಆಮ್ ಆದ್ಮಿ ಪಾರ್ಟಿ	ಸುಮನ್
ರಾಷ್ಟ್ರೀಯ ಸಮಾಜ ದಳ	ಕೃಷ್ಣಯ್ಯ
ಕರ್ನಾಟಕ ರಾಷ್ಟ್ರ ಸಮಿತಿ	ಲೆಫ್ಟಿನೆಂಟ್ ಡಾ. ರಾಜೇಶ್ ಬಿ
ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ	ಸಂತೋಷ್ ಎಸ್
ಪಕ್ಷೇತರರು: ಕೆ.ಎಂ. ಫಯಾಜ್ ಅಹಮದ್, ಮನು ಕುಮಾರ್.	

158– ಹೆಬ್ಬಾಳ (14)	
ಬಿಜೆಪಿ	ಕಟ್ಟಾ ಜಗದೀಶ
ಕಾಂಗ್ರೆಸ್	ಬಿ.ಎಸ್. ಸುರೇಶ್ (ಬೈರತಿ)
ಜೆಡಿಎಸ್	ಸೈಯದ್ ಮೊಹಿದ್ ಅಲ್ತಾಫ್
ಬಿಎಸ್‌ಪಿ	ಎ.ಜೆ. ಖಾನ್
ಆಮ್ ಆದ್ಮಿ ಪಾರ್ಟಿ	ಕೆ.ಎಸ್. ಮಂಜುನಾಥ ನಾಯ್ಡು
ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿ	ಅಂಜನ್‌ಕುಮಾರ್ ಗೌಡ ಎಸ್
ಉತ್ತಮ ಪ್ರಜಾಕೀಯ	ಎಸ್. ಕುಮಾರ
ಕರ್ನಾಟಕ ರಾಷ್ಟ್ರ ಸಮಿತಿ	ಗಣಪತಿ ಅಶ್ವಿನ್
ಅಖಿಲ ಭಾರತ್ ಹಿಂದೂ ಮಹಾಸಭಾ	ಪೆರುಮಾಳ್ ಎಸ್
ಸಾರ್ವಜನಿಕ ಆದರ್ಶ ಸೇನಾ	ರಮೇಶ್ ಜಗಥಾಪ
ಪಕ್ಷೇತರರು: ಜಗದೀಶ ಟಿ.ಎಸ್, ಎಸ್. ರಾಮು, ಎನ್.ಎಂ. ಸಂತೋಷ ಕುಮಾರ, ಹುಸೇನ್ ಸಾಹೇಬ್.	

159– ಪುಲಕೇಶಿನಗರ (15)	
ಬಿಜೆಪಿ	ಎ. ಮುರಳಿ
ಕಾಂಗ್ರೆಸ್	ಎ.ಸಿ. ಶ್ರೀನಿವಾಸ್
ಜೆಡಿಎಸ್	ಅನುರಾಧ ವಿ.
ಬಿಎಸ್‌ಪಿ	ಅಖಂಡ ಶ್ರೀನಿವಾಸಮೂರ್ತಿ ಆರ್
ಆಮ್ ಆದ್ಮಿ ಪಾರ್ಟಿ	ಸುರೇಶ್ ರಾಥೋಡ್
ಜನತಾದಳ ಯು	ಕಾರ್ತಿಕ್ ಎ
ಗರೀಬ್ ಆದ್ಮಿ ಪಾರ್ಟಿ	ಸನ್ಸ್‌ತಾರ್ ಡಿ. ಜೈರಾಮ್
ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿ ಆಫ್ ಇಂಡಿಯ	ಬಿ.ಆರ್. ಭಾಸ್ಕರ್ ಪ್ರಸಾದ್
ಕರ್ನಾಟಕ ರಾಷ್ಟ್ರ ಸಮಿತಿ	ಮೋಹನ್ ಕುಮಾರ್
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ (ಕರ್ನಾಟಕ)	ಆರ್. ಮೋಹನ್ ರಾಜು
ಪಕ್ಷೇತರರು: ಎ. ಚಂದ್ರಕುಮಾರ್, ನಿರಂಜನ್ ಡಿ. ರಾಜ್, ಪ್ರಿಯ, ಶಕ್ತಿವೇಲು, ವಿ.ಜೆ. ಸಂಜಯ್ ಕುಮಾರ್	

176– ಬೆಂಗಳೂರು ದಕ್ಷಿಣ (14)	
ಬಿಜೆಪಿ	ಎಂ. ಕೃಷ್ಣಪ್ಪ
ಕಾಂಗ್ರೆಸ್	ಆರ್.ಕೆ. ರಮೇಶ್
ಜೆಡಿಎಸ್	ಎಚ್.ಪಿ. ರಾಜಗೋಪಾಲ ರೆಡ್ಡಿ
ಆಮ್ ಆದ್ಮಿ ಪಾರ್ಟಿ	ಅಶೋಕ ಮೃತ್ಯುಂಜಯ
ಬಿಎಸ್‌ಪಿ	ಕಿರಣ್ ವಿ
ಉತ್ತಮ ಪ್ರಜಾಕೀಯ	ಮನು ಎಂ.ಎಂ
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಥಾವಳೆ)	ಎ. ರವಿಕುಮಾರ್
ಕರ್ನಾಟಕ ರಾಷ್ಟ್ರ ಸಮಿತಿ	ವಿಜಯರಾಘವ ಮರಾಠೆ
ಪಕ್ಷೇತರರು: ಅಲ್ವಿನ್ ಅಂತೋಣಿ ರಾನ್, ನಿಶಾಂತ್ ಕೋಟೆ, ರಾಜು, ಆರ್. ರಾಜೇಶ್, ಶಿವಕುಮಾರ್, ಜಿ. ಶ್ರೀನಿವಾಸ.	

160– ಸರ್ವಜ್ಞನಗರ (15)	
ಬಿಜೆಪಿ	ಪದ್ಮನಾಭ ರೆಡ್ಡಿ
ಕಾಂಗ್ರೆಸ್	ಕೆ.ಜೆ. ಜಾರ್ಜ್
ಜೆಡಿಎಸ್	ಮೊಹಮ್ಮದ್ ಮುಸ್ತಫ
ನ್ಯಾಷನಲ್ ಪೀಪಲ್ಸ್ ಪಾರ್ಟಿ	ಕೆಂಪುರಾಜನ್
ಆಮ್ ಆದ್ಮಿ ಪಾರ್ಟಿ	ಮೊಹಮ್ಮದ್ ಇಬ್ರಾಹಿಂ
ಸೋಶಿಯಲ್ ಡೆಮೋಕ್ರಾಟಿಕ್	ಅಬ್ದುಲ್ ಹನ್ನಾನ್
ಕರ್ನಾಟಕ ರಾಷ್ಟ್ರ ಸಮಿತಿ	ಎಸ್. ಉಮಾಶಂಕರ್
ಟಿಪ್ಪು ಸುಲ್ತಾನ್ ಪಾರ್ಟಿ	ಮಹಬೂಬ್ ಪಾಶ
ಜನತಾದಳ ಯು	ಮೈನಾವತಿ
ಸಮಾಜವಾದಿ ಪಾರ್ಟಿ	ಮೋದಿ ಸೈಫುಲ್ಲಾ
ಉತ್ತಮ ಪ್ರಜಾಕೀಯ ಪಾರ್ಟಿ	ಶಿವಕುಮಾರ
ಪಕ್ಷೇತರರು: ದಿಲೀಪ್ ಕುಮಾರ್, ಯೇಸು, ವಸಂತ್‌ಕುಮಾರ್ ಈ, ಶೀಲಾ ಬಿ.ಎನ್.	

161– ಸಿ.ವಿ. ರಾಮನ್ ನಗರ (10)	
ಬಿಜೆಪಿ	ಎಸ್. ರಘು
ಕಾಂಗ್ರೆಸ್	ಆನಂದಕುಮಾರ್ ಎಸ್
ಬಿಎಸ್‌ಪಿ	ಆಂಜಿ ವಿ
ಆಮ್ ಆದ್ಮಿ ಪಾರ್ಟಿ	ಮೋಹನ್ ದಾಸರಿ
ಉತ್ತಮ ಪ್ರಜಾಕೀಯ ಪಾರ್ಟಿ	ಚೈತ್ರ ಜಿ
ಕರ್ನಾಟಕ ರಾಷ್ಟ್ರ ಸಮಿತಿ	ಡಾ. ಮಂಜುನಾಥ್ ಎಸ್
ರಿಪಬ್ಲಿಕನ್ ಪಾರ್ಟಿ ಆಪ್ ಇಂಡಿಯಾ	ಎಂ. ರಾಜೇಂದ್ರ
ಪಕ್ಷೇತರರು: ಎಸ್. ಚಂದ್ರಶೇಖರ್, ಪಿ. ರಮೇಶ್, ರಾಕೇಶ್ ಕುಮಾರ.	

165– ರಾಜಾಜಿನಗರ (18)	
ಬಿಜೆಪಿ	ಎಸ್. ಸುರೇಶ್ ಕುಮಾರ್
ಕಾಂಗ್ರೆಸ್	ಪುಟ್ಟಣ್ಣ
ಜೆಡಿಎಸ್	ಡಾ. ಆಂಜನಪ್ಪ ಟಿ.ಎಚ್.
ಆಮ್ ಆದ್ಮಿ ಪಾರ್ಟಿ	ಬಿ.ಟಿ. ನಾಗಣ್ಣ
ಕರ್ನಾಟಕ ರಾಷ್ಟ್ರ ಸಮಿತಿ	ಅಕ್ಷಯ್ ಕೆ
ರಾಷ್ಟ್ರೀಯ ಸಮಾಜ ದಳ	ಚೇತನ್ ವಸಿಷ್ಠ ಬಿ.ಎಸ್
ಇಂಡಿಯನ್ ಮೂವ್ಮೆಂಟ್	ಭವ್ಯ ಎಸ್.ಬಿ
ಉತ್ತಮ ಪ್ರಜಾಕೀಯ	ಮೋಹನ್ ಕುಮಾರ್ ಕೆ
ಸೊಶಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಷ್ಟ್)	ರಮಾ ಟಿ.ಸಿ
ಜನತಾ ದಳ ಯು	ಶಿವಕುಮಾರ್ ಭದ್ರಯ್ಯ
ಪಕ್ಷೇತರರು: ಅಭಿಮಾನಿ ನರೇಂದ್ರ, ನರಸಿಂಹಲು ಎಂ, ನಾಗರಾಜ್ ಎಚ್.ಎನ್, ಪಾಂಡುರಂಗನ್ ಎಸ್, ಪುಟ್ಟಣ್ಣ, ಮಹೇಶ್ ರಾಜಶೇಖರ್, ಲಿಂಗರಾಜು, ಸುಹೇಲ್ ಅಹಮದ್.	

172– ಬಿಟಿಎಂ ಲೇಔಟ್ (12)	
ಬಿಜೆಪಿ	ಕೆ.ಆರ್. ಶ್ರೀಧರ ರೆಡ್ಡಿ
ಕಾಂಗ್ರೆಸ್	ರಾಮಲಿಂಗಾರೆಡ್ಡಿ
ಜೆಡಿಎಸ್	ಎಂ. ವೆಂಕಟೇಶ ದೇವೇಗೌಡ
ಬಿಎಸ್‌ಪಿ	ತ್ಯಾಗರಾಜ್
ಆಮ್ ಆದ್ಮಿ ಪಾರ್ಟಿ	ಶ್ರೀನಿವಾಸ ರೆಡ್ಡಿ ಎಂ
ಉತ್ತಮ ಪ್ರಜಾಕೀಯ ಪಕ್ಷ	ನಾಗೇಂದ್ರರಾವ್
ಕರ್ನಾಟಕ ರಾಷ್ಟ್ರ ಸಮಿತಿ	ಜನನಿ ವತ್ಸಲ
ಪಕ್ಷೇತರರು: ಕಿರಣ್ ಕುಮಾರ್ ಎಂ, ಎಚ್.ಇ. ಕೃಷ್ಣಪ್ಪ, ಶ್ರೀಧರ್ ರೆಡ್ಡಿ, ಎನ್. ಶ್ರೀಧರ್, ಕೆ.ಎಸ್. ಶ್ರೀಧರ್.	

174– ಮಹದೇವಪುರ (15)	
ಬಿಜೆಪಿ	ಮಂಜುಳಾ ಅರವಿಂದ ಲಿಂಬಾವಳಿ
ಕಾಂಗ್ರೆಸ್	ಎಚ್. ನಾಗೇಶ್
ಆಮ್ ಆದ್ಮಿ ಪಾರ್ಟಿ	ಸಿ.ಆರ್. ನಟರಾಜ್
ಬಿಎಸ್‌ಪಿ	ಪ್ರಸಾದ್ ಎ.ಸಿ
ಜನತಾದಳ ಯು	ಗೋಪಾಲಕೃಷ್ಣ ಎಂ.ವಿ
ಉತ್ತಮ ಪ್ರಜಾಕೀಯ	ನಾಗರಾಜ್ ಆರ್
ಕರ್ನಾಟಕ ರಾಷ್ಟ್ರ ಸಮಿತಿ	ಶಿವಾಜಿ ಆರ್. ಲಮಾಣಿ
ಪಕ್ಷೇತರರು: ಆನಂದಕುಮಾರ್ ಎನ್, ಎಸ್.ಎಂ. ಕೃಷ್ಣ, ನಟರಾಜ್ ಡಿ.ಎನ್, ಜಿ. ಪುಟ್ಟಪ್ಪ, ಭರತ್ ರಾಜ್ ಜೆ, ಆರ್. ಮಣಿಕುಮಾರ್, ಎಂ. ಯಲ್ಲಪ್ಪ, ರವಿ ಜೆ.	

177– ಆನೇಕಲ್ (11)	
ಬಿಜೆಪಿ	ಹುಲ್ಲಳ್ಳಿ ಶ್ರೀನಿವಾಸ್
ಕಾಂಗ್ರೆಸ್	ಬಿ. ಶಿವಣ್ಣ
ಜೆಡಿಎಸ್	ಕೆ.ಪಿ.ರಾಜು
ಬಿಎಸ್‌ಪಿ	ಡಾ.ಚಿನ್ನಪ್ಪ.ವೈ.ಚಿಕ್ಕಹಾಗಡೆ
ಆಮ್ ಆದ್ಮಿ ಪಕ್ಷ	ಮುನೇಶ.ಎಂ
ಕರ್ನಾಟಕ ರಾಷ್ಟ್ರ ಸಮಿತಿ	ಅನ್ಬುರಾಜ್
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಅಠಾವಲೆ)	ಎನ್.ಬ್ಯಾಟರಾಜ್
ಪಕ್ಷೇತರರು: ಜಿ.ಗೌರಮ್ಮ, ಜಿ.ನಾಗರಾಜು, ಮುನಿಕೃಷ್ಣಪ್ಪ ಮುರುಗ, ಎಂ.ರಮೇಶ	

‘ಒಳ ಒಪ್ಪಂದದಿಂದ ಬಿಜೆಪಿ ಮಣಿಸಲಾಗದು’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಒಳಒಪ್ಪಂದದಿಂದ ಬಿಜೆಪಿ ಮಣಿಸಲು ಅಸಾಧ್ಯ’ ಎಂದು ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ. ಸೋಮಶೇಖರ್ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘2019ರಲ್ಲಿ ಕ್ಷೇತ್ರದ ಉಪಚುನಾವಣೆಯಲ್ಲೂ ಜೆಡಿಎಸ್‌ನವರು ಕಾಂಗ್ರೆಸ್ ಜೊತೆ ಮೈತ್ರಿ ಸಾಧಿಸಿದ್ದರು. ಮತ್ತೆ ಅದೇ ತಂತ್ರ ಹೂಡಿದ್ದಾರೆ. ಈ ಅಪವಿತ್ರ ಮೈತ್ರಿಯಿಂದ ಪ್ರಯೋಜನವಾಗುವುದಿಲ್ಲ’ ಎಂದರು.

‘ಕ್ಷೇತ್ರ ಮತ್ತು ರಾಜ್ಯದಲ್ಲಿ ಮತ್ತೆ ಕಮಲ ಅರಳಲಿದೆ. ಸ್ಥಳೀಯ ಬಿಜೆಪಿ ನಾಯಕರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಿಷ್ಠಾವಂತ ಕಾರ್ಯಕರ್ತರ ಪರಿಶ್ರಮದಿಂದ ಕ್ಷೇತ್ರದಲ್ಲಿ ಮತ್ತೆ ಬಿಜೆಪಿ ಬಾವುಟ ಹಾರಿಸಲಾಗುವುದು’ ಎಂದರು.

‘ಬಿಜೆಪಿ ಕಾರ್ಯಕರ್ತರ ಪಕ್ಷ. ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ನಿರ್ಗಮನದಿಂದ ಪಕ್ಷದ ವರ್ಚಸ್ಸಿಗೆ ಯಾವುದೇ ಧಕ್ಕೆಯಾಗಿಲ್ಲ. ಅವರಂತ ನೂರು ನಾಯಕರ ನಿರ್ಗಮನವನ್ನು ಸಹಿಸುವ ಶಕ್ತಿ ಪಕ್ಷಕ್ಕಿದೆ’ ಎಂದು ಕುಟುಕಿದರು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ ಮಾತನಾಡಿ, ’ಪಕ್ಷದ ಕಾರ್ಯ ಸೂಚಿ ಹಾಗೂ ಸಾಧನೆಗಳನ್ನು ಕಾರ್ಯಕರ್ತರು ಮನೆ ಮನೆ ಬಾಗಿಲಿಗೆ ಮುಟ್ಟಿಸುವ ಮೂಲಕ ಪಕ್ಷದ ಗೆಲುವಿಗೆ ಶ್ರಮಿಸಬೇಕು’ ಎಂದು ಹೇಳಿದರು.

ಬೆದರಿಕೆ: ಕಟ್ಟಾ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಪರ ಪ್ರಚಾರ ಮಾಡಬೇಕು’ ಎಂದು ತಾಕೀತು ಮಾಡಿ ಮಹಿಳೆಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಬಿಜೆಪಿ ಮುಖಂಡ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಆನಂದನಗರ ಎಚ್‌ಎಂಟಿ ಬಡಾವಣೆಯ 52 ವರ್ಷದ ಮಹಿಳೆ ದೂರು ನೀಡಿದ್ದಾರೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಅಭಯ್ ರಾಜು ಹಾಗೂ ಪುನೀತ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಂಗಳವಾರ ಮಧ್ಯಾಹ್ನ ಮನೆಗೆ ಅಭಯ್ ಹಾಗೂ ಪುನೀತ್ ನುಗ್ಗಿದ್ದರು. ಆಗ ಮೊಬೈಲ್‌ನಲ್ಲಿ ಮಾತನಾಡಿದ್ದ ನಾಯ್ಡು ಅವರು, ‘ಕಾಂಗ್ರೆಸ್ ಪರ ಪ್ರಚಾರ ಮಾಡುತ್ತಿರುವುದು ನನಗೆ ಇಷ್ಟವಿಲ್ಲ. ಬಿಜೆಪಿ ಪರ ಪ್ರಚಾರ ಮಾಡದಿದ್ದರೆ ಜೀವ ಸಹಿತ ಬಿಡುವುದಿಲ್ಲ’ ಎಂದು ಬೆದರಿಕೆ ಒಡ್ಡಿದ್ದಾರೆ ಎಂದು ಮಹಿಳೆ ಆರೋಪಿಸಿದ್ದಾರೆ. ಆರೋಪದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಲಭ್ಯರಾಗಲಿಲ್ಲ.



‘ಹಣ, ಮದ್ಯ ಹಂಚದೇ ಚುನಾವಣೆ; ಇದು ನಮ್ಮ ವಾಗ್ದಾನ’

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ
ರವಿಕೃಷ್ಣಾ ರೆಡ್ಡಿ

ಬೆಂಗಳೂರು: ರಾಷ್ಟ್ರೀಯ ಪಕ್ಷಗಳಲ್ಲಿ ಉನ್ನತ ಸ್ಥಾನಮಾನ ಅನುಭವಿಸಿದ್ದ ನಾಯಕರು ಅಲ್ಲಿ ವ್ಯತ್ಯಾಸಗಳಾದಾಗ ಸಿಡಿದೆದ್ದು, ಹೊರಬಂದು ಪ್ರಾದೇಶಿಕ ಪಕ್ಷಗಳನ್ನು ಕಟ್ಟಿದ್ದಾರೆ. ಸಾಮಾನ್ಯ ಜನರ ಆಶಯಗಳಿಗಾಗಿ ಕಟ್ಟಲಿಲ್ಲ. ಹಾಗಾಗಿ, ಅಂತಹ ಪಕ್ಷಗಳು ಯಶಸ್ಸು ಕಂಡಿಲ್ಲ ಎನ್ನುವುದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್‌ಪಿ) ಅಧ್ಯಕ್ಷ ರವಿಕೃಷ್ಣಾ ರೆಡ್ಡಿ ಅವರ ಪ್ರತಿಪಾದನೆ. ಭ್ರಷ್ಟಾಚಾರದ ಜತೆ ರಾಜಿಮಾಡಿಕೊಳ್ಳದೆ ಆದರ್ಶಗಳನ್ನು ಇಟ್ಟುಕೊಂಡು ಕೆಆರ್‌ಎಸ್‌ಪಿ ಕಟ್ಟಿರುವ, ರಾಜ್ಯದ 199 ವಿಧಾನಸಭಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿರುವ ಅವರ ಜತೆ ‘ಪ್ರಜಾವಾಣಿ’ ನಡೆಸಿದ ಸಂದರ್ಶನದ ಸಂಕ್ಷಿಪ್ತ ರೂಪ ಇಲ್ಲಿದೆ.

• ರಾಜಕೀಯ ಪಕ್ಷ ಕಟ್ಟುವ ಆಲೋಚನೆ ಏಕೆ ಬಂತು?

ಅಮೆರಿಕದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ವೃತ್ತಿಗೆ ವಿದಾಯ ಹೇಳಿ ರಾಜ್ಯದಲ್ಲಿ ಸಮಾಜಸೇವೆ ಮಾಡುವ ಹಂಬಲದಿಂದ ಮರಳಿ ಬಂದೆ. ಇಲ್ಲಿಗೆ ಬಂದ ನಂತರ ರಾಜಕೀಯ ಭ್ರಷ್ಟಾಚಾರ, ಅವ್ಯವಸ್ಥೆ ಕಂಡು ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಗೆ ಪರ್ಯಾಯವಾಗಿ ರಾಜಕೀಯ ಮಾಡುವ ನಿರ್ಧಾರ ಮಾಡಿದೆ. 2013 ಲೋಕಸತ್ತಾ ಪಕ್ಷದಿಂದ, 2018ರಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದೆ. ನಂತರ ಎರಡೂವರೆ ವರ್ಷ ಎಎಪಿಯಲ್ಲಿ ಕೆಲಸ ಮಾಡಿದೆ. ಅಲ್ಲಿಂದ ಹೊರಬಂದ ನಂತರ ರಾಜಕೀಯ ನಿಷ್ಕ್ರಿಯತೆ ಹೋಗಲಾಡಿಸಲು ಕೆಆರ್‌ಎಸ್ ಪಕ್ಷ ಕಟ್ಟಿದೆ.

• ಸೀಟಿ ಊದುವ ವ್ಯಕ್ತಿಯ ಚಿಹ್ನೆ ಕೈತಪ್ಪಿದ್ದೇಕೆ?

ನಿಯಮಗಳಿಗೆ ಅನುಗುಣವಾಗಿ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದೆವು. ಪ್ರಕ್ರಿಯೆಗಳು ಪೂರ್ಣಗೊಳ್ಳುವುದರ ಒಳಗೆ ಬೇರೆ ಪಕ್ಷಕ್ಕೆ ಆ ಚಿಹ್ನೆ ಹೋಗಿತ್ತು. ಹಾಗಾಗಿ, ‘ಟಾರ್ಚ್’ ಆಯ್ಕೆ ಮಾಡಿಕೊಂಡೆವು. ಈ ಟಾರ್ಚ್ ‘ಭ್ರಷ್ಟಾಚಾರದ ಅಂಧಕಾರದಲ್ಲಿ ಮುಳುಗಿರುವ ಕರ್ನಾಟಕಕ್ಕೆ ಭರವಸೆಯ ಬೆಳಕು’ ತರಲಿದೆ.

• ಕೆಆರ್‌ಎಸ್‌ಪಿ ಆಮ್‌ಆದ್ಮಿ ಪಕ್ಷದ ನೆರಳಾ?

ಖಂಡಿತಾ ಅಲ್ಲ, ಆಮ್ ಆದ್ಮಿ ಪಕ್ಷ ಬೇರೆ ರಾಜ್ಯಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಕಾರಣದಿಂದ ರಾಜ್ಯದ ಜನರು ಗುರುತಿಸುತ್ತಿದ್ದಾರೆ ಅಷ್ಟೆ. ಅವರಿಗೆ ಸಂಪನ್ಮೂಲವೂ ಇದೆ. ಕೆಆರ್‌ಎಸ್‌ಪಿ ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಧ್ವನಿ ಎತ್ತಿದೆ. ಪರಿಣಾಮಕಾರಿ ಹೋರಾಟಗಳನ್ನು ಹಮ್ಮಿಕೊಂಡಿದೆ. ರಚನಾತ್ಮಕ ಕೆಲಸಗಳ ಮೂಲಕ ರಾಜ್ಯದ ಮೂಲೆಮೂಲೆ ತಲುಪಿದೆ. ಅವಕಾಶ ಸಿಗದ ಶ್ರೀಮಂತರು, ಸಚ್ಚಾರಿತ್ರ್ಯ ಇಲ್ಲದ ರಾಜಕಾರಣಗಳು ಇತರೆ ರಾಜಕೀಯ ಪಕ್ಷ ಸೇರಿದಂತೆ ಎಎಪಿಯನ್ನೂ ಸೇರುತ್ತಿದ್ದಾರೆ. ಅಭ್ಯರ್ಥಿಗಳು ಹಲವು ಕಡೆ ಮತದಾರರಿಗೆ ಆಮಿಷ ಒಡ್ಡಿದ ಆರೋಪಗಳೂ ಕೇಳಿ ಬಂದಿವೆ. ಆ ಪಕ್ಷದಲ್ಲಿ ಮೊದಲಿದ್ದ ಶೀಲ, ಪಾವಿತ್ರ್ಯ ಉಳಿದಿಲ್ಲ.

• ಚುನಾವಣಾ ವೆಚ್ಚ ಹೇಗೆ ನಿಭಾಯಿಸುತ್ತಿದ್ದೀರಾ?

ಮತದಾರರಿಗೆ ಹಣ, ಮದ್ಯ ಇತರೆ ಆಮಿಷ ಒಡ್ಡದೆ ಚುನಾವಣೆ ನಡೆಸಿದರೆ ಚುನಾವಣಾ ಆಯೋಗ ನಿಗದಿ ಮಾಡಿದ ಹಣಕ್ಕಿಂತ ಕಡಿಮೆ ಮೊತ್ತದಲ್ಲೇ ಚುನಾವಣೆ ಮಾಡಬಹುದು. ಜನರು ಪಕ್ಷಕ್ಕೆ ಸಣ್ಣಸಣ್ಣ ಮೊತ್ತದ ದೇಣಿಗೆ ನೀಡುತ್ತಿದ್ದಾರೆ. ಹಣ, ಮದ್ಯ ಹಂಚದೇ ಚುನಾವಣೆ ಮಾಡುವ ವಾಗ್ದಾನವನ್ನು ನಮ್ಮ ಅಭ್ಯರ್ಥಿಗಳೂ ನೀಡಿದ್ದಾರೆ.

• ಜನರೂ ಭ್ರಷ್ಟಾಚಾರದ ಜತೆ ರಾಜಿ ಮಾಡಿಕೊಂಡಿದ್ದಾರಾ?

ಇಲ್ಲ, ರಾಜಕೀಯ ಪಕ್ಷಗಳ ವರ್ತನೆ, ಮೋಸದಿಂದ ಜನರು ಭ್ರಮನಿರಸನಗೊಂಡಿದ್ದಾರೆ. ಹಾಗಾಗಿ, ಭ್ರಷ್ಟಾಚಾರದ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇರಬಹುದು. ಯಾರು ಗೆದ್ದರೂ ಅಷ್ಟೆ ಎನ್ನುವ ನಿರಾಶಾದಾಯಕ ಸ್ಥಿತಿಗೆ ಬಂದಿದ್ದಾರೆ. ಅನಿವಾರ್ಯವಾಗಿ ಸಹಿಸಿಕೊಳ್ಳುತ್ತಿದ್ದಾರೆ. ಆಯ್ಕೆಗಳಿಲ್ಲದ ಕಾರಣ ಇರುವವರಲ್ಲೇ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

• ಬಿಜೆಪಿ ವಿರೋಧ ಪಕ್ಷಗಳನ್ನು ಹತ್ತಿಕ್ಕುತ್ತಿದೆಯಲ್ಲ?

ಬಿಜೆಪಿ ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಅದಕ್ಕೆ ವಿರೋಧ ಪಕ್ಷಗಳ ದೌರ್ಬಲ್ಯವೂ ಕಾರಣ. ಪ್ರಾಮಾಣಿಕ, ಮೌಲ್ಯಾಧಾರಿತ ರಾಜಕಾರಣ ಮಾಡಿದರೆ ಯಾರೂ ಬಗ್ಗುಬಡಿಯಲು ಸಾಧ್ಯವಾಗದು.

ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಪ್ರಿಯಾಂಕಾ ವಾಗ್ದಾಳಿ • ಮೈಸೂರು ಭಾಗದಲ್ಲಿ ಬಿರುಸಿನ ಪ್ರಚಾರ

‘ಸರ್ಕಾರದಿಂದ ₹1.5 ಲಕ್ಷ ಕೋಟಿ ಲೂಟಿ’

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: ರಾಜ್ಯಕ್ಕೆ ಇದೇ ಮೊದಲ ಬಾರಿ ಚುನಾವಣಾ ಪ್ರಚಾರಕ್ಕಾಗಿ ಮಂಗಳವಾರ ಆಗಮಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಬಿಜೆಪಿ ವಿರುದ್ಧ ರಣಕಹಳೆ ಮೊಳಗಿಸಿದರು.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಹೆಳವರ ಹುಂಡಿಯಲ್ಲಿ ಪ್ರಚಾರಸಭೆಯಲ್ಲಿ ಪಾಲ್ಗೊಂಡ ಅವರು ಬಿಜೆಪಿ ನಾಯಕರ ಹೇಳಿಕೆಗಳಿಗೆ ತಿರುಗೇಟು ನೀಡಿದರು. ಚಾಮರಾಜನಗರ ಜಿಲ್ಲೆಯ ಹನೂರಿನಲ್ಲಿ ಮಹಿಳಾ ಸಂವಾದದಲ್ಲಿ ಪಾಲ್ಗೊಂಡು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಕೆ.ಆರ್.ನಗರದಲ್ಲಿ ಸಂಜೆ ಪಕ್ಷದ ಅಭ್ಯರ್ಥಿ ಡಿ.ರವಿಶಂಕರ್ ಪರ ರೋಡ್ ಶೋ ನಡೆಸಿ ಕಾರ್ಯಕರ್ತರನ್ನು ಉತ್ತೇಜಿಸಿದರು.

ಹೆಳವರಹುಂಡಿಯ ಪ್ರಚಾರ ಸಭೆಗೆ ಆಕರ್ಷಕ ನಗುವಿನೊಂದಿಗೆ, ಜನರತ್ತ ಕೈ ಬೀಸುತ್ತ ಬಂದ ಅವರಿಗೆ, ಜಯಘೋಷಗಳು ಮೊಳಗಿದವು.

‘ಹೆಲಿಕಾಪ್ಟರ್‌ನಲ್ಲಿ ಬರುವಾಗ, ಎಷ್ಟು ಸುಂದರ ಜಾಗಕ್ಕೆ ಬಂದಿದ್ದೇನೆ ಎನ್ನಿಸಿತು. ಇದು ಕಪಿಲಾ, ಕಾವೇರಿ ನದಿಗಳ ಸಂಗಮ ಸ್ಥಳ. ದೇಗುಲಗಳ ಪವಿತ್ರ ಭೂಮಿ. ಹಸಿರುಕ್ಕುವ ಸಮೃದ್ಧ ಕೃಷಿಭೂಮಿ ನಿರ್ಮಿಸಿದವರ ಮುಂದೆ ಮಾತನಾಡಲು ಹೆಮ್ಮೆಯೆನಿಸುತ್ತದೆ’ ಎಂದು ಹೇಳಿ ಎಲ್ಲರ ಚಪ್ಪಾಳೆ ಗಿಟ್ಟಿಸಿದರು.

ಮೈಸೂರು ಜಿಲ್ಲೆಯ ತಿ.ನರಸೀಪುರದಲ್ಲಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷದ ಕಾರ್ಯಕರ್ತೆ ಜೆ. ಶಶಿರೇಖಾ ಅವರನ್ನು ತಬ್ಬಿಕೊಂಡರು

‘ವಿದ್ಯುತ್, ರಸ್ತೆ ಸೌಕರ್ಯ ಕೊಡಿ’

ಹನೂರಿನಲ್ಲಿ ಸಂವಾದದ ಕೊನೆಯಲ್ಲಿ ಕೊಕ್ಬರೆ ಗ್ರಾಮದ ಬೇಡಗಂಪಣ ಮಹಿಳೆ ಬೊಮ್ಮಮ್ಮ ಹಾಗೂ ಹೊಸಪೋಡಿನ ತಿರುಮಮ್ಮ ಅವರು ಪ್ರಿಯಾಂಕಾ ಗಾಂಧಿ ಅವರೊಂದಿಗೆ ಮಾತನಾಡಿದರು.

‘ತಮ್ಮ ಗ್ರಾಮದಲ್ಲಿ ವಿದ್ಯುತ್, ರಸ್ತೆ ವ್ಯವಸ್ಥೆ ಸಮರ್ಪಕವಾಗಿಲ್ಲ’ ಎಂದು ಗಮನ ಸೆಳೆದರು.

‘ನಮ್ಮ ಸರ್ಕಾರ ಬರಲಿ, ಬರದೇ ಇರಲಿ, ನಿಮ್ಮ ಗ್ರಾಮಗಳಿಗೆ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗುವುದು’ ಎಂದು ಪ್ರಿಯಾಂಕಾ ಭರವಸೆ ನೀಡಿದರು.

ಹನೂರಿನ ಮಹಿಳಾ ಸಂವಾದದಲ್ಲಿ ಮಾತನಾಡಿ, ‘ರಾಜ್ಯ ಬಿಜೆಪಿ ಸರ್ಕಾರವು ₹ 1.5 ಲಕ್ಷ ಕೋಟಿ ಲೂಟಿ ಮಾಡಿದೆ. ಅದರಲ್ಲಿ 2.5 ಸಾವಿರ ಕಿ.ಮೀ ರಸ್ತೆ, 750 ಕಿ.ಮೀ ಮೆಟ್ರೊ ಮಾರ್ಗ, ಬಡವರಿಗೆ 30 ಲಕ್ಷ ಮನೆ, 100 ಏಮ್ಸ್, 177 ಇಎಸ್‌ಐ ಆಸ್ಪತ್ರೆಗಳನ್ನು ನಿರ್ಮಿಸಬಹುದಿತ್ತು. 30 ಸಾವಿರ ಸ್ಮಾರ್ಟ್ ಕ್ಲಾಸ್ ಮಾಡಬಹುದಿತ್ತು’ ಎಂದರು.

‘ಬಿಜೆಪಿಗರು ಮೀಸಲಾತಿ ವಿರೋಧಿಗಳು. ಮೀಸಲಾತಿ ಹೆಚ್ಚಿಸಿದರೂ ಸಂವಿಧಾನದ 9 ನೇ ಪರಿಚ್ಛೇದಕ್ಕೆ ಸೇರಿಸಲಿಲ್ಲ. ಕಾಂಗ್ರೆಸ್ ಸರ್ಕಾರವಿದ್ದಾಗ, ಎಷ್ಟು ಹಾಲಿತ್ತೆಂದರೆ ಕ್ಷೀರ ಭಾಗ್ಯ ಯೋಜನೆ ಜಾರಿಗೊಳಿಸಿದ್ದೆವು. ಶಾಲಾ ಮಕ್ಕಳಿಗೆ ಬಿಸಿ ಹಾಲು ಕೊಡುತ್ತಿದ್ದೆವು. ಉತ್ಪಾದಕರಿಗೆ ₹ 5 ಸಬ್ಸಿಡಿ ನೀಡಿದ್ದೆವು. ಇಷ್ಟು ಬೇಗ ಹೇಗೆ ಹಾಲು ಉತ್ಪಾದನೆ ಕಡಿಮೆಯಾಯಿತು’ ಎಂದು ಪ್ರಶ್ನಿಸಿದರು.

‘ಅದಾನಿ ಅವರ ಉದ್ಯಮಗಳಿಗೆ ₹ 16 ಲಕ್ಷ ಕೋಟಿ ಲಾಭ ಮಾಡಿ ಕೊಡುವ ಮೋದಿ ಸರ್ಕಾರಕ್ಕೆ, ಕಬ್ಬಿನ ಬೆಳೆಗೆ ಬೆಂಬಲ ಬೆಲೆ ನೀಡಲು ಆಗುವುದಿಲ್ಲ’ ಎಂದು ಕಿಡಿಕಾರಿದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ರಾಜ್ಯದಲ್ಲಿ ಖಾಲಿ ಇರುವ 2.5 ಲಕ್ಷ ಸರ್ಕಾರಿ ಹುದ್ದೆಗಳನ್ನು ತುಂಬಲಾಗುವುದು. ಇದು ನಮ್ಮ ವಚನ’ ಎಂದರು.

ಸ್ಮೃತಿ ಲಾಘವ ಧಾರವಾಡದ ಜೆಎಸ್‌ಎಸ್ ಸನ್ನಿಧಿ ಕಲಾಕ್ಷೇತ್ರದಲ್ಲಿ ಮಂಗಳವಾರ ನಡೆದ ಬಿಜೆಪಿ ಮಹಿಳಾ ಸಮಾವೇಶದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರಿಗೆ ಹಸ್ತಲಾಘವ ನೀಡಲು ಕಾರ್ಯಕರ್ತೆಯರು ಮುಗಿಬಿದ್ದಿದ್ದರು

ದಲಿತ ಸಮುದಾಯದ ರಾಷ್ಟ್ರಪತಿಯನ್ನೇ ಅವಮಾನಿಸಿದ್ದ ಕಾಂಗ್ರೆಸ್: ಸ್ಮೃತಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ‘ದಲಿತ ಸಮುದಾಯದ ರಾಮನಾಥ ಕೋವಿಂದ ಅವರು ರಾಷ್ಟ್ರಪತಿಯಾದಾಗ ಅವರಿಗೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಗೌರವ ಕೊಡಲಿಲ್ಲ. ಈಗ ಬುಡಕಟ್ಟು ಸಮಾಜದ ಮಹಿಳೆ ದೇಶದ ಪ್ರಥಮ ಪ್ರಜೆ ಸ್ಥಾನಕ್ಕೇರಿದರೆ ಅವಮಾನ ಮಾಡಿದರು. ಯಾವ ಆಧಾರದ ಮೇಲೆ ಕಾಂಗ್ರೆಸ್ ದಲಿತರು– ಹಿಂದುಳಿದವರು ಪರ ಎಂದು ಬೀಗುತ್ತಾರೆ?’ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ಕಿಡಿ ಕಾರಿದರು.

ನಗರದಲ್ಲಿ ಮಂಗಳವಾರ ಬಿಜೆಪಿ ಅಭ್ಯರ್ಥಿ ಶಶಿಕಲಾ ಜೊಲ್ಲೆ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು ‘ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಅಭ್ಯರ್ಥಿಯಾಗಿ ಕಣಕ್ಕಿಳಿಸಿದಾಗ ಕಾಂಗ್ರೆಸ್ ಹಾಗೂ ಎನ್‌ಸಿಪಿಯ ಪುರುಷರು ಆ ಮಹಿಳೆಯನ್ನು ತಿರಸ್ಕರಿಸಿ ಅವಮಾನಿಸಿದರು’ ಎಂದರು.

‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒಂದು ಅದ್ಭುತ ಪ್ರಾಣಿ. ಅವರು ರಾಜ್ಯಕ್ಕೆ ಭೇಟಿ ನೀಡಿದಾಗ ದಲಿತರು, ಹಿಂದುಳಿದವರು, ಬಡವರೊಂದಿಗೆ ಕಾಂಗ್ರೆಸ್ ನಿಂತಿದೆ ಎಂದು ಭಾಷಣ ಮಾಡುತ್ತಾರೆ. ರಾಷ್ಟ್ರಪತಿಯನ್ನೇ ಅವಮಾನಿಸಿದ ಅವರು ಸಾಮಾನ್ಯರ ಪರ ಇರಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

‘ನಿಪ್ಪಾಣಿ ಕ್ಷೇತ್ರದಲ್ಲಿ ನಿಮ್ಮ ಮನೆ ಮಗಳು ಶಶಿಕಲಾ ಸ್ಪರ್ಧಿಸಿದ್ದಾರೆ. ತವರು ನೆಲದಲ್ಲಿ ಹೆಣ್ಣುಮಗಳಿಗೆ ಅವಮಾನ ಆಗದಂತೆ ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿ. ಕಾಂಗ್ರೆಸ್ ಹಾಗೂ ಎನ್‌ಸಿಪಿ ಅಭ್ಯರ್ಥಿಗಳೂ ಎಚ್ಚರ ವಹಿಸಿ; ಹೆಣ್ಣು ಮಕ್ಕಳನ್ನು ಗೌರವಿಸುವುದನ್ನು ಕಲಿಯಿರಿ’ ಎಂದೂ ಹೇಳಿದರು.

ಪೂರ್ಣ ಬಹುಮತ ಕೊಡಿ: ಅಮಿತ್ ಶಾ

ಯಾದಗಿರಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ನಗರದಲ್ಲಿ ರೋಡ್ ಶೋ ನಡೆಸಿ ಪಕ್ಷದ ಅಭ್ಯರ್ಥಿ ವೆಂಕಟರೆಡ್ಡಿ ಮುದ್ನಾಳ ಪರ ಪ್ರಚಾರ ನಡೆಸಿದರು. ಇಲ್ಲಿನ ಪದವಿ ಮಹಾವಿದ್ಯಾಲಯದಿಂದ ಆರಂಭವಾದ ಮೆರವಣಿಗೆ ನೇತಾಜಿ ಸುಭಾಷ ವೃತ್ತದ ಮಾರ್ಗವಾಗಿ ಲಾಲ್‌ಬಹದ್ದೂರ್ ಶಾಸ್ತ್ರಿ ವೃತ್ತದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾ,‘ನಮ್ಮ ಸರ್ಕಾರ ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿ ಕರ್ನಾಟಕವನ್ನು ಸುರಕ್ಷಿತಗೊಳಿಸಿದೆ. ಪ್ರಧಾನಿ ಮೋದಿ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯವನ್ನು ಅಭಿವೃದ್ಧಿಗೊಳಿಸಿದ್ದಾರೆ. ಸಂಪೂರ್ಣ ಬಹುಮತ ನೀಡುವ ಮೂಲಕ ಡಬಲ್ ಎಂಜಿನ್ ಸರ್ಕಾರ ಮುಂದುವರೆಯಲು ಅವಕಾಶ ಮಾಡಿಕೊಡಬೇಕು’ ಎಂದು ಹೇಳಿದರು.

‘ಶಾ, ಪ್ರಿಯಾಂಕಾ ಆಟ ನಡೆಯಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಆಟ ರಾಜ್ಯದಲ್ಲಿ ಏನೂ ನಡೆಯಲ್ಲ. ರಾಜ್ಯಕ್ಕೆ ಅವರ ಕೊಡುಗೆ ಏನೂ ಇಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಜಿಲ್ಲೆಯ ವಿವಿಧೆಡೆ ಪಕ್ಷದ ಅಭ್ಯರ್ಥಿಗಳ ಪ್ರಚಾರಕ್ಕೂ ಮುನ್ನ ಚಾಮುಂಡೇಶ್ವರಿ ಬೆಟ್ಟದಲ್ಲಿ ಪೂಜೆ ಸಲ್ಲಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್, ಬಿಜೆಪಿಗಿಂತ ಜೆಡಿಎಸ್ ಹೆಚ್ಚಿನ ಸ್ಥಾನ ಪಡೆಯಲಿದೆ. ಅಮಿತ್ ಶಾ ರ‍್ಯಾಲಿಗೆ ಜನಬೆಂಬಲ ವ್ಯಕ್ತವಾಗುತ್ತಿಲ್ಲ. ಮುಖ್ಯಮಂತ್ರಿ ಬೊಮ್ಮಾಯಿ ಕೂಡ ಜನಬೆಂಬಲ ಕಳೆದುಕೊಂಡಿದ್ದು ಅವರ ಆಟ ನಡೆಯಲ್ಲ’ ಎಂದರು.

‘ಪಕ್ಷಕ್ಕೆ ಸೇರ್ಪಡೆಗೊಂಡಿರುವ 28 ನಾಯಕರ ಪೈಕಿಯೇ 20 ಮಂದಿ ಗೆಲ್ಲಲಿದ್ದಾರೆ. ಬೆಂಗಳೂರಿನಲ್ಲಿ 9, ಬೆಳಗಾವಿ 6 ಸ್ಥಾನ ಪಡೆಯಲಿದ್ದು, ನಿಗದಿತ ಗುರಿ ತಲುಪಿ ಯಾರ ಹಂಗೂ ಇಲ್ಲದೇ ಸರ್ಕಾರ ರಚಿಸಲಿದ್ದೇವೆ’ ಎಂದರು.

ವರುಣ ಕ್ಷೇತ್ರದಲ್ಲಿ ಬಿಜೆಪಿಯೊಂದಿಗೆ ಒಳ ಒಪ್ಪಂದದ ಆರೋಪಕ್ಕೆ ಉತ್ತರಿಸಿದ ಅವರು, ‘ಅಂಥ ತೀರ್ಮಾನ ಮಾಡಿಲ್ಲ. ನಮ್ಮ ಅಭ್ಯರ್ಥಿ ಭಾರತಿಶಂಕರ್ ಅವರ ಗೆಲುವೇ ಮುಖ್ಯ. ಶಾಸಕರಾಗಿದ್ದಾಗ ಆ ಕ್ಷೇತ್ರದ 3 ಹೋಬಳಿಗಳನ್ನು ಪ್ರತಿನಿಧಿಸಿದ್ದರು. ಅವರು ಸಮರ್ಥರು’ ಎಂದರು.

‘ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಅವರಿಗೆ ನಾನ್ಯಾಕೆ ಬೆಂಬಲ ಕೊಡಲಿ?

ಕೆ.ಆರ್.ನಗರ ಶ್ರೀಕೃಷ್ಣರಾಜೇಂದ್ರ ಕ್ರೀಡಾಂಗಣದಲ್ಲಿ ಮಂಗಳವಾರ ಹೆಲಿಕಾಪ್ಟರ್‌ನಿಂದ ಬಂದಿಳಿದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಶಾಸಕ ಸಾ.ರಾ.ಮಹೇಶ್, ಡಾ.ಮೆಹಬೂಬ್ ಖಾನ್ ಹೂಗುಚ್ಛ ನೀಡಿ ಸ್ವಾಗತಿಸಿದರು

> **ಮುಖ್ಯಮಂತ್ರಿ ಸಮುದಾಯದ ಪ್ರತಿನಿಧಿ ಅಲ್ಲ, ನಾಡಿನ ಪ್ರತಿನಿಧಿ. ಜಾತಿಗೆ ಸೀಮಿತ ಮಾಡಬೇಡಿ. ಸಂದರ್ಭಕ್ಕೆ ಅನುಗುಣವಾಗಿ ಪಕ್ಷಗಳು ನಾಯಕರನ್ನು ಆಯ್ಕೆ ಮಾಡುತ್ತವೆ**
> **ಎಚ್.ಡಿ.ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಒಕ್ಕಲಿಗರ ಮತ ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆ ಇಲ್ಲ. ಒಕ್ಕಲಿಗರು ಸಿದ್ದೇಗೌಡರ ಮಾತಿಗೆ ಕಿವಿಗೊಡಬೇಡಿ. ಅಲ್ಲಿ ಜಿ.ಟಿ.ದೇವೇಗೌಡ 50 ಸಾವಿರ ಮತಗಳ ಅಂತರದಲ್ಲಿ ಗೆಲ್ಲುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಎರಡು ಮೂರು ದಿನ ಪೂರ್ಣ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದಾರೆ. ಆದರೆ ಮೇ 8ರವರೆಗೂ ನಿರಂತರವಾಗಿ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದೇನೆ. ನನ್ನ ಅನಾರೋಗ್ಯವು ತಂದೆ ದೇವೇಗೌಡರಲ್ಲಿ ಆತಂಕ ಮೂಡಿಸಿದೆ. ಆದರೂ ಇಳಿವಯಸ್ಸಿನಲ್ಲಿ, ಅನಾರೋಗ್ಯದ ನಡುವೆಯೇ 123 ಕ್ಷೇತ್ರದ ಗೆಲುವಿನ ಗುರಿ ಮುಟ್ಟಲು ಅವರೂ ಶ್ರಮ ಹಾಕುತ್ತಿದ್ದಾರೆ' ಎಂದರು.

ಜೆಡಿಎಸ್ ಅಭ್ಯರ್ಥಿಗೆ ನಾಮಪತ್ರ ವಾಪಸ್ ಪಡೆಯಲು ಆಮಿಷ

ಸರ್ಕಾರ ಬಂದರೆ ಗೂಟದ ಕಾರು: ಸೋಮಣ್ಣ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಿನಗೆ ಗೂಟದ ಕಾರು ಕೋಡ್ತೀವಿ. ಮೊದಲು ನಾಮಪತ್ರ ವಾಪಸ್ ತಗೊ’ ಎಂದು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮಲ್ಲಿಕಾರ್ಜುನ ಸ್ವಾಮಿ (ಆಲೂರು ಮಲ್ಲು) ಅವರಿಗೆ ಬಿಜೆಪಿ ಅಭ್ಯರ್ಥಿ, ಸಚಿವ ವಿ.ಸೋಮಣ್ಣ ಕರೆ ಮಾಡಿ ಹೇಳಿರುವ ಆಡಿಯೊ ತುಣುಕು ಮಂಗಳವಾರ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿತ್ತು.

ಬೆಂಬಲಿಗರೊಬ್ಬರ ಫೋನಿನ ಮೂಲಕ ಸೋಮಣ್ಣ ಸೋಮವಾರ ಮಾತನಾಡಿದ್ದಾರೆ. ಆದರೆ, ಮಲ್ಲು ಕಣದಲ್ಲೇ ಉಳಿದಿದ್ದಾರೆ.

‘ನೀನು ನನಗೆ ಹಳೆಯ ಸ್ನೇಹಿತ. ಅವನ್ಯಾವನೋ ತೊಟ್ಟಿ ನನ್ ಮಗನ ಮಾತು ಕೇಳಕ್ಕೆ ಹೋಗಬೇಡ. ಅಣ್ಣ ಇದ್ದಾರೆ. ಜಿಟಿಜಿ ನಾವೆಲ್ಲ ಫ್ರೆಂಡ್ಸ್. ಮಾತಾಡ್ಕೋತ್ತೀವಿ. ಮೊದ್ಲು ವಾಪಸ್ ತಗೋ. ಆಮೇಲೆ ಬಾಕಿದ್ ಮಾತಾಡ್ತೀನಿ. ನಿನ್ನ ಹಿತ ಕಾಪಾಡೋದು ನನ್ನ ಜವಾಬ್ದಾರಿ. ಸುದೀಪಣ್ಣನ ಜವಾಬ್ದಾರಿ. ಮರಮ್‌ಕಲ್, ನಾನು, ಸುದೀಪಣ್ಣ ಇರ್ತೀವಿ. ಉಪ್ಪಾರರ ದೇವಸ್ಥಾನದಲ್ಲಿ ಇದ್ದೇನೆ. ಮೊದಲು ಆ ಕೆಲಸ ಮಾಡು’ ಎಂದು ಸೋಮಣ್ಣ ಹೇಳಿದ್ದಾರೆ.

‘ಇಲ್ಲಣ್ಣ, ನಾನು ಯಾರ ಮಾತು ಕೇಳ್ಕೊಂಡು ನಿಂತಿಲ್ಲ. ವಾಪಸ್ ತಗೆಯೋದಕ್ಕೆ ಆಗಲ್ಲಣ್ಣ. ನಿಮ್ಮ ಜೊತೆಗೇ ಇರ್ತೀನಿ. ನೀವು ಹೇಳ್ದಂಗೆ ಇರ್ತೀನಿ ಬಿಡಣ್ಣ. ಮುಂದೆ ನೀವೇ ಮುಖ್ಯಮಂತ್ರಿ ಆಗಬೇಕು ಎಂದು ನಾನೂ ಬಯಸ್ತೀನಿ’ ಎಂದು ಮಲ್ಲು ಪ್ರತಿಕ್ರಿಯಿಸಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿ, ನಟರಾಜ ಮತ್ತು ಸುದೀಪ್ ಹಾಗೂ ಇನ್ನೊಬ್ಬ ವ್ಯಕ್ತಿಯೊಂದಿಗೂ ಮಲ್ಲು ಮಾತನಾಡಿರುವ ಆಡಿಯೊಗಳೂ ಹರಿದಾಡಿದ್ದವು.

‘ಸೋಮಣ್ಣ ಕರೆ ಮಾಡಿ, ನಾಮಪತ್ರ ವಾಪಸ್ ಪಡೆಯುವಂತೆ ಹೇಳಿದ್ದು ನಿಜ. ಆದರೆ, ನಾನು ಒಪ್ಪಿಕೊಂಡಿಲ್ಲ. ಪಕ್ಷದ ನಿರ್ಧಾರದಂತೆ ಸ್ಪರ್ಧಿಸಿದ್ದೇನೆ ಎಂದು ಹೇಳಿದೆ’ ಎಂದು ಮಲ್ಲು ‘ಪ್ರಜಾವಾಣಿ’ಗೆ ತಿಳಿಸಿದರು.

₹ 8.21 ಕೋಟಿ ಮೌಲ್ಯದ ಸ್ವತ್ತುಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಸೋಮವಾರ ನಡೆಸಿರುವ ಕಾರ್ಯಾಚರಣೆಗಳಲ್ಲಿ ₹ 4.60 ಕೋಟಿ ನಗದು ಸೇರಿದಂತೆ ಒಟ್ಟು ₹ 8.21 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿಚಕ್ಷಣ ದಳಗಳು, ತನಿಖಾ ಠಾಣೆಗಳು ಮತ್ತು ಪೊಲೀಸ್ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ ₹ 3.74 ಕೋಟಿ ಮತ್ತು ಆದಾಯ ತೆರಿಗೆ ಇಲಾಖೆ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ ₹ 86.20 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

₹ 8.98 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 2.79 ಕೋಟಿ ಮೌಲ್ಯದ 64,235 ಲೀಟರ್ ಮದ್ಯ, ₹ 58.82 ಲಕ್ಷ ಮೌಲ್ಯದ 107.72 ಕೆ.ಜಿ. ಮಾದಕ ವಸ್ತು, ₹ 14 ಲಕ್ಷ ಮೌಲ್ಯದ 250 ಗ್ರಾಂ ಚಿನ್ನವನ್ನು ಮಂಗಳವಾರ ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಒಟ್ಟು ₹ 265.20 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ 2,036 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 19,122 ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ.

ಸಾಹಿತಿ ದೇವನೂರ ಮಹಾದೇವ ಕರೆ

‘ಡಬಲ್ ಎಂಜಿನ್ ಸರ್ಕಾರ ಗುಜರಿಗೆ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಘ ಪರಿವಾರದ ಡಬಲ್ ಎಂಜಿನ್ ಸರ್ಕಾರಗಳು ಜನವಿರೋಧಿಯಾಗಿವೆ. ಒಂದು ಎಂಜಿನ್‌ನಲ್ಲಿ ದ್ವೇಷ ತುಂಬಿಕೊಂಡಿದ್ದು, ಮತ್ತೊಂದು ಎಂಜಿನ್ ಶೇ 40 ರಷ್ಟು ಕಮಿಷನ್ ದಂಧೆಯಲ್ಲಿ ತೊಡಗಿದೆ. ಹೀಗಾಗಿ, ರೈಲು ಮುಂದಕ್ಕೆ ಚಲಿಸುತ್ತಿಲ್ಲ’ ಎಂದು ಸಾಹಿತಿ ದೇವನೂರ ಮಹಾದೇವ ಹೇಳಿದರು.



ದೇವನೂರ ಮಹಾದೇವ

‘ಎದ್ದೇಳು ಕರ್ನಾಟಕ ಅಭಿಯಾನ’ದ ತಂಡ ಮಂಗಳವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಡಬಲ್ ಎಂಜಿನ್ ಸರ್ಕಾರಗಳನ್ನು ಗುಜರಿಗೆ ಹಾಕಬೇಕು. ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ಇದ್ದರೆ ಮಾತ್ರ ಅಭಿವೃದ್ಧಿಯೇ? ಇಂತಹ ಮಾತುಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೇಳುವುದು ಎಷ್ಟು ಸರಿ? ಡಬಲ್ ಎಂಜಿನ್ ಸರ್ಕಾರ ಇದ್ದಲ್ಲಿ ಮಾತ್ರ ಹೆಚ್ಚು ಅಭಿವೃದ್ಧಿ ಎನ್ನುವುದು ಒಕ್ಕೂಟ ವ್ಯವಸ್ಥೆಯ ಬುಡ ಅಲ್ಲಾಡಿಸಿದಂತಾಗುವುದಿಲ್ಲವೇ’ ಎಂದು ಪ್ರಶ್ನಿಸಿದರು.

‘ಬಿಜೆಪಿಗೆ ಪ್ರಾದೇಶಿಕ ಚಹರೆಗಳ ಬಗ್ಗೆ ತಿರಸ್ಕಾರ’

‘ಬಿಜೆಪಿ ಮತೀಯ ರಾಷ್ಟ್ರೀಯವಾದ ಯಾವತ್ತು ಕೂಡ ಪ್ರಾದೇಶಿಕ ಚಹರೆಗಳನ್ನು ರಾಷ್ಟ್ರಕ್ಕೆ ತೊಂದರೆ ಎಂದೇ ಭಾವಿಸುತ್ತದೆ. ಆ ಪ್ರಾದೇಶಿಕ ಚಹರೆಗಳನ್ನು ಮಾನ್ಯ ಮಾಡುತ್ತಿಲ್ಲ. ಈ ಪಕ್ಷದ ಸಿದ್ಧಾಂತಕ್ಕೆ ಎಲ್ಲ ಪ್ರಾದೇಶಿಕ ಚಹರೆಗಳ ಬಗ್ಗೆ ತಿರಸ್ಕಾರವಿದೆ’ ಎಂದು ಸಾಹಿತಿ ರಹಮತ್ ತರೀಕೆರೆ ಹೇಳಿದರು.

‘ಡಬಲ್ ಎಂಜಿನ್ ಸರ್ಕಾರಗಳ ಅವಧಿಯಲ್ಲೇ ಅತಿ ಹೆಚ್ಚು ಬೆಲೆ ಏರಿಕೆಯಾಗಿದ್ದು, ನಿರುದ್ಯೋಗ ಪ್ರಮಾಣವು ಸಹ ಹೆಚ್ಚಾಗಿದೆ. ಬಡವರು–ಶ್ರೀಮಂತರ ನಡುವೆ ಅಂತರ ಹೆಚ್ಚಾಗಿದೆ. ಇದು ಸಂಘ ಪರಿವಾರ ಮತ್ತು ಬಿಜೆಪಿ ಸರ್ಕಾರದ ದುರಂತ ಕಥೆ’ ಎಂದು ದೂರಿದರು.

‘ಮತದಾರರು ಇಂದು ಹೆಚ್ಚು ಜಾಗೃತರಾಗಿದ್ದಾರೆ. ಮತಯಾಚಿಸಲು ಬಂದ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಕೇಳಿ ಬೆವರಿಳಿಸುತ್ತಿದ್ದಾರೆ. ಈ ಚುನಾವಣೆಯಲ್ಲಿ ಯಾವ ಪಕ್ಷ ಗೆಲ್ಲುತ್ತದೆ ಎಂಬುದಕ್ಕಿಂತ ಈ ಸುಲಿಗೆ ಸರ್ಕಾರವನ್ನು ಮೊದಲು ಸೋಲಿಸಬೇಕು. ನಂತರ, ಗೆದ್ದವರ ಜೊತೆ ಜನಹಿತದ ಮರುಸ್ಥಾಪನೆಗಾಗಿ ಗುದ್ದಾಡಬೇಕು. ಇದೇ ಪ್ರಜಾಪ್ರಭುತ್ವ ಉಳಿಸಿಕೊಳ್ಳುವ ಪ್ರಕ್ರಿಯೆ’ ಎಂದು ಪ್ರತಿಪಾದಿಸಿದರು.

> **ಸದ್ಯ ಕರ್ನಾಟಕ ಕುರುಕ್ಷೇತ್ರವಾಗಿದ್ದು, ಮೇ 10ರಂದು ನಡೆಯುವ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವ ಮೂಲಕ ಭಾರತದ ಆತ್ಮವನ್ನು ಉಳಿಸಬೇಕು**
> **ಯೋಗೇಂದ್ರ ಯಾದವ್**
> ಸ್ವರಾಜ್ ಇಂಡಿಯಾದ ಮುಖಂಡ

‘ಭಾರತ್ ಜೋಡೊ ಯಾತ್ರೆಯ ನಂತರ ಕಾಂಗ್ರೆಸ್ ಮರುಹುಟ್ಟು ಪಡೆದಿದೆ. ಆದ್ದರಿಂದ, ಕಾಂಗ್ರೆಸ್‌ಗೆ ಮತ ನೀಡಬೇಕು. ಪ್ರಗತಿಪರ ಪಕ್ಷಗಳು ಎಲ್ಲಿ ಸ್ಪರ್ಧೆ ನೀಡುತ್ತಿವೆ ಎಂಬ ಭರವಸೆ ಇರುತ್ತದೋ ಅಲ್ಲಿ ಅವುಗಳನ್ನು ಬೆಂಬಲಿಸಬೇಕು. ಕಾಂಗ್ರೆಸ್ ಮೂರನೇ ಸ್ಥಾನದಲ್ಲಿ ಇರುವ ಕಡೆ, ಜೆಡಿಎಸ್ ಬೆಂಬಲಿಸಬೇಕು. ಒಟ್ಟಿನಲ್ಲಿ ಸಂಘ ಪರಿವಾರದ ಬಿಜೆಪಿಯನ್ನು ಕಿತ್ತೊಗೆಯುವ ಕಾರ್ಯದಲ್ಲಿ ತೊಡಗಬೇಕು’ ಎಂದು ಕರೆ ನೀಡಿದರು.

ಚಿಂತಕರಾದ ಯೋಗೇಂದ್ರ ಯಾದವ್, ತಾರಾ ರಾವ್, ತ್ರಿಲೋಚನ್ ಶಾಸ್ತ್ರಿ, ಯೂಸುಫ್ ಕನ್ನಿ, ವೀರಸಂಗಯ್ಯ ಮತ್ತು ಜಾಫೆಟ್ ಇದ್ದರು.

ಮಾಯಕೊಂಡ: ವಾಗೀಶ್ ನಾಮಪತ್ರ ತಿರಸ್ಕೃತ, ಕಣದಲ್ಲಿ ಉಳಿದ ಪುಷ್ಪಾ

‘ಬೇಡ ಜಂಗಮ’: ಪತಿಗೆ ಅಡ್ಡಿ, ಪತ್ನಿಗಲ್ಲ

• ಬಾಲಕೃಷ್ಣ ಪಿ.ಎಚ್.

ದಾವಣಗೆರೆ: ಮಾಯಕೊಂಡ (ಎಸ್.ಸಿ ಮೀಸಲು) ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ವಾಗೀಶ್ ಬಿ.ಎಂ ಅವರು ಬೇಡಜಂಗಮ ಜಾತಿ ಪ್ರಮಾಣಪತ್ರದೊಂದಿಗೆ ಸಲ್ಲಿಸಿದ್ದ ನಾಮಪತ್ರವು ಜಾತಿ ಪ್ರಮಾಣಪತ್ರ ರದ್ದುಗೊಂಡ ಕಾರಣಕ್ಕೆ ತಿರಸ್ಕೃತಗೊಂಡಿದೆ. ಆದರೆ, ಅವರ ಪತ್ನಿ ಪುಷ್ಪಾ ಬಿ.ಎಂ. ಅಂಥದೇ ಜಾತಿ ಪ್ರಮಾಣ ಪತ್ರದೊಂದಿಗೆ ಸಲ್ಲಿಸಿರುವ ನಾಮಪತ್ರ ಪುರಸ್ಕೃತಗೊಂಡಿದೆ. ಅವರು ಚುನಾವಣೆಯ ಕಣದಲ್ಲಿ ಉಳಿದಿದಿದ್ದಾರೆ.

ವಾಗೀಶ್

ಪುಷ್ಪಾ ಬಿ.ಎಂ.

ವಾಗೀಶ್ ಅವರು ವೀರಶೈವ ಲಿಂಗಾಯತ ಜಂಗಮ ಸಮುದಾಯಕ್ಕೆ ಸೇರಿದ್ದು, ‘ಬೇಡ ಜಂಗಮ’ ಹೆಸರಿನಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದಿದ್ದಾರೆ. ಅದನ್ನು ರದ್ದುಗೊಳಿಸಬೇಕು ಎಂದು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಜಿಲ್ಲಾಧಿಕಾರಿ ಮುಂದೆ ಹಾಜರುಪಡಿಸಿ ಎಂದು ಹೈಕೋರ್ಟ್ ದೂರುದಾರರಿಗೆ ತಿಳಿಸಿತ್ತು. ಬೆಂಗಳೂರಿನಲ್ಲಿ ಜಾತಿ ಪ್ರಮಾಣಪತ್ರ ನೀಡಿದ್ದರಿಂದ ಬೆಂಗಳೂರು ಜಿಲ್ಲಾಧಿಕಾರಿ ಪರಿಶೀಲನೆ ನಡೆಸಿ ಈಚೆಗಷ್ಟೇ ಪ್ರಮಾಣಪತ್ರ ರದ್ದು ಮಾಡಿದ್ದರಿಂದ ನಾಮಪತ್ರ ತಿರಸ್ಕೃತಗೊಂಡಿದೆ.

ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ ವಾಗೀಶ್ ಅವರು ಟಿಕೆಟ್ ಸಿಗದ್ದರಿಂದ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಅವರ ಪತ್ನಿ ಪುಷ್ಪಾ ಬಿ.ಎಂ ಸಹ ಸ್ವತಂತ್ರ ಸ್ಪರ್ಧೆಯ ಇರಾದೆಯೊಂದಿಗೆ ಕೊನೆಯ ಕ್ಷಣದಲ್ಲಿ ನಾಮಪತ್ರ ಸಲ್ಲಿಸಿದ್ದರು.

‘ಬೇಡುವ ಜಂಗಮರು ಬೇಡ ಜಂಗಮರಲ್ಲ’

ವೀರಶೈವ ಜಂಗಮರು ಮತ್ತು ಬೇಡಜಂಗಮರು ಬೇರೆ ಬೇರೆ. ಆದರೂ 2009ರಿಂದ ವೀರಶೈವ ಜಂಗಮರು ‘ಬೇಡ ಜಂಗಮ’ ಪ್ರಮಾಣಪತ್ರ ಪಡೆಯುತ್ತಿದ್ದಾರೆ ಎಂದು ಚಿನ್ನಸಮುದ್ರ ಶೇಖರ ನಾಯ್ಕ ತಿಳಿಸಿದರು.

ಬೇಡ ಅಂದರೆ ಬೇಡುವ ಎಂದರ್ಥವಲ್ಲ. ಸಣ್ಣಪುಟ್ಟ ಬೇಟೆಯಾಡಿಕೊಂಡು, ಇತರ ಕಸುಬು ಮಾಡಿಕೊಂಡು ಬದುಕುವ ಪರಿಶಿಷ್ಟ ಜಾತಿಗೆ ಸೇರಿರುವ ಸಣ್ಣ ಜಾತಿಯವರು. ರಾಜ್ಯದಲ್ಲಿ 3,000 ಕುಟುಂಬಗಳಷ್ಟೇ ಇವೆ. ಇವರು ಮಾಂಸಾಹಾರಿಗಳು.

ದಾವಣಗೆರೆ ಜಿಲ್ಲೆಯಲ್ಲಿ ಒಂದೇ ಒಂದು ಬೇಡ ಜಂಗಮ ಕುಟುಂಬ ಇಲ್ಲದಿದ್ದರೂ 1,500ಕ್ಕೂ ಅಧಿಕ ಜನ ‘ಬೇಡ ಜಂಗಮ’ ಪ್ರಮಾಣ ಪತ್ರ ಪಡೆದಿರುವುದು ಗೊತ್ತಾಗಿದೆ. ಗೊತ್ತಾಗದೇ ಇರುವುದು ಎಷ್ಟಿದೆ ನೋಡಬೇಕು ಎಂದು ಅವರು ವಿವರಿಸಿದರು.



ಚಿನ್ನಸಮುದ್ರ ಶೇಖರ ನಾಯ್ಕ

> **ನನ್ನ ಜಾತಿ ಪ್ರಮಾಣಪತ್ರ ರದ್ದು ಮಾಡಿರುವುದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದೇನೆ. ಪತ್ನಿಯ ಜಾತಿ ಪ್ರಮಾಣಪತ್ರಕ್ಕೆ ಆಕ್ಷೇಪಗಳಿಲ್ಲದ ಕಾರಣ ಅವರು ಕಣದಲ್ಲಿದ್ದಾರೆ.**
> **ವಾಗೀಶ್ ಬಿ.ಎಂ.**
> ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ

ವಾಗೀಶ್ ಅವರ ಜಾತಿ ಪ್ರಮಾಣ ಪತ್ರ ರದ್ದಾಗಿರುವುದರಿಂದ ನಾಮಪತ್ರ ತಿರಸ್ಕೃತಗೊಂಡಿದೆ. ಪುಷ್ಪಾ ಅವರ ‘ಬೇಡ ಜಂಗಮ’ ಪ್ರಮಾಣಪತ್ರ ಚಾಲ್ತಿಯಲ್ಲಿ ಇರುವುದರಿಂದ ಅವರ ನಾಮಪತ್ರ ಪುರಸ್ಕೃತಗೊಂಡಿದೆ.

‘ಪತಿ, ಪತ್ನಿ, ಅಣ್ಣ, ತಮ್ಮ, ಅಕ್ಕ, ತಂಗಿ ಎಂಬ ಸಂಬಂಧಗಳನ್ನು ಪರಿಶೀಲನೆ ವೇಳೆ ನೋಡಲಾಗುವುದಿಲ್ಲ. ಪ್ರತಿ ಅಭ್ಯರ್ಥಿಯನ್ನೂ ಪ್ರತ್ಯೇಕವಾಗಿ ನೋಡಲಾಗುತ್ತದೆ. ಪುಷ್ಪಾ ಅವರ ನಾಮಪತ್ರದೊಂದಿಗೆ ಸಲ್ಲಿಸಿರುವ ದಾಖಲೆಗಳು ಸಮರ್ಪಕವಾಗಿವೆ. ಹೀಗಾಗಿ ಅವರ ನಾಮಪತ್ರ ಪುರಸ್ಕರಿಸಲಾಗಿದೆ. ವಾಗೀಶ್ ಅವರ ದಾಖಲೆಗಳು ಸರಿ ಇಲ್ಲದಿರುವುದರಿಂದ ತಿರಸ್ಕರಿಸಲಾಗಿದೆ’ ಎಂದು ಮಾಯಕೊಂಡ ಕ್ಷೇತ್ರದ ಚುನಾವಣಾಧಿಕಾರಿ ದುರ್ಗಾಶ್ರೀ ಎನ್. ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

‘ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು, ಜಾತಿ ಪ್ರಮಾಣಪತ್ರ ನೀಡಿರುವುದರಿಂದ ಹೀಗೆ ಆಗಿದೆ. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿರುವುದು ಸಾಬೀತಾದ ಕೂಡಲೇ ಅವರನ್ನು ಬಂಧಿಸಬೇಕು. ಆದರೆ, ಇನ್ನೂ ಬಂಧಿಸಿಲ್ಲ. ಪತಿಯ ಪ್ರಮಾಣಪತ್ರ ತಿರಸ್ಕೃತಗೊಂಡರೆ ಪತ್ನಿಗೂ ಅದು ಅನ್ವಯವಾಗಬೇಕು. ಸರ್ಕಾರವು ಪರಿಶಿಷ್ಟರಿಗೆ ಮೀಸಲಾತಿ ಸಿಗಕೂಡದು ಎಂದೇ ‘ಬೇಡ ಜಂಗಮ’ರಲ್ಲದವರಿಗೂ ‘ಬೇಡ ಜಂಗಮ’ ಪ್ರಮಾಣ ಪತ್ರ ನೀಡುತ್ತಿದೆ. ಬಿಜೆಪಿ ಮುಖಂಡರ ಕುಮ್ಮಕ್ಕಿನಿಂದ ವಾಗೀಶ್ ಅವರು ನಾಮಪತ್ರ ಸಲ್ಲಿಸಿದ್ದಾರೆ’ ಎಂದು ಪರಿಶಿಷ್ಟ ಜಾತಿಗಳ ರಕ್ಷಣಾ ವೇದಿಕೆ ಜಿಲ್ಲಾ ಸಂಚಾಲಕ ಚಿನ್ನಸಮುದ್ರ ಶೇಖರ ನಾಯ್ಕ ಬೇಸರ ವ್ಯಕ್ತಪಡಿಸಿದರು.

ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದರೆ ಇಂಥ ಅವಾಂತರ ಆಗುತ್ತಿರಲಿಲ್ಲ. ಪುಷ್ಪಾ ಅವರ ‘ಬೇಡ ಜಂಗಮ’ ಜಾತಿ ಪ್ರಮಾಣ ಪತ್ರವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ವ್ಯಕ್ತಿ–ಪಕ್ಷ ನಿಷ್ಠೆಯ ನಡುವೆ ಜೀಕಾಟ
ಗೊಂದಲದಲ್ಲಿ ಮತದಾರ

• ರಶ್ಮಿ ಎಸ್

ಹುಬ್ಬಳ್ಳಿ: ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕದ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಚುನಾವಣೆ ಎಂಬುದು ಮತದಾರರಿಗೆ ಆಯ್ಕೆಯ ಕಸರತ್ತಾಗಿ ಬದಲಾಗಿದೆ.

ಹುಬ್ಬಳ್ಳಿ- ಧಾರವಾಡ ಸೆಂಟ್ರಲ್ ಕ್ಷೇತ್ರ, ಬೆಳಗಾವಿ ಜಿಲ್ಲೆಯ ಅಥಣಿ, ಹಾವೇರಿ ಜಿಲ್ಲೆಯ ಶಿಗ್ಗಾವಿ, ವಿಜಯಪುರ ಜಿಲ್ಲೆಯ ಬಬಲೇಶ್ವರ, ಧಾರವಾಡ ಕ್ಷೇತ್ರಗಳು ಗಮನ ಸೆಳೆಯುತ್ತಿವೆ.

ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರ ಕಳೆದ ಆರು ಚುನಾವಣೆಗಳಿಂದಲೂ ಬಿಜೆಪಿಯದ್ದೇ ಭದ್ರಕೋಟೆಯಾಗಿತ್ತು. ಎಲ್ಲರೊಂದಿಗೆ ಸ್ನೇಹದಿಂದಿರುವ ಜಗದೀಶ ಶೆಟ್ಟರ್ ಇಲ್ಲಿ ಗೆಲುವು ಸಾಧಿಸುತ್ತ ಬಂದಿದ್ದರು. ಆದರೆ ಈ ಬಾರಿ ಅವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದಾರೆ. ಅವರ ಶಿಷ್ಯ ಬಳಗದಲ್ಲಿ ಪ್ರಮುಖರೆಂದೇ ಹೆಸರಾದ ಮಹೇಶ ಟೆಂಗಿನಕಾಯಿ ಅವರು ಶೆಟ್ಟರ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ನಾಮಪತ್ರ ಸಲ್ಲಿಸಿದ ನಂತರ ತಮ್ಮ ಗುರುಗಳಾದ ಜಗದೀಶ ಶೆಟ್ಟರ್ ಕಾಲಿಗೆ ಬಿದ್ದು ಗೌರವ ಸಲ್ಲಿಸಿದ್ದರು ಮಹೇಶ್ ಟೆಂಗಿನಕಾಯಿ.

ಈ ಕ್ಷೇತ್ರದಲ್ಲೀಗ ಕಾಂಗ್ರೆಸ್ ಹಾಗೂ ಬಿಜೆಪಿ ಎರಡಕ್ಕೂ ಪ್ರತಿಷ್ಠೆಯ ಕಣವಾಗಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮಹೇಶ ಅವರನ್ನು ಗೆಲ್ಲಿಸುವುದು ಸವಾಲಾಗಿದೆ. ಗೌರವದ ವಿದಾಯ ಬಯಸಿರುವ ಜಗದೀಶ ಶೆಟ್ಟರ್‌ಗೂ ಗೆಲ್ಲಲೇಬೇಕು. ಮತದಾರನಿಗೆ ಮಾತ್ರ ಪಕ್ಷದ ವರ್ಚಸ್ಸು ನೋಡಬೇಕೆ, ವ್ಯಕ್ತಿ ನಿಷ್ಠವಾಗಿರಬೇಕೆ ಎಂಬ ಗೊಂದಲ ಕಾಡುತ್ತಿದೆ. ಬಸವಣ್ಣನ ಅನುಯಾಯಿ ಎಂದು ಹೇಳುವ ಈ ನಾಯಕರು ಲಿಂಗಾಯತ ಮತ ಒಡೆಯುವ ಭೀತಿಯಲ್ಲಿದ್ದಾರೆ.

ಇದೇ ಸಮಸ್ಯೆ ಅಥಣಿಯ ಲಕ್ಷ್ಮಣ ಸವದಿ ಹಾಗೂ ಮಹೇಶ ಕುಮಠಳ್ಳಿ ನಡುವೆ ಇದೆ. ಲಿಂಗಾಯತ ಗಾಣಿಗರಾಗಿರುವ ಲಕ್ಷ್ಮಣ ಸವದಿ, ಟಿಕೆಟ್ ಸಿಗಲಿಲ್ಲವೆಂದು ಕಾಂಗ್ರೆಸ್‌ಗೆ ಬಂದಿದ್ದಾರೆ. ಕಾಂಗ್ರೆಸ್ ಬಿಟ್ಟು ಬಂದವರೆಂದು ಮಹೇಶ ಕುಮಠಳ್ಳಿಗೆ ಬಿಜೆಪಿಯಿಂದ ಟಿಕೆಟ್ ನೀಡಲಾಗಿದೆ. ಇಲ್ಲಿ ಗಾಣಿಗ ಮತ್ತು ಪಂಚಮಸಾಲಿ ಲಿಂಗಾಯತರಲ್ಲಿ ಒಡಕು ಮೂಡಿದೆ.

ಬಿ.ಎಸ್.ಯಡಿಯೂರಪ್ಪ ಅವರ ಸಂಬಂಧಿ ಆಗಿರುವ ಚಿಕ್ಕನಗೌಡರು ಕುಂದಗೋಳ ಕ್ಷೇತ್ರದಲ್ಲಿ ಬಿಜೆಪಿ ತೊರೆದಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಸಡ್ಡು ಹೊಡೆದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿಯೂ ಪಕ್ಷ ಬದಲಾವಣೆಯ ಗೊಂದಲ ತಪ್ಪಿಲ್ಲ. ಶಾಸಕ ನೆಹರು ಓಲೇಕಾರ್ ಟಿಕೆಟ್ ಸಿಗಲಿಲ್ಲವೆಂದು ಬೊಮ್ಮಾಯಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ, ಜೆಡಿಎಸ್ ಕಡೆ ನಡೆದರು. ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿವೆ. ಸಿ.ಎಂ ತವರು ಜಿಲ್ಲೆಯಾದರೂ ಶಿಕ್ಷಣ ಕ್ಷೇತ್ರದಲ್ಲಿ ಭ್ರಷ್ಟಾಚಾರ, ವೈದ್ಯಕೀಯ ಕಾಲೇಜಿಗೆ ಮೂಲ ಸೌಕರ್ಯ ಇಲ್ಲದೇ ಇರುವುದು, ಹನಿ ನೀರಾವರಿಯಲ್ಲಿ ಕಳಪೆ ಕಾಮಗಾರಿ, ಕಳಪೆ ಬೀಜ ಮಾರಾಟ ಜಾಲ ಹೀಗೆ ಅನೇಕ ಸಮಸ್ಯೆಗಳು ಕಾಡುತ್ತಲೇ ಇವೆ.

‘ಹೊಸಪಟ್ಟುಗಳನ್ನು ಕಲಿತಿದ್ದೇನೆ, ಯಾರೇ ಕಣಕ್ಕೆ ಬಂದರೂ ಸೋಲಿಸುವೆ’ ಎಂದು ತೋಳುತಟ್ಟಿ ಭುಜಬಲ ಪ್ರದರ್ಶಿಸಿದ ಬೊಮ್ಮಾಯಿ ಅವರ ವಿರುದ್ಧ ಕಾಂಗ್ರೆಸ್‌ನಿಂದ ಯಾಸಿರ್ ಖಾನ್‌ಪಠಾಣ್ ಸ್ಪರ್ಧಿಸುತ್ತಿದ್ದಾರೆ.

ಬೊಮ್ಮಾಯಿ ಅವರ ಅತ್ತೆಮನೆಯಾಗಿರುವ ಹಾನಗಲ್ಲ ಕ್ಷೇತ್ರ, ಉಪಚುನಾವಣೆಯಲ್ಲಿ ಸೋಲುಣಿಸಿತ್ತು. ಆಗ ಗೆಲುವು ಸಾಧಿಸಿದ ಶ್ರೀನಿವಾಸ್ ಮಾನೆ ಮತ್ತೆ ಕಣಕ್ಕೆ ಇಳಿದಿದ್ದಾರೆ. ಇವರ ವಿರುದ್ಧ ಬಿಜೆಪಿಯಿಂದ ಶಿವರಾಜ ಸಜ್ಜನರ, ಜೆಡಿಎಸ್‌ನಿಂದ ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದ ಮನೋಹರ ತಹಸೀಲ್ದಾರ್ ಕಣದಲ್ಲಿದ್ದಾರೆ.

ವಿಜಯಪುರ ನಗರ ಕ್ಷೇತ್ರದಲ್ಲಿ ಬಸನಗೌಡ ಪಾಟೀಲ ಯತ್ನಾಳ ಅವರು ಹಿಂದುತ್ವವಾದಿಯಾಗಿಯೇ ಮತಗಳನ್ನು ಸೆಳೆದಿದ್ದಾರೆ. ಸದಾ ಮುಸ್ಲಿಂ ವಿರೋಧಿ ಮಾತುಗಳಿಂದ ಸುದ್ದಿಯಲ್ಲಿರುವ ಯತ್ನಾಳರಿಗೆ ಕಾಂಗ್ರೆಸ್‌ನಿಂದ ಅಬ್ದುಲ್ ಹಮೀದ್ ಮುಶ್ರೀಫ್ ಎದುರಾಳಿಯಾಗಿದ್ದಾರೆ.

ರಾಜ್ಯದ ಚುನಾವಣಾ ಕಣದಲ್ಲಿರುವ ಮಹಿಳಾ ಅಭ್ಯರ್ಥಿಗಳಲ್ಲಿ ಸಿಂಹಪಾಲು ಕಿತ್ತೂರು ಕರ್ನಾಟಕಕ್ಕೆ ಸೇರಿದೆ. ಬಿಜೆಪಿಯ ಶಶಿಕಲಾ ಜೊಲ್ಲೆ (ನಿಪ್ಪಾಣಿ), ರತ್ನಾ ಮಾಮನಿ (ಸವದತ್ತಿ) ರೂಪಾಲಿ ನಾಯ್ಕ(ಕಾರವಾರ) , ಕಾಂಗ್ರೆಸ್‌ನ ಲಕ್ಷ್ಮಿ ಹೆಬ್ಬಾಳಕರ್ (ಬೆಳಗಾವಿ ಗ್ರಾಮಾಂತರ), ಕುಸುಮಾವತಿ ಶಿವಳ್ಳಿ (ಕುಂದಗೋಳ), ಜೆಡಿಎಸ್‌ನ ವಿಶಾಲಾಕ್ಷಿ ಪಾಟೀಲ ಸೋಮಜಾಳ (ಸಿಂದಗಿ) ಜಯ ಇವರಿಗೆ ಸಿಕ್ಕರೆ ನಾರಿಶಕ್ತಿ ಕಿತ್ತೂರು ಕರ್ನಾಟಕದಲ್ಲಿ ಪ್ರಬಲವಾಗಲಿದೆ.

ವಿಜಯನಗರ ಕ್ಷೇತ್ರದಲ್ಲಿ ಆನಂದ ಸಿಂಗ್ ಸಹೋದರಿ ಸಂಯುಕ್ತಾ ಅವರು ಬಿಜೆಪಿ ಟಿಕೆಟ್ ಆಕಾಂಕ್ಷಿ ಆಗಿದ್ದರು. ಆನಂದ್ ಸಿಂಗ್ ಮಗ ಸಿದ್ದಾರ್ಥ ಸಿಂಗ್ ಪಾಲಾಗಿದ್ದರಿಂದ ಅಸಮಾಧಾನಗೊಂಡು ಕಾಂಗ್ರೆಸ್‌ಗೆ ಸೇರಿದ್ದಾರೆ. ಅಣ್ಣನ ಮಗ ಸಿದ್ಧಾರ್ಥ ಸಿಂಗ್ ವರ್ಷದಿಂದಲೇ ತಯಾರಿಯಲ್ಲಿ ತೊಡಗಿಕೊಂಡಿದ್ದರು. ಗ್ರಾಮವಾಸ, ನಗರವಾಸ ಮಾಡಿದ್ದರು. ಕ್ಷೇತ್ರದ ಜನರೊಟ್ಟಿಗೆ ಬೆರೆಯತೊಡಗಿದ್ದರು. ಯುವಜನರಿಗಾಗಿ ಕ್ರಿಕೆಟ್, ಕಬಡ್ಡಿ ಪಂದ್ಯಾವಳಿ ಆಯೋಜಿಸಿದ್ದರು. ಪೂರ್ವ ತಯಾರಿಯೊಂದಿಗೆ ಅಪ್ಪನ ಪಾಲಿನ ಟಿಕೆಟ್ ಪಡೆದುಕೊಂಡಿದ್ದಾರೆ.

ಈ ಸಲದ ಚುನಾವಣೆಯಲ್ಲಿ ತತ್ವ,-ಸಿದ್ಧಾಂತಗಳಿಗಿಂತ, ವ್ಯಕ್ತಿಯ ಅಳಿವು ಉಳಿವು ಮಹತ್ತರ ಪಾತ್ರ ಪಡೆದಿದೆ.

ಪಕ್ಷದ ವರ್ಚಸ್ಸು ಹಿರಿದಾಗಿದೆಯೇ? ವ್ಯಕ್ತಿ ನಿಷ್ಠೆ ಹಿರಿದಾಗಿರಬೇಕೆ? ಎಂಬ ಗೊಂದಲ ಟಿಕೆಟ್ ಹಂಚಿಕೆಯ ನಂತರದ ಪಕ್ಷ ಬದಲಾವಣೆಯಿಂದ ಬೆಂಬಲಿಗರಿಗೂ, ಮತದಾರರಿಗೂ ಉಂಟಾಗಿದೆ.

ಮೂಲಸೌಲಭ್ಯಗಳ ಕೊರತೆ ನೀಗಿಸುವ ಕುರಿತು ಆಶ್ವಾಸನೆಗಳನ್ನು ನೀಡುತ್ತಲೇ ಇರುವ ನಾಯಕರು ಕ್ಷೇತ್ರದ ಅಗತ್ಯಗಳನ್ನು ಗುರುತಿಸಿ, ಮಾತನಾಡುತ್ತಿಲ್ಲ.

ಪೂರಕ ಮಾಹಿತಿ: **ಬಸವರಾಜ ಹವಾಲ್ದಾರ, ಬಸವರಾಜ ಸಂಪಳ್ಳಿ, ಸಂತೋಷ ಚಿನಗುಡಿ, ಇಮಾಮ್ ಹುಸೇನ ಗೂಡುನವರ, ಸತೀಶ ಬೆಳ್ಳಕ್ಕಿ, ಸಿದ್ದು ಆರ್.ಜಿ. ಹಳ್ಳಿ, ಗಣಪತಿ ಹೆಗಡೆ, ಶಶಿಕಾಂತ ಶೆಂಬೆಳ್ಳಿ, ಹೊನಕೆರೆ ನಂಜುಂಡೇಗೌಡ, ರಾಜೇಂದ್ರ ಹೆಗಡೆ, ಸುಧೀಂದ್ರ ಪ್ರಸಾದ್ ಇ.ಎಸ್.**

ಬೆಳಗಾವಿಯಲ್ಲಿರುವ ಸುವರ್ಣ ವಿಧಾನಸೌಧ

ಸಿ.ಎಂ ಪದವಿ, ಸಚಿವ ಸ್ಥಾನಕ್ಕಾಗಿ ಅಲ್ಲ, ಇದು ರಾಜಕಾರಣ. ಆತ್ಮಗೌರವಕ್ಕಾಗಿ ಜನಪರ ಆಗಿರುವ ಸಿದ್ಧಾಂತಗಳಿರುವ ರಾಷ್ಟ್ರೀಯ ಪಕ್ಷ ಆಯ್ಕೆ ಮಾಡಿಕೊಂಡಿರುವೆ. ಇದು ಆತ್ಮಗೌರವ ಮತ್ತು ಗೌರವಯುತವಾದ ವಿದಾಯಕ್ಕಾಗಿ ಸ್ಪರ್ಧೆ

ಜಗದೀಶ ಶೆಟ್ಟರ್, ಹುಬ್ಬಳ್ಳಿ ಧಾರವಾಡ ಸೆಂಟ್ರಲ್ ಕ್ಷೇತ್ರ, ಕಾಂಗ್ರೆಸ್ ಅಭ್ಯರ್ಥಿ

ಹಾನಗಲ್ಲ ಕ್ಷೇತ್ರದಲ್ಲಿ ಯಾರ ಮಾತು, ಯಾವ ಪ್ರಭಾವವೂ ನಡೆಯುವುದಿಲ್ಲ. ಜನರಿಗಾಗಿ ಮಾಡಿರುವ ಕೆಲಸಗಳಷ್ಟೇ ನಮ್ಮನ್ನು ಕಾಯುತ್ತವೆ. ಹಾನಗಲ್ಲ ಕ್ಷೇತ್ರದ ಜನರ ಸೇವೆಗೆ ಮತ್ತೊಂದು ಅವಕಾಶ ಕೇಳಿರುವೆ

ಶ್ರೀನಿವಾಸ ಮಾನೆ, ಹಾನಗಲ್ಲ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ

ಜಿಲ್ಲೆ ಮತ್ತು ಪಕ್ಷಗಳ ಬಲಾಬಲ

ಬಾಗಲಕೋಟೆ	ಬಿಜೆಪಿ 5	ಕಾಂಗ್ರೆಸ್ 2	ಒಟ್ಟು 7
ಬೆಳಗಾವಿ	ಬಿಜೆಪಿ 9	ಕಾಂಗ್ರೆಸ್ 9	ಒಟ್ಟು 18
ಗದಗ	ಬಿಜೆಪಿ 3	ಕಾಂಗ್ರೆಸ್ 1	ಒಟ್ಟು 4
ಹಾವೇರಿ	ಬಿಜೆಪಿ 5	ಕಾಂಗ್ರೆಸ್ 1	ಒಟ್ಟು 6
ಉತ್ತರ ಕನ್ನಡ	ಬಿಜೆಪಿ 05	ಕಾಂಗ್ರೆಸ್ 01	ಒಟ್ಟು 6
ವಿಜಯನಗರ	ಬಿಜೆಪಿ 3	ಕಾಂಗ್ರೆಸ್ 2	ಒಟ್ಟು 5
ಬಳ್ಳಾರಿ	ಬಿಜೆಪಿ 2	ಕಾಂಗ್ರೆಸ್ 3	ಒಟ್ಟು 5
ಧಾರವಾಡ	ಬಿಜೆಪಿ 5	ಕಾಂಗ್ರೆಸ್ 2	ಒಟ್ಟು 7
ವಿಜಯಪುರ	ಬಿಜೆಪಿ 04	ಕಾಂಗ್ರೆಸ್ 03	ಜೆಡಿಎಸ್ 01 ಒಟ್ಟು 8

ಪರಿಣಾಮ ಬೀರುವ ಅಂಶಗಳು

ಬೆಳಗಾವಿ

- ಮಹದಾಯಿ ಯೋಜನೆ
- ಕಬ್ಬು ಬೆಳೆಗಾರರಿಗೆ ಸಕಾಲಕ್ಕೆ ಸಿಗದ ಸೂಕ್ತ ದರ
- ನನೆಗುದಿಗೆ ಬಿದ್ದ ಬೆಳಗಾವಿ ಜಿಲ್ಲಾ ವಿಭಜನೆ ಕೂಗು
- ಕಿತ್ತೂರು ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಘೋಷಣೆ
- ನೆರೆಯಲ್ಲಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಇನ್ನೂ ಸಿಗದ ಪರಿಹಾರ

ವಿಜಯನಗರ/ ಬಳ್ಳಾರಿ

- ಜಿಲ್ಲಾ ಕೇಂದ್ರ ಹೊಸಪೇಟೆಯಲ್ಲಿಯೇ ತುಂಗಭದ್ರಾ ಜಲಾಶಯವಿದ್ದರೂ ನಗರದ ಬಹುತೇಕ ವಾರ್ಡ್‌ಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ
- ಅತ್ಯಧಿಕ ಕಬ್ಬು ಬೆಳೆಗಾರರಿದ್ದರೂ ಸಕ್ಕರೆ ಕಾರ್ಖಾನೆ ಇಲ್ಲ
- ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಪ್ರವಾಸಿಗರಿಗೆ ಮೂಲಸೌಕರ್ಯ ಮರೀಚಿಕೆ
- ಮಳೆಯಾಶ್ರಿತ ಪ್ರದೇಶದಲ್ಲಿಲ್ಲ ನೀರಾವರಿ ಯೋಜನೆಗಳು
- ಗಣಿ ಪ್ರದೇಶದ ಸುತ್ತಲಿನ ಗ್ರಾಮಗಳಿಗೆ ಮೂಲ ಸೌಕರ್ಯಗಳು
- ಬಳ್ಳಾರಿ ವಿಮಾನ ನಿಲ್ದಾಣ ವಿಳಂಬ ಕಾಮಗಾರಿ

ಧಾರವಾಡ

- 24x7 ಕುಡಿಯುವ ನೀರು ಪೂರೈಕೆ ಯೋಜನೆ ಎಲ್ಲ ವಾರ್ಡ್‌ಗಳಿಗೆ ವಿಸ್ತರಣೆ
- ಕುಡಿಯುವ ನೀರು ಪೂರೈಕೆ, ಕೋಮುಗಲಭೆ ನಿಯಂತ್ರಣ, ಮೂಲಸೌಕರ್ಯ ಅಭಿವೃದ್ಧಿ
- ಮಹದಾಯಿ ನೀರು ಹರಿಸುವುದು. ನೀರಾವರಿ ಕ್ಷೇತ್ರ ಹೆಚ್ಚಿಸುವುದು.

ಉತ್ತರ ಕನ್ನಡ

- ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಡಿಕೆ
- ಗಡಿಭಾಗದ ಪ್ರದೇಶವಾಗಿರುವ ಕಾರಣ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಿಲ್ಲ
- ಶಿರಸಿ ಪ್ರತ್ಯೇಕ ಜಿಲ್ಲೆ ಕೂಗು
- ಸಾಗರಮಾಲಾ ಯೋಜನೆ ಅಡಿ ಬಂದರು ಅಭಿವೃದ್ಧಿಗೆ ಪ್ರಯತ್ನಿಸುತ್ತಿರುವುದಕ್ಕೆ ಮೀನುಗಾರರಿಂದ ವಿರೋಧ

ಹಾವೇರಿ

- ಕಾಯಂ ಸಿಬ್ಬಂದಿ ಮತ್ತು ಅನುದಾನದ ಕೊರತೆಯಿಂದ ಬಳಲುತ್ತಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
- ಹಾವೇರಿ ಜಿಲ್ಲಾ ಕೇಂದ್ರದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳ್ಳದ 24x7 ಕುಡಿಯುವ ನೀರಿನ ಯೋಜನೆ
- ಹಾವೇರಿ ಜಿಲ್ಲೆಯಲ್ಲಿ ಸ್ಥಾಪನೆಯಾಗದ ಪ್ರತ್ಯೇಕ ಡಿಸಿಸಿ ಬ್ಯಾಂಕ್

ಗದಗ

- ಅನುಷ್ಠಾನಗೊಳ್ಳದ ಕಳಸಾ ಬಂಡೂರಿ ಯೋಜನೆ
- ದಶಕಗಳಿಂದ ಬಗೆಹರಿಯದ ಗದಗ ಬೆಟಗೇರಿ ಅವಳಿ ನಗರದ ಕುಡಿಯುವ ನೀರಿನ ಬವಣೆ
- ಘೋಷಣೆಗಷ್ಟೇ ಉಳಿದ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ
- ಕನಸಾಗಿಯೇ ಉಳಿದ ಫುಡ್ ಪಾರ್ಕ್, ಜವಳಿ ಪಾರ್ಕ್

ವಿಜಯಪುರ

- ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸದೇ ಇರುವುದು, ಮುಳುಗಡೆ ಸಂತ್ರಸ್ತ ರೈತರ ಭೂಮಿಗೆ ಏಕರೂಪ ದರ ನಿಗದಿ ಪಡಿಸಿಲ್ಲ
- ಒಣ ದ್ರಾಕ್ಷಿಗೆ ಅತ್ಯಾಧುನಿಕ ಮಾರುಕಟ್ಟೆ, ಗೋದಾಮು, ಶೀಥಲೀಕರಣ ಘಟಕ ನಿರ್ಮಾಣವಾಗದೇ ಇರುವುದು
- ವಿಜಯಪುರ ನಗರದ ಐತಿಹಾಸಿಕ ಸ್ಮಾರಕಗಳ ನಿರ್ಲಕ್ಷ್ಯ, ಮೂಲ ಸೌಲಭ್ಯಗಳ ಕೊರತೆ
- ಬಿಜೆಪಿ ಸರ್ಕಾರ ಮುಸ್ಲಿಂ ಮೀಸಲಾತಿ ತೆಗೆದಿರುವುದು, ಒಳಮೀಸಲಾತಿ ಜಾರಿ ಮಾಡಿರುವುದಕ್ಕೆ ಲಂಬಾಣಿ ಸಮುದಾಯದ ಅಸಮಾಧಾನ

ಬಾಗಲಕೋಟೆ

- ಮುಳುಗಡೆ ಸಂತ್ರಸ್ತರ ಪುನರ್ವಸತಿ ವಿಳಂಬ
- ಕೈಗಾರಿಕೆಗಳ ಕೊರತೆ, ಉದ್ಯೋಗಾವಕಾಶಗಳ ಕೊರತೆ
- ಕೂಡಲಸಂಗಮ ಅಭಿವೃದ್ಧಿ ಮಾಡದಿರುವುದು

ಕಾಂಗ್ರೆಸ್ ಪ್ರೇಕ್ಷಕರಿಲ್ಲದ ನಾಟಕ ಕಂಪನಿ: ಬೊಮ್ಮಾಯಿ

ಹುಬ್ಬಳ್ಳಿ: ‘ಪ್ರೇಕ್ಷಕರಿಲ್ಲದ ನಾಟಕ ಕಂಪನಿ ಕಾಂಗ್ರೆಸ್ ಆಗಿದ್ದು, ಸ್ವಲ್ಪ ದಿನಗಳಲ್ಲೇ ದಿವಾಳಿಯಾಗಿ ಮನೆಗೆ ಹೋಗಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

ಇಲ್ಲಿನ ಅಮರಗೋಳ ಗ್ರಾಮದಲ್ಲಿ ಮಂಗಳವಾರ ರೋಡ್ ಶೋ ನಡೆಸಿ ಮಾತನಾಡಿದ ಅವರು, ‘ಕಾಂಗ್ರೆಸ್ ರಾಜ್ಯಕ್ಕೆ ಇರುವ ಅನಿಷ್ಟ ಹಾಗೂ ಶಾಪ. ಐದು ವರ್ಷದ ಆಡಳಿತದಲ್ಲಿ ಎಷ್ಟೆಲ್ಲ ಭಾಗ್ಯಗಳನ್ನು ಘೋಷಣೆ ಮಾಡಿದ ಅವರು, ರಾಜ್ಯವನ್ನೇ ದೌರ್ಭಾಗ್ಯಕ್ಕೆ ನೂಕಿದರು’ ಎಂದು ಲೇವಡಿ ಮಾಡಿದರು.

‘ರೈತರ ಆತ್ಮಹತ್ಯೆ, ಅತಿವೃಷ್ಟಿ, ಅನಾವೃಷ್ಟಿಯಾದಾಗ, ಈ ಹಿಂದೆ ರಾಜ್ಯದಲ್ಲಿ ಐದು ವರ್ಷ ಕಾಂಗ್ರೆಸ್ ಆಡಳಿತವಿದ್ದಾಗ ರಾಹುಲ್ ಗಾಂಧಿಗೆ ಕರ್ನಾಟಕ ನೆನಪಾಗಿರಲಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಸೋಲುವುದು ಪಕ್ಕಾ ಎಂದೆನಿಸಿದಾಗ ಬಸವಣ್ಣನವರ ಮೇಲೆ ಅವರಿಗೆ ಬಹಳ ಪ್ರೀತಿ ಬಂದು ಬಿಟ್ಟಿದೆ. ಅದಕ್ಕಾಗಿ ಕೂಡಲ ಸಂಗಮಕ್ಕೆ ಹೋಗಿ ವಿಭೂತಿ ಹಚ್ಚಿಕೊಂಡಿದ್ದಾರೆ. ಭಾಷಣದಲ್ಲಿ ಲಿಂಗಾಯತ ಪದ ಬಳಸುತ್ತ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧಾರವಾಡ ವಿಭಾಗ ಮಟ್ಟದ ಸಂಘಟನಾತ್ಮಕ ಸಭೆಯಲ್ಲಿ ಬಿಎಸ್‌ವೈ ಗುಡುಗು
‘ಶೆಟ್ಟರ್ ಗೆಲ್ಲಲ್ಲ; ರಕ್ತದಲ್ಲಿ ಬರೆದುಕೊಡುವೆ’

ಹುಬ್ಬಳ್ಳಿ: ‘ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ಜಗದೀಶ ಶೆಟ್ಟರ್ ದಯನೀಯ ಸೋಲು ಅನುಭವಿಸಬೇಕು. ಅವರಿಗೆ ಮತದಾರರು ಪಾಠ ಕಲಿಸಬೇಕು. ಯಾವುದೇ ಕಾರಣಕ್ಕೂ ಅವರು ಗೆಲ್ಲಲು ಸಾಧ್ಯವಿಲ್ಲ. ಇದನ್ನು ರಕ್ತದಲ್ಲಿ ಬರೆದುಕೊಡುತ್ತೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಗುಡುಗಿದರು.

ನಗರದ ಗೋಕುಲ ರಸ್ತೆಯ ಕ್ಯೂಬಿಕ್ಸ್ ಹೋಟೆಲ್‌ನಲ್ಲಿ ಮಂಗಳವಾರ ರಾತ್ರಿ ನಡೆದ ಬಿಜೆಪಿ ಧಾರವಾಡ ವಿಭಾಗ ಮಟ್ಟದ ಸಂಘಟನಾತ್ಮಕ ಸಭೆಯಲ್ಲಿ ಅವರು ಮಾತನಾಡಿದರು.

‘ಜಗದೀಶ ಶೆಟ್ಟರ್ ಬಗ್ಗೆ ವೀರಶೈವ ಲಿಂಗಾಯತರಿಗೆ ವಾಸ್ತವ ಸಂಗತಿ ತಿಳಿಸಲೆಂದು ಈ ಸಭೆ ಕರೆಯಲಾಗಿದೆ. ಶೆಟ್ಟರ್ ಅವರನ್ನು ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ, ವಿಧಾನಸಭೆ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಬಿ.ಬಿ. ಶಿವಪ್ಪ ಅವರು ವಿರೋಧ ಪಕ್ಷದ ನಾಯಕರಾಗಲು ಹಟ ಹಿಡಿದಾಗ ನಾವು ಶೆಟ್ಟರ್ ಪರವಾಗಿ ನಿಂತಿದ್ದೆವು.

ಇದೆಲ್ಲ ಮರೆತಿದ್ದಾರೆ’ ಎಂದರು.

‘ಕೆಲವು ಕಾರಣಕ್ಕೆ ನಿಮ್ಮನ್ನ ಅಭ್ಯರ್ಥಿಯಾಗಿ ಮಾಡಲಾಗಲಿಲ್ಲ. ಕೇಂದ್ರದಲ್ಲಿ ಉನ್ನತ ಸ್ಥಾನ ನೀಡುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಹೇಳಿದರೂ ಕೇಳಲಿಲ್ಲ. ಅವರಿಗೆ ನಾವೇನು ಅನ್ಯಾಯ ಮಾಡಿದ್ದೇವೆ? ಪಕ್ಷಕ್ಕೆ ದ್ರೋಹ ಮಾಡಿ ಕಾಂಗ್ರೆಸ್ ಸೇರಿದ್ದಾರೆ. ಈ ಚುನಾವಣೆಯಲ್ಲಿ ಶೆಟ್ಟರ್ ಪರ ನಿಲ್ಲದೆ, ಮಹೇಶ ಅವರನ್ನು ಭಾರಿ ಅಂತರದಲ್ಲಿ ಗೆಲ್ಲಿಸಿ’ ಎಂದು ಮನವಿ ಮಾಡಿದರು.

ಬೆಂಗಳೂರಿನಲ್ಲಿಯೂ 30 ಜನ ಮುಖಂಡರನ್ನು ಕರೆದು ಚರ್ಚಿಸಿರುವೆ. ಲಿಂಗಾಯತರ ಕಡೆಗಣನೆ ಎನ್ನುತ್ತಲೇ ಕಾಂಗ್ರೆಸ್ ನನ್ನ ಬಗ್ಗೆಯೂ ಅನುಕಂಪ ತೋರಿದೆ. ಆದರೆ ನಾನು ಈ ಮೊದಲೇ ವಿಧಾನಸಭೆಗೆ ಸ್ಪರ್ಧಿಸುವುದಿಲ್ಲ, ಸಂಘಟನೆಗಾಗಿ ರಾಜ್ಯವಿಡೀ ಸುತ್ತುವುದಾಗಿ ಹೇಳಿದ್ದೆ. ಅದನ್ನೇ ಮಾಡುತ್ತಿರುವೆ. ಕಾಂಗ್ರೆಸ್‌ನ ಯಾವ ಅಪಪ್ರಚಾರಕ್ಕೂ ಕಿವಿಗೊಡಬೇಡಿ. ಯಾವ ಸಮೀಕ್ಷೆಗಳ ಕುರಿತೂ ತಲೆ ಕೆಡಿಸಿಕೊಳ್ಳಬೇಡಿ. ನಾಡು, ನಾಡಿನ ಜನತೆಯ ನಾಡಿಮಿಡಿತ ಈ ಯಡಿಯೂರಪ್ಪನಿಗೆ ಗೊತ್ತಿದೆ. ಯಾರ ಸಹಾಯವೂ ಇಲ್ಲದೆ ಸರ್ಕಾರ ರಚಿಸುವಂತೆ ಸಹಕಾರ ನೀಡಿ’ ಎಂದು ಕೋರಿದರು.

ಚುನಾವಣೆ ಮುಗಿಯೋವರೆಗೂ ಅಭ್ಯರ್ಥಿಗಳ ಗೆಲುವಿಗೆ ನಾವು ಶ್ರಮಿಸಬೇಕು. ಶೆಟ್ಟರ್ ಆಪ್ತರ ಮತ್ತು ಬೆಂಬಲಿಗರ ಜೊತೆ ಮಾತನಾಡಬೇಕು. ಕಾಂಗ್ರೆಸ್ ಕೈ ಹಿಡಿದು ಹೊರಟಿದ್ದಾರೆ. ಸವಾಲಾಗಿ ಸ್ವೀಕರಿಸಿ ಎಂದು ಹುರಿದುಂಬಿಸಿದರು.

‘ಇವತ್ತಿನಿಂದ ಶೆಟ್ಟರ್ ಹೆಸರು ಹೇಳಲು ಇಷ್ಟಪಡುವುದಿಲ್ಲ. ಅವರು ನಂಬಿಕೆ ದ್ರೋಹಿ, ವಿಶ್ವಾಸ ದ್ರೋಹಿ. ಅವರನ್ನು ಯಾವುದೇ ಕಾರಣಕ್ಕೂ ಕ್ಷಮಿಸಲು ಸಾಧ್ಯವಿಲ್ಲ. ಪಕ್ಷಕ್ಕೆ ದ್ರೋಹ ಬಗೆಯುವವರನ್ನು ಜನ ಸುಮ್ಮನೆ ಬಿಡಬಾರದು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೆಲೆಬ್ರಿಟಿ ಮಾತು

ಸೋಮಾರಿಗಳಾದರೆ ಪ್ರಶ್ನಿಸುವ ಹಕ್ಕು ಕಳೆದುಕೊಳ್ಳುತ್ತೇವೆ

ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸುವ, ಅಗತ್ಯಗಳನ್ನು ಪೂರೈಸುವ ವ್ಯಕ್ತಿಯನ್ನು ಜನಪ್ರತಿನಿಧಿಯನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು. ಚುನಾವಣೆ ಸಮಯದಲ್ಲಿ ಪ್ರಜೆಗಳು ಸೋಮಾರಿಗಳಾಗಬಾರದು. ಜವಾಬ್ದಾರಿ ಕಳೆದುಕೊಂಡರೆ ಜನಪ್ರತಿನಿಧಿಯನ್ನು ಪ್ರಶ್ನಿಸುವ ಹಕ್ಕು ಕಳೆದುಕೊಳ್ಳುತ್ತೇವೆ. ಪ್ರತಿಯೊಬ್ಬರು ಮತದಾನದಲ್ಲಿ ಪಾಲ್ಗೊಳ್ಳುವ ಮೂಲಕ ಪ್ರಜಾಪ್ರಭುತ್ವದ ಸೌಂದರ್ಯವನ್ನು ಹೆಚ್ಚಿಸಬೇಕು. ಕಡ್ಡಾಯ ಮತದಾನದಲ್ಲಿ ಪಾಲ್ಗೊಳ್ಳುವುದು ನಮ್ಮ ಕರ್ತವ್ಯವೂ ಹೌದು. ಯಾವುದೇ ಕಾರಣಕ್ಕೂ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಮತದಾರರು ಸೋಮಾರಿಗಳಾಗಬಾರದು.

ಪ್ರಜಾ ಪತ್ರ

ಮತದಾನ ಮಾಡದೆ ಇರುವುದು ಅಪರಾಧ

ವಿಧಾನಸಭಾ ಚುನಾವಣೆಯಲ್ಲಿ ಮತದಾನ ಮಾಡದೆ ಇರುವುದು ದೊಡ್ಡ ಅಪರಾಧ. ಯಾರಾದರೂ ಗೆಲ್ಲಲಿ, ಯಾರಾದರೂ ಸೋಲಲಿ ನಮಗೇಕೆ ಬೇಕು ಎಂದು ಮನೆಯಲ್ಲಿ ಕೂರಬೇಡಿ. ಉತ್ತಮ ಅಭ್ಯರ್ಥಿಯ ಆಯ್ಕೆ ನಮ್ಮ ಕೈಯಲ್ಲಿದ್ದು, ಪ್ರಜ್ಞಾವಂತ ಜನಪ್ರತಿನಿಧಿಯನ್ನು ಆಯ್ಕೆ ಮಾಡುವ ಜವಾಬ್ದಾರಿ ಮತದಾರರಲ್ಲಿದೆ. ದೇಶದ ಅಭಿವೃದ್ಧಿಗೆ ಪೂರಕವಾಗಿ, ಸಾರ್ವಜನಿಕರ ಕಷ್ಟಗಳಿಗೆ ಸ್ಪಂದಿಸುವ, ಜನನಾಯಕರನ್ನು ಆಯ್ಕೆ ಮಾಡಬೇಕು. ಆದ್ದರಿಂದ ಪ್ರತಿಯೊಬ್ಬರು ತಮ್ಮ ಮತವನ್ನು ಚಲಾಯಿಸಬೇಕಾಗಿದೆ.

ಗೀತಾ ಶಶಿಕುಮಾರ, ಬೆಂಗಳೂರು

ಮತಾಧಿಕಾರ ಚಲಾಯಿಸೋಣ



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಅರ್ಹ ಮತದಾರನಿಗೂ ಅವನ ಇಚ್ಛೆಯಂತೆ ಮತ ಚಲಾಯಿಸುವ ಪರಮಾಧಿಕಾರವನ್ನು ನಮ್ಮ ಸಂವಿಧಾನವು ನೀಡಿದೆ. ಯಾವುದೇ ಪ್ರಲೋಭನೆ ಮತ್ತು ಪೂರ್ವಾಗ್ರಹಕ್ಕೆ ಒಳಗಾಗದೇ ಆತ್ಮ ಸಾಕ್ಷಿಯಿಂದ ಸಮರ್ಥ ವ್ಯಕ್ತಿಗೆ ಮತ ಚಲಾಯಿಸಬೇಕಾಗಿರುವುದು ಮತದಾರರ ಕರ್ತವ್ಯ. ಸಶಕ್ತ ರಾಷ್ಟ್ರ ನಿರ್ಮಾಣಕ್ಕಾಗಿ ಸಮರ್ಥ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸದಾವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಮುಂಬರುವ ಚುನಾವಣೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮತ ಚಲಾಯಿಸುವುದರ ಮೂಲಕ ಪ್ರಜಾಪ್ರಭುತ್ವವನ್ನು ಬಲಪಡಿಸೋಣ.

ಸಿದ್ದಲಿಂಗಪ್ಪ ಬೀಳಗಿ, ಹುನಗುಂದ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಅವರಿಗಾದ್ರ ಸ್ವಾಭಿಮಾನ, ನಮಗ...?

• ಬಸವರಾಜ ಹವಾಲ್ದಾರ

ಚುನಾವಣಾ ಪುರಾಣ

‘ಏನಲೇ ಮಾಂತ್ಯಾ ಅಣ್ಣ ಟಿಕೆಟ್ ಕೊಡಬ್ಯಾಡ ಅಂದರೂ ಕೊಟ್ಟಾರಂತ ಸಂಗಣ್ಣ ಬಂಡಾಯ ಎದ್ದಾನಂತ. ಹೊಲ, ಮನಿ ಹೋಗಲಿ ಈ ಬಾರಿ ಚುನಾವಣೆ ಮಾಡೋದು ಅಂತ ಕಣದಾಗ ಉಳದಾನಂತ. ಅವಂದು ಬಾರಿ ಆತ ಬಿಡಪಾ. ಮೊನ್ನಿವರೆಗೂ ನಮ್ಮದು ಕ್ಯಾಡರ್ ಪಕ್ಷ. ಶಿಸ್ತಿನ ಸಿಪಾಯಿ ಅಂತಿದ್ದ. ಈಗ ತಿರಗಿ ಬಿದ್ದಾನ’

ಹಿಂಗಂತ ಅಮೀನಗಡದ ಬಸವೇಶ್ವರ ಖಾನಾವಳಿಯೊಳಗ ಬಿಸಿ ರೊಟ್ಟಿಗೆ ಎಣ್ಣಿಗಾಯಿ ಬದ್ನಿಕಾಯಿ ಹಚ್ಚಿಕೊಂಡ ಬಾಯೊಳಗಿಟ್ಟುಗೊಳ್ಳತ ಬಸ್ಯಾನತ್ತ ನೋಟ ಬೀರಿದ.

‘ಹುಟ್ಟತಲೇ ಅಣ್ಣ-ತಮ್ಮಂದಿರು ಬೆಳಿತಾ, ಬೆಳಿತಾ ದಾಯಾದಿಗಳು ಅನ್ನೋ ಮಾತ ಕೇಳಿಲ್ಲೇನ. ಅವನ್ನ ಮುಗಸ್ತಿನಿ ಅಂತ ಇವರು, ಇವನ್ನ ಮುಗಸ್ತಿನಿ ಅಂತ ಅವನು ತಯಾರಾಗ್ಯಾರ. ಏನಾದರಾಗಲಿ ಒಂದ ಕೈ ನೋಡೇ ಬಿಡ್ತಿನಿ ಅಂತ ಸವಾಲ್ ಹಾಕಾಕತ್ಯಾರ’ ಎಂದ ಬಸ್ಯಾ, ಖಾನಾವಳಿಯ ಸಪ್ಲೆಯರ್ ಅಮರ್‍ಯಾನತ್ತ ತಿರುಗಿ ‘ಏನಲೇ ಹುಚ್ಚುಖೋಡಿ ಮೊದಲ ಬಿಸಿಲಿಗೆ ಎಲ್ಲ ಕಡೆಗೆ ನೀರಿಳಿಕತ್ಯಾವ. ನೀನ ಬ್ಯಾರೆ ಸಾರಿಗೆ ಖಾರಾ ಸುರಿದು ಮತ್ತಷ್ಟ ನೀರಿಳಸಕತ್ತಿದಿ’ ಎಂದು ಸಿಟ್ಟಿನಿಂದ ಕೂಗಿದ.

‘ಸಾರ ಖಾರಾ ಆಗಿಲ್ಲೊ ಯಣ್ಣಾ, ಚುನಾವಣಾ ಬಿಸಿ, ಇಪ್ಪತ್ನಾಲ್ಕ ಗಂಟೆ ಹಾಕಿಕೊಳ್ಳೊ ಮಾವಾ (ಅಡಕೆ-ತಂಬಾಕಿನ ಗುಟ್ಕಾ) ದಿಂದಾಗಿ ನಿನ್ನ ಬಾಯಿ ಒಡದಾದ. ಸುಮ್ಮನೆ ನನ್ನ ಮ್ಯಾಲೆ ಯಾಕ ಸಿಟ್ಟಿಗೇಳತಿ. ನಿಮ್ಮ ನಾಯಕಗ ಟಿಕೆಟ್ ತರಲಿಕ್ಕಾಗಲಿಲ್ಲಂದ್ರ ನಾ ಏನ ಮಾಡಲಿ’ ಎಂದು ನಗುತ್ತಲೇ ಮುಂದಿನವರಿಗೆ ಸಾರು ಬಡಸಾಕ ಮುಂದಾದ.

‘ಲೇ ಟಿಕೆಟ್ ಕೊಡಲಿಕ್ಕೇನಾತಲೇ ಚುನಾವಣೆಗೆ ನಿಂತಿಲ್ಲನಲೇ ಮಗನಾ. ನಾವ ಗೆಲ್ಲದಿದ್ದರೂ ಸರಿ. ಅವನ್ನ ಸೋಲಸತನ ಬಿಡೋದಿಲ್ಲ. ದಮ್ ಇದ್ರ ಬೆಟ್ ಕಟ್ಟತಿಯನಲೆ ಮಗನ’

‘ದುಡಕೊಂಡ ತಿನ್ನಾಕ ಬಂದಾವ ನಾ. ಎಲ್ಲಿಂದ ಬೆಟ್ಟ ಕಟ್ಟಲೋ ಯಪ್ಪಾ. ಯಾರು ಬಂದ್ರ ನನಗೇನ ಬರತೈತಿ. ತಾಟ ಎತ್ತದ. ಮುಸರಿ ತಿಕ್ಕಾದ ತಪ್ಪತೈತೇನ. ದೊಡ್ಡ ಹೊಡೆದಾಟ ತಗೊಂಡ ನಾ ಏನ್ ಮಾಡಲಿ’

‘ಇನ್ನೊಂದ ಕಡೆ ಕಂಬಳಿ–ಕಂಬಳಿಗೆ ಜಗಳ ಹತ್ತೈತಲ್ಲ. ಕೈ ಬಿಟ್ಟು ತೆನಿ ಹೊರಲಾಕ ರೆಡಿ ಆಗ್ಯಾನ. ಸ್ವಾಭಿಮಾನಕ್ಕ ಧಕ್ಕೆಯಾದ್ರ ನಾ ಸುಮ್ಮನಿರವಲ್ಲ ಅಂತಾನನಲ್ಲೇ ಬಸ್ಯಾ’ ಎಂದು ಖಾನಾವಳಿಯೊಳಕ್ಕೆ ಕಾಲಿಟ್ಟ ಕಲ್ಲಪ್ಪ ಮಾವ ಎಲಿತಿಂದ ಕೆಂಪಾದ ಹಲ್ಲು ತೋರಸಿಗೆಂತ ಕೇಳಿದ.

‘ಅವರಿಗೆ ಟಿಕೆಟ್ ಸಿಕ್ಕರ ಭಾಳ ಒಳ್ಳೆ ಪಕ್ಷ. ಇಲ್ಲದಿದ್ದರ, ಅವರ ಸ್ವಾಭಿಮಾನಕ್ಕ ಧಕ್ಕೆ ಅಂತ ಬಂಡಾಯ ಎದ್ದ ಬಿಡತಾರ. ಮುಳುಗಡೆ, ಪ್ರವಾಹಕ್ಕೆ ತುತ್ತಾದ ಜನರು ದೈನೇಸಿ ಬಿಟ್ಟು, ಸ್ವಾಭಿಮಾನವನ್ನು ಒತ್ತೆಯಿಟ್ಟ ಇರಾಕ ಜಾಗ ಮಾಡಿ ಕೊಡ್ರಿ ಎಂದಾಗ ಎಲ್ಲಿ ಹೋಗತ್ತಪ್ಪ ಇವರ ಸ್ವಾಭಿಮಾನ. ದುಡಿಯಾಕ ಕೆಲಸ ಕೇಳಿ, ಕೇಳಿ ಸಾಕಾಗಿ ಹೊಟ್ಟಿ ತುಂಬಿಸಿಕೊಳ್ಳಾಕ ಮಂಗಳೂರು, ಪಣಜಿ ಕಡಿಗಿ ಗಂಟು ಕಟ್ಟಿಕೊಂಡು ಗುಳೆ ಹೋದಾಗ ಎಲ್ಲೊಗಿತ್ತ ಇವರ ಸ್ವಾಭಿಮಾನ. ಆಗ ಇಲ್ಲದ ಇವರ ಸ್ವಾಭಿಮಾನಕ್ಕೆ ಬೆಂಕಿ ಹಚ್ಚಾ. ಅವರಿಗಾದ್ರ ಸ್ವಾಭಿಮಾನ, ನಮಗಾದ್ರ ಹಣೆಬರಹ ಅಂತಾರ’ ಎಂದು ಸಿಟ್ಟಲೇ ತಾಟನ್ಯಾಗ ಕೈತಕ್ಕೊಂಡ.

‘ಏ ಎಷ್ಟ ಸಲ ಹೇಳಿಲ್ಲಲೇ. ತಾಟನ್ಯಾಗ ಕೈತೊಳಿಬ್ಯಾಡ ಅಂತ. ಇವನೌನ ಚುನಾವಣಾ ನಶ್ಯಾದಾಗ ಎಲ್ಲಿ ಕೈತೊಕ್ಕಳತಿನಿ ಅನ್ನ ಖಬರ ಇರಾದಿಲ್ಲ. ಇವತ್ತ ಅವರು, ಅವರು ಹೊಡದಾಡತಾರ. ನಾಳೆ ಎಲ್ಲರೂ ಒಂದಾಗತಾರ. ಅವರನ್ನ ಕಟ್ಟಿಗೊಂಡ ನಿಮ್ಮ ಬಾಳೆ ಹಾಳ ಮಾಡಿಕೆಂತಿರಿ. ಗಿರಾಕಿಗಳು ಭಾಳ ಅದಾವ. ಜಲ್ದಿ, ಜಲ್ದಿ ಉಂಡ ಎದ್ದ ನಡಿರಿ’ ಎಂದು ಗಲ್ಲೆದ ಮ್ಯಾಲ ಕುಂತಿದ್ದ ಸಾವಕಾರ ಸಿದ್ದಪ್ಪ.

ಮಾತಿನೇಟು



ಗ್ಯಾರಂಟಿ ಕಾರ್ಡ್ ನೆಪದಲ್ಲಿ ವೈಯಕ್ತಿಕ ಮಾಹಿತಿ ಸಂಗ್ರಹಿಸುತ್ತಿರುವ ಕಾಂಗ್ರೆಸ್ ಪಕ್ಷ ಈ ಚುನಾವಣೆ ಗೆಲುವು ದೊರೆಯುವುದಿಲ್ಲ ಎಂಬ ಹತಾಶೆಯಲ್ಲಿದೆ. ಗ್ಯಾರಂಟಿ ಕಾರ್ಡ್ ಹಂಚುವ ನೆಪದಲ್ಲಿ ನೀತಿ ಸಂಹಿತೆ ಉಲ್ಲಂಘಿಸಿ ಮತದಾರರ ದತ್ತಾಂಶ ಕಲೆ ಹಾಕುತ್ತಿದೆ. ಕಾರ್ಡ್ ಮುದ್ರಿಸಿದವರ ಹೆಸರು, ಕಾರ್ಡ್‌ಗಳ ಸಂಖ್ಯೆ ಮತ್ತಿತರ ಮಾಹಿತಿ ನೀಡಿಲ್ಲ. ಮತ ಗಳಿಕೆಗಾಗಿ ಮತದಾರರಿಗೆ ಆಮಿಷ ಒಡ್ಡಿ ಗಿಮಿಕ್ ಮಾಡುತ್ತಿದ್ದಾರೆ. ಈ ಕಾರ್ಡ್‌ಗಳಿಗೆ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಸಹಿ ಇದೆ. ಚುನಾವಣಾ ಆಯೋಗ ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕು.

ಆರಗ ಜ್ಞಾನೇಂದ್ರ, ಗೃಹ ಸಚಿವ



ಲಿಂಗಾಯತ ಮುಖ್ಯಮಂತ್ರಿ ಭ್ರಷ್ಟ ಎಂದು ಹೇಳಿ ಸಿದ್ದರಾಮಯ್ಯ ಪೇಚಿಗೆ ಸಿಲುಕಿದರು. ಅದನ್ನು ಸರಿದೂಗಿಸುವ ಯತ್ನ ಸಹ ಮಾಡಿದರು. ಭ್ರಷ್ಟಾಚಾರ ಕಾಂಗ್ರೆಸ್‌ನ ಅವಿಭಾಜ್ಯ ಅಂಗ. ಕಾಂಗ್ರೆಸ್ ನಾಯಕರ ವಿರುದ್ಧ ಹಲವಾರು ಭ್ರಷ್ಟಾಚಾರ ಪ್ರಕರಣಗಳಿವೆ, ಹಲವು ನಾಯಕರು ಜೈಲಿಗೆ ಹೋಗಿದ್ದಾರೆ. ಅವರು ನನ್ನ ಮೇಲೆ ಭ್ರಷ್ಟಾಚಾರದ ಆರೋಪ ಮಾಡುವುದು ಹಾಸ್ಯಾಸ್ಪದ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ವರಿಷ್ಠ ದೇವೇಗೌಡ ತಮ್ಮ ಇಷ್ಟದಂತೆಯೇ ತುಮಕೂರಿನಿಂದ ಸ್ಪರ್ಧಿಸಿದ್ದರು. ಅದಕ್ಕೆ ಕಾಂಗ್ರೆಸ್ ಒಪ್ಪಿಗೆ ನೀಡಿತ್ತು. ಅವರನ್ನು ಯಾರೂ ಬಲವಂತದಿಂದ ಕರೆತಂದು ಬಲಿಪಶು ಮಾಡಿಲ್ಲ.

ಡಾ.ಜಿ.ಪರಮೇಶ್ವರ, ಕಾಂಗ್ರೆಸ್ ಅಭ್ಯರ್ಥಿ, ಕೊರಟಗೆರೆ

ಕ್ಷೇತ್ರದ ಕೂಗು

- **ಕ್ಷೇತ್ರ: ಗದಗ**
- **ಶಾಸಕ: ಎಚ್.ಕೆ.ಪಾಟೀಲ** (ಕಾಂಗ್ರೆಸ್)

▸ 24/7 ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳದ ಕಾರಣ ಕುಡಿಯುವ ನೀರಿಗೆ ತೊಂದರೆಯಿದೆ. ಕನಿಷ್ಠ ಮೂರು ದಿನಗಳಿಗೊಮ್ಮೆ ನೀರು ಪೂರೈಸಬೇಕು ಎಂಬುದು ಜನರ ಆಗ್ರಹ. ಕೈಗಾರಿಕೆಗಳನ್ನು ಸ್ಥಾಪಿಸಿ, ಯುವಕರಿಗೆ ಸ್ಥಳೀಯವಾಗಿಯೇ ಉದ್ಯೋಗ ಸೃಷ್ಟಿಸಬೇಕಿದೆ.

- **ಕ್ಷೇತ್ರ: ನರಗುಂದ:**
- **ಶಾಸಕ: ಸಿ.ಸಿ.ಪಾಟೀಲ** (ಬಿಜೆಪಿ)

▸ ಕಳಸಾ–ಬಂಡೂರಿ ಯೋಜನೆ ಕಾಮಗಾರಿ ಶೀಘ್ರ ಚಾಲನೆ ದೊರೆತು, ಯೋಜನೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂಬುದು ಈ ಭಾಗದ ರೈತರ ಆಗ್ರಹ. ಪ್ರತಿವರ್ಷ ಅತಿವೃಷ್ಟಿಯಿಂದ ಬಾಧಿತಗೊಳ್ಳುವ ಹಳ್ಳಿ ಜನರಿಗೆ ಶಾಶ್ವತ ಪರಿಹಾರ ಒದಗಿಸಬೇಕಿದೆ.

- **ಕ್ಷೇತ್ರ: ರೋಣ:**
- **ಶಾಸಕ: ಕಳಕಪ್ಪ ಜಿ.ಬಂಡಿ** (ಬಿಜೆಪಿ)



▸ ರೋಣ, ಗಜೇಂದ್ರಗಡ, ನರೇಗಲ್ ಪಟ್ಟಣದ ಜನತೆಯ ಕುಡಿಯುವ ನೀರಿನ ಬವಣೆ ನೀಗಿಸಬೇಕಿದೆ. ಸ್ಥಳೀಯವಾಗಿ ಉದ್ಯೋಗವಕಾಶ ಸೃಷ್ಟಿಸಬೇಕು. ಕ್ಷೇತ್ರದಲ್ಲಿರುವ ದೊಡ್ಡ ಕೆರೆಗಳ ಹೂಳೆತ್ತಿಸಿ, ನೀರು ತುಂಬಿಸಬೇಕು. ಗಜೇಂದ್ರಗಡ ನೂತನ ತಾಲ್ಲೂಕಿಗೆ ಈವರೆಗೂ ಪೂರ್ಣ ಪ್ರಮಾಣದ ಕಚೇರಿಗಳು ಹಾಗೂ ಮಿನಿ ವಿಧಾನಸೌಧ ನಿರ್ಮಾಣವಾಗಿಲ್ಲ. ತಾಲ್ಲೂಕಿನ ಅಭಿವೃದ್ಧಿಗೆ ಕ್ರಮವಹಿಸಬೇಕಿದೆ.

- **ಕ್ಷೇತ್ರ: ಶಿರಹಟ್ಟಿ:**
- **ಶಾಸಕ: ರಾಮಣ್ಣ ಲಮಾಣಿ** (ಬಿಜೆಪಿ)

▸ ಶಿಂಗಾಟಲೂರು ಏತ ನೀರಾವರಿ ಯೋಜನೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳಬೇಕು. ಜಾಲವಾಡಗಿ, ಸಾಸಲವಾಡ ನೀರಾವರಿ ಯೋಜನೆ ಶೀಘ್ರ ಮುಗಿಸಿ, ರೈತರ ಜಮೀನಿಗೆ ನೀರು ಕೊಡಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಕ್ರಮವಹಿಸಬೇಕು. ಮುಳಗಡೆ ಆಗಿರುವ ಗ್ರಾಮಗಳನ್ನು ಸ್ಥಳಾಂತರಿಸಿ, ಮೂಲಸೌಲಭ್ಯ ಕಲ್ಪಿಸಬೇಕು. ಕಪ್ಪತಗುಡ್ಡದಲ್ಲಿ ಆಯುರ್ವೇದ ವಿವಿ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತುನೀಡಬೇಕು.

ತಂತ್ರಜ್ಞಾನ



ಮರುಪಯೋಗಿ ಉಡಾವಣಾ ವಾಹನದ ಮಾದರಿಯನ್ನು ವಾಯುಪಡೆಯ ಹೆಲಿಕಾಪ್ಟರ್ ಕೊಂಡೊಯ್ದ ಚಿತ್ರ

ಮತ್ತೆ ಮತ್ತೆ ಬಳಸಬಹುದಾದ ರಾಕೆಟ್‌ಗಳು

ಬಿ. ಆರ್. ಗುರುಪ್ರಸಾದ್

ಮಾನವನ ಶತ ಶತಮಾನದ ಕನಸಾದ ಅಂತರಿಕ್ಷಯಾನವನ್ನು ಸಾಧ್ಯಮಾಡಿದ ತಾಂತ್ರಿಕ ಸಾಧನವೇ ರಾಕೆಟ್. ಕೃತಕ ಭೂ ಉಪಗ್ರಹಗಳನ್ನು, ರೋಬಾಟ್ ಅಂತರಿಕ್ಷನೌಕೆಗಳನ್ನು ಹಾಗೂ ಮಾನವರಿರುವ ಅಂತರಿಕ್ಷನೌಕೆಗಳನ್ನು ಭೂಕಕ್ಷೆಗೆ ಅಥವಾ ಇತರ ಆಕಾಶಕಾಯಗಳತ್ತ ಈ ಮೊದಲು ಉಡಾಯಿಸಿರುವುದು ಹಾಗೂ ಇಂದಿಗೂ ಉಡಾಯಿಸುತ್ತಿರುವುದು ರಾಕೆಟ್ ವಾಹನಗಳೇ.

ಆದರೆ ಇತ್ತೀಚಿನ ವರ್ಷಗಳವರೆಗೂ ಉಪಗ್ರಹಗಳನ್ನು ಹಾಗೂ ಅಂತರಿಕ್ಷನೌಕೆಗಳನ್ನು ಉಡಾಯಿಸುವ ರಾಕೆಟ್ಟುಗಳು ಸಂಕೀರ್ಣವಾದ ಸಾಧನಗಳಾಗಿರುವುದರೊಂದಿಗೇ ಅವುಗಳನ್ನು ಒಮ್ಮೆ ಮಾತ್ರ ಯಾನಕ್ಕೆ ಬಳಸಬಹುದಾಗಿತ್ತು. ಯಾನದ ನಡುವೆ ತಮ್ಮ ಕೆಲಸ ಮುಗಿದ ರಾಕೆಟ್ ಹಂತಗಳು ವಾಹನದ ಇತರ ಭಾಗಗಳಿಂದ ಕಳಚಿಬಿದ್ದು ಭೂಮಿಯನ್ನು ತಲುಪುವುದಕ್ಕೆ ಮೊದಲೇ ಬಹುಮಟ್ಟಿಗೆ ಉರಿದು ಬೂದಿಯಾಗುತ್ತಿದ್ದವು. ತಾನು ಹೊತ್ತ ಉಪಗ್ರಹ ಇಲ್ಲವೇ ಅಂತರಿಕ್ಷನೌಕೆಯನ್ನು ಕಕ್ಷೆಗೆ ಕೊಂಡೊಯ್ದ ನಂತರ ಉಡಾವಣಾ (ರಾಕೆಟ್) ವಾಹನದ ಕೊನೆಯ ಹಂತದ ಕೆಲಸವೂ ಮುಗಿದು ಅದೂ ಸಹ ನಂತರ ಮತ್ತೆ ಪ್ರಯೋಜನಕ್ಕೆ ಬರುತ್ತಿರಲಿಲ್ಲ. ಇದಕ್ಕೆ ಬದಲಾಗಿ ಅದು 'ಅಂತರಿಕ್ಷ ಕಸ'ವಾಗಿ ಭೂಮಿಯನ್ನು ಸುತ್ತುತ್ತಿತ್ತಷ್ಟೆ. ಈ ಕಾರಣದಿಂದಾಗಿ ರಾಕೆಟ್‌ಗಳ ನಿರ್ಮಾಣ ಅತ್ಯಂತ ದುಬಾರಿಯಾಗಿದ್ದು ವಿವಿಧ ಬಗೆಯ ಅಂತರಿಕ್ಷ ಕಾರ್ಯಕ್ರಮಗಳನ್ನು ಬಹುಮಟ್ಟಿಗೆ ಸರ್ಕಾರಗಳು ಮಾತ್ರ ನಡೆಸುತ್ತಿದ್ದವು.

1957ರಲ್ಲಿ ಅಂತರಿಕ್ಷಯುಗ ಆರಂಭವಾದ ಸುಮಾರು ಎರಡು ದಶಕಗಳ ಕಾಲ ಬಹುಮಟ್ಟಿಗೆ ಯಾರೂ ಮರುಪಯೋಗಕ್ಕೆ ಬರುವ ರಾಕೆಟ್‌ಗಳ ಬಗ್ಗೆ ಹೆಚ್ಚು ಪ್ರಾಮುಖ್ಯವನ್ನು ನೀಡಲಿಲ್ಲ. ಏಕೆಂದರೆ ಆ ತಂತ್ರಜ್ಞಾನ ಅಷ್ಟು ಸಂಕೀರ್ಣವಾದುದು. ಜೊತೆಗೇ ಅಂತರಿಕ್ಷಕ್ಕೆ ತೆರಳುವುದು ಮತ್ತು ಅಲ್ಲಿಂದ ಸುರಕ್ಷಿತವಾಗಿ ಹಿಂತಿರುಗಿ ಬರುವುದು ಮಾತ್ರ ಅಂದಿನ ಗುರಿಯಾಗಿದ್ದು ಅದರ ಬಗ್ಗೆ ಮಾತ್ರ ವಿಜ್ಞಾನಿ ಹಾಗೂ ಎಂಜಿನಿಯರ್‌ಗಳು ಹೆಚ್ಚಿನ ಗಮನ ಹರಿಸಿದ್ದರು.
ಈ ಪರಿಸ್ಥಿತಿಯಲ್ಲಿ ಅಮೆರಿಕ 1980ರ ದಶಕದ ಆದಿಯಲ್ಲಿ ತನ್ನ 'ಅಂತರಿಕ್ಷ ಶಟಲ್' ಎಂಬ ರಾಕೆಟ್ ವಾಹನವನ್ನು ಯಾನಕ್ಕೆ ಸಿದ್ಧಗೊಳಿಸಿತು. ಆ ಶಟಲ್ ಮರುಪಯೋಗಿ ಯಾಗಿದ್ದು ಅಂತರಿಕ್ಷಕ್ಕೆ ತೆರಳಲು ಅಗತ್ಯವಾಗುವ ವೆಚ್ಚವನ್ನು ಗಮನಾರ್ಹವಾಗಿ ತಗ್ಗಿಸುತ್ತದೆ ಎಂದು ಬಿಂಬಿಸಲಾಯಿತು. ಮೂರು ದಶಕಗಳ ಅದರ ಅಸ್ತಿತ್ವದ ಅವಧಿಯಲ್ಲಿ ಶಟಲ್ ಅಂತರಿಕ್ಷಯಾನಕ್ಕೆ ಸಂಬಂಧಿಸಿದಂತೆ ಗಮನಾರ್ಹವಾದ ಬೆಳವಣಿಗೆಯನ್ನು ತಂದರೂ ಅಂತರಿಕ್ಷಯಾನಕ್ಕೆ ತಗಲುವ ವೆಚ್ಚವನ್ನು ತಗ್ಗಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಬದಲಾಗಿ ಆ ವಾಹನವನ್ನು ಯಾನಕ್ಕೆ ಸಿದ್ಧಗೊಳಿಸಿ ಉಡಾಯಿಸಿ ನಿರ್ವಹಿಸುವುದೇ ತಾಂತ್ರಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಅಮೆರಿಕಕ್ಕೆ ಬಹಳ ಕಷ್ಟಕರವಾಗಿ ಪರಿಣಮಿಸಿತು.

ಹೀಗಾಗಿ ಅಂತರಿಕ್ಷ ಶಟಲ್‌ನ ಕಾರ್ಯಕ್ರಮವನ್ನು 2011ರಲ್ಲಿ ಅಮೆರಿಕ ಅಂತ್ಯಗೊಳಿಸಿತು. ಆದರೆ 21ನೇ ಶತಮಾನದ ಎರಡನೇ ದಶಕದಿಂದ ಪರಿಸ್ಥಿತಿ ಬದಲಾಗಲಾರಂಭಿಸಿತು. ಅಮೆರಿಕದ ಖಾಸಗಿ ಸಂಸ್ಥೆ 'ಸ್ಪೇಸ್ ಎಕ್ಸ್' ಭಾಗಶಃ ಮರುಪಯೋಗಕ್ಕೆ ಬರುವ 'ಫಾಲ್ಕನ್ 9' ಮತ್ತು 'ಫಾಲ್ಕನ್ ಹೆವಿ' ಉಡಾವಣಾ ವಾಹನಗಳನ್ನು ಯಶಸ್ವಿಯಾಗಿ ನಿರ್ಮಿಸಿ ಉಪಗ್ರಹಗಳ ಉಡಾವಣೆಗೆ ಅದನ್ನು ಕ್ರಮಬದ್ಧವಾಗಿ ಬಳಸಿಕೊಳ್ಳಲಾರಂಭಿಸಿತು. ಆ ಸಂಸ್ಥೆಯ ಹಾಗೂ 'ಟಸ್ಲಾ' ಸಂಸ್ಥೆಯ (ನಂತರ 'ಟ್ವಿಟರ್' ಸಂಸ್ಥೆಯ) ಒಡೆಯರಾದ ಇಲಾನ್ ಮಸ್ಕ್‌ರ ಛಲಬಿಡದ ತ್ರಿವಿಕ್ರಮನಂತಹ ನಡೆಯಿಂದ ಉಪಗ್ರಹ ಹಾಗೂ ಮಾನವರನ್ನು ಹೊತ್ತ ಅಂತರಿಕ್ಷ ನೌಕೆಗಳ ಉಡಾವಣಾ ವೆಚ್ಚ ಸಾಕಷ್ಟು ತಗ್ಗಿತು. ತಮ್ಮ ಕೆಲಸ ಮುಗಿದ ನಂತರ 'ಫಾಲ್ಕನ್ 9' ರಾಕೆಟ್‌ನ ಇತರ ಭಾಗಗಳಿಂದ ಬೇರ್ಪಡುವ ಅದರ ಮೊದಲ ಹಂತ ನಿಧಾನವಾಗಿ ಭೂಮಿಗೆ ಬಂದಿಳಿಯುವ ದೃಶ್ಯ ಅದ್ಭುತವಾಗಿರುತ್ತದೆ.

ಭಾರತದ ಪ್ರಯತ್ನ 'ಇಸ್ರೊ' ತಾನೂ 'ಮರುಪಯೋಗಿ ಉಡಾವಣಾ ವಾಹನ' ('ರೀ ಯೂಸಬಲ್ ಲಾಂಚ್ ವೆಹಿಕಲ್')ವನ್ನು ನಿರ್ಮಿಸುವ ಯೋಜನೆಯನ್ನು ಸುಮಾರು ಒಂದೂವರೆ ದಶಕದ ಹಿಂದೆಯೇ ಹಾಕಿಕೊಂಡಿತು. ಈ ನಿಟ್ಟಿನಲ್ಲಿ ಆ ವಾಹನದ ವಿನ್ಯಾಸ ಸಮರ್ಪಕವಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಹಾಗೂ ಅಭಿವೃದ್ಧಿಪಡಿಸುತ್ತಿರುವ ತಂತ್ರಜ್ಞಾನಗಳನ್ನು ಪರೀಕ್ಷಿಸಲು, ಅದಕ್ಕಿಂತ ಚಿಕ್ಕದಾದ ಅಂತಹ ಒಂದು 'ತಂತ್ರಜ್ಞಾನ ಪ್ರದರ್ಶಕ(ವಾಹನ)'ವನ್ನು ನಿರ್ಮಿಸಿತು. ಇದನ್ನು ಇಂಗ್ಲಿಷಿನಲ್ಲಿ 'ಆರ್ ಎಲ್ ವಿ-ಟಿ ಡಿ' ಎಂದು ಸಂಕ್ಷಿಪ್ತವಾಗಿ ಕರೆಯಲಾಗುತ್ತದೆ.
ಈ ತಂತ್ರಜ್ಞಾನ ಪ್ರದರ್ಶಕದ ಮೊದಲ ಪರೀಕ್ಷಾರ್ಥ ಉಡಾವಣೆ 2016ರ ಮೇ 23ರಂದು ಜರುಗಿತು. ಅದರ ಅಂಗವಾಗಿ ಆ ವಾಹನವನ್ನು ಘನ ನೋದನಕಾರಿಗಳನ್ನು (ಪ್ರೊಪೆಲೆಂಟ್ಸ್) ಉರಿಸುವ ಒಂದು ಪುಟ್ಟ ರಾಕೆಟ್‌ನ ಮೇಲೆ ಅಳವಡಿಸಿ ಅದನ್ನು ಅಂತರಿಕ್ಷಕ್ಕೆ ಉಡಾಯಿಸಲಾಯಿತು. ಅಂತರಿಕ್ಷದಲ್ಲಿ ಕೆಲಕಾಲ ವಿಹರಿಸಿದ ಆ ಪುಟ್ಟ ವಾಹನ ನಂತರ ತನ್ನ ಕಂಪ್ಯೂಟರ್ ಮೆದುಳಿನ ನೆರವಿನಿಂದ ಭೂವಾತಾವರಣವನ್ನು ಪುನಃ ಶರವೇಗದಲ್ಲಿ ಪ್ರವೇಶಿಸಿ, ಅದರೊಳಗಿನ ಯಾನವನ್ನು ಯಶಸ್ವಿಯಾಗಿ ಮುಗಿಸಿ ಬಂಗಾಳಕೊಲ್ಲಿಯ ಮೇಲೆ ಬಂದು ಜಲಸ್ಪರ್ಶಮಾಡಿತು.

> ರಾಕೆಟ್‌ಗಳನ್ನು ಮರುಬಳಕೆ ಮಾಡುವಂಥ ದಾರಿಯಲ್ಲಿ ಇಸ್ರೊ ಯಶಸ್ಸಿನ ಹೆಜ್ಜೆ ಇಟ್ಟಿದೆ.

ಆ ಯಶಸ್ಸಿನ ಸುಮಾರು ಏಳು ವರ್ಷಗಳ ನಂತರ ಈ ಏಪ್ರಿಲ್ 2ರಂದು 1600 ಕಿಲೋಗ್ರಾಂ ತೂಕದ ಅಂತಹ ಮತ್ತೊಂದು 'ತಂತ್ರಜ್ಞಾನ ಪ್ರದರ್ಶಕ ವಾಹನ'ವು ತನ್ನನ್ನು ಸುಮಾರು ನಾಲ್ಕೂವರೆ ಕಿಲೋಮೀಟರ್ ಎತ್ತರಕ್ಕೆ ಕೊಂಡೊಯ್ದ ಹೆಲಿಕಾಪ್ಟರ್‌ನಿಂದ ಬೇರ್ಪಟ್ಟು ಆ ನಂತರ ಶರವೇಗದಲ್ಲಿ ಹಾರುತ್ತಾ ಹತ್ತಿರದ ಚಳ್ಳಕೆರೆಯ ವಿಮಾನ ನೆಲೆಯಲ್ಲಿನ ಓಡುದಾರಿಯ ಮೇಲೆ ನಿಖರವಾಗಿ ಬಂದಿಳಿದಿದೆ. ಸುಮಾರು 30 ನಿಮಿಷಗಳ ಅವಧಿಯ ಈ ಪರೀಕ್ಷೆಯೊಂದಿಗೆ ಆ ವಾಹನದ ಮತ್ತೊಂದು ಸಾಮರ್ಥ್ಯ ಸಾಬೀತಾಗಿದೆ. ಹೀಗೆ ಸ್ವದೇಶದಲ್ಲಿ ಅಭಿವೃದ್ಧಿಪಡಿಸಲ್ಪಟ್ಟ ಅಗತ್ಯವಾದ ಅನೇಕ ತಂತ್ರಜ್ಞಾನಗಳನ್ನು ಪುಟ್ಟ 'ತಂತ್ರಜ್ಞಾನ ಪ್ರದರ್ಶಕ ವಾಹನ'ಗಳ ನೆರವಿನೊಡನೆ ಪರೀಕ್ಷಿಸಿದ ನಂತರ ಅದಕ್ಕಿಂತ ದೊಡ್ಡದಾದ 'ಮರುಪಯೋಗಿ ಉಡಾವಣಾ ವಾಹನ'ದ ನಿರ್ಮಾಣ ಪ್ರಾರಂಭವಾಗಲಿದೆ. ❖

ಪ್ಯಾರಾಚ್ಯೂಟ್‌ನ ನೆರವಿನೊಡನೆ ವೇಗ ತಗ್ಗಿಸಿಕೊಂಡ ಮರುಪಯೋಗಿ ಉಡಾವಣಾ ವಾಹನದ ಮಾದರಿ — ಚಿತ್ರಗಳ ಕೃಪೆ: ಇಸ್ರೊ

ಜೇಡನ ನೂಲಿನ ಬಟ್ಟೆ!

ಅಮೃತೇಶ್ವರಿ ಬಿ.



ಜೇಡವು ತನ್ನ ದೇಹದಲ್ಲಿ ಒಂದು ರೀತಿಯ ಪ್ರೊಟೀನನ್ನು ಉತ್ಪಾದಿಸಿಕೊಂಡು ರೇಷ್ಮೆಎಳೆಯಂತಹ ನೂಲನ್ನು ಎಣೆದು, ಬಲೆಯನ್ನು ತಯಾರಿಸಿಕೊಳ್ಳುತ್ತದೆ. ಅದನ್ನು ತನ್ನ ಮೊಟ್ಟೆ-ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯನ್ನು ಹಿಡಿಯಲು ಹೀಗೆ ತನ್ನ ವಿವಿಧ ಅವಶ್ಯಕತೆಗಳಿಗೆ ಬಳಸಿಕೊಳ್ಳುತ್ತದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತು. ಆದರೆ ಪ್ರೊಟೀನು ಸಕ್ಕರೆ ಅಂಶಗಳಿಂದ ತಯಾರಾಗಿರುವ ಇದರ ಸದೃಢತೆ ಮತ್ತು ಬಲ ಉಕ್ಕಿಗೂ ಉತ್ತಮವಂತೆ. ಹರಿದರೂ ಹರಿಯದಂತೆ. ಇದು ವಿಜ್ಞಾನಿಗಳ ಕುತೂಹಲವನ್ನು ಕೆರಳಿಸಿತ್ತು. ಇದನ್ನು ಅಧ್ಯಯನ ಮಾಡಿ, ಅಷ್ಟೇ ಸದೃಢವಾದ ನೂಲನ್ನು ನಾವು ತಯಾರಿಸಬಹುದೇ ಎಂದು ವಾಷಿಂಗ್ಟನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಹಾಗೂ ಸಂಶೋಧಕರಾದ ಫ್ಯುಜಾಂಗ್ ಜಾಂಗ್ ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಹಾಗೆ ತಯಾರಿಸಿದ ನೂಲನ್ನು ಹತ್ತಿ, ಉಣ್ಣೆಯಂತೆ ಬಟ್ಟೆ ಉದ್ಯಮದಲ್ಲಿ ಬಳಸಿಕೊಳ್ಳಬಹುದೇ ಎಂದು ಪರೀಕ್ಷಿಸುವುದು ಇವರ ಉದ್ದೇಶವಾಗಿತ್ತು.

ಮೊದಲಿಗೆ ಜಾಂಗ್ ಬ್ಯಾಕ್ಟೀರಿಯಾವನ್ನು ಬಳಸಿಕೊಂಡು ನೂಲನ್ನು ತಯಾರಿಸಿ ಅದರ ಸದೃಢತೆಯನ್ನೂ ವರ್ಧಿಸಲು ಪ್ರಯತ್ನಿಸಿದ್ದಾರೆ. ಜೇಡನಂತೆ ನಾವೂ ಅದೇ ಪ್ರೊಟೀನು ಸಕ್ಕರೆ ಅಮೈನೋ-ಆಮ್ಲಗಳನ್ನು ಸೇರಿಸಿ ನೂಲನ್ನು ಎಣೆಯುವುದರಲ್ಲಿಯಂತು ವಿಜಯ ಸಾಧಿಸಿದ್ದಾರೆ. ಆದರೆ ಅದರ ಇಳುವರಿ ಹಾಗೂ ದೃಢತೆ ಅವರು ಆಶಿಸಿದಂತೆ ಇರಲಿಲ್ಲ. ಪ್ರತಿ ವರ್ಷವೂ ಸುಮಾರು ಒಂದು ಸಾವಿರ ಕೋಟಿ ಉಡುಪುಗಳನ್ನು ನಾವು ಉತ್ಪಾದಿಸುತ್ತಿರುವ ನಾವು ಸುಮಾರು ಹತ್ತು ಕೋಟಿ ತ್ಯಾಜ್ಯವನ್ನೂ ಪರಿಸರಕ್ಕೆ ನೀಡುತ್ತಿದ್ದೇವೆ. ಇಂತೆಡೆಗಳಲ್ಲಿ ನವೀಕರಿಸಬಹುದಾದ ಹಾಗೂ ಪರಿಸರಕ್ಕೆ ಹಾನಿಕಾರಕವಲ್ಲದ ಸಾವಯವ ಕಚ್ಚಾವಸ್ತುಗಳಿಗೆ ಬೇಡಿಕೆ ಹೆಚ್ಚು. ಹಾಗಾಗಿ ಬಟ್ಟೆ ಉದ್ಯಮದಲ್ಲಿ ಈ ಸಾವಯವ ನೂಲನ್ನು ಬಳಸಿಕೊಳ್ಳಬೇಕೆಂದರೆ ಉತ್ತಮ ಇಳುವರಿ ಅತ್ಯವಶ್ಯಕ. ಇದಕ್ಕಾಗಿ ನಿರಂತರವಾಗಿ ಶ್ರಮಿಸಿದ ಜಾಂಗ್ ಹೊಸ ತಂತ್ರವೊಂದನ್ನು ಪತ್ತೆ ಮಾಡಿದ್ದಾರೆ. ಅದುವೇ ಕೃತಕವಾಗಿ ತಯಾರಿಸಿಕೊಂಡಿರುವ ನೂಲಿಗೆ ಬ್ಯಾಕ್ಟೀರಿಯಾದಿಂದ ಉತ್ಪಾದಿಸಿದ ಪ್ರೊಟೀನನ್ನು ಕೂಡಿಸುವುದು.

ನೈಸರ್ಗಿಕ ಪ್ರೊಟೀನುಗಳು ಅಷ್ಟು ಬಲವಾಗಿರಲು ಕಾರಣ ಪ್ರೊಟೀನುಗಳ ಉದ್ದನೆಯ ಪುನರಾವರ್ತಿತ ಸಂಯೋಜನೆ. ಇದೇ ರೀತಿಯ ಪುನರಾವರ್ತಿತ ಸಂಯೋಜನೆಯನ್ನು ನಾವು ಬಳಸುವ ಬ್ಯಾಕ್ಟೀರಿಯಾಗಳಿಂದ ನಿರೀಕ್ಷಿಸಲಾಗುವುದಿಲ್ಲ ಎನ್ನುತ್ತಾರೆ, ಜಾಂಗ್. ಹಾಗಾಗಿಯೇ ಪ್ರೊಟೀನಿನ ಪುನರಾವರ್ತಿತ ಜೋಡಣೆಯಲ್ಲದೇ ಬೇರೆ ವಿಧಾನವಿದೆಯೇ ಎಂದು ನೋಡಿದ್ದಾರೆ. ಪ್ರೊಟೀನು ಸರಣಿಯ ಕ್ರಮವನ್ನು ವ್ಯತ್ಯಾಸ ಮಾಡಿ ನೂಲಿನ ಎಳೆಯೊಡನೆ ಕೂಡಿಸಿದಾಗ ಗಟ್ಟಿಯಾದ ಎಳೆಗಳು ತಯಾರಾದುವೇ ಎಂದು ಪರೀಕ್ಷಿಸಿದ್ದಾರೆ. ಅದಕ್ಕೆ ಇವರು ಬಳಸಿರುವುದು ಮಸೆಲ್ ಫೂಟ್ ಪ್ರೊಟೀನು.

ನೀರಿನ ಆಳದಲ್ಲಿ ಇರುವ ಮಸೆಲ್ ಎನ್ನುವ ಮೃದ್ವಂಗಿಗಳು ಕಲ್ಲುಬಂಡೆಗಳಿಗೆ ಅಂಟಿಕೊಂಡಿರಲು ತಮ್ಮ ಕಾಲುಗಳಲ್ಲಿ ಒಂದು ಬಗೆಯ ಪ್ರೊಟೀನನ್ನು ಸ್ರವಿಸುತ್ತವೆ. ಈ ಪ್ರೊಟೀನು ಬಲವಾಗಿ ಬೆಸೆದುಕೊಳ್ಳಬಲ್ಲದು. ಇದನ್ನು ಅನುಸರಿಸಿದ ಜಾಂಗ್ ಮತ್ತು ಸಂಗಡಿಗರು ತಮ್ಮ ಪ್ರಯೋಗಾಲಯದಲ್ಲಿ ಬ್ಯಾಕ್ಟೀರಿಯಾವನ್ನು ಬಳಸಿಕೊಂಡು ಇದೇ ರೀತಿಯ ಪ್ರೊಟೀನನ್ನು ಉತ್ಪಾದಿಸಿದ್ದಾರೆ. ಈ ಪ್ರೊಟೀನನ್ನು ಈಗಾಗಲೇ ಕೃತಕವಾಗಿ ತಯಾರಿಸಿರುವ ನೂಲಿನ ಎರಡೂ ಬದಿಗಳಲ್ಲಿ ಪುನರ್ ಸಂಯೋಜಿಸಿದ್ದಾರೆ. ಇದು ಕೇವಲ ಪುನರ್ ಸಂಯೋಜಿತ ಕೃತಕ ನೂಲಿಗಿಂತಲೂ ಎಂಟು ಪಟ್ಟು ಸದೃಢ ಹಾಗೂ ಗಟ್ಟಿ. ಸುಲಭವಾಗಿ ಹರಿಯಲಾಗುವುದೂ ಇಲ್ಲ. ಬಲು ಹಗುರವೂ ಹೌದು ಮತ್ತು ಉಡುಪು ತಯಾರಿಸಲು ಸೂಕ್ತವೂ ಎನ್ನುತ್ತಾರೆ, ಜಾಂಗ್. ಇವರು ಒಂದು ಲೀಟರು ಬ್ಯಾಕ್ಟೀರಿಯಾ ಕಲ್ಚರಿನಿಂದ ಸುಮಾರು ಎಂಟು ಗ್ರಾಂನಷ್ಟು ಪ್ರೊಟೀನು ಇಳುವರಿಯನ್ನು ತೆಗೆದಿದ್ದಾರೆ. ಹಾಗಾಗಿ ಬಟ್ಟೆ ಉತ್ಪಾದನೆಯ ಯಶಸ್ಸನ್ನು ಪರೀಕ್ಷಿಸುವಷ್ಟು ಇಳುವರಿಯನ್ನು ಬ್ಯಾಕ್ಟಿರಿಯಾದಿಂದ ಪಡೆದುಕೊಂಡಿರುವುದು ಜಾಂಗ್ ಅವರ ಮೊದಲ ಸಾಧನೆ. ಜೊತೆಗೆ ಇದೇ ಪ್ರೊಟೀನನ್ನು ಇತರೆ ಬಯೋಮೆಡಿಕಲ್ ಉಪಯೋಗಗಳಿಗಾಗಿ ಅಂಟಿಕೊಳ್ಳುವ ವಸ್ತುಗಳಾಗಿಯೂ ಬಳಸಬಹುದೇ ಎಂದು ನೋಡಿದ್ದಾರೆ.

ಜಾಂಗ್ ತಯಾರಿಸಿರುವ ಕೃತಕ ನೂಲು ಅಗ್ಗವಾದ ಹಾಗೂ ಬೇಕಾದಂತೆ ವಿನ್ಯಾಸ ಮಾಡಿಕೊಂಡಿರುವ ಬ್ಯಾಕ್ಟೀರಿಯಾದ ಸಹಾಯದಿಂದ ಸಿದ್ಧಪಡಿಸಿರುವುದರಿಂದ, ಇದು ಪೆಟ್ರೋಲಿಯಂ ಉತ್ಪನ್ನಗಳಾದ ನೈಲಾನ್ ಮತ್ತು ಪಾಲಿಯೆಸ್ಟರಿನಂತಹ ನೂಲುಗಳಿಗೆ ಉತ್ತಮ ಪರ್ಯಾಯವಾಗಬಹುದು ಎನ್ನುವುದು ಸಂತಸದ ವಿಷಯ. ಇದು ನವೀಕರಿಸಬಹುದಾದ ಹಾಗೂ ಸುಲಭವಾಗಿ ವಿಘಟನೆಯೂ ಆಗಬಲ್ಲಂತಹ ನೂಲಾಗಿರುವುದರಿಂದ ಇದಕ್ಕೆ ಬೇಡಿಕೆ ಹೆಚ್ಚು. ಕೃತಕ ಜೀವವಿಜ್ಞಾನದಲ್ಲಿ ಇಂತಹ ಪ್ರೊಟೀನುಗಳ ಸರಣಿಯನ್ನು ಬೇಕಾದ ಹಾಗೆ ವಿನ್ಯಾಸ ಮಾಡಿಕೊಳ್ಳುವ ಅವಕಾಶಗಳಿರುವುದರಿಂದ ನಿಸರ್ಗವನ್ನೇ ಅನುಸರಿಸಿಕೊಂಡು ಅವಶ್ಯಕತೆಗೆ ತಕ್ಕಂತಹ ವಸ್ತುಗಳನ್ನು ಸೃಷ್ಟಿಸಿಕೊಳ್ಳಬಹುದು. ಹೀಗೆ ತಯಾರಾದ ವಸ್ತುಗಳು ಪೆಟ್ರೋಲಿಯಂ ಉತ್ಪನ್ನಗಳಿಂದ ತಯಾರಿಸಿದ ವಸ್ತುಗಳಿಗಿಂತಲೂ ಬಹುಮುಖವಾದವು ಎನ್ನುತ್ತಾರೆ, ಜಾಂಗ್. ಮತ್ತು ಮುಂದಿನ ದಿನಗಳಲ್ಲಿ ಉತ್ಪನ್ನ ಹಾಗೂ ಮಾರುಕಟ್ಟೆಗೆ ಸೂಕ್ತವಾದಂತೆ ಬದಲಾವಣೆಗಳನ್ನು ತರಬಹುದಾದಂತಹ ನೂಲುಗಳನ್ನು ಸಿದ್ಧಪಡಿಸುವತ್ತ ಸಂಶೋಧನೆಯನ್ನು ಮುಂದುವರೆಸುತ್ತಾರಂತೆ.

ಅಂತೂ ಹತ್ತಿ, ಉಣ್ಣೆ ಬಟ್ಟೆಗಳ ಜೊತೆಗೆ ಹೊಸದೊಂದು ಜೈವಿಕ ನೂಲಿನ ಬಟ್ಟೆಯೊಂದು ತಯಾರಾಗುವ ಕಾಲ ಸನ್ನಿಹಿತವಾಯಿತು. ಬಟ್ಟೆ ಉದ್ಯಮದಿಂದಾಗುವ ಪರಿಸರ ಹಾನಿಯನ್ನು ತಪ್ಪಿಸುವ ಹೊಸ ಮಾರ್ಗವೊಂದು ಪತ್ತೆಯಾಯಿತೆನ್ನಿ. ❖

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

PHYSICS

57) What is a period of revolution of earth satellite? Ignore the height of satellite above the surface of earth.

Given: (1) the value of gravitational acceleration $g = 10\ m\ s^{-2}$

(2) Radius of earth $R_E = 6400$ km. Take $\pi = 3.14$.

(a) 83.73 minutes (b) 85 minutes
(c) 90 minutes (d) 156 minutes

Soln: (a): period of revolution of earth satellite is

$$T = 2\pi\sqrt{\frac{(R_E+h)^3}{gR_E^2}}$$

Negleting h, then

$$T = 2\pi\sqrt{\frac{R_E}{g}}$$

Substituting the givenvalues, we get

$$T = 2\times 3.14\sqrt{\frac{6400\times10^3}{10}}\ s$$

$$= 5024\ s = \frac{5024}{60}\ \text{minutes}$$

$$= 83.73\ \text{minutes}$$

58) A period of geostationary satellite is

(a) 30 h (b) 24 h
(c) 48 h (d) 12 h

Soln: (b): the period of geostationary satellite is same as that of the period of ration of the earth about its own axis i.e., 24 h.

59) What is the source temperature of the Carnot engine required to get 70% efficiency?

(a) 270^0 C (b) 1000^0 C
(c) 727^0 C (d) 90^0 C

Soln:(c):

Efficiency of the Carnot engine, $\eta = 1 - \frac{T_2}{T_1}$

Where T_1 and T_2 are the temperatures of source and sink respectively.

$$\text{Here, } \eta = 70\% = \frac{70}{100} = 0.7$$

$$T_1 = 27^\circ C = (27+273)\ K = 300\ K$$

$$\therefore 0.7 = 1 - \frac{300}{T_1}$$

$$\frac{300}{T_1} = 1 - 0.7 = 0.3$$

$$T_1 = \frac{300}{0.3}\ K = 1000\ K = (1000-273)^\circ C$$

$$= 727^\circ C$$

60) In Young's Double Slit Experiment, the distance between the slits and the screen is 1.2 m and the distance between the two slits is 2.4 mm. If a thin transparent mica sheet of thickness 1μm and R.I of 1.5 is introduced between one of the interfering beams, the shift in the position of central bright fringe is

a) 0.25 mm b) 2 mm
c) 0.5 mm d) 0.125 mm

Answer: a

Expln:- Path difference due to insertion of mica sheet $\Delta x = (\mu-1)t$

Let the shift in the fringe pattern be 'y'

Also, path difference $\Delta x = y\times d/D$, so comparing both

$(\mu-1)t = y\times(d/D)$

$y = (\mu-1)t\times(D/d)$, where $\mu=1.5$, $D=2.4$ and $d=1.2$

putting the values, we get

y= 0.25 mm.

61) A metallic wire of 1 m length has a mass of 10×10^{-3} kg. If a tension of 100 N is applied to a wire, what is the speed of transverse wave?

(a) 200 m s^{-1} (b) 100 m s^{-1}
(c) 0.1 m s^{-1} (d) 10 m s^{-1}

Soln: (b): Here,

Mass per unit length of the wire,

$$\mu = \frac{10\times10^{-3}\ kg}{1\ m} = 10\times10^{-3}\ kg\ m^{-1}$$

Tension, T = 100 N

The speed of transverse wave on the wire is

$$v = \sqrt{\frac{T}{\mu}} = \sqrt{\frac{100\ N}{10\times10^{-3}\ kg\ m^{-1}}} = 100\ m\ s^{-1}$$

62) A train is approaching towards a platform with a speed of 10 m s^{-1} while blowing a whistle of frequency 340 Hz. what is the frequency of whistle heard by a stationary observe on the platform? Given speed of sound = 340 m s^{-1}.

(a) 340 Hz (b) 330 Hz
(c) 360 Hz (d) 350 Hz

Soln: (d): Here,

Speed of train, $v_T = 10$ m s^{-1}

Speed of sound, v = 340 m s^{-1}

Frequency of whistle, υ = 340 Hz

The frequency of whistle heard by the stationary Observe on the platform is

$$\upsilon' = \upsilon\left(\frac{v}{v-v_T}\right) = 340\left(\frac{340}{340-10}\right)$$

$$= 340\left(\frac{340}{340-10}\right) = 350\ Hz$$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

68. Identify the desirable charecteristics for a plasmid used in rDNA technology from the following **(.....Contd)**

Expl:- a lasmid is a small DNA molecule that is a physically separate form and can replicate independently of chromosomal DNA within a cell. All the statements given in the options are appropriate excepting the one that is has ability to multiply and express outside the host in a bioreactor because plasmid always multiply inside the host using cell machinery.

69. Which compounds were used by Miller in his experiment for obtaining amino acids and other organic substances?

(a) Carbon dioxide, water vapour and methane
(b) Methane, ammonia, water vapour and hydrogen cyanide
(c) Ammonia, methane, hydrogen and water vapour
(d) Ammonia. methane and carbon dioxide.

Ans:C

Expl:- miller in his experiment used methane, ammonia, hydrogen and water vapour in the ratio 2: 1: 2. Electric discharge was then allowed to be created in a closed flask containing these compounds at 800^0C.

The conditions were set similar to those in the primitive atmosphere in the laboratory. After a week he observed the presence of substances like amino acids and other organic substances such as sugar, pigments, nitrogen bases, fats, etc.

70. Which of the following is true for eutrophicated water body?

(a) High mineral content
(b) High oxygen content
(c) Rich species diversity
(d) Low organic content

Ans:a

Expl:- Eutrophication is the natural aging of lake by the biological enrichment of its water. The acceleration of aging process starts due to heavy discharge of pollutants from the industry and home. The prime contaminants are nutrients such as nitrates and phosphates which acts as plant nutrient and over stimulate the growth of algae known as algal bloom

71. IUDs which are used by females

(a) Act as spermicidal jellies
(b) Block the entry of sperms into vagina
(c) Are implanted under the skin and they release progestogen and estrogen
(d) Release copper ions in the uterus that increase phagocytosis of sperms.

Ans:d

Expl:- IUDs are T-shaped intrauterine devices containing either copper or progesterone which are inserted by doctors into the uterus through vagina. They are a form of long reversible contraceptive methods.

They prevent contraception by increasing the phagocytosis of sperms within the uterus thus, making it unsuitable for implantation. They also suppress sperm motility and fertilizing ability, e.g., Cu-T, Cu 7, LNG-20, Mirene, etc.

72. Which of the following hormones are secreted in large quantities during pregnancy in women?

(a) hCG, progesterone, estradiol and FSH
(b) hCG, hPL, progesterone, estrogen and LH
(c) LH, estrogen and estradiol
(d) hCG and hPL

Ans:b

Expl:- During the pregnancy placenta acts as an endocrine tissue and produces several hormones such as hCG (human Chorionic Gonadotropin), hPL (human Placental Lactogen), progestone, oestrogen, LH (Leuteinising Hormone), etc.

In the later phase of pregnancy, a hormone called relaxin is also secreted by the ovary.

73. The kind of coelom represented in the diagram given below is characteristic of



(a) Earthworm (b) cockroach
(c) Roundworm (d) tapeworm

Ans:C

Expl:- The coelom given in the diagram is of an animal roundworm (Ascaris) which belongs to the phylum-Aschelminthes. The body cavity in the diagram is not lined by mesoderm instead; the mesoderm is present in the form of scattered pouches in between the ectoderm and endoderm. Such a body cavity is called pseudocoelom and the animals possessing these cavities are called pseudcoelomates.

'ಮೋದಿ ಭೇಟಿ ಕನಸು- ನನಸು'

ಉಣ್ಣಿ ಮುಕುಂದನ್

ತಿರುವನಂತಪುರ (ಪಿಟಿಐ): ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡುವ ಕನಸನ್ನು ನನಸಾಗಿಸಿಕೊಂಡ ಸಂಭ್ರಮವನ್ನು ಕೇರಳ ನಟ ಉಣ್ಣಿ ಮುಕುಂದನ್ ಅವರು ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. 'ಅತ್ಯಂತ ಹೆಚ್ಚು ರೋಮಾಂಚನಕಾರಿ ಅನುಭವ' ಎಂದು ಬರೆದುಕೊಂಡಿದ್ದಾರೆ.

ಕೇರಳ ಪ್ರವಾಸದಲ್ಲಿರುವ ಮೋದಿ ಅವರನ್ನು ಉಣ್ಣಿ ಸೋಮವಾರ ರಾತ್ರಿ ನಡೆದ 'ಯುವಂ-2023' ಸಮಾರಂಭದಲ್ಲಿ ಭೇಟಿಯಾಗಿದ್ದರು.

'ಧನ್ಯವಾದಗಳು ಸರ್. 14 ವರ್ಷದವನಿದ್ದಾಗ ನಿಮ್ಮನ್ನು ನೋಡಿದ್ದೆ. ಅಂದಿನಿಂದಲೂ ನಿಮ್ಮನ್ನು ಭೇಟಿಯಾಗುವ ಕನಸನ್ನು ಹೊಂದಿದ್ದೆ. ಕಡೆಗೂ ನಿಮ್ಮನ್ನು ಭೇಟಿಯಾದೆ' ಎಂದೂ ಅವರು ಟ್ವೀಟ್ ಮಾಡಿದ್ದಾರೆ. ವೇದಿಕೆಯಲ್ಲಿ ಮೋದಿ ಅವರು ತಮ್ಮನ್ನು ಗುಜರಾತಿ ಭಾಷೆಯಲ್ಲಿ ಸ್ವಾಗತಿಸಿದ್ದನ್ನು ಕೂಡಾ ಅವರು ನೆನೆದಿದ್ದಾರೆ.

ಕೇರಳದ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಗೆ ಪ್ರಧಾನಿ ಮೋದಿ ಹಸಿರು ನಿಶಾನೆ

'ಸಹಕಾರ ಒಕ್ಕೂಟ ವ್ಯವಸ್ಥೆಗೆ ಕೇಂದ್ರ ಒತ್ತು'

ತಿರುವನಂತಪುರ (ಪಿಟಿಐ): 'ಸಹಕಾರ ತತ್ವದಡಿ ಕಾರ್ಯನಿರ್ವಹಿಸುವ ಒಕ್ಕೂಟ ವ್ಯವಸ್ಥೆಗೆ ಕೇಂದ್ರ ಸರ್ಕಾರ ಒತ್ತು ನೀಡುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದರು.

ಅವರು ತಿರುವನಂತಪುರ-ಕಾಸರಗೋಡು ನಡುವೆ ಸಂಪರ್ಕ ಕಲ್ಪಿಸುವ, ಕೇರಳದ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಹಸಿರು ನಿಶಾನೆ ತೋರಿ, ಮಾತನಾಡಿದರು.

ಇಲ್ಲಿನ ಸೆಂಟ್ರಲ್ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ, 'ಕೊಚ್ಚಿ ವಾಟರ್ ಮೆಟ್ರೊ' ಉದ್ಘಾಟಿಸಿದರು. ದಿಂಡಿಗಲ್-ಪಳನಿ-ಪಾಲಕ್ಕಾಡ್ ರೈಲು ಮಾರ್ಗದ ವಿದ್ಯುದೀಕರಣ, ದೇಶದ ಮೊದಲ 'ಡಿಜಿಟಲ್ ಸೈನ್ಸ್ ಪಾರ್ಕ್' ಸೇರಿದಂತೆ ₹3,200 ಕೋಟಿಗೂ ಅಧಿಕ ವೆಚ್ಚದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

'ರಾಜ್ಯಗಳು ಪ್ರಗತಿ ಹೊಂದಿದರೆ, ಅದು ರಾಷ್ಟ್ರದ ಅಭಿವೃದ್ಧಿಗೆ ನೆರವಾಗುತ್ತದೆ ಎಂಬುದು ಕೇಂದ್ರದ ನಂಬಿಕೆ. ಹೀಗಾಗಿ, ಕೇರಳ ಅಭಿವೃದ್ಧಿಯಾದಾಗ ಭಾರತವೂ ವೇಗವಾಗಿ ಅಭಿವೃದ್ಧಿ ಹೊಂದುತ್ತದೆ' ಎಂದು ಹೇಳಿದರು.

ರಾಜ್ಯದಲ್ಲಿ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಪ್ರಸ್ತಾಪಿಸಿದ ಮೋದಿ, '2014ಕ್ಕೂ ಮುಂಚೆ ಹಂಚಿಕೆ ಮಾಡಿದ್ದ ಹಣಕ್ಕೆ ಹೋಲಿಸಿದಾಗ, ಈಗ ಐದು ಪಟ್ಟು ಹೆಚ್ಚು ಅನುದಾನ ಒದಗಿಸಲಾಗಿದೆ' ಎಂದರು.

'ತಿರುವನಂತಪುರದಲ್ಲಿ ತಲೆಯೆತ್ತಲಿರುವ ಡಿಜಿಟಲ್ ವಿಜ್ಞಾನ ಪಾರ್ಕ್‌ನಂತಹ ಯೋಜನೆಗಳು ಡಿಜಿಟಲ್ ಇಂಡಿಯಾ ಯೋಜನೆಗೆ ಉತ್ತೇಜನ ನೀಡಲಿವೆ' ಎಂದು ಹೇಳಿದರು.

ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕಾಂಗ್ರೆಸ್ ಸಂಸದ ಶಶಿ ತರೂರ್ ಇದ್ದರು.

ತಿರುವನಂತಪುರ–ಕಾಸರಗೋಡು ನಡುವೆ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಿರುವನಂತಪುರ ರೈಲು ನಿಲ್ದಾಣದಲ್ಲಿ ಮಂಗಳವಾರ ಹಸಿರು ನಿಶಾನೆ ತೋರಿದರು –ಪಿಟಿಐ ಚಿತ್ರ

> **ದಕ್ಷಿಣ ರಾಜ್ಯಗಳಲ್ಲಿ ರೈಲ್ವೆ ಮೂಲಸೌಕರ್ಯಕ್ಕೆ 2014ಕ್ಕೂ ಮುಂಚೆ ₹370 ಕೋಟಿ ನೀಡಲಾಗಿತ್ತು. ಈ ವರ್ಷ ಹಂಚಿಕೆಯಾದ ಮೊತ್ತ ₹2,033 ಕೋಟಿ**
> **ಅಶ್ವಿನಿ ವೈಷ್ಣವ್,** ಕೇಂದ್ರ ರೈಲ್ವೆ ಸಚಿವ

ರೋಡ್ ಶೋ: ಇದಕ್ಕೂ ಮುನ್ನ, ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಮೋದಿ, ರೋಡ್ ಶೋ ಮೂಲಕ ಸೆಂಟ್ರಲ್ ರೈಲು ನಿಲ್ದಾಣಕ್ಕೆ ತೆರಳಿದರು.

'ಮಂಗಳೂರುವರೆಗೆ ಸಂಚಾರ ವಿಸ್ತರಣೆ'

ತಿರುವನಂತಪುರ (ಪ್ರಜಾವಾಣಿ ವಾರ್ತೆ): ತಿರುವನಂತಪುರ ಹಾಗೂ ಕಾಸರಗೋಡು ನಡುವೆ ಸಂಚರಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯನ್ನು ಬರುವ ದಿನಗಳಲ್ಲಿ ಮಂಗಳೂರುವರೆಗೆ ವಿಸ್ತರಿಸುವ ಸಾಧ್ಯತೆ ಇದೆ.

ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಹಸಿರು ನಿಶಾನೆ ತೋರಿದ ನಂತರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ತಿರುವನಂತಪುರ- ಶೋರ್ನೂರು ನಡುವಿನ ರೈಲು ಮಾರ್ಗ ನಿರ್ಮಾಣ ಕಾಮಗಾರಿ ಸಂಪೂರ್ಣಗೊಂಡ ನಂತರ, ವಂದೇ ಭಾರತ್ ಎಕ್ಸ್‌ಪ್ರೆಸ್ ಸಂಚಾರವನ್ನು ಮಂಗಳೂರುವರೆಗೆ ವಿಸ್ತರಣೆ ಮಾಡಬಹುದಾಗಿದೆ' ಎಂದರು. 'ಕೇರಳದಲ್ಲಿರುವ ಸಿಗ್ನಲ್ ವ್ಯವಸ್ಥೆಗಳಲ್ಲಿ ಸುಧಾರಣೆ ತರುವುದು, ರೈಲು ಮಾರ್ಗಗಳಲ್ಲಿನ ತಿರುವುಗಳನ್ನು ತೆಗೆದು ಹಾಕಿದಾಗ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಓಡಲು ಸಾಧ್ಯವಾಗಲಿದೆ. ಆಗ, ತಿರುವನಂತಪುರ-ಮಂಗಳೂರು ನಡುವಿನ ಪ್ರಯಾಣ ಅವಧಿ ಸದ್ಯದ 8 ಗಂಟೆಯಿಂದ 6 ಗಂಟೆಗೆ ಇಳಿಯಲಿದೆ' ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

'ಕೇರಳದಲ್ಲಿ ಸಾಕಷ್ಟು ತಿರುವುಗಳು ಇರುವ ಕಾರಣ ರೈಲುಗಳು ಗಂಟೆಗೆ ಗರಿಷ್ಠ 90 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿವೆ. ಈ ತಿರುವುಗಳನ್ನು ತೆಗೆದು, ಸಿಗ್ನಲ್ ವ್ಯವಸ್ಥೆಯನ್ನು ಸುಧಾರಿಸಲು ₹ 381 ಕೋಟಿ ಅನುದಾನ ನೀಡಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ರೈಲುಗಳು ಗಂಟೆಗೆ 110 ಕಿ.ಮೀ. ವೇಗದಲ್ಲಿ ಸಂಚರಿಸಲು ಸಾಧ್ಯವಾಗಲಿದೆ. ನಾಲ್ಕು ವರ್ಷಗಳ ನಂತರ, ರೈಲುಗಳ ವೇಗವನ್ನು ಗಂಟೆಗೆ 130 ರಿಂದ 160 ಕಿ.ಮೀ.ಗೆ ಹೆಚ್ಚಿಸಬಹುದಾಗಿದೆ' ಎಂದು ಸಚಿವ ವೈಷ್ಣವ್ ಹೇಳಿದರು.

ಓಡುತ್ತಿರುವ ಚೀತಾ ಲಾಂಛನ

ಭೂಮಿಯ ಮೇಲಿರುವ ಅತಿ ವೇಗವಾಗಿ ಓಡಬಲ್ಲ ಏಕೈಕ ಪ್ರಾಣಿ ಎಂಬ ಹಿರಿಮೆ ಹೊಂದಿರುವ ಚೀತಾವನ್ನು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ನೂತನ ಲಾಂಛನವಾಗಿ ಆಯ್ಕೆ ಮಾಡಲಾಗಿದೆ.

ಚೀತಾವು ಗಂಟೆಗೆ ಗರಿಷ್ಠ 130 ಕಿ.ಮೀ ವೇಗದಲ್ಲಿ ಓಡಬಲ್ಲ ಸಾಮರ್ಥ್ಯ ಹೊಂದಿದೆ. ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ, ಒಟ್ಟು 16 ಕೋಚ್‌ಗಳನ್ನು ಒಳಗೊಂಡಿರುವಂತಹ ವಂದೇ ಭಾರತ್ ಸೆಮಿ ಹೈ ಸ್ಪೀಡ್ ರೈಲು ಗಂಟೆಗೆ 160 ಕಿ.ಮೀ. ವೇಗದಲ್ಲಿ ಚಲಿಸಬಲ್ಲದು. 'ಸದ್ಯ ಇರುವ ಹಾಗೂ ಮುಂದೆ ಚಾಲನೆ ನೀಡಲಾಗುವ ಎಲ್ಲಾ ವಂದೇ ಭಾರತ್ ರೈಲುಗಳ ಮುಂಭಾಗದಲ್ಲಿ ಈ ಲಾಂಛನವನ್ನು ಅಳವಡಿಸಲಾಗುತ್ತದೆ' ಎಂದು ಭಾರತೀಯ ರೈಲ್ವೆಯ ವಕ್ತಾರ ಯೋಗೇಶ್ ಕುಮಾರ್ ಬವೇಜಾ ತಿಳಿಸಿದ್ದಾರೆ.

ವಾಟರ್ ಮೆಟ್ರೊ: 10 ದ್ವೀಪಕ್ಕೆ ಸಂಪರ್ಕ

ತಿರುವನಂತಪುರ: ಕೊಚ್ಚಿಯಲ್ಲಿ ₹1,136 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಕೊಚ್ಚಿ ವಾಟರ್ ಮೆಟ್ರೊ' ಸೇವೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಂಗಳವಾರ ಚಾಲನೆ ನೀಡಿದರು.

ಕೊಚ್ಚಿ ಹಾಗೂ ಸುತ್ತಮುತ್ತ ಇರುವ 10 ದ್ವೀಪಗಳಿಗೆ 78 ಎಲೆಕ್ಟ್ರಿಕಲ್ ದೋಣಿಗಳ ಮೂಲಕ ಸಂಪರ್ಕ ಕಲ್ಪಿಸುವ ವ್ಯವಸ್ಥೆಯೇ 'ಕೊಚ್ಚಿ ವಾಟರ್ ಮೆಟ್ರೊ'. ಇದರ ಮಾರ್ಗದಲ್ಲಿ ಒಟ್ಟು 38 ಟರ್ಮಿನಲ್‌ಗಳನ್ನು ನಿರ್ಮಿಸಲಾಗಿದೆ.

ಕೊಚ್ಚಿ ವಾಟರ್ ಮೆಟ್ರೊ ಯೋಜನೆಯನ್ನು ಕೇರಳ ಸರ್ಕಾರ ಹಾಗೂ ಜರ್ಮನಿ ಮೂಲದ ಕೆಎಫ್‌ಡಬ್ಲ್ಯು ಸಂಸ್ಥೆ ಜಂಟಿಯಾಗಿ ನಿರ್ಮಿಸಿವೆ.

'ಮೊದಲ ಹಂತದಲ್ಲಿ, ಹೈಕೋರ್ಟ್–ವೈಪಿನ್ ಹಾಗೂ ವೈಟಿಲ–ಕಾಕನಾಡ್ ಟರ್ಮಿನಲ್‌ಗಳ ನಡುವೆ 'ವಾಟರ್ ಮೆಟ್ರೊ' ಸೇವೆ ಇರಲಿದೆ ಎಂದು ಮೂಲಗಳು ತಿಳಿಸಿವೆ.

'ವಾಟರ್ ಮೆಟ್ರೊ', ಈಗಾಗಲೇ ಅಸ್ತಿತ್ವದಲ್ಲಿರುವ ಕೊಚ್ಚಿ ಮೆಟ್ರೊದ ವಿಸ್ತರಿತ ಸೇವೆಯಾಗಿದೆ. ಜನರು 'ಕೊಚ್ಚಿ–1' ಕಾರ್ಡ್ ಬಳಸಿ ಮೆಟ್ರೊ ರೈಲು ಮತ್ತು ವಾಟರ್ ಮೆಟ್ರೊದಲ್ಲಿ ಪ್ರಯಾಣ ಮಾಡಬಹುದು' ಎಂದು ಇವೇ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ನಮೋ ವೈದ್ಯಕೀಯ ಕಾಲೇಜು ಉದ್ಘಾಟನೆ

ದಮನ್: ಕೇಂದ್ರಾಡಳಿತ ಪ್ರದೇಶಗಳಾದ ದಾದ್ರಾ ಮತ್ತು ನಗರಹವೇಲಿಯ ಸಿಲ್ವಾಸಾ ನಗರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನಮೋ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯನ್ನು ಉದ್ಘಾಟಿಸಿದರು.

ಕೇಂದ್ರಾಡಳಿತ ಪ್ರದೇಶದ ಮೊದಲ ವೈದ್ಯಕೀಯ ಕಾಲೇಜು ಉದ್ಘಾಟಿಸಿದ ಬಳಿಕ ಮೋದಿ ಅವರು ಸಂಸ್ಥೆಯ ಸೌಲಭ್ಯಗಳನ್ನು ಪರಿಶೀಲಿಸಿದರು. ನಂತರ ಕಾಲೇಜು ಕಟ್ಟಡ ನಿರ್ಮಿಸಿದ ಕಾರ್ಮಿಕರ ಜೊತೆ ಮಾತುಕತೆ ನಡೆಸಿದರು. ಈ ವೈದ್ಯಕೀಯ ಕಾಲೇಜು ಸಂಕೀರ್ಣವನ್ನು ₹203 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಶರ್ಮಿಳಾಗೆ ಜಾಮೀನು

ಹೈದರಾಬಾದ್ (ಪಿಟಿಐ): ಪೊಲೀಸ್ ಸಿಬ್ಬಂದಿ ಜೊತೆ ಅನುಚಿತವಾಗಿ ವರ್ತಿಸಿದ್ದ ಪ್ರಕರಣದಲ್ಲಿ ಬಂಧನ ಕ್ಕೊಳಗಾಗಿದ್ದ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ವೈ.ಎಸ್. ಶರ್ಮಿಳಾ ಅವರಿಗೆ ಸ್ಥಳೀಯ ನ್ಯಾಯಾಲಯವೊಂದು ಮಂಗಳವಾರ ಷರತ್ತುಬದ್ಧ ಜಾಮೀನು ನೀಡಿದೆ.

ಅನುಮತಿ ಪಡೆಯದೇ ಪ್ರತಿಭಟನೆ ನಡೆಸಲು ಶರ್ಮಿಳಾ ಅವರು ಸೋಮವಾರ ಮುಂದಾಗಿದ್ದರು. ಅವರನ್ನು ತಡೆಯಲು ಹೋಗಿದ್ದ ಪೊಲೀಸರನ್ನು ಶರ್ಮಿಳಾ ಥಳಿಸಿದರು ಎಂದು ಪೊಲೀಸ್ ಸಿಬ್ಬಂದಿ ನೀಡಿದ್ದ ದೂರಿನ ಆಧಾರದಲ್ಲಿ ಸೋಮವಾರ ಅವರನ್ನು ಬಂಧಿಸಲಾಗಿತ್ತು. ಅಂದೇ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಮೇ.8 ವರೆಗೆ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸುವಂತೆ ನ್ಯಾಯಾಲಯ ಆದೇಶಿಸಿತ್ತು. ಬಳಿಕ ಅವರನ್ನು ಜೈಲಿನಲ್ಲಿ ಇರಿಸಲಾಗಿತ್ತು.

ಮೊಬೈಲ್ ಸ್ಫೋಟ: ಬಾಲಕಿ ಸಾವು

ತ್ರಿಶ್ಶೂರ್ (ಪಿಟಿಐ): ಮೊಬೈಲ್ ಫೋನ್ ಸ್ಫೋಟಗೊಂಡ ಕಾರಣ 8 ವರ್ಷದ ಬಾಲಕಿ ಸೋಮವಾರ ರಾತ್ರಿ ಮೃತಪಟ್ಟಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

3ನೇ ತರಗತಿ ಓದುತ್ತಿದ್ದ ತಿರುವಿಲ್ವಾಮಲ ನಿವಾಸಿ ಅದಿತ್ಯಶ್ರೀ ಮೃತ ಬಾಲಕಿ. ಈಕೆ ಫೋನ್ ನೋಡುತ್ತಿದ್ದ ವೇಳೆಯಲ್ಲಿ ಸ್ಫೋಟ ಸಂಭವಿಸಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

ಕೇದಾರನಾಥ: ಪ್ರವೇಶ ಮುಕ್ತ

ಕೇದಾರನಾಥ (ಪಿಟಿಐ): ಚಳಿಗಾಲದ ವಿರಾಮದ ನಂತರ ಮಂಗಳವಾರ ಬೆಳಗ್ಗೆ ಕೇದಾರನಾಥ ದೇಗುಲದ ಬಾಗಿಲು ತೆರೆಯಲಾಯಿತು. ಪೂಜೆ ಸಲ್ಲಿಸಿ ಮಾತನಾಡಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು, 'ಕೇದಾರಿಪುರಿ ನಿರ್ಮಾಣದ ನೇತೃತ್ವ ವಹಿಸಿದ್ದ ಪ್ರಧಾನಿ ಮೋದಿ ಅವರ ಹೆಸರಲ್ಲಿ ಮೊದಲ ಪೂಜೆ ಮಾಡಲಾಗಿದೆ' ಎಂದು ಹೇಳಿದರು.

ಪ್ರಧಾನಿ ಅವರ ಮಾಸಿಕ ರೇಡಿಯೊ ಕಾರ್ಯಕ್ರಮ: ಕಾಂಗ್ರೆಸ್ ವ್ಯಂಗ್ಯ

ಅದಾನಿ, ಚೀನಾ: 'ಮೌನ್ ಕಿ ಬಾತ್'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನ 100ನೇ ಸಂಚಿಕೆಗಾಗಿ ಅವರ 'ಸಾರ್ವಜನಿಕ ಸಂಪರ್ಕ ತಂಡ'ವು 'ಹೆಚ್ಚುವರಿ ಕೆಲಸ' ಮಾಡುತ್ತಿದೆ. ಆದರೆ, ಅದಾನಿ ಮತ್ತು ಚೀನಾದಂಥ ನಿರ್ಣಾಯಕ ವಿಷಯಗಳ ಬಗ್ಗೆ 'ಮೌನ್ ಕಿ ಬಾತ್' ಆಗಿದೆ' ಎಂದು ಕಾಂಗ್ರೆಸ್ ಮಂಗಳವಾರ ವ್ಯಂಗ್ಯವಾಡಿದೆ.

ಈ ಸಂಬಂಧ ಟ್ವೀಟ್ ಮಾಡಿರುವ ಕಾಂಗ್ರೆಸ್‌ನ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು, 'ಏ. 30ರಂದು ಪ್ರಸಾರವಾಗಲಿರುವ ಪ್ರಧಾನಿ ಅವರ ಮನ್ ಕಿ ಬಾತ್‌ನ 100ನೇ ಸಂಚಿಕೆಗೆ ಅವರ ಸಾರ್ವಜನಿಕ ಸಂಪರ್ಕ ಯಂತ್ರವು ಹೆಚ್ಚುವರಿಯಾಗಿ ಕೆಲಸ ಮಾಡುತ್ತಿದೆ. ಆದರೆ, ಅದಾನಿ, ಚೀನಾ ಮತ್ತು ಪುಲ್ವಾಮ ದಾಳಿಯ ಕುರಿತಂತೆ ಸತ್ಯಪಾಲ್ ಮಲಿಕ್ ಅವರ ಹೇಳಿಕೆ, ಎಂಎಸ್‌ಎಂಇ ನಾಶದಂಥ ನಿರ್ಣಾಯಕ ವಿಷಯಗಳ ಕುರಿತು 'ಮೌನ್ ಕಿ ಬಾತ್' ಆಗಿದೆ' ಎಂದು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

'ಮುಂದಿನ ಭಾನುವಾರ (ಏ. 30) 'ಮನ್ ಕಿ ಬಾತ್ ಕಾರ್ಯಕ್ರಮದ 100ನೇ ಸಂಚಿಕೆ ಪ್ರಸಾರವಾಗಲಿದ್ದು, ಸಾರ್ವಜನಿಕ ಬೆಂಬಲದಿಂದಾಗಿ ಕಾರ್ಯಕ್ರಮ ಯಶಸ್ವಿಯಾಗಲು ಸಾಧ್ಯವಾಗಿದೆ' ಎಂದು ಪ್ರಧಾನಿ ಮೋದಿ ಅವರು ಹೇಳಿದ್ದಾರೆ.

'ಮನ್ ಕಿ ಬಾತ್ @ 100' ಪುಸ್ತಕ ಬಿಡುಗಡೆ ಇಂದು

ನವದೆಹಲಿ (ಪಿಟಿಐ): ರೇಡಿಯೊದಲ್ಲಿ ತಿಂಗಳಿಗೊಮ್ಮೆ ಪ್ರಸಾರವಾಗುವ ಪ್ರಧಾನಿ ನರೇಂದ್ರ ಮೋದಿ ಅವರ 'ಮನ್ ಕಿ ಬಾತ್' ಕಾರ್ಯಕ್ರಮವು ಮುಂದಿನ ತಿಂಗಳು ನೂರನೇ ಕಂತನ್ನು ಪೂರೈಸಲಿದೆ.

ಪ್ರಸಾರ ಭಾರತಿಯು ಬುಧವಾರದಂದು ಕಾರ್ಯಕ್ರಮವೊಂದನ್ನು ಆಯೋಜಿಸಿದೆ. ಈ ಕಾರ್ಯಕ್ರಮವನ್ನು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿ, 'ಮನ್ ಕಿ ಬಾತ್@100' ಎನ್ನುವ ಪುಸ್ತಕವನ್ನು ಇದೇ ವೇಳೆ ಬಿಡುಗಡೆ ಮಾಡಲಿದ್ದಾರೆ. ಪ್ರಸಾರ ಭಾರತಿಯ ಮಾಜಿ ಸಿಇಒ ಎಸ್.ಎಸ್. ವೆಂಪತಿ ಅವರು ಬರೆದ 'ಕಲೆಕ್ಟಿವ್ ಸ್ಪಿರಿಟ್, ಕಾಂಕ್ರೀಟ್ ಆ್ಯಕ್ಷನ್' ಎನ್ನುವ ಪುಸ್ತಕವನ್ನೂ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ದಿನವಿಡೀ ನಡೆಯುವ ಈ ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಡಲಿದ್ದಾರೆ. ಇದೇ ವೇಳೆ ನಾಣ್ಯ ಹಾಗೂ ಅಂಚೆಚೀಟಿಯನ್ನು ಬಿಡುಗಡೆ ಮಾಡಲಾಗುವುದು.

ಉದ್ಘಾಟನಾ ಸಮಾರಂಭದ ಬಳಿಕ ನಾಲ್ಕು ಗೋಷ್ಠಿಗಳು ನಡೆಯಲಿವೆ. 'ನಾರಿ ಶಕ್ತಿ', 'ವಿರಾಸತ್ ಕಾ ಉತ್ಥಾನ್' (ಪರಂಪರೆಯ ಹೆಮ್ಮೆ), 'ಜನ್ ಸಂವಾದ್ ಸೇ ಆತ್ಮನಿರ್ಭರ್' (ಜನರೊಂದಿಗಿನ ಸಂವಾದದಿಂದ ಆತ್ಮನಿರ್ಭರತೆ), 'ಆಹ್ವಾನ್ ಸೇ ಆಂದೋಲನ್' (ಆಹ್ವಾನದಿಂದ ಆಂದೋಲನ)– ಇವು ನಾಲ್ಕು ಗೋಷ್ಠಿಗಳಾಗಿವೆ.

ಪ್ರಧಾನಿ ಮೋದಿ ಅವರು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ ದೇಶದ ಸುಮಾರು 100 ಮಂದಿ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಕಾಲಿಯಾಗಂಜ್ ಠಾಣೆಗೆ ಬೆಂಕಿ ಹಚ್ಚಿದ ಗುಂಪು

ಕಾಲಿಯಾಗಂಜ್, ಪಶ್ಚಿಮಬಂಗಾಳ (ಪಿಟಿಐ): ಕಳೆದ ವಾರ ಬಾಲಕಿಯೊಬ್ಬಳು ಶವವಾಗಿ ಕಾಲುವೆಯಲ್ಲಿ ಪತ್ತೆಯಾದ ಘಟನೆ ಸಂಬಂಧ ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲವೆಂದು ಆರೋಪಿಸಿ ಆದಿವಾಸಿಗಳು ಮಂಗಳ ವಾರ ನಡೆಸಿದ ಪ್ರತಿಭಟನೆ ವೇಳೆ ಪಶ್ಚಿಮ ಬಂಗಾಳದ ಉತ್ತರ ದಿನಾಜ್‌ಪುರ ಜಿಲ್ಲೆಯ ಕಾಲಿಗಂಜ್ ಪೊಲೀಸ್ ಠಾಣೆಗೆ ಪ್ರತಿ ಭಟನಕಾರರ ಗುಂಪೊಂದು ಬೆಂಕಿ ಹಚ್ಚಿದೆ.

ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದೆ. ಆದರೆ, ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಆದಿವಾಸಿ ಮತ್ತು ರಾಜಬಂಶಿ ಸಮುದಾಯದವರು 'ಠಾಣೆ ಘೇರಾವ್' ನಡೆಸಿದರು.

ಬಾಲಕಿಯ ಮೇಲೆ ಅತ್ಯಾಚಾರ ನಡೆದಿಲ್ಲವೆಂಬುದು ಶವ ಪರೀಕ್ಷೆಯ ಪ್ರಾಥಮಿಕ ವರದಿಯಲ್ಲಿ ದೃಢಪಟ್ಟಿದೆ.

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

USED AGFA CTP FOR SALE

For sale of used Agfa CTP equipment " **AS IS WHERE IS** " condition.

EQUIPMENT TECHNICAL SPECIFICATIONS	
Model	AGFA Advantage Xs
Year of Manufacture	2005
Year of Purchase	April 2006
M/c serial number	06/10045
Laser Type	Violet diode with 405 nm
Laser Power	60 mW
CTP Type	Flat bed
Throughput	40 plates/hour for 686 mm width @ 1270 dpi
CTP weight	Around 750 kgs.
CTP Dimention (L*W*H)	Around 1.9 * 1.3 * 1.0 mtrs

This equipment is presently kept in Kumbalgodu plant & interested parties can visit for inspection of equipment & may send their offer to: Mr. V. Babu DGM- Procurement, **The Printers Mysore Pvt Ltd,** Plot# 7-12, Kumbalagodu Industrial Area, Bengaluru-560074

ತೀರ್ಪು ಪ್ರಕಟವಾಗಿ 50 ವರ್ಷ • 'ಸುಪ್ರೀಂ'ನಿಂದ ಕ್ರಮ

ಕೇಶವಾನಂದ ಭಾರತಿ ತೀರ್ಪಿನ ಪೂರ್ಣ ಮಾಹಿತಿ ಈಗ ವೆಬ್‌ಪೇಜ್‌ನಲ್ಲಿ

ನವದೆಹಲಿ (ಪಿಟಿಐ): ಐತಿಹಾಸಿಕ ಕೇಶವಾನಂದ ಭಾರತಿ ಪ್ರಕರಣಕ್ಕೆ ಸಂಬಂಧಿಸಿದ ವಾದಗಳು, ಲಿಖಿತ ರೂಪದ ಹೇಳಿಕೆಗಳು ಮತ್ತು ತೀರ್ಪಿನ ಕುರಿತು ಮಾಹಿತಿ ಒಳಗೊಂಡಿರುವ ವೆಬ್‌ಪೇಜ್‌ಅನ್ನು ಸಂಶೋಧಕರು ಸೇರಿ ದೇಶದ ಜನರಿಗೆ ಸುಪ್ರೀಂ ಕೋರ್ಟ್ ಸೋಮವಾರ ಅರ್ಪಿಸಿದೆ.

1973ರ ಏಪ್ರಿಲ್ 24ರಂದು ಈ ಪ್ರಕರಣದ ತೀರ್ಪು ಪ್ರಕಟಿಸಲಾಗಿತ್ತು. ಈ ತೀರ್ಪು ಹೊರಬಿದ್ದು ಸೋಮವಾರಕ್ಕೆ 50 ವರ್ಷಗಳು ತುಂಬಿದ ಸಂದರ್ಭದಲ್ಲಿ ವೆಬ್‌ಪೇಜ್‌ಅನ್ನು ಅರ್ಪಿಸಲಾಗಿದೆ.

'ಕೇಶವಾನಂದ ಭಾರತಿ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಒಳಗೊಂಡಿರುವ ವೆಬ್‌ಪೇಜನ್ನು ನಾವು ಸಂಶೋಧಕರ ಜಗತ್ತಿಗೆ ಅರ್ಪಿಸುತ್ತಿದ್ದೇವೆ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠವು ಹೇಳಿತು. ಕೋರ್ಟ್ ಕೊಠಡಿಯಲ್ಲಿ ಹಾಜರಿದ್ದ ವಕೀಲರು ಸುಪ್ರೀಂ ಕೋರ್ಟ್‌ನ ಈ ನಡೆಯನ್ನು ಸ್ವಾಗತಿಸಿದರು. ಈ ವೆಬ್‌ಪೇಜ್‌ನಿಂದ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ವಕೀಲರಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದರು.

13 ನ್ಯಾಯಮೂರ್ತಿಗಳನ್ನು ಒಳಗೊಂಡಿದ್ದ ನ್ಯಾಯಪೀಠವು ಈ ತೀರ್ಪನ್ನು ನೀಡಿತ್ತು. ಪ್ರಜಾಪ್ರಭುತ್ವ, ನ್ಯಾಯಾಂಗದ ಸ್ವಾತಂತ್ರ್ಯ, ಅಧಿಕಾರದ ವರ್ಗೀಕರಣ ಮತ್ತು ಜಾತ್ಯತೀತತೆ ಸೇರಿ ಸಂವಿಧಾನದ ಮೂಲ ಸ್ವರೂಪವನ್ನು ಬದಲಾಯಿಸುವಂತಹ ಸಾಂವಿಧಾನಿಕ ತಿದ್ದುಪಡಿಯನ್ನು ತರದಂತೆ ಸಂಸತ್ತನ್ನು ನಿರ್ಬಂಧಿಸಿದ ತೀರ್ಪು ಇದಾಗಿತ್ತು.

ಹೈಕೋರ್ಟ್ ಮೊರೆ ಹೋದ ರಾಹುಲ್

ನವದೆಹಲಿ (ರಾಯಿಟರ್ಸ್/ ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೂರತ್‌ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವೊಂದು ವಿಧಿಸಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ಗುಜರಾತ್ ಹೈಕೋರ್ಟ್‌ಗೆ ಮಂಗಳವಾರ ಮೇಲ್ಮನವಿ ಸಲ್ಲಿಸಿದ್ದಾರೆ.

ಮೋದಿ ಉಪನಾಮದ ಕುರಿತು ರಾಹುಲ್ ಅವರು 2019ರಲ್ಲಿ ನೀಡಿದ್ದ ಹೇಳಿಕೆಯೊಂದರಲ್ಲಿ ಅವರಿಗೆ ಎರಡು ವರ್ಷ ಶಿಕ್ಷೆ ವಿಧಿಸಲಾಗಿತ್ತು. ಇದರಿಂದಾಗಿ ಅವರು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿದ್ದಾರೆ.

ಅಪರಾಧ ನಿರ್ಣಯ ಮತ್ತು ಶಿಕ್ಷೆಯನ್ನು ಪ್ರಶ್ನಿಸಿ ರಾಹುಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸೂರತ್‌ನ ಸೆಷನ್ಸ್ ನ್ಯಾಯಾಲಯವು ಇದೇ 20ರಂದು ವಜಾಗೊಳಿಸಿತ್ತು.

'ಸೂರತ್‌ನ ಜಿಲ್ಲಾ ನ್ಯಾಯಾಲಯದ ತೀರ್ಪಿನ ವಿರುದ್ಧ ನಾವು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ' ಎಂದು ರಾಹುಲ್ ಪರ ವಕೀಲ ಪಂಕಜ್ ಚಾಂಪನೇರಿ 'ರಾಯಿಟರ್ಸ್' ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ರಾಹುಲ್ ಅವರು ತಮ್ಮ ಹೇಳಿಕೆ ಮೂಲಕ ಮೋದಿ ಉಪನಾಮ ಹೊಂದಿರುವವರನ್ನೆಲ್ಲಾ ಹೀಯಾಳಿಸಿದ್ದಾರೆ ಎಂದು ಆರೋಪಿಸಿದ್ದ ಗುಜರಾತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಅವರು ಕಾಂಗ್ರೆಸ್ ನಾಯಕನ ವಿರುದ್ಧ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು–572 103,
ದೂರವಾಣಿ : 0816–2254546

ತುಮಕೂರು ವಿಶ್ವವಿದ್ಯಾನಿಲಯವು 2023–24ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸ್ನಾತಕ / ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ, ಹೊಸ ಕೋರ್ಸು, ವಿಷಯ, ಭಾಷೆಗಳು, ವಿದ್ಯಾರ್ಥಿ ಪ್ರವೇಶ ಪ್ರಮಾಣದ ಹೆಚ್ಚಳ, ಕಾಲೇಜುಗಳ ಹೆಸರು ಬದಲಾವಣೆ, ಕಾಲೇಜಿನ ಸ್ಥಳ ಬದಲಾವಣೆ, ಆಡಳಿತ ಮಂಡಳಿ ಬದಲಾವಣೆ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣ, ಕಾಲೇಜುಗಳ ಸ್ವಯಂ ಮುಚ್ಚುವಿಕೆ ಹಾಗೂ ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ–ಸಂಸ್ಥೆಗಳು ಹೊಸ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗಾಗಿ ಅರ್ಜಿಗಳನ್ನು ಆನ್–ಲೈನ್ ಮುಖಾಂತರ https://uucms.karnataka.gov.in/Login/Index ಆಹ್ವಾನಿಸಲಾಗಿದೆ.

"ಹೊಸ ಕಾಲೇಜು ಪ್ರಾರಂಭಿಸಲು ಇಚ್ಚಿಸಿರುವ ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ–ಸಂಸ್ಥೆಗಳು ಹೊಸ ಕಾಲೇಜಿನ ಪ್ರಾರಂಭ ಸಂಬಂಧ ಸಂಯೋಜನಾ ಅಧಿಸೂಚನೆಯಲ್ಲಿ ವಿವರಿಸಿರುವ ಅಗತ್ಯ ದಾಖಲೆಗಳೊಂದಿಗೆ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಕ್ಕೆ ಭೇಟಿ ನೀಡಿ ಪ್ರಸ್ತಾವನೆ ಸಲ್ಲಿಸುವುದು.

ಸಂಯೋಜನೆ ಕುರಿತ ಸಮಗ್ರ ಮಾಹಿತಿ, ಸಂಯೋಜನಾ ಶುಲ್ಕಗಳ ವಿವರಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.tumkuruniversity.ac.in ನಲ್ಲಿ ಲಭ್ಯವಿರುತ್ತವೆ. UUCMS ತಂತ್ರಾಂಶದ ಮುಖಾಂತರ ದಂಡಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 29.04.2023 ಆಗಿರುತ್ತದೆ.

ಸಹಿ/– ಕುಲಸಚಿವರು,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಮತ್ತೊಂದು ಅಸುರಕ್ಷಿತ ಸಿರಪ್ ವಿದೇಶದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದಲ್ಲಿ ತಯಾರಾದ ಮತ್ತೊಂದು ಕಲಬೆರಕೆ ಕೆಮ್ಮಿನ ಸಿರಪ್ ವಿದೇಶಗಳಲ್ಲಿ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮಂಗಳವಾರ ಹೇಳಿದೆ.

ಇದು ಕಳೆದ ಏಳು ತಿಂಗಳಲ್ಲಿ ವರದಿಯಾದ ಮೂರನೇ ನಿದರ್ಶನವಾಗಿದೆ. ಮಾರ್ಷಲ್ ದ್ವೀಪ ಮತ್ತು ಮೈಕ್ರೋನೇಷಿಯಾದಲ್ಲಿ ಕೆಮ್ಮಿನ ಔಷಧಿಯಾಗಿ ಬಳಸುತ್ತಿರುವ ಗ್ವಾಫೆನಾಸಿನ್ (Guaifenesin) ಸಿರಪ್‌ನಲ್ಲಿ ಸ್ವೀಕಾರಾರ್ಹವಲ್ಲದ ಎರಡು ಮಾಲಿನ್ಯಕಾರಕಗಳು ಹೆಚ್ಚಿನ ಮಟ್ಟದಲ್ಲಿರುವುದು ಕಂಡುಬಂದಿದೆ. ಈ ಸಿರಪ್ ಮಾನವ ಬಳಕೆಗೆ ಸುರಕ್ಷಿತವಲ್ಲವೆಂದು ಡಬ್ಲ್ಯುಎಚ್‌ಒ ಎಚ್ಚರಿಸಿದೆ.

'ಮಾರ್ಷಲ್ ದ್ವೀಪದಿಂದ ಈ ಸಿರಪ್‌ನ ಮಾದರಿಗಳನ್ನು ಆಸ್ಟ್ರೇಲಿಯಾದ ಚಿಕಿತ್ಸಕ ಔಷಧ ಸರಕುಗಳ ಆಡಳಿತದ (ಟಿಜಿಎ) ಗುಣಮಟ್ಟ ನಿಯಂತ್ರಣ ಪ್ರಯೋಗಾಲಯಗಳು ವಿಶ್ಲೇಷಿಸಿವೆ. ಉತ್ಪನ್ನವು ಸ್ವೀಕಾರಾರ್ಹವಲ್ಲದ ಪ್ರಮಾಣದ ಡೈಥಿಲೀನ್ ಗ್ಲೈಕೋಲ್ ಮತ್ತು ಎಥಿಲೀನ್ ಗ್ಲೈಕೋಲ್ ಅನ್ನು ಮಾಲಿನ್ಯಕಾರಕಗಳಾಗಿ ಹೊಂದಿರುವುದನ್ನು ಟಿಜಿಎ ವಿಶ್ಲೇಷಣೆಯಲ್ಲಿ ಪತ್ತೆಯಾಗಿದೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

ಪಂಜಾಬ್‌ನ ಕ್ಯುಪಿ ಫಾರ್ಮಾಕೆಮ್ ಲಿಮಿಟೆಡ್ ಗ್ವಾಫೆನಾಸಿನ್ ಸಿರಪ್ ತಯಾರಿಸಿದ್ದು, ಹರಿಯಾಣದ ಟ್ರಿಲಿಯಮ್ ಫಾರ್ಮಾ ಮಾರಾಟ ಮಾಡಿದೆ. ತಯಾರಕರು ಅಥವಾ ಮಾರಾಟಗಾರರು ಈ ಉತ್ಪನ್ನಗಳ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಡಬ್ಲ್ಯುಎಚ್‌ಒಗೆ ಖಾತರಿ ನೀಡಿಲ್ಲ. ಕಲುಷಿತವಾದ ಈ ಸಿರಪ್ ಸೇವಿಸಿದ ನಂತರ ಪೆಸಿಫಿಕ್ ರಾಷ್ಟ್ರಗಳಲ್ಲಿ ಯಾರಿಗಾದರೂ ಆರೋಗ್ಯ ಸಮಸ್ಯೆ ಕಾಣಿಸಿದೆಯೇ ಎನ್ನುವ ಬಗ್ಗೆ ಡಬ್ಲ್ಯುಎಚ್‌ಒ ಹೆಚ್ಚಿನ ವಿವರಣೆ ನೀಡಿಲ್ಲ.

ಐಎಎಸ್ ಅಧಿಕಾರಿ ಜಿ. ಕೃಷ್ಣಯ್ಯ ಹತ್ಯೆ ಪ್ರಕರಣ

ಮಾಜಿ ಸಂಸದ ಸೇರಿ 27 ಜನರ ಬಿಡುಗಡೆ

ಪಟ್ನಾ (ಪಿಟಿಐ): ಐಎಎಸ್ ಅಧಿಕಾರಿ ಜಿ. ಕೃಷ್ಣಯ್ಯ ಅವರ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಬಿಹಾರದ ಮಾಜಿ ಸಂಸದ, ಪಾತಕಿ ಆನಂದ್ ಮೋಹನ್ ಸಿಂಗ್ ಮತ್ತು ಇತರ 26 ಅಪರಾಧಿಗಳನ್ನು 14 ವರ್ಷಗಳ ಶಿಕ್ಷೆ ಪೂರೈಸಿದ ನಂತರ ವಿವಿಧ ಜೈಲುಗಳಿಂದ ಬಿಡುಗಡೆ ಮಾಡಲಾಗಿದೆ.

ಸದ್ಯ ಪೆರೋಲ್ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ ಸಿಂಗ್ ಅವರು, ರಾಜ್ಯದ ಆಡಳಿತಾರೂಢ ಆರ್‌ಜೆಡಿ ಪಕ್ಷದ ಶಾಸಕರೂ ಆದ ತಮ್ಮ ಪುತ್ರ ಚೇತನ್ ಆನಂದ್ ಅವರ ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾಗ ಸೋಮವಾರ ಸಂಜೆ ಈ ಕುರಿತು ಅಧಿಸೂಚನೆ ಹೊರಬಿದ್ದಿದೆ. ನಿಶ್ಚಿತಾರ್ಥ ಕಾರ್ಯಕ್ರಮದಲ್ಲಿದ್ದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ಸಿಂಗ್ ಅವರು ಕೃತಜ್ಞತೆ ಸಲ್ಲಿಸಿದರು.

ಜಿ. ಕೃಷ್ಣಯ್ಯ ಅವರು ತೆಲಂಗಾಣದ ದಲಿತ ಕುಟುಂಬದಲ್ಲಿ ಜನಿಸಿದವರು. ಗೋಪಾಲ್‌ಗಂಜ್ ಜಿಲ್ಲಾಧಿಕಾರಿಯಾಗಿದ್ದ ಅವರು 1994ರಲ್ಲಿ ಮುಜಾಫರ್‌ಪುರ ಜಿಲ್ಲೆಯ ಮೂಲಕ ವಾಹನದಲ್ಲಿ ಪ್ರಯಾಣಿಸುತ್ತಿದ್ದಾಗ ಗುಂಪು ಹಲ್ಲೆಗೆ ಸಿಕ್ಕಿ ಹತ್ಯೆಯಾಗಿದ್ದರು. ಈ ಘಟನೆ ನಡೆದಾಗ ಸ್ಥಳದಲ್ಲಿ ಸಿಂಗ್ ಇದ್ದರು. ಮುಜಾಫರ್‌ಪುರ ಪಟ್ಟಣದಲ್ಲಿ ಗುಂಡಿನ ದಾಳಿಯಿಂದ ಹತನಾದ ಪಾತಕಿ ಛೋಟನ್ ಶುಕ್ಲಾ ಅಂತಿಮ ಯಾತ್ರೆ ಆ ಮಾರ್ಗದಲ್ಲಿ ನಡೆಯುತ್ತಿತ್ತು. ಇದರಲ್ಲಿ ಸಿಂಗ್ ಭಾಗಿಯಾಗಿದ್ದರು.

ಕೃಷ್ಣಯ್ಯ ಪತ್ನಿ ಉಮಾ ನಿರಾಸೆ

ಹೈದರಾಬಾದ್/ ನವದೆಹಲಿ: ಆನಂದ್ ಮೋಹನ್ ಸಿಂಗ್ ಸೇರಿ 27 ಅಪರಾಧಿಗಳನ್ನು ಬಿಡುಗಡೆಗೆ ಮೃತ ಐಎಎಸ್ ಅಧಿಕಾರಿ ಜಿ.ಕೃಷ್ಣಯ್ಯ ಅವರ ಪತ್ನಿ ಉಮಾ ಕೃಷ್ಣಯ್ಯ ತೀವ್ರ ನಿರಾಸೆ ವ್ಯಕ್ತಪಡಿಸಿದ್ದಾರೆ.

'ಅಪರಾಧಿಗಳ ಬಿಡುಗಡೆ ಒಳ್ಳೆಯ ನಿರ್ಧಾರವಲ್ಲ. ಇದು ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತದೆ. ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಪ್ರವೇಶಿಸಿ, ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರಿಗೆ ತಮ್ಮ ನಿರ್ಧಾರ ಹಿಂಪಡೆಯುವಂತೆ ಸೂಚಿಸಲಿ' ಎಂದು ಅವರು ಮನವಿ ಮಾಡಿದ್ದಾರೆ.

'ರಾಜಕಾರಣಿ ಆನಂದ್ ಮೋಹನ್ ಸಿಂಗ್‌ಗೆ ಮರಣದಂಡನೆಯೇ ಸೂಕ್ತ. ಆತನನ್ನು ಗಲ್ಲಿಗೇರಿಸಿದರೆ, ಜನರು ಅಪರಾಧ ಎಸಗಲು ಹೆದರುತ್ತಾರೆ' ಎಂದು ಉಮಾ ಹೇಳಿರುವುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

ಐಎಎಸ್ ಅಸೋಸಿಯೇಷನ್ ಕಿಡಿ : ಆನಂದ್ ಮೋಹನ್ ಸಿಂಗ್ ಬಿಡುಗಡೆಗಾಗಿ ಬಿಹಾರದಲ್ಲಿ ಕಾನೂನು ನಿಯಮ ಬದಲಾಯಿಸಿರುವುದನ್ನು ವಿರೋಧಿಸಿ ಐಎಎಸ್ ಅಧಿಕಾರಿಗಳ ಸಂಘ ತೀವ್ರ ಪ್ರತಿಭಟನೆ ದಾಖಲಿಸಿದೆ.

'ಈ ರೀತಿ ಕಾನೂನು ನಿಯಮಾವಳಿ ದುರ್ಬಲಗೊಳಿಸುವುದು ಅಪರಾಧಿಗಳಲ್ಲಿ ನಿರ್ಭೀತಿ ಮೂಡಿಸುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವರ ನೈತಿಕತೆಯನ್ನೂ ಕುಗ್ಗಿಸುತ್ತದೆ. ಅಲ್ಲದೆ, ಸಾರ್ವಜನಿಕ ಸುವ್ಯವಸ್ಥೆ ದುರ್ಬಲಗೊಳಿಸುತ್ತದೆ. ನ್ಯಾಯದ ಆಡಳಿತವನ್ನು ಅಣಕಿಸುತ್ತದೆ' ಎಂದು ಕೇಂದ್ರ ಐಎಎಸ್ ಅಸೋಸಿಯೇಷನ್ ಟ್ವಿಟರ್‌ನಲ್ಲಿ ಹೇಳಿಕೆ ಬಿಡುಗಡೆ ಮಾಡಿದೆ.

ದಾವಣಗೆರೆ ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007
ಕಾಲೇಜು ಅಭಿವೃದ್ಧಿ ಪರಿಷತ್
ದೂ.ಸಂಖ್ಯೆ:08192-208309, E-mail: cdcdu2013@gmail.com
ಸಂ:ದಾವಿವಿ/ಸಿಡಿಸಿ/ಸಂಯೋ–143/2023–24/203 ದಿನಾಂಕ:24.04.2023

ಪ್ರಕಟಣೆ

ವಿಷಯ : ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳಿಂದ ಸಂಯೋಜನಾ ಅರ್ಜಿಗಳನ್ನು ಅಹ್ವಾನಿಸುವ ಬಗ್ಗೆ.
ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ47ಯುಎನ್‌ಇ 2023, ದಿ:05.04.2023.
2) ಮಾನ್ಯ ಕುಲಪತಿಗಳವರ ಅನುಮೋದನೆ ದಿನಾಂಕ:24.04.2023.

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ, ಆಡಳಿತ ನಿರ್ವಹಣೆ, ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಪದವಿ, ಹಾಗೂ ಇನ್ನಿತರ ಸಾಂಪ್ರದಾಯಿಕ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಇಂತಹ ಕಾಲೇಜುಗಳನ್ನು ರಾಜ್ಯ ಸರ್ಕಾರದ / ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಕಾಲೇಜುಗಳನ್ನು ನಡೆಸಲು ಆರ್ಥಿಕ ಸಾಮರ್ಥ್ಯವುಳ್ಳ ನೊಂದಾಯಿತ ಸೊಸೈಟಿ, ಸಾರ್ವಜನಿಕ ಟ್ರಸ್ಟ್ / ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಲದೆ, ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳಿಂದಲೂ, 2023–24ನೇ ಶೈಕ್ಷಣಿಕ ಸಾಲಿಗಾಗಿ ತಮ್ಮ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಪರಿವೀಕ್ಷಣೆ / ಶಾಶ್ವತ ಸಂಯೋಜನೆ ನವೀಕರಣ ಹಾಗೂ ಅಸ್ಥಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಗಾಗಿಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್‌ಲೈನ್‌ಮೂಲಕ ಅರ್ಜಿಗಳನ್ನು ಈ ಕೆಳಕಂಡ ದಿನಾಂಕದೊಳಗೆ ಸಲ್ಲಿಸುವುದು:

1	ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	04.05.2023
2	ರೂ.20,000=00 ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	10.05.2023

ಭರ್ತಿ ಮಾಡಿದ ಆನ್‌ಲೈನ್ ಅರ್ಜಿಯ ಎರಡು ಪ್ರತಿಗಳನ್ನು ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–577007 ಇವರ ಕಛೇರಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆಯ ಮೂಲಕ ನಿಗಧಿತ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ಮೇಲ್ಕಂಡ ದಿನಾಂಕಗಳ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಸಂಯೋಜನೆಗೆ ಸಂಬಂಧಿಸಿದಂತೆ, ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ http://davangereuniversity.ac.in ಅನ್ನು ನೋಡಬಹುದು.

ಸಂಯೋಜನೆಗೆ ಅರ್ಜಿ ಸಲ್ಲಿಸಲು: **https://uucms.karnataka.gov.in/Login/Index** ವಿಳಾಸವನ್ನು ಸಂಪರ್ಕಿಸುವುದು.

ಆದೇಶದ ಮೇರೆಗೆ,
ಸಹಿ/– ಕುಲಸಚಿವರು

ನಿಧನ ವಾರ್ತೆ

ಪ್ರಕಾಶ್ ಸಿಂಗ್ ಬಾದಲ್

ಚಂಡೀಗಢ (ಪಿಟಿಐ): ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಹಾಗೂ ಶಿರೋಮಣಿ ಅಕಾಲಿ ದಳದ ಹಿರಿಯ ನಾಯಕ ಪ್ರಕಾಶ್ ಸಿಂಗ್ ಬಾದಲ್ (95) ಮಂಗಳವಾರ ನಿಧನರಾಗಿದ್ದಾರೆ.

'ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಬಾದಲ್ ಅವರನ್ನು ಕಳೆದ ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಅವರು ಮಂಗಳವಾರ ರಾತ್ರಿ 8 ಗಂಟೆ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ' ಎಂದು ಮೊಹಾಲಿಯ ಫೋರ್ಟಿಸ್ ಆಸ್ಪತ್ರೆಯ ನಿರ್ದೇಶಕ ಅಭಿಜೀತ್ ಸಿಂಗ್ ತಿಳಿಸಿದ್ದಾರೆ.

ಬಾದಲ್ ಅವರು ಐದು ಬಾರಿ ಪಂಜಾಬ್ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದರು. 43ನೇ ವಯಸ್ಸಿನಲ್ಲೇ ಮುಖ್ಯಮಂತ್ರಿ ಗಾದಿಗೆ ಏರಿದ್ದರು.

M.P. HOUSING & INFRASTRUCTURE DEVELOPMENT BOARD

NOTICE INVITING E-TENDER (2nd Call)

Online Percentage rate bid for the following work are invited from registered contractors of repute & having GST Reg. No. & fulfilling registration criteria.

Sl.	Tender No.	Name of work	Probable Amount of Contract/EMD	Cost of Form	Date of Tender Purchase	Last Date of Online Bid Submission
1	2023_MPHID_270222_1 TENDER	Const. of 63 MIG 'A' Type Houses, 20 MIG 'B1' Type Houses, 26 MIG 'B2' Type Houses 7 LIG Type Houses, 22 EWS Type Houses Including Water Supply and Internal Electrification Work with Development of 2.888 Hect Land at Shivangi Parisar Goylakhurd Ujjain.	Rs. 2992.94 Lakh Rs. 14,97,000	Rs. 59,000.00 (i/c GST)	27.04.2023 10:30 A.M.	16.05.2023 17:30 Hrs.

Full details of the above tenders can be seen on **http://mptenders.gov.in** Amendments to NIT, if any would be published on website only, and not in Newspapers.

Visit us : www.mphousing.in
E-mail : eednhbujn@mp.gov.in
M.P. Madhyam/109581/2023

/mphidb /mphidb

(N.K. Gupta)
EXECUTIVE ENGINEER, Division Ujjain
Mob. : 98262-14393, Ph. : 0734-2511286

ಸುಭಾಷಿತ

ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿ ಇರುವುದರ ರಹಸ್ಯ.

-ದ.ರಾ.ಬೇಂದ್ರೆ

ಪೂಂಛ್‌ನಲ್ಲಿ ಉಗ್ರರ ದಾಳಿ ಎಚ್ಚರಿಕೆಯ ಗಂಟೆ

ಜಮ್ಮುವಿನ ಪೂಂಛ್‌ನಲ್ಲಿ ಸೇನೆಯ ಟ್ರಕ್ಕೊಂದರ ಮೇಲೆ ಕಳೆದ ವಾರ ನಡೆದ ದಾಳಿಯಲ್ಲಿ ಐದು ಮಂದಿ ಯೋಧರು ಪ್ರಾಣ ಕಳೆದುಕೊಂಡಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ಉಪಟಳವು ಇಂದಿಗೂ ಬಹಳ ಗಂಭೀರವಾಗಿದೆ ಎಂಬುದನ್ನು ಇದು ನೆನಪಿಸಿಕೊಡುವಂತೆ ಇದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಕೃತ್ಯಗಳನ್ನು ನಿಯಂತ್ರಿಸಲಾಗಿದೆ ಎಂಬ ಹೇಳಿಕೆಗಳನ್ನು ನೀಡಲು ಕಾಲ ಪಕ್ವವಾಗಿಲ್ಲ ಎಂಬುದನ್ನು ಇಂತಹ ದಾಳಿಗಳು ಹೇಳುತ್ತವೆ. ಭದ್ರತೆಯು ಅತ್ಯುನ್ನತ ಮಟ್ಟದಲ್ಲಿ ಇರುವ ಗಡಿ ಪ್ರದೇಶದಲ್ಲಿ ಈ ದಾಳಿ ನಡೆದಿದೆ. ಈ ಪ್ರದೇಶದಲ್ಲಿ ಸೇನೆಯ ಕಡೆಯಿಂದ ಗಸ್ತು ಬಹಳ ತೀವ್ರವಾಗಿ ಇರುತ್ತದೆ. ಅಲ್ಲದೆ, ಅಲ್ಲಿನ ಪೊಲೀಸರು ಕೂಡ ಹದ್ದಿನ ಕಣ್ಣಿಟ್ಟು ಕಾಯುತ್ತಿರುತ್ತಾರೆ. ಪಾಕಿಸ್ತಾನದ ಕಡೆಯಿಂದ ನುಸುಳುಕೋರರು ಭಾರತದೊಳಕ್ಕೆ ನುಗ್ಗಲು ಯತ್ನ ನಡೆಸಿದ್ದಾರೆ ಎಂದು ಸೇನೆಯು ಹೇಳಿದೆ. ಅದರಲ್ಲೂ ಮುಖ್ಯವಾಗಿ ಪೀರ್ ಪಂಜಾಲ್ ಪರ್ವತ ಸಾಲಿನ ದಕ್ಷಿಣಕ್ಕೆ ಇಂತಹ ಯತ್ನಗಳು ನಡೆದಿವೆ ಎಂದು ಸೇನೆ ತಿಳಿಸಿದೆ. ದಾಳಿಯ ಹಿಂದೆ ಇರುವ ಉಗ್ರಗಾಮಿ ಸಂಘಟನೆ ಯಾವುದು, ಯಾವ ವ್ಯಕ್ತಿಗಳ ಕೈವಾಡ ಇಲ್ಲಿದೆ ಎಂಬುದು ಇನ್ನೂ ಗೊತ್ತಾಗಿಲ್ಲ. ಈ ದಾಳಿಯ ಹೊಣೆಯನ್ನು ಯಾವ ಸಂಘಟನೆಯೂ ಹೊತ್ತುಕೊಂಡಿಲ್ಲ. ಭಯೋತ್ಪಾದಕರು, ಉಗ್ರಗಾಮಿಗಳ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ಗಸ್ತು ನಡೆಸುತ್ತಿದ್ದ ಸೇನಾ ವಾಹನವೇ ದಾಳಿಗೆ ತುತ್ತಾಗಿರುವುದು ಕಳವಳಕಾರಿ ಸಂಗತಿ.

ಗಡಿ ಪ್ರದೇಶಗಳು ಮತ್ತೆ ಭಯೋತ್ಪಾದನೆಗೆ ಆಸ್ಪದ ಕೊಡುವಂತೆ ಆಗಿವೆ ಎಂಬ ಆತಂಕವನ್ನು ನಿವಾರಿಸುವ ಹೊಣೆ ಸರ್ಕಾರದ್ದು

ಜನವರಿಯಲ್ಲಿ ರಜೌರಿಯಲ್ಲಿ ಉಗ್ರಗಾಮಿಗಳು ಆರು ಮಂದಿ ನಾಗರಿಕರನ್ನು ಹತ್ಯೆ ಮಾಡಿದ್ದರು. ಸೇನಾ ಟ್ರಕ್ ಮೇಲೆ ನಡೆದಿರುವುದು, ಇದಾದ ನಂತರದಲ್ಲಿನ ಪ್ರಮುಖ ದಾಳಿ. ನವದೆಹಲಿಯಲ್ಲಿ ಕಳೆದ ವಾರ ನಡೆದ ಸೇನಾ ಕಮಾಂಡರ್‌ಗಳ ಸಮಾವೇಶವು ದೇಶದ ಆಂತರಿಕ ಹಾಗೂ ಗಡಿಯಲ್ಲಿನ ಭದ್ರತೆಗೆ ಸಂಬಂಧಿಸಿ ವಿಸ್ತೃತ ಚರ್ಚೆ ನಡೆಸಿತ್ತು. ಸಮಾವೇಶದಲ್ಲಿ ಮಾತನಾಡಿದ್ದ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಕೇಂದ್ರಾಡಳಿತ ಪ್ರದೇಶದಲ್ಲಿ ಸೇನೆ ನಡೆಸುತ್ತಿರುವ ಕಾರ್ಯಾಚರಣೆ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದರು. ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಜನರನ್ನು ಪ್ರತಿನಿಧಿಸುವ ಸರ್ಕಾರ ವರ್ಷಗಳಿಂದ ಇಲ್ಲ ಎಂಬುದನ್ನು ಗಮನಿಸಬೇಕು. ಅಲ್ಲಿನ ವಿಧಾನಸಭೆಗೆ ಚುನಾವಣೆ ನಡೆಸುವ ಭರವಸೆಗಳನ್ನು ನೀಡಲಾಗಿದೆಯಾದರೂ, ಚುನಾವಣೆ ನಡೆಯುವ ಸೂಚನೆಗಳು ಇಲ್ಲ. ಅಲ್ಲಿನ ಜನರ ಆಕಾಂಕ್ಷೆಗಳಿಗೆ ಸ್ಪಂದಿಸಲು ರಾಜಕೀಯ ಪ್ರಕ್ರಿಯೆಯೆಂಬುದು ನಡೆಯುತ್ತಿಲ್ಲ. ಚುನಾಯಿತ ಸರ್ಕಾರದ ರೀತಿಯಲ್ಲಿ ಕೆಲಸ ಮಾಡಲು ಸೇನೆಗಾಗಲೀ ಪೊಲೀಸರಿಗಾಗಲೀ ಸಾಧ್ಯವಿಲ್ಲ. ಅಲ್ಲದೆ, ಹಲವು ಸಂದರ್ಭಗಳಲ್ಲಿ ಸೇನೆ ಮತ್ತು ಪೊಲೀಸರಿಗೆ ಸ್ಥಳೀಯರ ಜೊತೆ ಉತ್ತಮ ಒಡನಾಟ ಇರುವುದಿಲ್ಲ. ಅಧಿಕಾರಿಶಾಹಿಯ ಆಡಳಿತವನ್ನು ಬಹುಕಾಲ ಮುಂದುವರಿಸುವುದು ಅಲ್ಲಿನ ಜನರಲ್ಲಿ ಪ್ರತ್ಯೇಕತೆಯ ಭಾವವನ್ನು ಮೂಡಿಸಬಹುದು. ಇದು ಅಲ್ಲಿ ಉಗ್ರವಾದಕ್ಕೆ ಆಸ್ಪದ ಮಾಡಿಕೊಡಬಹುದು.

ಜಿ20 ಗುಂಪಿನ ಅಧ್ಯಕ್ಷತೆಯನ್ನು ಈಗ ಭಾರತ ವಹಿಸಿಕೊಂಡಿದೆ. ಈ ಗುಂಪಿನ ಪ್ರವಾಸೋದ್ಯಮ ಕಾರ್ಯಕಾರಿ ಗುಂಪಿನ ಸಭೆಯು ಮುಂದಿನ ತಿಂಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿಯೂ ಈಗ ನಡೆದಿರುವ ದಾಳಿಯು ಮಹತ್ವ ಪಡೆಯುತ್ತದೆ. ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ವಿದೇಶಾಂಗ ಸಚಿವರ ಪರಿಷತ್ತಿನ ಗೋವಾ ಸಭೆಯಲ್ಲಿ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಪಾಲ್ಗೊಳ್ಳುತ್ತಾರೆ ಎಂಬ ಘೋಷಣೆ ಹೊರಬಿದ್ದ ನಂತರದಲ್ಲಿ ಈ ದಾಳಿ ನಡೆದಿದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧದಲ್ಲಿ ಯಾವುದೇ ಬಗೆಯ ಒಳ್ಳೆಯ ಬೆಳವಣಿಗೆ ಆದಾಗಲೆಲ್ಲ ಭಯೋತ್ಪಾದಕರಿಂದ ದಾಳಿಗಳು ಈ ಹಿಂದೆಯೂ ಆಗಿವೆ. ಭಯೋತ್ಪಾದಕರಿಗೆ ಇರುವ ಗುರಿಗಳು ಹಲವು. ಅವುಗಳನ್ನು ಬದ್ಧತೆಯಿಂದ, ಚಾಣಾಕ್ಷತನದಿಂದ ಮತ್ತು ರಾಜಕಾರಣದ ಮೂಲಕ ಎದುರಿಸಬೇಕು. ಭಯೋತ್ಪಾದಕ ಚಟುವಟಿಕೆಗಳಿಗೆ ಪೂರಕವಾಗದಂತಹ ವಾತಾವರಣವನ್ನು ಸರ್ಕಾರ ಸೃಷ್ಟಿ ಮಾಡಬೇಕು. ಗಡಿ ಪ್ರದೇಶಗಳು ಮತ್ತೆ ಭಯೋತ್ಪಾದನೆಗೆ ಆಸ್ಪದ ಕೊಡುವಂತೆ ಆಗಿವೆ ಎಂಬ ಆತಂಕ ಒಂದೆಡೆ ವ್ಯಕ್ತವಾಗಿದೆ. ಗಡಿ ಮಾತ್ರವೇ ಅಲ್ಲದೆ, ಗಡಿಗೆ ಸನಿಹವಿರುವ ಪ್ರದೇಶಗಳು ಕೂಡ ಸುರಕ್ಷಿತವಾಗಿರುವಂತೆ ಮಾಡಲು ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್

ವಿಭಿನ್ನ ಅಭಿಪ್ರಾಯ

ಉತ್ತರ ಕರ್ನಾಟಕದ ನಗರ ಪ್ರದೇಶದಲ್ಲಿ ಚುನಾವಣಾ ಗಾಳಿ ಎತ್ತ ಬೀಸುತ್ತಿದೆ? ಇದನ್ನು ಆಟೊ ಚಾಲಕರಿಗಿಂತ ಚೆನ್ನಾಗಿ ಹೇಳುವವರು ಬೇರೆ ಇಲ್ಲ. ಉತ್ತಮ ರಸ್ತೆಗಳ ಬಗ್ಗೆ ಅವರಿಗೆ ಖುಷಿಯಿದೆ, ಆದರೆ ಇಂಧನ ದರ ಹೆಚ್ಚಳ ಅಸಮಾಧಾನ ಮೂಡಿಸಿದೆ. ಅವರು ಯಾರಿಗೆ ಮತ ಹಾಕುತ್ತಾರೆ? ಅಭಿಪ್ರಾಯಗಳು ತೀರಾ ವಿಭಿನ್ನವಾಗಿವೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಚುನಾವಣಾ ಪ್ರಚಾರಕ್ಕೆ ರಾಷ್ಟ್ರೀಯ ಪಕ್ಷಗಳ ದೊಡ್ಡ ದೊಡ್ಡ ನಾಯಕರು ಬರುತ್ತಿದ್ದಾರೆ. ಆದರೆ ನಮ್ಮಲ್ಲಿ ಸಾ.ರಾ.ಮಹೇಶ್, ಜಿ.ಟಿ.ದೇವೇಗೌಡ, ಪುಟ್ಟರಾಜು, ಎಚ್.ಡಿ.ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಸೇರಿ ರೈತರ ಮಕ್ಕಳೇ ಸ್ಟಾರ್ ಪ್ರಚಾರಕರು.

ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಭಾನುವಾರ, 26-4-1998

● **ಫಲ ನೀಡಿದ ಮಾತುಕತೆ: ಸಂಪುಟ ಬಿಕ್ಕಟ್ಟು ಅಂತ್ಯ**

ಚೆನ್ನೈ, ಏ. 25 (ಪಿಟಿಐ, ಯುಎನ್‌ಐ)– ಬರುವ ಮೇ ಮೊದಲ ವಾರ ನಡೆಯಲಿರುವ ಬಿಜೆಪಿ ಹಾಗೂ ಮಿತ್ರಕೂಟದ ಸಮನ್ವಯ ಸಮಿತಿ ಸಭೆಯಲ್ಲಿ ಭಾಗವಹಿಸಲು ಎಐಎಡಿಎಂಕೆ ಪಕ್ಷದ ನಾಯಕಿ ಜಯಲಲಿತಾ ಸಮ್ಮತಿಸುವುದರೊಂದಿಗೆ ವಾಜಪೇಯಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ತಲೆದೋರಿದ್ದ ಬಿಕ್ಕಟ್ಟು ಇಂದು ಬಗೆಹರಿಯಿತು.

ಕೇಂದ್ರ ಸಚಿವರಾದ ಹೆಗಡೆ ಮತ್ತು ಜೇಠ್ಮಲಾನಿ ಅವರನ್ನು ಸಂಪುಟದಿಂದ ಕೈಬಿಡುವ ಬೇಡಿಕೆಯನ್ನು ಒತ್ತಾಯಿಸದಿರಲು ಮತ್ತು ವಾಜಪೇಯಿ ನೇತೃತ್ವದ ಸರ್ಕಾರವನ್ನು ಬಲಪಡಿಸಲು ಜಯಲಲಿತಾ ಅವರು ನಿರ್ಧರಿಸಿದ್ದಾರೆ.

ರಾಮಕೃಷ್ಣ ಹೆಗಡೆ ಮತ್ತು ರಾಮ್ ಜೇಠ್ಮಲಾನಿ ಅವರನ್ನು ಕೈಬಿಡಬೇಕೆಂಬ ಎಐಎಡಿಎಂಕೆ ಒತ್ತಾಯದಿಂದಾಗಿ ತಲೆದೋರಿರುವ ಬಿಕ್ಕಟ್ಟನ್ನು ಪರಿಹರಿಸುವ ಯತ್ನವಾಗಿ ಬಿಜೆಪಿ ಮುಖಂಡ ಹಾಗೂ ಪ್ರಧಾನಿ ಅವರ ಪ್ರತಿನಿಧಿ ಜಸ್ವಂತ್ ಸಿಂಗ್ ಅವರು ಜಯಲಲಿತಾ ಅವರ ಜತೆ ಇಂದು ಇಲ್ಲಿ ಮಾತುಕತೆ ನಡೆಸಿದರು.

● **ಕರ್ನಾಟಕದಿಂದ ಮೊಕದ್ದಮೆ ವರ್ಗ: ವೀರಪ್ಪನ್ ಷರತ್ತು**

ಕೊಯಮತ್ತೂರು, ಏ. 25 (ಪಿಟಿಐ)– ತನ್ನ ವಿರುದ್ಧ ಕರ್ನಾಟಕದಲ್ಲಿ ದಾಖಲಾಗಿರುವ ಎಲ್ಲ ಮೊಕದ್ದಮೆಗಳನ್ನು ತಮಿಳುನಾಡಿಗೆ ವರ್ಗಾಯಿಸುವುದಾದರೆ ಮಾತ್ರ ತಾನು ಶರಣಾಗುವುದಾಗಿ ಕಾಡುಗಳ್ಳ ವೀರಪ್ಪನ್ ಇಂಗಿತ ವ್ಯಕ್ತಪಡಿಸಿದ್ದಾನೆ.

ಅಂತಿಯೂರು ಅರಣ್ಯ ಪ್ರದೇಶದಲ್ಲಿ ದೂತನೊಬ್ಬನನ್ನು ಭೇಟಿ ಮಾಡಿದ ವೀರಪ್ಪನ್, 'ನಕ್ಕೀರನ್' ತಮಿಳು ಪತ್ರಿಕೆಯ ಸಂಪಾದಕರಿಗೆ ಶರಣಾಗತಿಯ ಬಗ್ಗೆ ವಿವರಿಸಿದ್ದಾನೆ ಎಂದು ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಗುರುವಾರ, 26-4-1973

● **ಸಂಪ್ರದಾಯ ಮುರಿದ ಭಾರತ ಶ್ರೇಷ್ಠ ನ್ಯಾಯಮೂರ್ತಿ ಸ್ಥಾನಕ್ಕೆ ರಾಯ್ ನೇಮಕ**

ನವದೆಹಲಿ, ಏ. 25– ನ್ಯಾಯಾಂಗದ ಅತ್ಯುನ್ನತ ಹುದ್ದೆಗೆ ಅತಿ ಹಿರಿಯ ನ್ಯಾಯಮೂರ್ತಿಗಳನ್ನು ನೇಮಿಸುವ ಸಂಪ್ರದಾಯವನ್ನು ಮುರಿದು ಅಜಿತನಾಥ ರಾಯ್ ಅವರನ್ನು ಭಾರತದ ಶ್ರೇಷ್ಠ ನ್ಯಾಯಮೂರ್ತಿಯನ್ನಾಗಿ ಇಂದು ರಾಷ್ಟ್ರಪತಿ ವಿ.ವಿ.ಗಿರಿ ಅವರು ನೇಮಿಸಿದರು.

ಈ ದಿನ ನಿವೃತ್ತರಾದ ಎಸ್.ಎಂ.ಸಿಕ್ರಿ ಅವರ ಸ್ಥಾನದಲ್ಲಿ ನೇಮಕಗೊಂಡಿರುವ ಎ.ಎನ್.ರಾಯ್ ಅವರು ನಾಳೆ ಪ್ರಮಾಣವಚನ ಸ್ವೀಕರಿಸುವರು.

ರಾಯ್ ಅವರನ್ನು ಈ ಸ್ಥಾನಕ್ಕೆ ನೇಮಿಸಲು ಸರ್ಕಾರ ಕೆಲವು ದಿನಗಳ ಹಿಂದೆಯೇ ನಿರ್ಧಾರ ಕೈಗೊಂಡಿದ್ದು, ಅದನ್ನು ಗೋಪ್ಯವಾಗಿಟ್ಟಿತ್ತು.

ಮೂಲಭೂತ ಹಕ್ಕುಗಳ ಪ್ರಕರಣದ ಬಗ್ಗೆ ಸರ್ವೋಚ್ಚ ನ್ಯಾಯಾಲಯ ತೀರ್ಪಿತ್ತ ನಂತರ ರಾಷ್ಟ್ರಪತಿ ಅವರು ಈ ದಿನ ನೇಮಕ ಪತ್ರಕ್ಕೆ ಸಹಿ ಹಾಕಿ ಸರ್ವೋಚ್ಚ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟರು.

● **ಕೇಂದ್ರ ಸಾಹಿತ್ಯ ಅಕಾಡೆಮಿ ಸಲಹಾ ಮಂಡಳಿಗೆ ಶಿವರುದ್ರಪ್ಪ**

ಬೆಂಗಳೂರು, ಏ. 25– ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿಯು, ಅಕಾಡೆಮಿಯ ಕನ್ನಡ ಸಲಹಾ ಮಂಡಳಿ ಸದಸ್ಯರನ್ನಾಗಿ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಜಿ.ಎಸ್.ಶಿವರುದ್ರಪ್ಪ ಅವರನ್ನು ನೇಮಿಸಿದೆ.

ಪಕ್ಷಾಂತರಿಗಳು ಮತ್ತೆ ನೆಗೆಯುವುದಿಲ್ಲವೆಂಬ 'ಗ್ಯಾರಂಟಿ' ಕಾಂಗ್ರೆಸ್‌ಗೆ ಇದೆಯೇ?

ನಿಲ್ಲದ ಪೈಪೋಟಿ: ಯಾರಿಗೆ ಯಾರು ಸಾಟಿ?

ಗತಿಬಿಂಬ

ವೈ.ಗ. ಜಗದೀಶ್

'ಆಡಳಿತ ವಿರೋಧಿ ಅಲೆ, ಮುಖ್ಯಮಂತ್ರಿ ಬದಲಾವಣೆ, ಲಿಂಗಾಯತರ ಮುನಿಸು, ಭ್ರಷ್ಟಾಚಾರದ ಆರೋಪಗಳೇ ಬಿಜೆಪಿಗೆ ಮುಳುವಾಗಲಿವೆ' ಎಂಬ ನಂಬುಗೆಯ ಹಾಯಿದೋಣಿಯಲ್ಲಿ ಕುಳಿತಿರುವ ಕಾಂಗ್ರೆಸ್ ನಾಯಕರು, ತಿಂಗಳು ಕಳೆಯುವಷ್ಟರಲ್ಲಿ ಅಧಿಕಾರದ ಗದ್ದುಗೆಗೆ ಏರಿ ಕುಳಿತಿರುತ್ತೇವೆ ಎಂಬ ಹೊಂಗನಸಿನಲ್ಲಿದ್ದಾರೆ.

ಐದು ವರ್ಷ ಸ್ವತಂತ್ರವಾಗಿ ಅಧಿಕಾರ ನಡೆಸುವ ಅವಕಾಶ ಸಿಗದೆ ಕತ್ತಲದಾರಿಯಲ್ಲೇ ಸಾಗಿರುವ ಕಾಂಗ್ರೆಸ್ ನಾಯಕರಿಗೆ ಬೆಳಕಿನ ಗೆರೆಗಳು ಕಂಡಿರಬಹುದು. ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆ, ಅಮಿತ್ ಶಾ- ಬಿ.ಎಲ್.ಸಂತೋಷ್ ಅವರು ರೂಪಿಸಿರುವ ದುರ್ಗಮ ಕೋಟೆಯನ್ನು ಒಡೆದು, ಅಧಿಕಾರ ಕೈವಶ ಮಾಡಿಕೊಳ್ಳುವುದು ಅಷ್ಟು ಸಲೀಸಲ್ಲ.

ಕಾಂಗ್ರೆಸ್ ನಾಯಕರು ಬಹಿರಂಗವಾಗಿ ಹೇಳಿಕೊಳ್ಳುತ್ತಿರುವ ಲೆಕ್ಕಾಚಾರದಂತೆ, ಒಂದು ವೇಳೆ ಪೂರ್ಣ ಬಹುಮತ ಬಂದರೂ ಮುಖ್ಯಮಂತ್ರಿ ಯಾರಾಗಬೇಕು ಎಂಬ ವಿಷಯದಲ್ಲಿ ಒಮ್ಮತದ ನಿರ್ಣಯಕ್ಕೆ ಬರುವುದು ದೊಡ್ಡ ಸವಾಲು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಾವಿಬ್ಬರೂ ಒಂದೇ ಬಂಡಿಯ ಚಕ್ರಗಳು ಎಂದು ಬಿಂಬಿಸಿಕೊಳ್ಳಲು ನಾನಾ ರೀತಿಯ ಕಸರತ್ತು ನಡೆಸಿದ್ದಾರೆ. ಬಂಡಿ ಏರುವ ಅವಕಾಶ ದಕ್ಕಿದರೆ ಒಂಟೆತ್ತಿನ ಸವಾರಿಗೆ ಇಬ್ಬರೂ ಪೈಪೋಟಿ ನಡೆಸುವುದಿಲ್ಲ ಎಂಬುದಕ್ಕೆ ಯಾರೂ ಖಾತರಿ ಕೊಡಲು ಸಾಧ್ಯವಿಲ್ಲ.

30 ವರ್ಷಗಳ ಹಿಂದೆ ದೇಶದಲ್ಲಿ ಅವಿಭಜಿತ ಜನತಾದಳ ಪ್ರಬಲವಾಗಿತ್ತು. 1994ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಜನತಾದಳದ ನೇತೃತ್ವವನ್ನು ಎಚ್.ಡಿ.ದೇವೇಗೌಡರು ವಹಿಸಿದ್ದರು. ಮೂವರು ಮುಖ್ಯಮಂತ್ರಿಗಳನ್ನು ಬದಲಾಯಿಸಿದ್ದು, ವೀರೇಂದ್ರ ಪಾಟೀಲರನ್ನು ಅಕಾಲಿಕವಾಗಿ ಅಧಿಕಾರದಿಂದ ಇಳಿಸಿದ್ದು ಕಾಂಗ್ರೆಸ್‌ಗೆ ಮರ್ಮಾಘಾತ ನೀಡಿತ್ತು. ದೇವೇಗೌಡರು ಮತ್ತು ಜನತಾದಳದಲ್ಲಿ ಅಂದು ಮುಂಚೂಣಿಯಲ್ಲಿದ್ದ ಹಲವರ ಸಂಘಟನಾ ಶಕ್ತಿ ಜನತಾದಳಕ್ಕೆ ಭಾರಿ ಬಹುಮತ ತಂದುಕೊಟ್ಟಿತ್ತು. ಆದರೆ, ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯ ವಿಷಯ ಬಂದಾಗ, 1983ರಲ್ಲಿ ರಂಗಕ್ಕೆ ಇಳಿದು ಅಧಿಕಾರದ ಚುಕ್ಕಾಣಿ ಹಿಡಿದ ರೀತಿಯಲ್ಲಿಯೇ ಮತ್ತೊಮ್ಮೆ ಕರ್ನಾಟಕದ ಅನಭಿಷಿಕ್ತ ನಾಯಕನಾಗಬೇಕು ಎಂಬ ಹಂಬಲಕ್ಕೆ ಬಿದ್ದ ರಾಮಕೃಷ್ಣ ಹೆಗಡೆ, ರಂಗ ಪ್ರವೇಶಿಸಿದರು.

ಕರ್ನಾಟಕದಲ್ಲಿನ ನಾಯಕತ್ವದ ಆಯ್ಕೆ ಉಸ್ತುವಾರಿ ಬಿಜು ಪಟ್ನಾಯಕ್ ಹೆಗಲೇರಿತ್ತು. ಗೌಡರ ನೇತೃತ್ವದಲ್ಲಿ ಚುನಾವಣೆ ಎದುರಿಸಿದ್ದರಿಂದ, ಅವರೇ ಮುಖ್ಯಮಂತ್ರಿಯಾಗಬೇಕು ಎಂಬುದು ಆ ಪಕ್ಷದ ದೆಹಲಿ ನಾಯಕರ ಅಪೇಕ್ಷೆಯಾಗಿತ್ತು. ಆದರೆ, ಹೆಗಡೆಯವರು ಹಟ ಬಿಡಲಿಲ್ಲ. ಹೆಗಡೆ ಮತ್ತು ದೇವೇಗೌಡರ ಜತೆ ಸಭೆ ನಡೆಸಿದ ಬಿಜು ಪಟ್ನಾಯಕ್, ಈ ವಿಷಯ ಪ್ರಸ್ತಾಪಿಸಿದಾಗ ಹೆಗಡೆಯವರು ಕೆರಳಿ ಕೆಂಡವಾಗಿದ್ದರು.

ಮಾರನೇ ದಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆದಿತ್ತು. ಗೌಡರಿಗೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ಮತ್ತೊಮ್ಮೆ ತಪ್ಪಿಸಲಾಗುತ್ತದೆ ಎಂದು ಆಕ್ರೋಶಗೊಂಡಿದ್ದ ಬೆಂಬಲಿಗರು ವಿಧಾನಸೌಧದ ಎದುರು ನಾಯಕರ ಬಟ್ಟೆ ಎಳೆದಾಡಿ ಕಾರುಗಳನ್ನು ಗುದ್ದಿ ಸಿಟ್ಟು ತೋರಿದ್ದರು. ಇಲ್ಲಿ ಇತ್ಯರ್ಥವಾಗುವ ವಿಷಯವಲ್ಲವೆಂದು ಮನವರಿಕೆಯಾದಾಗ, ಶಾಸಕರ ಮತ ಸಂಗ್ರಹಿಸುವ ಜತೆಗೆ, ತಮ್ಮ ಆಯ್ಕೆ ಗೌಡರು ಎಂದು ವರಿಷ್ಠರು ಹೇಳಿದ್ದರಿಂದಾಗಿ ವಿಷಯ ಅಲ್ಲಿಗೆ ತಣ್ಣಗಾಯಿತು.

ಕಾಂಗ್ರೆಸ್‌ಗೆ ಬಹುಮತ ಬಂದರೆ, ಮುಖ್ಯಮಂತ್ರಿ ಪಟ್ಟಕ್ಕೆ ಇಬ್ಬರೂ ನಾಯಕರು ತಮ್ಮದೇ ಆದ ತಂತ್ರಗಳನ್ನು ಹೆಣೆಯದೇ ಇರಲಾರರು. ಸಿದ್ದರಾಮಯ್ಯನವರು ಇದೇ ತಮ್ಮ ಕೊನೆ ಚುನಾವಣೆ ಎಂದು ಹೇಳಿಕೊಂಡಿದ್ದು, ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಇಂಗಿತದಲ್ಲಿದ್ದಾರೆ. ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ವೆಂಕಟಸ್ವಾಮಿ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಹೋಗಿದ್ದ ಡಿ.ಕೆ.ಶಿವಕುಮಾರ್ ಅವರು ದೇವನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್. ಮುನಿಯಪ್ಪ ಅವರ ಜತೆಗಿನ ಮಾತುಕತೆ ವೇಳೆ, 'ನನ್ನನ್ನು ಯಾವಾಗ ಸಿಎಂ ಮಾಡುತ್ತೀರಾ' ಎಂದು ಕೇಳಿದ್ದರು. ಚುನಾವಣೆಗೆ ಸಿದ್ಧತೆ ಆರಂಭವಾದಾಗಿನಿಂದಲೂ ಫಲಿತಾಂಶದ ಬಳಿಕ ತಮ್ಮ ಪರವಾಗಿ ನಿಲ್ಲಬಲ್ಲವರಿಗೆ ಟಿಕೆಟ್ ಕೊಡಿಸಿ, ಅವರಿಗೆ ಬೇಕಾದ 'ನೆರವು' ಕೊಡಿಸುವಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಬಹಳಷ್ಟು ಸಂಕಲನ- ವ್ಯವಕಲನದ ಕಸುಬು ನಡೆಸಿದ್ದಾರೆ. ಇಬ್ಬರ ಮಧ್ಯದ ಗುದ್ದಾಟ ಮೂರನೆಯವರಿಗೆ ದಾರಿ ಮಾಡಿಕೊಡುತ್ತದೆಯೋ ಎಂಬ ಕುತೂಹಲವಂತೂ ಇದೆ.

ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರನ್ನು ಕಾಂಗ್ರೆಸ್‌ಗೆ ಕರೆತರುವ ಮಹತ್ವದ ನಿರ್ಧಾರದ ಹಿಂದೆ, ಭವಿಷ್ಯದ ಸ್ಪರ್ಧೆಯಲ್ಲಿ ತಮ್ಮ ಬೆಂಬಲಕ್ಕೆ ನಿಲ್ಲುವವರು ಯಾರು, ಪೈಪೋಟಿ ಒಡ್ಡಿದರೆ 'ಚೆಕ್‌ಮೇಟ್' ನೀಡಲು ಯಾರಿರಬೇಕು ಎಂಬ ಲೆಕ್ಕಾಚಾರವೂ ಇದೆ. ಇಬ್ಬರ ಸ್ಪರ್ಧೆಯ ಮಧ್ಯೆ, ಎಂ.ಬಿ.ಪಾಟೀಲರು ತಾವೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳಿಕೊಂಡಿದ್ದುಂಟು. ಸಿದ್ದರಾಮಯ್ಯ ಜತೆಗೆ ನಿಕಟ ಬಾಂಧವ್ಯ ಹೊಂದಿರುವ ಪಾಟೀಲರು ಮೂರನೇ ಹುರಿಯಾಳಾಗಿ ಬಂದರೆ, ಮತ್ತಿಬ್ಬರು ಲಿಂಗಾಯತರನ್ನು ಕಣಕ್ಕೆ ಇಳಿಸುವುದು, ಈ ಆಟ ಹೂಡಿದವರ ಹಿಂದಿನ ತರ್ಕ ಎಂಬುದು ರಹಸ್ಯವೇನಲ್ಲ.

ಗೆಲುವಿನ ಸಂಖ್ಯೆ 130ರ ಗಡಿ ದಾಟದಿದ್ದರೆ ಸರಳ ಬಹುಮತ ಸಿಕ್ಕಿದರೂ ಅಧಿಕಾರ ದಕ್ಕಿಸಿಕೊಳ್ಳುವುದು ಕಾಂಗ್ರೆಸ್‌ಗೆ ಅಷ್ಟೇನೂ ಸಲೀಸಲ್ಲ. ಕರ್ನಾಟಕದಲ್ಲಿ ಸಂಶೋಧಿಸಿ, ಇಲ್ಲಿ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಪ್ರಯೋಗಿಸಿದ 'ಆಪರೇಷನ್ ಕಮಲ'ದ ಅಸ್ತ್ರವನ್ನು ಮತ್ತಷ್ಟು ಹರಿತಗೊಳಿಸಿರುವ ಬಿಜೆಪಿ ನಾಯಕರು ಅದನ್ನು ಮತ್ತೆ ಇಲ್ಲಿಯೇ ಉಪಯೋಗಿಸಲು ಹಿಂಜರಿಕೆ ತೋರುವುದಿಲ್ಲ.

2019ರಲ್ಲಿ ನಡೆದ ಆಪರೇಷನ್ ಕಮಲ ಕಾರ್ಯಾಚರಣೆ 2023ರಲ್ಲಿ ಮತ್ತೆ ನಡೆಯಬಾರದೆಂಬ ಕಾರಣಕ್ಕೆ ಕಾಂಗ್ರೆಸ್ ಮುಖಂಡರು ಹಲವು ಕ್ರಮಗಳನ್ನು ಆರಂಭದಲ್ಲೇ ಕೈಗೊಂಡಿದ್ದರು. ಹೀಗಾಗಿ, ಮೂರು ತಿಂಗಳ ಮೊದಲೇ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದಾಗಿಯೂ ಹೇಳಿದ್ದರು. ಯಾವ ಕ್ಷೇತ್ರದಲ್ಲಿ ಎಷ್ಟು ಜನ ಆಕಾಂಕ್ಷಿಗಳಿದ್ದಾರೆ ಎಂಬುದನ್ನು ತಿಳಿಯಲು ಟಿಕೆಟ್‌ಗಾಗಿ ಅರ್ಜಿ ಆಹ್ವಾನಿಸಿದ್ದರು. 224 ಕ್ಷೇತ್ರಗಳಿಗೆ ಒಟ್ಟು 1,100 ಅರ್ಜಿಗಳು ಬಂದಿದ್ದವು. ಇದರ ಜತೆಗೆ, ಹಲವು ಸುತ್ತಿನ ಸಮೀಕ್ಷೆಗಳನ್ನು ಪಕ್ಷದ ವತಿಯಿಂದ ನಡೆಸಿ, ಮಾಹಿತಿಯನ್ನೂ ಸಂಗ್ರಹಿಸಿದ್ದರು. ಅದೆಲ್ಲ ನಡೆದರೂ ಗೆದ್ದು, ಅಧಿಕಾರ ಹಿಡಿಯುವ ಮಟ್ಟಕ್ಕೆ ಪಕ್ಷವನ್ನು ದಡ ಮುಟ್ಟಿಸಲು ಬೇಕಾದ ಸಂಖ್ಯೆಯಷ್ಟು ಅಭ್ಯರ್ಥಿಗಳು ಕಾಂಗ್ರೆಸ್‌ಗೆ ಸಿಗಲಿಲ್ಲ. ಸಂಕ್ರಾಂತಿಗೆ ಮೊದಲು ಪಟ್ಟಿ ಬಿಡುಗಡೆ, ಜನವರಿ ಅಂತ್ಯಕ್ಕೆ ಬಿಡುಗಡೆ ಎಂದರೂ ಕೊನೆಗೆ ಮೊದಲ ಪಟ್ಟಿ ಬಿಡುಗಡೆಯಾಗಿದ್ದು ಮಾರ್ಚ್ 29ಕ್ಕೆ. ಅದೂ ಪೂರ್ಣ ಪಟ್ಟಿಯಲ್ಲ.

ಏನೆಲ್ಲ ಕಸರತ್ತು, ಸಮೀಕ್ಷೆ ಮಾಡಿದರೂ ಕೆಲವು ಕ್ಷೇತ್ರಗಳ ಪಟ್ಟಿ ಪ್ರಕಟಿಸದೆ ಕಾಯ್ದರೂ, 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ, ಜೆಡಿಎಸ್‌ನಿಂದ ಬಂದ ಅಭ್ಯರ್ಥಿಗಳಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದೆ. 2018ರಲ್ಲಿ ಕಾಂಗ್ರೆಸ್‌ಗೆ ಬಹುಮತ ಬರದೆ 79 ಸ್ಥಾನಗಳಲ್ಲಷ್ಟೇ ಗೆದ್ದಿತ್ತು. ಆರಂಭದಲ್ಲೇ ಆಪರೇಷನ್ ಮಾಡಬೇಕೆಂಬ ಯಡಿಯೂರಪ್ಪ ಪ್ರಯತ್ನ ಕೈಗೂಡಲಿಲ್ಲ. ಮೈತ್ರಿ ಸರ್ಕಾರ ಬಂದ ವರ್ಷದಲ್ಲೇ ಪಕ್ಷೇತರರಾಗಿ ಗೆದ್ದು ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದ ಇಬ್ಬರ ಜತೆಗೆ, ಕಾಂಗ್ರೆಸ್‌ನಿಂದ ಗೆದ್ದ 12 ಶಾಸಕರನ್ನು ಸೆಳೆದ ಬಿಜೆಪಿ, ಸರ್ಕಾರವನ್ನು ಉರುಳಿಸಿತು. ಅಂದು, ಯಡಿಯೂರಪ್ಪ ಆಪರೇಷನ್‌ಗೆ ಇಲ್ಲಿನ ಸರ್ಕಾರ ನಡುಗಿತು. ಈಗ ಹಾಗಲ್ಲ; ಸ್ವತಃ ಕೇಂದ್ರ ಗೃಹ ಸಚಿವರು, ಪಕ್ಷದ ಸಂಘಟನಾ ಕಾರ್ಯದರ್ಶಿಯೇ 'ಕಮಲ' ಹಿಡಿದು ನಿಂತಿದ್ದಾರೆ.

ತಮ್ಮದೇ ಪಕ್ಷದ ಸಿದ್ಧಾಂತವನ್ನು ನೆಚ್ಚಿಕೊಂಡವರು, ದಶಕಗಳಿಂದ ಪಕ್ಷದಲ್ಲಿ ಕೆಲಸ ಮಾಡಿದವರನ್ನು ಬಿಟ್ಟು ಕೊನೆಗಳಿಗೆಯಲ್ಲಿ ಹೊರಗಿನಿಂದ ಬಂದವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. 2019ರಲ್ಲಿ ಪಕ್ಷಾಂತರ ಮಾಡಿ ಬಿಜೆಪಿಗೆ ಜಿಗಿದ ಹಲವರು ಸಿದ್ದರಾಮಯ್ಯನವರ ಜತೆಗೆ ಅತ್ಯಂತ ಸನಿಹದ ಸಂಬಂಧ ಹೊಂದಿದವರಾಗಿದ್ದರು. ಅಂತಹವರನ್ನೇ ಬಿಜೆಪಿ ಬಿಡಲಿಲ್ಲ. ಈ ಬಾರಿ, ಅನೇಕರು ಬಿಜೆಪಿಯಿಂದಲೇ ಬಂದಿದ್ದಾರೆ. ದಶಕಗಳ ಕಾಲ ಸಂಘದ ಗರಡಿಯಲ್ಲಿ ಬೆಳೆದವರನ್ನು ಕರೆತಂದು ಮಣೆ ಹಾಕಲಾಗಿದೆ. ಅವರು ಮಾತ್ರವಲ್ಲ, ಮೂಲ ಕಾಂಗ್ರೆಸಿಗರನ್ನೇ ಬಿಜೆಪಿ ಸೆಳೆಯಲಾರದು ಎಂಬುದಕ್ಕೆ ಏನೂ ಖಾತರಿ ಇಲ್ಲ. ಮತ ಸೆಳೆಯಲು ಮುಂದಾಗಿರುವ ಕಾಂಗ್ರೆಸ್ ನಾಯಕರು ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿಯಂತಹ 'ಕಾಂಗ್ರೆಸ್ ಗ್ಯಾರಂಟಿ'ಗಳನ್ನು ಘೋಷಿಸಿದ್ದಾರೆ. ಆದರೆ, ಚುನಾವಣೆಯಲ್ಲಿ ಗೆದ್ದವರು ಅನ್ಯಪಕ್ಷಕ್ಕೆ ನೆಗೆಯಲಾರರು ಎಂಬ 'ಗ್ಯಾರಂಟಿ' ಇದ್ದರಷ್ಟೇ ಕಾಂಗ್ರೆಸ್ ನಾಯಕರ ದಾರಿಯಲ್ಲಿ ಅಧಿಕಾರದ ಬೆಳಕು ಹರಿಯಬಹುದು.

ಚುರುಮುರಿ

ಮನೆ ಬಾಗಿಲಿಗೆ ಮಂತ್ರಿ

● ಮಣ್ಣೆ ರಾಜು

'ಮಂತ್ರಿ ಮಾನಪ್ಪ ನಮ್ಮ ಮನೆಗೆ ಬಂದಿದ್ರೂರೀ...' ಸುಮಿ ಸಡಗರಪಟ್ಟಳು.

'ಅವರೀಗ ಚುನಾವಣಾ ಅಭ್ಯರ್ಥಿ, ವೋಟು ಕೇಳಲು ಬಂದಿರ್ತಾರೆ...' ಅಂದ ಶಂಕ್ರಿ.

'ಹೌದೂರೀ, ಬಾಗಿಲಲ್ಲಿ ನಾನು ಹಾಕಿದ್ದ ರಂಗೋಲಿ ನೋಡಿ, ತುಂಬಾ ಚೆನ್ನಾಗಿ ರಂಗೋಲಿ ಹಾಕಿದ್ದೀರಿ ಅಂತ ಮೆಚ್ಚಿಕೊಂಡರು. ಮಂತ್ರಿ ಹಿಂದೆ ಬಂದಿದ್ದ ಟೀವಿಯವರು ನನ್ನ ರಂಗೋಲಿ ವಿಡಿಯೊ ಮಾಡಿಕೊಂಡು ನನ್ನನ್ನೂ ಮಾತನಾಡಿಸಿದ್ರು, 'ರಸ್ತೆ ತುಂಬಾ ರಂಗೋಲಿ ಹಾಕಬೇಕು ಅನ್ನೋ ಆಸೆ ಇದೆ, ರಂಗೋಲಿ ಪುಡಿ ದುಬಾರಿ. ಸರ್ಕಾರ ರಂಗೋಲಿ ಭಾಗ್ಯ ಯೋಜನೆ ಜಾರಿಗೆ ತಂದು ಮನೆಮನೆಗೂ ಉಚಿತವಾಗಿ ರಂಗೋಲಿ ಪುಡಿ ವಿತರಣೆ ಮಾಡಬೇಕು' ಎಂದು ಟೀವಿಯಲ್ಲಿ ಒತ್ತಾಯ ಮಾಡಿದೆ'.

'ವೆರಿಗುಡ್, ಮನೆಗೆ ಬಂದ ಮಂತ್ರಿಗೆ ತಿಂಡಿ-ಕಾಫಿ ಕೊಟ್ಟೋ ಇಲ್ವೋ?'

'ಚಿತ್ರಾನ್ನ ಮಾಡಿದ್ದೀನಿ ತಿನ್ನಿ ಅಂದೆ, ಬೇಡ ಅಂತ ಶುಗರ್‌ಲೆಸ್ ಕಾಫಿ ಕುಡಿದರು... ಯಜಮಾನ್ರು ಚೆನ್ನಾಗಿದ್ದಾರಾ, ಮಕ್ಕಳು ಏನು ಓದುತ್ತಿದ್ದಾರೆ ಅಂತೆಲ್ಲಾ ನಮ್ಮ ಆರೋಗ್ಯ, ಸೌಭಾಗ್ಯ ವಿಚಾರಿಸಿದರು'.

'ನಮ್ಮದಿರಲಿ, ಮಂತ್ರಿ ಆರೋಗ್ಯವಾಗಿ ಇದ್ದಾರಂತಾ?'

'ಇದ್ದಂತಿಲ್ಲಾರೀ, ಟೀವಿ ನ್ಯೂಸ್‌ನಲ್ಲಿ ನಾವು ನೋಡುತ್ತಿದ್ದ ಮಂತ್ರಿಯ ಮುಖದ ಕಲರ್, ಖದರ್ ಡಲ್ ಆಗಿತ್ತು'.

'ಮತ ಯಾಚನೆಗಾಗಿ ಉರಿಬಿಸಿಲಿನಲಿ ಬೀದಿಬೀದಿ ಅಲೆದಾಡಿ ಗ್ಲಾಮರ್ ಕಳಕೊಂಡಿದ್ದಾರೆ'.

'ಕೈಗೊಂದು, ಕಾಲಿಗೊಂದು ಆಳು, ಕಾರಿಳಿಯಲು ಬಾಗಿಲು ತೆರೆಯೋರು, ಕಾರಿಳಿದಾಗ ಹಾರ ಹಾಕಿ ಕೈ ಮುಗಿಯೋರು... ಹೀಗೆಲ್ಲಾ ಮಹಾರಾಜನಂತೆ ಮೆರೆಯುತ್ತಿದ್ದ ಮಂತ್ರಿ ಇವತ್ತು ವೋಟಿಗಾಗಿ ಮನೆಮನೆಗೆ ಅಲೆಯುವ ಸ್ಥಿತಿ ಬಂತಲ್ರೀ, ಪಾಪ...'

'ಐದು ವರ್ಷದ ಕಾಲಚಕ್ರದ ಬದಲಾವಣೆ. ನಾವು ಹುಡುಕಿಕೊಂಡು ಹೋದರೂ ಸಿಗದ ಮಂತ್ರಿ ಇವತ್ತು ನಮ್ಮನ್ನೇ ಹುಡುಕಿಕೊಂಡು ನಮ್ಮ ಮನೆ ಬಾಗಿಲಿಗೆ ಬರುವಂತಾಗಿದೆ. ಇದೆಲ್ಲಾ ಪ್ರಜಾಪ್ರಭುತ್ವ ಎನ್ನುವ ವಿಧಿಯಾಟ...' ಎಂದ ಶಂಕ್ರಿ.

ಸಂಗತ

ವಿಮಾನಯಾನ: ಇರಲಿ ಸಂಯಮ!

ವಿಮಾನಯಾನಕ್ಕೆ ಮೊದಲು ಪ್ರಯಾಣಿಕರಿಗೆ ವಾಸ್ತವದ ಅರಿವಿರುವುದು ಅವಶ್ಯಕ

● ಡಾ. ಕೆ.ಎಸ್.ಚೈತ್ರಾ

ವಿಮಾನದಲ್ಲಿ ಪ್ರಯಾಣಿಸುವಾಗ ಮಗುವಿನ ಅಳುವಿನಿಂದ ಸಿಟ್ಟಿಗೆದ್ದ ಪ್ರಯಾಣಿಕನಿಂದ ಸಿಬ್ಬಂದಿ ಜತೆ ಹೊಡೆದಾಟ, ಬೇಕಾದ ಆಹಾರ ಸಿಗಲಿಲ್ಲ ಎಂದು ಗಗನಸಖಿಯನ್ನು ನಿಂದಿಸಿದ ಮಧ್ಯವಯಸ್ಕ, ಸೂಕ್ತ ಸೀಟ್ ಕೊಡಲಿಲ್ಲ ಎಂದು ಗಲಾಟೆ ಮಾಡಿದ ಮಹಿಳೆ... ಇವು ವಿಮಾನ ಪ್ರಯಾಣದ ಕುರಿತು ಇತ್ತೀಚೆಗೆ ಆಗಾಗ್ಗೆ ಬಂದ ಸುದ್ದಿಗಳು. ಈ ರೀತಿ ವಿಮಾನಯಾನದಲ್ಲಿ ತಾಳ್ಮೆ ಕಳೆದುಕೊಂಡು ಸಿಟ್ಟಿಗೇಳುವುದನ್ನು 'ಏರ್‌ರೇಜ್' ಎಂದು ಕರೆಯಲಾಗುತ್ತದೆ. ಈ ಪ್ರವೃತ್ತಿ ಜನರಲ್ಲಿ ಹೆಚ್ಚುತ್ತಿರುವುದಕ್ಕೆ ಅನೇಕ ಕಾರಣಗಳಿವೆ.

ಬೇಸಿಗೆ ಅಂದರೆ ಪ್ರವಾಸದ ಸಮಯ. ಬಸ್ಸು, ರೈಲಿನ ಜತೆ ವಿಮಾನಯಾನವೂ ಈಗ ಸಾಮಾನ್ಯರಿಗೆ ಲಭ್ಯ. ಏರಿದ ಆರ್ಥಿಕ ಮಟ್ಟ, ಪ್ರವಾಸದ ಕುರಿತ ಆಸಕ್ತಿ, ಹೆಚ್ಚಿದ ವಿಮಾನಗಳ ಸಂಖ್ಯೆ ಮತ್ತು ಅನುಕೂಲದ ದೃಷ್ಟಿಯಿಂದ ವಿಮಾನಯಾನದ ಬಗ್ಗೆ ಒಲವು ಹೆಚ್ಚುತ್ತಿದೆ. ಹೀಗಾಗಿ, ಕಿಕ್ಕಿರಿದು ತುಂಬಿದ ಏರ್‌ಪೋರ್ಟ್‌ಗಳು, ಉದ್ದವಾದ ಸಾಲುಗಳು ಮತ್ತು ಜನದಟ್ಟಣೆ ಎಲ್ಲೆಲ್ಲೂ ಕಂಡುಬರುವ ದೃಶ್ಯ. ಆರಾಮದಾಯಕ ಅನುಭವ ಪಡೆಯುವ ಉದ್ದೇಶವನ್ನು ಇಟ್ಟುಕೊಂಡು ಬಂದ ಜನರಿಗೆ ಈ ರೀತಿಯ ಕಾಯುವಿಕೆ, ಹೆಚ್ಚಿರುವ ಸುರಕ್ಷಾ ಕ್ರಮಗಳು, ಗಡಿಬಿಡಿ ತೋರುವ ಅಧಿಕಾರಿಗಳಿಂದ ಬಹಳಷ್ಟು ಕಿರಿಕಿರಿ ಉಂಟಾಗುತ್ತದೆ. ಹೀಗಾಗಿ, ವಿಮಾನ ಹತ್ತುವ ಮೊದಲೇ ಕೆಲವು ಪ್ರಯಾಣಿಕರಲ್ಲಿ ಅಸಹನೆ ತಲೆದೋರಿರುತ್ತದೆ.

ಬದಲಾದ ವಿಮಾನಗಳ ಸ್ವರೂಪವೂ ಪ್ರಯಾಣಿಕರ ಕಿರಿಕಿರಿಗೆ ಕಾರಣವಾಗಬಲ್ಲದು. ಬಹಳಷ್ಟು ವಿಮಾನಗಳಲ್ಲಿ ಕಿರಿದಾದ ಆಸನಗಳು, ಕಾಲು ಚಾಚಲು ಕಡಿಮೆ ಅಂತರ, ಚೀಲಗಳನ್ನು ಇಡಲು ಚಿಕ್ಕದಾದ ಸ್ಥಳಾವಕಾಶ... ಇವೆಲ್ಲವೂ ಲಾಭದಾಯಕ ದೃಷ್ಟಿಯಿಂದ ಮಾಡಲಾದ ಬದಲಾವಣೆಗಳು. ಪ್ರಯಾಣಿಕರನ್ನು ಆಕರ್ಷಿಸಲು ನೀಡುವಂತಹ ಜಾಹೀರಾತುಗಳು ಜನರ ನಿರೀಕ್ಷೆಯನ್ನು ಬಹಳಷ್ಟು ಹೆಚ್ಚಿಸಿರುತ್ತವೆ. ಆ ಸೌಲಭ್ಯವನ್ನೇ ಕಲ್ಪಿಸಿಕೊಂಡು ಬಂದ ಜನರಿಗೆ ವಿಮಾನದ ಒಳಹೊಕ್ಕಾಗ ನಿರಾಸೆಯಾಗುವುದು ಸಹಜ. ತಮ್ಮ ಚೆಕ್‌ಇನ್ ಲಗೇಜ್ ಕಳೆದುಹೋಗುವ ಅಥವಾ ತಡವಾಗಿ ಸಿಗುವ ಹೆದರಿಕೆಯಿಂದ ತಂದ ದೊಡ್ಡದಾದಂತಹ ಬ್ಯಾಗನ್ನು ಸಣ್ಣದಾದ ಜಾಗದಲ್ಲಿ ಇಡಲು ಸಾಧ್ಯವಾಗದೇ ಇದ್ದಾಗ ವಾಗ್ವಾದ ಆರಂಭವಾಗುತ್ತದೆ.

ಒಮ್ಮೆ ಕುಳಿತ ನಂತರ ಮುಕ್ತವಾಗಿ ಓಡಾಡಲು ಸಾಧ್ಯವಾಗದೇ ಇರುವುದು, ಸೀಮಿತ ಶೌಚಾಲಯ, ವಿಮಾನಯಾನ ಕುರಿತ ಆತಂಕ, ಒತ್ತಡ ಹೆಚ್ಚಿರುವ-ಆಕ್ಸಿಜನ್ ಕಡಿಮೆ ಇರುವ ವಾತಾವರಣದ ಜತೆ ಇತರ ಪ್ರಯಾಣಿಕರನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯವು ದೈಹಿಕ, ಮಾನಸಿಕ ಒತ್ತಡವನ್ನು ಹೆಚ್ಚಿಸುತ್ತದೆ. ದುಡ್ಡು ಕೊಟ್ಟಿರುವ ನಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲವೂ ಇರಬೇಕು ಎನ್ನುವ ಮನೋಭಾವ ಜನರಲ್ಲಿರುವಾಗ, ಸಿಬ್ಬಂದಿ ಹೇಳಿದಂತೆ ಕೇಳಲೇಬೇಕಾದ ಪರಿಸ್ಥಿತಿಯು ಸಿಟ್ಟನ್ನು ಮೂಡಿಸಿ ಸಣ್ಣ ಪುಟ್ಟ ಪ್ರಕರಣವೂ ದೊಡ್ಡದಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಪ್ರಯಾಣಕ್ಕೆ ಮುನ್ನ ಅಥವಾ ಪ್ರಯಾಣದಲ್ಲಿ ಹದ ಮೀರಿದ ಮದ್ಯ ಸೇವನೆಯು ಕೆಲವೊಂದು ವೇಳೆ ಇಂಥ ಹಿಂಸಾತ್ಮಕ ಪ್ರವೃತ್ತಿಗೆ ಮುಖ್ಯ ಕಾರಣವಾಗಿರುತ್ತದೆ. ಸಾವಿರಾರು ಅಡಿ ಎತ್ತರದಲ್ಲಿ, ಕಡಿಮೆ ಒತ್ತಡದಲ್ಲಿ ಮದ್ಯಪಾನದ ಪರಿಣಾಮಗಳು ತೀವ್ರವಾಗಿ ಕಾಣಿಸಿಕೊಳ್ಳುತ್ತವೆ. ಆಹಾರದ ವಿಷಯದಲ್ಲಿಯೂ ಬಹಳಷ್ಟು ಗಲಾಟೆಗಳಾಗುತ್ತವೆ.

ಈ ಎಲ್ಲಾ ಆಕ್ರೋಶಕ್ಕೆ ಗುರಿಯಾಗುವವರು ವಿಮಾನದ ಸಿಬ್ಬಂದಿ ವರ್ಗ. ಎಂತಹ ಸಮಯದಲ್ಲೂ ಸಂಯಮ ಕಳೆದುಕೊಳ್ಳದೇ ಕಾರ್ಯ ನಿರ್ವಹಿಸಲು ಅವರು ತರಬೇತಿ ಪಡೆದಿರುತ್ತಾರೆ ಎಂಬುದು ನಿಜ. ಆದರೆ ಅವರೂ ಮನುಷ್ಯರೇ! ಸಾವಿರಾರು ಅಡಿ ಎತ್ತರದಲ್ಲಿ ಎಲ್ಲರನ್ನೂ ನಿಭಾಯಿಸಬೇಕಾದ ದೊಡ್ಡ ಹೊಣೆ ಅವರದ್ದು. ಪ್ರಯಾಣಿಕರು ತಮಗಾದ ತೊಂದರೆಯನ್ನು ಗಮನಕ್ಕೆ ತರುವುದು, ಅದಕ್ಕೆ ಬದಲಿ ವ್ಯವಸ್ಥೆ, ಪರಿಹಾರ ನಿರೀಕ್ಷಿಸುವುದು ಸರಿ. ಆದರೆ ಬೈಗುಳ, ದೈಹಿಕ ಹಿಂಸೆ ಖಂಡಿತಾ ತಪ್ಪು. ಒಂದೊಮ್ಮೆ ಸಿಬ್ಬಂದಿಯ ವರ್ತನೆ ಸರಿ ಇಲ್ಲದಿದ್ದಲ್ಲಿ ಪರಿಸ್ಥಿತಿಯನ್ನು ತಾವೇ ಕೈಗೆತ್ತಿಕೊಳ್ಳುವ ಬದಲು ಕೂಡಲೇ ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು ಸೂಕ್ತ.



ಪ್ರಯಾಣಿಕರು ಪಾಲಿಸಬೇಕಾದ ನಿಯಮಗಳು ಮತ್ತು ಯಾವುದೇ ಬದಲಾವಣೆಯ ಕುರಿತು ವಿಮಾನಯಾನ ಸಂಸ್ಥೆಗಳು ಮೊದಲೇ ತಿಳಿಸಿದಲ್ಲಿ ಅದನ್ನು ಸ್ವೀಕರಿಸುವುದು ಸುಲಭ. ಪ್ರಯಾಣಿಕರ ಜೊತೆಗೆ ಸಿಬ್ಬಂದಿಯ ಸ್ಪಷ್ಟ ಮತ್ತು ಸಮಯಕ್ಕೆ ಸೂಕ್ತ ಸಂವಹನ, ಸೌಜನ್ಯಯುತ ವರ್ತನೆ ಈ ರೀತಿಯ ಸನ್ನಿವೇಶಗಳನ್ನು ತಿಳಿಗೊಳಿಸಬಹುದು. ಇದರೊಂದಿಗೆ ಆರಾಮದಾಯಕವಾದ ಆಸನಗಳು, ಅಗತ್ಯ ಪ್ರಮಾಣ, ಗುಣಮಟ್ಟದ ಆಹಾರ ಪೂರೈಕೆ, ಮದ್ಯಸೇವನೆಗೆ ನಿಯಂತ್ರಣ ಹಾಗೂ ಕ್ಯಾಬಿನ್ ಒಳಗಿನ ಉಷ್ಣತೆ ಸರಿಯಾಗಿದ್ದಲ್ಲಿ ಹಲವಾರು ಸಂದರ್ಭಗಳನ್ನು ತಡೆಯಲು ಖಂಡಿತವಾಗಿಯೂ ಸಾಧ್ಯವಿದೆ. ಜತೆಗೇ ಸಿಬ್ಬಂದಿಗೆ ಈ ರೀತಿಯ ವ್ಯಕ್ತಿ ಅಥವಾ ಸಂದರ್ಭಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ಮತ್ತು ಸಮರ್ಥವಾಗಿ ಎದುರಿಸುವ ವಿಶೇಷ ತರಬೇತಿಯನ್ನು ನೀಡಬೇಕು.

ಒಂದೊಮ್ಮೆ ಘಟನೆಗಳು ಹಿಂಸಾತ್ಮಕವಾಗಿ ತಿರುಗಿದರೆ ಯಾವ ರೀತಿ ನಿಭಾಯಿಸಬೇಕು ಎಂಬ ಅರಿವು ಅಗತ್ಯ. ಅವಶ್ಯವಿದ್ದಲ್ಲಿ ಕಾನೂನು ಮತ್ತು ರಕ್ಷಣಾ ವ್ಯವಸ್ಥೆಯ ನೆರವನ್ನು ಕೂಡ ಪಡೆಯುವುದು ಒಳ್ಳೆಯದು. ಒಟ್ಟಿನಲ್ಲಿ ಸುರಕ್ಷಿತ, ಸಂತೋಷದಾಯಕ ಪ್ರಯಾಣ ಎಲ್ಲರದ್ದಾಗಲಿ. ಹಾಗಾಗಲು ಸಂಯಮ, ಸಮಾಧಾನ ಜತೆಗಿರಲಿ!

ವಾಚಕರ ವಾಣಿ

ವೋಟಿನೇಟು ಹಾಕಬೇಕಾಗಿದೆ!

ರಾಜಕೀಯ ಪಕ್ಷಗಳ ಇತ್ತೀಚಿನ ಪ್ರಣಾಳಿಕೆಗಳು ಅಭಿವೃದ್ಧಿಯ ಮೂಲಕ ರಾಜ್ಯದ ಜನಸಾಮಾನ್ಯರ ಆಶೋತ್ತರಗಳನ್ನು ಬಿಂಬಿಸುವುದರ ಬದಲು, ಪಕ್ಷವನ್ನು ಅಧಿಕಾರಕ್ಕೆ ತರಲು ಜನಸಾಮಾನ್ಯರ ದಾರಿ ತಪ್ಪಿಸುವ ಹುಸಿ ಭರವಸೆಗಳ ಕೈಪಿಡಿಗಳಂತೆ ಇರುತ್ತವೆ. ಜನರ ಕುಂದುಕೊರತೆ ನಿವಾರಣೆ ಮಾಡುವ ಬದ್ಧತೆಯುಳ್ಳ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ನಮ್ಮ ಕರ್ತವ್ಯ. ಬದ್ಧತೆಯಿಲ್ಲದ ರಾಜಕಾರಣಿಗೆ ವೋಟ್ ಮುಖಾಂತರ ಏಟು ಕೊಡುವುದು ನಮ್ಮ ಕೆಲಸ.

ರಾಜ್ಯದಲ್ಲಿ ಮತದಾನದ ಪ್ರಮಾಣ ಸಾಮಾನ್ಯವಾಗಿ ಕಡಿಮೆ ಇರುವುದೂ ಈಚಿನ ಚುನಾವಣೆಗಳಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ದೊರೆಯದಿರುವುದಕ್ಕೆ ಮುಖ್ಯ ಕಾರಣ ಎನ್ನಬಹುದು. 100 ಪ್ರತಿಶತ ಮತದಾನ ಆಗುವಂತೆ ಆಗಬೇಕು. ಈ ದಿಸೆಯಲ್ಲಿ ಚುನಾವಣಾ ಆಯೋಗ ಶ್ರಮಿಸಬೇಕು. ಭ್ರಷ್ಟಾಚಾರದ ಕಡಿವಾಣಕ್ಕೆ ಮೊದಲ ಹೆಜ್ಜೆ ಮತದಾನ. ಎಲ್ಲಾ ಅಭ್ಯರ್ಥಿಗಳು ಭ್ರಷ್ಟರೇ ಎಂಬ ಅಳಲು ಬಿಟ್ಟು, ಸಾಮಾಜಿಕ ಬದ್ಧತೆಯುಳ್ಳ ಉತ್ತಮ ಅಭ್ಯರ್ಥಿಯನ್ನು ಕಂಡುಕೊಂಡು ಮತ ಹಾಕಿ ಗೆಲ್ಲಿಸಿ ರಾಜ್ಯವನ್ನು ಸುಭಿಕ್ಷಗೊಳಿಸಬೇಕಾದ ಆದ್ಯ ಕರ್ತವ್ಯ ನಮ್ಮದು.

ಡಾ. ವಿಜಯಕುಮಾರ್ ಎಚ್.ಕೆ., ರಾಯಚೂರು

ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ತಂದವರು

'ನನಗೆ ಕಣ್ಣೀರು ತರಿಸಿದವರ ಕಣ್ಣಲ್ಲಿ ನೀರು ತರಿಸಿ' ಎಂದಿದ್ದಾರೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ (ಪ್ರ.ವಾ., ಏ. 25). ಇದು ಬಾಲಿಶತನವಲ್ಲವೇ? ಜೆಡಿಎಸ್ ಪಕ್ಷದ ಹೆಸರಿನಲ್ಲೇ ಇರುವ ಜಾತ್ಯತೀತ ಮೌಲ್ಯವನ್ನು ಕಡೆಗಣಿಸಿ, ಬರೀ ಅಧಿಕಾರದ ಆಸೆಗಾಗಿ ಬಿಜೆಪಿಯೊಂದಿಗೆ ಸಮ್ಮಿಶ್ರ ಸರ್ಕಾರವನ್ನು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ತಂದದ್ದೇ ಜೆಡಿಎಸ್ ಅಲ್ಲವೇ? ನಂತರ ಏನಾಯಿತು? 'ಆಪರೇಷನ್ ಕಮಲ'ದಂಥ ರಾಜಕೀಯ ಅಪಮೌಲ್ಯವೇ ಕರ್ನಾಟಕದಲ್ಲಿ ಘಟಿಸಿಹೋಯಿತು. ಬಿಜೆಪಿ ದಕ್ಷಿಣ ಭಾರತದ ಹೆಬ್ಬಾಗಿಲು ಎಂದು ಹೇಳಿಕೊಳ್ಳುವಷ್ಟರ ಮಟ್ಟಿಗೆ ಬೆಳೆದು ಜೆಡಿಎಸ್ ಪಕ್ಷವನ್ನೇ ಆಪೋಶನ ತೆಗೆದುಕೊಂಡಿತು.

ಜೆಡಿಎಸ್ ಈ ಥರದ ರಾಜಕೀಯ ದುಡುಕುಗಳಿಗೆ ಕ್ಷಮೆ ಕೇಳಿ ಪಶ್ಚಾತ್ತಾಪ ಪಡಬೇಕಾದುದು ಅಗತ್ಯ. ಆದರೆ ಅದು ಬಿಟ್ಟು ಕಣ್ಣೀರು ಹಾಕಿಸುವಂತೆ ಹೇಳುವುದು ಎಷ್ಟು ಸರಿ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕುಟುಂಬ ರಾಜಕಾರಣ: ಚಾಕಚಕ್ಯತೆಯ ನಿಲುವು

'ತಂದೆಯ ನಿಧನದ ನಂತರ ಮಗ ರಾಜಕೀಯ ಪ್ರವೇಶ ಮಾಡಿದರೆ ಅದು ಕುಟುಂಬ ರಾಜಕಾರಣವಲ್ಲ. ಒಂದು ಕುಟುಂಬವು ಒಂದು ರಾಜಕೀಯ ಪಕ್ಷ ಅಥವಾ ಆಡಳಿತ ವ್ಯವಸ್ಥೆಯನ್ನು ನಿಯಂತ್ರಿಸಿದರೆ ಮಾತ್ರ ಅದು ಕುಟುಂಬ ರಾಜಕಾರಣ' ಎಂದು ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯನ್ನು ತಮ್ಮ ತಾಳಕ್ಕೆ ಸರಿಯಾಗಿ ತಿರುಗಿಸಿಕೊಳ್ಳುವ ರಾಜಕಾರಣಿಗಳ ಚಾಕಚಕ್ಯತೆಗೆ ಭೋಪರಾಕು ಎನ್ನಲೇಬೇಕು. ಕುಟುಂಬ ರಾಜಕಾರಣದ ಲೇಬಲ್ ಕೆಲವು ಕುಟುಂಬಗಳಿಗೆ ಮತ್ತು ಕೆಲವು ಪಕ್ಷಗಳಿಗೆ ಅನ್ವಯವಾಗುವುದಿಲ್ಲ ಎಂದು ಹೇಳಿದ್ದರೆ ಅವರ ಅಭಿಪ್ರಾಯವು ಇನ್ನೂ ಅರ್ಥಪೂರ್ಣವಾಗಿ ಇರುತ್ತಿತ್ತು!

ರಮಾನಂದ ಶರ್ಮಾ, ಬೆಂಗಳೂರು

ಬ್ರಿಟಿಷರ ವಿರುದ್ಧ ಹೋರಾಡಿದ ಪರಂಪರೆ

ಕಾಂಗ್ರೆಸ್ ಪಕ್ಷವು ಬ್ರಿಟಿಷರು ಬಿಟ್ಟುಹೋಗಿರುವ ಬೀಜ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ದೊಡ್ಡ ಪರಂಪರೆಯನ್ನು ಕಾಂಗ್ರೆಸ್ ಹೊಂದಿದೆ. ಸಾವಿರಾರು ಕಾಂಗ್ರೆಸ್ಸಿಗರು ಬ್ರಿಟಿಷರ ವಿರುದ್ಧ ಹೋರಾಡಿ ಜೈಲುಪಾಲಾದರು ಮತ್ತು ಜೀವ ಕಳೆದುಕೊಂಡರು. ಬಿಜೆಪಿಯ ಪೂರ್ವಾಶ್ರಮದ ಜನಸಂಘವು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಉದಾಹರಣೆಗಳು ಅತಿವಿರಳ. ಅವರು ಬ್ರಿಟಿಷರ ಜೊತೆ ಹೊಂದಾಣಿಕೆ ಮಾಡಿಕೊಂಡು ಬಂದಿರುವುದು ವಾಸ್ತವ. ಬೊಮ್ಮಾಯಿ ಅವರು ಬ್ರಿಟಿಷ್ ಬೀಜದ ವಿರುದ್ಧ ಮಾತನಾಡುವುದಾದರೆ, ಅವರು ಇಂದು ಬಳಸುತ್ತಿರುವ ಎಲ್ಲ ಆಧುನಿಕ ಸೌಲಭ್ಯಗಳನ್ನು ತ್ಯಜಿಸಿ ಪಾದಯಾತ್ರೆಯ ಮೂಲಕ ಜನರನ್ನು ತಲುಪಬೇಕಾಗುತ್ತದೆ.

ಈ.ಬಸವರಾಜು, ಬೆಂಗಳೂರು

ಬಿಡುಗಡೆ ಹಿಂದಿನ ಸತ್ಯ ಹೊರಬರಲಿ

'ಬಿಲ್ಕಿಸ್ ಬಾನು ಪ್ರಕರಣದ 11 ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದ ಕಡತಗಳ ಮೇಲೆ ತಮಗೇ ವಿಶೇಷಾಧಿಕಾರ ಇದೆ' ಎಂದು ಕೇಂದ್ರ ಹಾಗೂ ಗುಜರಾತ್ ಸರ್ಕಾರಗಳು ಸುಪ್ರೀಂ ಕೋರ್ಟ್‌ಗೆ ತಿಳಿಸಿವೆ (ಪ್ರ.ವಾ., ಏ. 19). 'ಅಪರಾಧ ಕೃತ್ಯವು ಘೋರ ಹಾಗೂ ಭಯಾನಕವಾಗಿದೆ. ಅಪರಾಧಿಗಳು ತಮ್ಮ ಜೀವಿತಾವಧಿಯವರೆಗೆ ಜೈಲಿನಲ್ಲಿರಬೇಕು ಎಂಬ ಆದೇಶವಿತ್ತು. ಅವಧಿಪೂರ್ವ ಬಿಡುಗಡೆಗೆ ಅನುಮತಿ ನೀಡುವ ಮುನ್ನ ರಾಜ್ಯ ಸರ್ಕಾರ ವಿವೇಕಯುತವಾಗಿ ನಡೆದುಕೊಳ್ಳಬೇಕಿತ್ತು' ಎಂದಿರುವ ಸುಪ್ರೀಂ ಕೋರ್ಟ್, ಎರಡೂ ಸರ್ಕಾರಗಳಿಗೆ ತಪ್ಪನ್ನು ಎತ್ತಿ ತೋರಿಸಿದೆ. ಇವರಲ್ಲಿ ಕೆಲವರು ಜೈಲಿನಿಂದ ಪೆರೋಲ್ ಮೇಲೆ ಹೊರ ಬಂದಿದ್ದವರು. ಅವರು ಮತ್ತೆ ಅಪರಾಧ ಚಟುವಟಿಕೆಯಲ್ಲಿ ತೊಡಗಿ, ಮೊಕದ್ದಮೆ ದಾಖಲಾಗಿ ವಿಚಾರಣೆ ಹಂತದಲ್ಲಿದೆ. ಎರಡೂ ಸರ್ಕಾರಗಳಿಗೆ ಬಿಡುಗಡೆಗೊಂಡವರ ಅವಶ್ಯಕತೆ ಇದೆಯೇನೋ!?

ನ್ಯಾಯಾಲಯಕ್ಕೆ ಸಡ್ಡು ಹೊಡೆಯುವ ಸರ್ಕಾರಗಳ ಕ್ರಮ ಸರ್ವಥಾ ಸಮರ್ಥನೀಯವಲ್ಲ. ಮುಂದೆ ಇದೇ ಆದೇಶವು ಘೋರ ಅಪರಾಧಿಗಳು ಜೈಲಿನಿಂದ ಹೊರಬರಲು ಅನುವು ಮಾಡಬಹುದು.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ ಹಾಗೂ ಪಾಕಿಸ್ತಾನ ನಡುವಣ ಏಕೈಕ ಯಶಸ್ವಿ ಒಡಂಬಡಿಕೆ ಎಂದು ಪರಿಗಣಿಸಲಾಗಿದ್ದ 'ಸಿಂಧೂ ಜಲ ಒಪ್ಪಂದ' ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಬಿಕ್ಕಟ್ಟಿಗೆ ಕಾರಣವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತ ಕೈಗೊಂಡ ಕಿಶನ್‌ಗಂಗಾ ಹಾಗೂ ರತಲೆ ಜಲವಿದ್ಯುತ್ ಯೋಜನೆಗಳಿಗೆ ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸುವುದನ್ನು ಮತ್ತೆ ಮುಂದುವರಿಸಿದೆ. ಜಲ ಒಪ್ಪಂದದ ನಿಯಮಗಳನ್ನು ಜಾರಿಗೆ ತರುವಲ್ಲಿ ಪಾಕಿಸ್ತಾನ ಹಟಮಾರಿ ಧೋರಣೆ ತಳೆದಿದೆ ಎಂಬುದು ಭಾರತದ ಆಕ್ಷೇಪ. ಬಿಕ್ಕಟ್ಟು ನಿವಾರಣೆಗೆ ಕೆಲವು ಮಾರ್ಗಗಳನ್ನು ಒಪ್ಪಂದದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಇವುಗಳ ಪೈಕಿ ಯಾವ ಮಾರ್ಗವನ್ನು ಆಯ್ದುಕೊಳ್ಳಬೇಕು ಎಂಬುದೇ ಈಗಿನ ದೊಡ್ಡ ಬಿಕ್ಕಟ್ಟಾಗಿ ಪರಿಣಮಿಸಿದೆ. ಹೀಗಾಗಿ ಒಡಂಬಡಿಕೆ ಈಗ ತೂಗುಯ್ಯಾಲೆಯಲ್ಲಿದೆ ಎಂದು ಪರಿಣತರು ವಿಶ್ಲೇಷಿಸಿದ್ದಾರೆ.

ತೂಗುಯ್ಯಾಲೆಯಲ್ಲಿ 'ಸಿಂಧೂ ಜಲ ಒಪ್ಪಂದ'

ಭಾರತ–ಪಾಕಿಸ್ತಾನದ ನಡುವೆ ಜಲವಿವಾದ ಉಲ್ಬಣ

ಪ್ರಜಾವಾಣಿ ವಾರ್ತೆ

ಭಾರತ ಹಾಗೂ ಪಾಕಿಸ್ತಾನ ಗಡಿಯಲ್ಲಿ ಹರಿಯುತ್ತಿರುವ ಸಿಂಧೂ ನದಿ ಹಾಗೂ ಅದರ ಉಪನದಿಗಳ ನೀರಿನ ಹಂಚಿಕೆ ಹಾಗೂ ಬಳಕೆಗೆ ಒಂದು ಸ್ಪಷ್ಟ ರೂಪ ನೀಡಿದ್ದು ಆರು ದಶಕಗಳ ಹಿಂದಿನ 'ಸಿಂಧೂ ಜಲ ಒಪ್ಪಂದ'. ಜೀವನಾಡಿ ಎಂದು ಪರಿಗಣಿತವಾಗಿರುವ ಸಿಂಧೂ ನದಿ ಹಾಗೂ ಉಪನದಿಗಳು ಪಾಕಿಸ್ತಾನದ ಆರ್ಥಿಕತೆ ಹಾಗೂ ಆಹಾರ ಭದ್ರತೆಗೆ ಅಡಿಪಾಯ ಹಾಕಿವೆ. ಈ ನದಿಗಳಿಂದ ನೀರಾವರಿ ಹಾಗೂ ಜಲವಿದ್ಯುತ್ ಯೋಜನೆ ಕೈಗೊಳ್ಳಲು ಸಾಧ್ಯವಾಗಿದೆ. ಆದರೆ, ದಶಕಕ್ಕೂ ಹಿಂದಿನಿಂದ ಉಭಯ ದೇಶಗಳ ನಡುವೆ ಈ ಒಪ್ಪಂದ ಬಿಕ್ಕಟ್ಟು ಸೃಷ್ಟಿಸಿದೆ. ಭಾರತ ಸರ್ಕಾರವು ಜಮ್ಮು ಕಾಶ್ಮೀರದಲ್ಲಿ ನಿರ್ಮಿಸಿರುವ ಕಿಶನ್‌ಗಂಗಾ ಜಲವಿದ್ಯುತ್ ಯೋಜನೆ ಹಾಗೂ ನಿರ್ಮಾಣ ಹಂತದಲ್ಲಿರುವ ರತಲೆ ಜಲ ವಿದ್ಯುತ್ ಯೋಜನೆಗಳು ಪಾಕಿಸ್ತಾನದ ಆಕ್ಷೇಪ ಎದುರಿಸುತ್ತಿವೆ.

ಆದರೆ, ಜಲವಿದ್ಯುತ್ ಯೋಜನೆ ಹಮ್ಮಿಕೊಳ್ಳಲು ಒಪ್ಪಂದದಲ್ಲೇ ಅವಕಾಶವಿದೆ ಎಂಬುದು ಭಾರತದ ಪ್ರತಿಪಾದನೆ. ಪಾಕಿಸ್ತಾನದ ಆಕ್ಷೇಪದ ನಡುವೆಯೂ 2018ರಲ್ಲಿ, ಝೀಲಂ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಅಣೆಕಟ್ಟೆ ಬಳಸಿಕೊಂಡು 330 ಮೆಗಾವಾಟ್ ಸಾಮರ್ಥ್ಯದ ಕಿಶನ್‌ಗಂಗಾ ವಿದ್ಯುತ್ ಯೋಜನೆಗೆ ಭಾರತ ಚಾಲನೆ ನೀಡಿತ್ತು. ಬಳಿಕ, 850 ಮೆಗಾವಾಟ್ ಸಾಮರ್ಥ್ಯದ ರತಲೆ ಜಲವಿದ್ಯುತ್ ಯೋಜನೆಯ ಕಾಮಗಾರಿ ಶುರುಮಾಡಿತು. ಈ ಎರಡು ಜಲವಿದ್ಯುತ್ ಯೋಜನೆಗಳಿಂದ ತನ್ನ ಪಾಲಿನ ನದಿ ನೀರಿನ ಹರಿವಿನಲ್ಲಿ ಇಳಿಕೆಯಾಗುತ್ತದೆ ಹಾಗೂ ದೇಶದ ಆಹಾರ ಭದ್ರತೆಗೆ ಅಪಾಯ ಎದುರಾಗುತ್ತದೆ ಎಂದು ಪಾಕಿಸ್ತಾನ ತೀವ್ರ ವಿರೋಧ ವ್ಯಕ್ತಪಡಿಸುತ್ತಿದೆ.

ನೀರು ಹಂಚಿಕೆ ಹಾಗೂ ಬಳಕೆ ಕುರಿತಂತೆ ಉಂಟಾಗುವ ಗೊಂದಲಗಳನ್ನು ಪರಿಹರಿಸಿಕೊಳ್ಳುವ ಸೂತ್ರಗಳನ್ನು ಒಪ್ಪಂದದಲ್ಲಿ ಪ್ರಸ್ತಾಪಿಸಲಾಗಿದೆ. ಒಪ್ಪಂದದ 9ನೇ ನಿಯಮದಲ್ಲಿ ಈ ಮಾಹಿತಿಯಿದ್ದು, ಮೂರು ರೀತಿಯ ಪರಿಹಾರೋಪಾಯಗಳನ್ನು ವಿವರಿಸಲಾಗಿದೆ. 'ಪ್ರಶ್ನೆಗಳು', 'ಭಿನ್ನಾಭಿಪ್ರಾಯಗಳು' ಮತ್ತು 'ಬಿಕ್ಕಟ್ಟುಗಳು' ಎಂಬುದಾಗಿ ಮೂರು ಹಂತಗಳನ್ನು ವಿವರಿಸಲಾಗಿದೆ.

ಆದರೆ, ಬಿಕ್ಕಟ್ಟು ಪರಿಹಾರಕ್ಕೆ ಇವುಗಳ ಪೈಕಿ ಯಾವ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದೇ ಈಗ ಹೊಸ ಬಿಕ್ಕಟ್ಟಾಗಿ ಪರಿಣಮಿಸಿದೆ. ಮೊದಲ ಹಂತದಲ್ಲಿ, ಒಪ್ಪಂದ ಕುರಿತು ಏಳುವ ಗೊಂದಲಗಳು ಹಾಗೂ ಪ್ರಶ್ನೆಗಳನ್ನು ಕಾಯಂ ಆಯೋಗದ ಸಭೆಯಲ್ಲಿ ಪ್ರಸ್ತಾಪಿಸಬೇಕು. ಉಭಯ ದೇಶಗಳ ತಲಾ ಒಬ್ಬ ಆಯುಕ್ತರನ್ನು ಒಳಗೊಂಡ 'ಕಾಯಂ ಆಯೋಗ'ವು ಒಪ್ಪಂದ ಜಾರಿಯಾದ ಸಮಯದಿಂದಲೇ ಇದೆ. ಕಾಯಂ ಆಯೋಗವು ಈ ಪ್ರಶ್ನೆಗಳನ್ನು ಪರಿಶೀಲಿಸುತ್ತದೆ. ಎರಡನೇ ಹಂತದಲ್ಲಿ, 'ಭಿನ್ನಾಭಿಪ್ರಾಯ' ಸ್ವರೂಪದ ಸಮಸ್ಯೆಗಳು ಉಂಟಾದಲ್ಲಿ ಅದನ್ನು ತಟಸ್ಥ ತಜ್ಞ ನಿರ್ವಹಿಸಬೇಕು. ಉಭಯ ದೇಶಗಳ ಕೋರಿಕೆಯ ಮೇರೆಗೆ ತಟಸ್ಥ ತಜ್ಞರೊಬ್ಬರನ್ನು ವಿಶ್ವಬ್ಯಾಂಕ್ ನೇಮಿಸುತ್ತದೆ. ಮೂರನೇ ಹಂತದಲ್ಲಿ, 'ಬಿಕ್ಕಟ್ಟು' ಸ್ವರೂಪದ ಸಮಸ್ಯೆಗಳು ತಲೆದೋರಿದರೆ, ಹೇಗ್‌ನಲ್ಲಿರುವ ಮಧ್ಯಸ್ಥಿಕೆ ನ್ಯಾಯಾಲಯದ ಮೊರೆ ಹೋಗಬೇಕು ಎಂದು ಒಪ್ಪಂದದಲ್ಲಿ ಹೇಳಲಾಗಿದೆ.

ಕಿಶನ್‌ಗಂಗಾ ಯೋಜನೆಯನ್ನು ಭಾರತ ಆರಂಭಿಸಿದಾಗ ಪಾಕಿಸ್ತಾನವು ಇದನ್ನು 'ಬಿಕ್ಕಟ್ಟು' ಎಂದು ಪರಿಗಣಿಸಿ, ವಿಶ್ವಬ್ಯಾಂಕ್ ಸ್ಥಾಪಿಸಿರುವ ಮಧ್ಯಸ್ಥಿಕೆ ನ್ಯಾಯಾಲಯದ ಮೊರೆ ಹೋಗಿತ್ತು. 2013ರಲ್ಲಿ ಭಾರತದ ಪರವಾಗಿ ತೀರ್ಪು ನೀಡಿದ್ದ ನ್ಯಾಯಾಲಯವು, ಕೆಲವು ಮಾರ್ಪಾಡುಗಳೊಂದಿಗೆ ಯೋಜನೆ ಮುಂದುವರಿಸಲು ಸೂಚಿಸಿತ್ತು. ಪಟ್ಟುಬಿಡದ ಪಾಕಿಸ್ತಾನ, ಯೋಜನೆಯ ವಿನ್ಯಾಸದಲ್ಲಿ ತಾಂತ್ರಿಕ ಸಮಸ್ಯೆಗಳಿವೆ ಎಂದು ಆಕ್ಷೇಪಿಸಿತ್ತು. ಇದನ್ನು ಬಗೆಹರಿಸಲು ತಟಸ್ಥ ತಜ್ಞರನ್ನು ನೇಮಿಸುವಂತೆ 2016ರಲ್ಲಿ ಮನವಿ ಮಾಡಿತ್ತು. ಇದಕ್ಕೆ ಭಾರತವೂ ಒಪ್ಪಿತ್ತು. ಆದರೆ, ಭಾರತ ಒಪ್ಪಿಗೆ ಸೂಚಿಸಿದ್ದರೂ, ತನ್ನ ನಿಲುವು ಬದಲಿಸಿದ್ದ ಪಾಕಿಸ್ತಾನ, ಈ ವಿಚಾರವನ್ನು ಬಗೆಹರಿಸಿಕೊಳ್ಳಲು ಮಧ್ಯಸ್ಥಿಕೆ ನ್ಯಾಯಾಲಯದ ಮೊರೆ ಹೋಗಿತ್ತು.

ಪಾಕಿಸ್ತಾನದ ಈ ಗೊಂದಲದ ನಡೆಯಿಂದಾಗಿ, ಎರಡು ಸ್ವರೂಪದ ಪರಿಹಾರ ಪ್ರಕ್ರಿಯೆಗಳು ಏಕಕಾಲಕ್ಕೆ ಆರಂಭವಾಗುವಂತಾಯಿತು. ಇದು ಹೊಸ ಬಿಕ್ಕಟ್ಟಿಗೆ ಕಾರಣವಾಯಿತು. ಗೊಂದಲ ಉಂಟಾಗಿದ್ದರಿಂದ ಎರಡೂ ಸ್ವರೂಪದ ಪ್ರಕ್ರಿಯೆಗಳನ್ನು ವಿಶ್ವಬ್ಯಾಂಕ್ ಸ್ಥಗಿತಗೊಳಿಸಿತು. ಆದರೆ ಈ ಪ್ರಕ್ರಿಯೆಗಳನ್ನು ದೀರ್ಘಕಾಲದವರೆಗೆ ಸ್ಥಗಿತಗೊಳಿಸಿದರೆ ಸಿಂಧೂ ಜಲ ಒಪ್ಪಂದದ ಭವಿಷ್ಯವು ಅಪಾಯಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಭಾವಿಸಿದ ವಿಶ್ವಬ್ಯಾಂಕ್, ಕ್ಲಿಷ್ಟ ಎನಿಸಿದರೂ ಎರಡೂ ಪ್ರಕ್ರಿಯೆಗಳಿಗೆ ಮರು ಚಾಲನೆ ನೀಡುವ ನಿರ್ಧಾರ ಪ್ರಕಟಿಸಿತು. ತಟಸ್ಥ ತಜ್ಞರಾಗಿ ಮೈಕಲ್ ಲಿನೊ ಎಂಬವರನ್ನೂ, ಮಧ್ಯಸ್ಥಿಕೆ ನ್ಯಾಯಾಲಯದ ಅಧ್ಯಕ್ಷರನ್ನಾಗಿ ಸೀನ್ ಮರ್ಫಿ ಎಂಬವರನ್ನು ಕಳೆದ ವರ್ಷ ನೇಮಿಸಿತ್ತು. ಆದರೆ ವಿಶ್ವಬ್ಯಾಂಕ್‌ನ ಈ ನಿಲುವನ್ನು ಒಪ್ಪದ ಭಾರತ, ಇದೇ ಜನವರಿ 27ರಿಂದ ಆರಂಭವಾದ ಮಧ್ಯಸ್ಥಿಕೆ ನ್ಯಾಯಾಲಯದ ವಿಚಾರಣೆಯನ್ನು ಬಹಿಷ್ಕರಿಸಿದೆ.





ಕಿಶನ್‌ಗಂಗಾ ಜಲವಿದ್ಯುತ್ ಯೋಜನೆಯ ನೋಟ

ಕಠಿಣವಾಗುತ್ತಿದೆ ನಿಲುವು

ಸಿಂಧೂ ಜಲ ಒಪ್ಪಂದ ಏರ್ಪಟ್ಟ ಬಳಿಕ ಭಾರತ ಹಾಗೂ ಪಾಕಿಸ್ತಾನದ ನಡುವೆ ಯುದ್ಧ ಮೊದಲಾದ ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಗಳು ಎದುರಾದಾಗಲೂ, ಈ ಒಪ್ಪಂದವನ್ನು ಕೈಬಿಡಲು ಎರಡೂ ದೇಶಗಳು ಮುಂದಾಗಿರಲಿಲ್ಲ. ಆದರೆ ಕೆಲ ವರ್ಷಗಳಿಂದ ನಡೆಯುತ್ತಿರುವ ಭಯೋತ್ಪಾದಕ ದಾಳಿ, ಒಪ್ಪಂದದ ಭವಿಷ್ಯವನ್ನು ಅಡಕತ್ತರಿಯಲ್ಲಿ ಸಿಲುಕಿಸಿದೆ. ಒಪ್ಪಂದಕ್ಕೆ ತಿಲಾಂಜಲಿ ಹಾಡುವ ಧಾಟಿಯಲ್ಲಿ ಕೆಲವು ನಾಯಕರು ಮಾತನಾಡಿದ್ದಾರೆ.

2001–02ರ ಸಮಯದಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಸೇನಾ ಬಿಕ್ಕಟ್ಟು ಉಂಟಾಗಿತ್ತು. ಭಾರತದ ಜಲಸಂಪನ್ಮೂಲ ಸಚಿವಾಲಯದ ಅಂದಿನ ಸಚಿವ ಬಿಜೊಯ್ ಚಕ್ರವರ್ತಿ ಅವರು ಒಪ್ಪಂದವನ್ನು ರದ್ದುಗೊಳಿಸುವ ಕುರಿತು ಮಾತನಾಡಿದ್ದರು. 'ಒಪ್ಪಂದದಿಂದ ನಾವು ಹಿಂದೆ ಸರಿದರೆ, ಪ್ರತಿ ಹನಿ ನೀರಿಗೂ ಪಾಕಿಸ್ತಾನ ಬೇಡುವ ಪರಿಸ್ಥಿತಿ ಉಂಟಾಗುತ್ತದೆ' ಎಂದು ಎಚ್ಚರಿಕೆ ನೀಡಿದ್ದರು. ಜಮ್ಮು ಕಾಶ್ಮೀರದ ಉರಿ ಸೇನಾನೆಲೆಯ ಮೇಲೆ 2016ರಲ್ಲಿ ಭಯೋತ್ಪಾದಕ ದಾಳಿ ನಡೆದಿತ್ತು. ಈ ಸಮಯದಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, 'ನೀರು ಮತ್ತು ರಕ್ತ ಒಂದೇ ಮಾರ್ಗದಲ್ಲಿ ಹರಿಯಲು ಸಾಧ್ಯವಿಲ್ಲ' ಎಂದು ಹೇಳಿದ್ದರು. 2019ರ ಪುಲ್ವಾಮಾ ದಾಳಿಯ ವೇಳೆ ಮಾತನಾಡಿದ್ದ ಕೇಂದ್ರ ಸಚಿವ ನಿತಿನ್ ಗಡ್ಕರಿ, ಪಾಕಿಸ್ತಾನಕ್ಕೆ ಹರಿಯುವ ನೀರನ್ನು ಸ್ಥಗಿತಗೊಳಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದ್ದರು. ಆದರೆ ಒಪ್ಪಂದದಿಂದ ಏಕಪಕ್ಷೀಯವಾಗಿ ಹಿಂದೆ ಸರಿಯುವುದರಿಂದ ಭಾರತಕ್ಕೆ ಲಾಭವಾಗುವುದಿಲ್ಲ ಎನ್ನುತ್ತಾರೆ ತಜ್ಞರು.

ಸಿಂಧೂ ನದಿ ಒಪ್ಪಂದ

ಒಂಬತ್ತು ವರ್ಷಗಳ ಮಾತುಕತೆಯ ಬಳಿಕ, ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ 1960ರ ಸೆಪ್ಟೆಂಬರ್‌ನಲ್ಲಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಸಿಂಧೂ ಜಲ ಒಪ್ಪಂದ (ಐಡಬ್ಲ್ಯುಟಿ) ಏರ್ಪಟ್ಟಿತ್ತು. ವಿಶ್ವಬ್ಯಾಂಕ್‌ನ ಅಂದಿನ ಅಧ್ಯಕ್ಷ ಯೂಜೀನ್ ಬ್ಲ್ಯಾಕ್ ಅವರ ಸಮ್ಮುಖದಲ್ಲಿ ಭಾರತದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ, ಪಾಕಿಸ್ತಾನದ ಅಂದಿನ ಅಧ್ಯಕ್ಷ ಅಯೂಬ್ ಖಾನ್ ಸಹಿ ಹಾಕಿದ್ದರು. ಸಿಂಧೂ ನದಿ ಹಾಗೂ ಅದರ ಉಪನದಿಗಳಾದ ರಾವಿ, ಬಿಯಾಸ್, ಸಟ್ಲೆಜ್, ಝೀಲಂ ಹಾಗೂ ಚೆನಾಬ್ ನದಿಗಳ ನೀರಿನ ಬಳಕೆ ಹಾಗೂ ಹಂಚಿಕೆಯನ್ನು ಈ ಒಪ್ಪಂದ ವಿವರಿಸುತ್ತದೆ.

ಈ ಒಪ್ಪಂದದ ಪ್ರಕಾರ, ಪೂರ್ವದ ನದಿಗಳಾದ ರಾವಿ, ಬಿಯಾಸ್ ಹಾಗೂ ಸಟ್ಲೆಜ್ ನೀರು ಭಾರತಕ್ಕೆ ಸಂಬಂಧಿಸಿದ್ದರೆ, ಪಶ್ಚಿಮದ ನದಿಗಳಾದ ಚೆನಾಬ್, ಝೀಲಂ ಹಾಗೂ ಸಿಂಧೂ ನದಿಗಳ ನೀರು ಪಾಕಿಸ್ತಾನಕ್ಕೆ ಸೇರಿದೆ. ಆದರೆ ಪಾಕಿಸ್ತಾನಕ್ಕೆ ಹಂಚಿಕೆ ಮಾಡಲಾಗಿರುವ ಸಿಂಧೂ, ಚೆನಾಬ್ ಹಾಗೂ ಝೀಲಂ ನದಿಗಳ ವ್ಯಾಪ್ತಿಯಲ್ಲಿ ಭಾರತಕ್ಕೆ ಜಲವಿದ್ಯುತ್ ಯೋಜನೆಯಂತಹ ಕಾಮಗಾರಿಗಳನ್ನು ನಡೆಸಲು ಒಪ್ಪಂದದಲ್ಲಿ ಅವಕಾಶವಿದೆ. ಹಾಗೆಯೇ ಪಾಕಿಸ್ತಾನಕ್ಕೂ ಇಂತಹ ಅವಕಾಶವಿದೆ.

ಜಲವಿದ್ಯುತ್ ಸ್ಥಾವರ ನಿರ್ಮಾಣ, ಪ್ರವಾಹ ನಿಯಂತ್ರಣ ಹಾಗೂ 150 ಟಿಎಂಸಿ ಅಡಿಗೂ ಹೆಚ್ಚು ಪ್ರಮಾಣದ ನೀರನ್ನು ಶೇಖರಣೆ ಮಾಡಲು ಭಾರತಕ್ಕೆ ಅವಕಾಶವಿದೆ. ಹೀಗಾಗಿ, ಕಿಶನ್‌ಗಂಗಾ ಹಾಗೂ ರತಲೆ ಜಲವಿದ್ಯುತ್ ಸ್ಥಾವರ ನಿರ್ಮಾಣ ಯೋಜನೆಗಳನ್ನು ಭಾರತ ಜಾರಿಗೊಳಿಸಿದೆ. ಆದರೆ ನೀರು ಶೇಖರಿಸಿಡುವ ಯತ್ನವನ್ನು ಭಾರತ ಈವರೆಗೆ ಮಾಡಿಲ್ಲ.

ತಿದ್ದುಪಡಿ ಪ್ರಸ್ತಾಪಿಸಿದ ಭಾರತ

ಜಲವಿದ್ಯುತ್ ಯೋಜನೆಗೆ ಒಪ್ಪಂದದಲ್ಲಿ ಅವಕಾಶವಿದ್ದರೂ ಪಾಕಿಸ್ತಾನ ಪದೇ ಪದೇ ಈ ವಿಚಾರವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸುತ್ತಿರುವುದು ಭಾರತವನ್ನು ಕೆರಳಿಸಿದೆ. ಹೀಗಾಗಿ, ಒಪ್ಪಂದಕ್ಕೆ ತಿದ್ದುಪಡಿ ತರುವ ಮೂಲಕ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವುದಕ್ಕೆ ಮುಂದಾಗಿದೆ. ಒಪ್ಪಂದ ಏರ್ಪಟ್ಟ 62 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ತಿದ್ದುಪಡಿ ಪ್ರಸ್ತಾವವನ್ನು ಭಾರತ ಮುಂದಿಟ್ಟಿದೆ. ಒಪ್ಪಂದದ ನಿಯಮ 12 (3)ರ ಪ್ರಕಾರ ನೋಟಿಸ್ ನೀಡಲಾಗಿದೆ. ಆರು ದಶಕದಷ್ಟು ಹಳೆಯ ಒಪ್ಪಂದವು ಹವಾಮಾನ ವೈಪರೀತ್ಯ ಹಾಗೂ ಜಾಗತಿಕ ತಾಪಮಾನ ವಿಚಾರಗಳನ್ನು ಒಳಗೊಂಡಿಲ್ಲ. ತಿದ್ದುಪಡಿ ಮೂಲಕ ಈ ಅಂಶಗಳನ್ನು ಸೇರ್ಪಡೆ ಮಾಡಲು ಭಾರತ ಇಚ್ಛಿಸಿದೆ.

ಭಾರತ ನೀಡಿದ್ದ ನೋಟಿಸ್‌ಗೆ ಪಾಕಿಸ್ತಾನ ಏಪ್ರಿಲ್ 7ರಂದು ಉತ್ತರ ನೀಡಿದೆ. ಉತ್ತರದಲ್ಲಿ ಏನಿದೆ ಎಂಬುದು ಬಹಿರಂಗವಾಗಿಲ್ಲ. ಪಾಕಿಸ್ತಾನದ ಉತ್ತರವನ್ನು ಪರಿಶೀಲಿಸಲಾಗುತ್ತಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ತಿಳಿಸಿದೆ. ಭಾರತ ವ್ಯಕ್ತಪಡಿಸಿರುವ ಆತಂಕಗಳನ್ನು ಕಾಯಂ ಆಯೋಗದ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪಾಕಿಸ್ತಾನ ಹೇಳಿದೆ ಎಂಬುದಾಗಿ ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಭಾರತದ ಆತಂಕಗಳನ್ನು ಪರಿಶೀಲಿಸಿದ ಬಳಿಕ, ಒಪ್ಪಂದಕ್ಕೆ ತಿದ್ದುಪಡಿ ತರುವ ಮಾತುಕತೆಯ ಬಗ್ಗೆ ಪಾಕಿಸ್ತಾನ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಅಲ್ಲಿನ ಅಟಾರ್ನಿ ಜನರಲ್ ಕಚೇರಿಯ ಮೂಲಗಳನ್ನು ಉಲ್ಲೇಖಿಸಿ ಪಾಕಿಸ್ತಾನದ ಪತ್ರಿಕೆಗಳು ವರದಿ ಮಾಡಿವೆ. ಪಾಕಿಸ್ತಾನದ ಉತ್ತರಕ್ಕೆ ಭಾರತ ಯಾವ ರೀತಿ ಪ್ರತ್ಯುತ್ತರ ನೀಡಲಿದೆ ಹಾಗೂ ಅದಕ್ಕೆ ಪಾಕಿಸ್ತಾನದ ಪ್ರತಿಕ್ರಿಯೆ ಹೇಗಿರಲಿದೆ ಎಂಬುದರ ಮೇಲೆ ಸಿಂಧೂ ಜಲ ಒಪ್ಪಂದದ ಭವಿಷ್ಯ ನಿರ್ಧಾರವಾಗಲಿದೆ ಎನ್ನಲಾಗಿದೆ.

ಭಾರತ ಹೇಳುವುದೇನು

- ತಟಸ್ಥ ತಜ್ಞರು ಈಗಾಗಲೇ ವಿಚಾರಣೆ ನಡೆಸುತ್ತಿರುವ ವಿಷಯದಲ್ಲಿ ಮಧ್ಯಸ್ಥಿಕೆ ನ್ಯಾಯಾಲಯವು ನ್ಯಾಯತೀರ್ಮಾನ ಮಾಡುವಂತಿಲ್ಲ ಎಂದು ನಿಯಮ 9(6) ಹೇಳುತ್ತದೆ
- ಈ ರೀತಿ ಎರಡೂ ಸ್ವರೂಪದ ಪ್ರಕ್ರಿಯೆಗಳನ್ನು ಏಕಕಾಲಕ್ಕೆ ಆರಂಭಿಸುವುದೂ ಸಿಂಧೂ ಜಲ ಒಪ್ಪಂದದ ಸ್ಪಷ್ಟ ಉಲ್ಲಂಘನೆ
- ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಸಿಂಧೂ ಜಲ ಒಪ್ಪಂದ ಏರ್ಪಟ್ಟಿದೆ ಎಂದ ಮಾತ್ರಕ್ಕೆ ವಿಶ್ವಬ್ಯಾಂಕ್‌ಗೆ ಪರಮಾಧಿಕಾರವಿಲ್ಲ
- ಒಪ್ಪಂದವನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲು ವಿಶ್ವಬ್ಯಾಂಕ್‌ಗೆ ಅಧಿಕಾರವಿಲ್ಲ
- ಒಂದು ವೇಳೆ ಎರಡು ಸ್ವರೂಪದ ವಿಚಾರಣಾ ಪ್ರಕ್ರಿಯೆಗಳಿಂದ ಭಿನ್ನ ತೀರ್ಪು ಹೊರಬಂದಾಗ, ಅದು ಮತ್ತೊಂದು ಬಿಕ್ಕಟ್ಟಿಗೆ ಕಾರಣವಾಗಬಹುದು

ಆಧಾರ: ಪಿಟಿಐ, ಡಿಡಬ್ಲ್ಯು

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ರಾಜ್ ಆತ್ಮಕಥೆಯ ನೆನಕೆ

'ಪ್ರಜಾವಾಣಿ' ಪತ್ರಿಕೆಯು ಸಿನಿಮಾರಂಗದ ಪ್ರಮುಖ ಘಟನಾವಳಿಗಳನ್ನಷ್ಟೆ ದಾಖಲಿಸದೆ ಆತ್ಮಕಥೆಗಳಿಗೂ ಬೆಳಕು ಕಾಣಿಸಿದೆ. ಅದರಲ್ಲಿ ರಾಜ್‌ಕುಮಾರ್ ಅವರ ಬದುಕಿನ ಕುರಿತ ಆಸಕ್ತಿಕರ ಅಂಶಗಳನ್ನು ಒಳಗೊಂಡಿದ್ದ ಆತ್ಮಕಥೆ ಮುಖ್ಯವಾದುದು. ಅದು 1970ರಲ್ಲೇ ಪ್ರಕಟವಾಗಿತ್ತು.

'ತಂದೆಯವರು ಮನೆ ಬಿಡುವಾಗ ನನ್ನ ತಾಯಿ ಗರ್ಭಿಣಿ. ಹರಕೆಯ ಫಲವಾಗಿ ಹುಟ್ಟಿದ ನನಗೆ ಮುತ್ತುರಾಜ ಎಂದು ಹಿರಿಯರು ಹೆಸರಿಟ್ಟರು. ಈ ಹೆಸರಿನ ಹಿಂದೆ ಒಂದು ಐತಿಹ್ಯವಿದೆ.

1970ರಲ್ಲಿ ಪ್ರಕಟವಾದ ರಾಜ್‌ಕುಮಾರ್ ಆತ್ಮಕಥೆಯ ಒಂದು ಅಧ್ಯಾಯ

'ಕನಕಪುರ–ಮೇಕೆದಾಟುಗಳ ನಡುವೆ ಕೆಲವು ಮೈಲಿಗಳ ದೂರದಲ್ಲಿ ಆಂಜನೇಯನ ಪುಟ್ಟ ಗುಡಿಯೊಂದಿದೆ. ಇಲ್ಲಿಗೆ ನಮ್ಮೂರಿನ ಕಡೆಯಿಂದ ಹೋಗಬೇಕಾದರೆ ಹೊಳೆ ದಾಟಿ ಹೋಗಬೇಕು. ಮಕ್ಕಳಾಗದಿದ್ದವರು ಈ ದೇವರಿಗೆ ಹರಕೆ ಹೊತ್ತರೆ ಸಂತಾನವಾಗುವುದು ಎಂದು ಪ್ರತೀತಿ. ನನ್ನ ಹಿರಿಯರೂ ಈ ದೇವರಿಗೆ ಹರಕೆ ಹೊತ್ತರು. ಹರಕೆಯ ಫಲವಾಗಿ ಹುಟ್ಟಿದ ನನಗೆ ಈ ದೇವರ ಹೆಸರನ್ನೇ ಇಟ್ಟರು. ಈ ದೇವರಿಗೆ ಮತ್ತೆತ್ತರಾಯ ಎಂದು ಹೆಸರು ಬರಲು ದಂತ ಕಥೆಯೊಂದಿದೆ...' ಹೀಗೆ ಸಾಗುತ್ತದೆ ನಟ ರಾಜ್‌ಕುಮಾರ್ ಅವರ ಆತ್ಮಕಥೆಯ ಬರಹ.

1970ರ ಮಾರ್ಚ್‌ನಲ್ಲಿ ಇಂತಹುದೊಂದು ಪ್ರಯೋಗವನ್ನು 'ಪ್ರಜಾವಾಣಿ' ಪತ್ರಿಕೆಯು ಪ್ರಾರಂಭಿಸಿತ್ತು. 'ಹಿರಿಯರ ಹರಕೆ' ಎನ್ನುವ ಅಧ್ಯಾಯದಲ್ಲಿ ರಾಜ್‌ಕುಮಾರ್ ಅವರ ಹುಟ್ಟಿನ ಹಿಂದೆ ಹಿರಿಯರು ಹೇಗೆ ಹರಕೆ ಹೊತ್ತಿದ್ದರು ಎನ್ನುವ ಅಂಶವನ್ನು ಪ್ರಧಾನವಾಗಿ ಇರಿಸಲಾಗಿತ್ತು. ಗುಬ್ಬಿ ಕಂಪನಿ ಸೇರುವುದಕ್ಕೆ ಮೊದಲು ತಮ್ಮ ಮಾವ ಅಪ್ಪಾಜಿಗೌಡರು ಹಾಗೂ ಅವರ ತಮ್ಮ ಸಣ್ಣೇಗೌಡರಲ್ಲಿ ತಾವು ಸಂಗೀತ ಪಾಠ ಕಲಿತದ್ದನ್ನೂ ಆಗ ರಾಜಕುಮಾರ್ ಹೇಳಿಕೊಂಡಿದ್ದರು. ಅವರ ಆತ್ಮಕಥೆಯ ಅಧ್ಯಾಯಗಳು ಕೆಲವು ತಿಂಗಳುಗಳ ಅವಧಿಯಲ್ಲಿ ಆಗ ಪ್ರಕಟವಾಗಿತ್ತು.

ಹೀಗೆ ಸಿನಿಮಾ ಜತೆಗೆ ಸಾಂಸ್ಕೃತಿಕ ನಂಟು ಹೊಂದಿರುವ ಪತ್ರಿಕೆಯು ಈಗ 'ಸಿನಿ ಸಮ್ಮಾನ' ನೀಡುವ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಪ್ರಶಸ್ತಿಗಳು ಯಾವುವು, ಆಯ್ಕೆ ಪ್ರಕ್ರಿಯೆ ಹೇಗಿದ್ದೀತು ಎನ್ನುವುದನ್ನು ತಿಳಿಯಲು ನಿತ್ಯವೂ ಈ ಸ್ಥಳವನ್ನು ಗಮನಿಸುತ್ತಿರಿ.

ಶ್ರೀಲಂಕಾದಲ್ಲಿ ನಾಗತಿಹಳ್ಳಿ ಚಿತ್ರೋತ್ಸವ

'ಅಮೆರಿಕ!ಅಮೆರಿಕ!', 'ಮಾತಾಡ್ ಮಾತಾಡ್ ಮಲ್ಲಿಗೆ'ಯಂತಹ ವಿಭಿನ್ನ ಸಿನಿಮಾಗಳಿಂದಲೇ ಜನಪ್ರಿಯರಾದವರು ನಾಗತಿಹಳ್ಳಿ ಚಂದ್ರಶೇಖರ್. ಕತೆಗಾರ, ಲೇಖಕರು ಕೂಡ ಆಗಿರುವ ನಾಗತಿಹಳ್ಳಿ ಅವರ ಸಿನಿಮಾಗಳೆಂದರೆ ಒಂದು ಬಗೆಯ ದೃಶ್ಯಕಾವ್ಯ. ಏ. 27 ರಿಂದ ಮೇ 3 ರವರೆಗೆ ಸಿನಿಮಾಸಕ್ತರಿಗಾಗಿ ಶ್ರೀಲಂಕಾದಲ್ಲಿ ನಾಗತಿಹಳ್ಳಿ ಚಿತ್ರೋತ್ಸವ ನಡೆಯಲಿದೆ.



ಶ್ರೀಲಂಕಾದ ಫಿಲ್ಮ್ ಕಾರ್ಪೊರೇಶನ್, ಅಲ್ಲಿನ ಪ್ರವಾಸೋದ್ಯಮ ಇಲಾಖೆ, ಏಷ್ಯನ್ ಮೀಡಿಯಾ ಕಲ್ಚರಲ್ ಅಸೋಸಿಯೇಶನ್ ಮತ್ತು ಶ್ರೀಲಂಕಾದ ಭಾರತೀಯ ರಾಯಭಾರಿ ಕಚೇರಿ ಇವುಗಳ ಸಹಯೋಗದಲ್ಲಿ ಈ ಚಲನಚಿತ್ರೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಗತಿಹಳ್ಳಿ ನಿರ್ದೇಶನದ 'ಅಮೆರಿಕ!ಅಮೆರಿಕ!', 'ಮಾತಾಡ್ ಮಾತಾಡ್ ಮಲ್ಲಿಗೆ, 'ಕೊಟ್ರೇಶಿ ಕನಸು', 'ಇಷ್ಟಕಾಮ್ಯ' ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಕಥಾ ನಿರೂಪಣೆ, ಚಿತ್ರಕಥೆ ರಚನೆ, ಛಾಯಾಗ್ರಹಣ, ಸಂಕಲನ ಮುಂತಾದ ವಿಷಯಗಳ ಬಗ್ಗೆ ಶ್ರೀಲಂಕಾದ ಸಿನಿಮಾಸಕ್ತ ವಿದ್ಯಾರ್ಥಿಗಳೊಂದಿಗೆ ಕಾರ್ಯಾಗಾರವಿದೆ.

ಈ ಚಿತ್ರೋತ್ಸವದಲ್ಲಿ ನಾಗತಿಹಳ್ಳಿ ಅವರ ಜತೆಗೆ ನಟ ನಿರೂಪ್ ಭಂಡಾರಿ, ನಟಿ ಕಾವ್ಯಾ ಶೆಟ್ಟಿ, ಛಾಯಗ್ರಾಹಕ ಎಸ್.ಕೆ.ರಾವ್ ಮೊದಲಾದ ಗಣ್ಯರು ಭಾಗಿಯಾಗಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರಿಗೆ ಮುಖದ ಮೇಲೆ ಗಂಭೀರ ಸ್ವರೂಪದ ಗಾಯಗಳಾಗಿರುವ ಚಿತ್ರಗಳು ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಅಂಕಿತಾ ವಿಜಯ್ ಎಂಬ ಮಹಿಳೆಯ ಮೇಲೆ ಆಕೆಯ ಮುಸ್ಲಿಂ ಮಾಜಿ ಗೆಳೆಯ ತೀವ್ರವಾಗಿ ಹಲ್ಲೆ ನಡೆಸಿದ್ದಾನೆ ಎಂಬುದಾಗಿ ಚಿತ್ರಗಳ ಜೊತೆ ಹೇಳಲಾಗಿದೆ. 'ಅಬ್ದುಲ್ ಎಂಬಾತನ ಪ್ರೀತಿಯಲ್ಲಿ ಬಿದ್ದಿದ್ದ ಅಂಕಿತಾ ಅವರಿಗೆ ಆ ವ್ಯಕ್ತಿ ನರಕ ತೋರಿಸಿದ್ದಾನೆ. ಹಿಂದೂ ಮಹಿಳೆಯರಿಗೆ ಇದು ಏಕೆ ಅರ್ಥವಾಗುತ್ತಿಲ್ಲ' ಎಂದು ಟ್ವಿಟರ್ ಬಳಕೆದಾರರೊಬ್ಬರು ಬರೆದುಕೊಂಡಿದ್ದಾರೆ. ಆದರೆ ಈ ಚಿತ್ರಗಳ ಜೊತೆ ಹಂಚಿಕೊಂಡಿರುವ ಮಾಹಿತಿ ತಪ್ಪು.

ಚಿತ್ರಗಳಲ್ಲಿರುವ ಮಹಿಳೆ ಅಂಕಿತಾ ವಿಜಯ್ ಅಲ್ಲ. ಹಲ್ಲೆಗೊಳಗಾದ ಮಹಿಳೆ ಮಲಯಾಳ ನಟಿ ಅನಿಕಾ ವಿಕ್ರಮನ್ ಎಂದು 'ದಿ ಲಾಜಿಕಲ್ ಇಂಡಿಯನ್' ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ತಮ್ಮ ಮಾಜಿ ಗೆಳೆಯ ಅನೂಪ್ ಪಿಳ್ಳೈ ಎಂಬವರಿಂದ ಮಾನಸಿಕವಾಗಿ ಹಾಗೂ ದೈಹಿಕವಾಗಿ ದೌರ್ಜನ್ಯ ಎದುರಿಸಿರುವ ಕುರಿತು ಅನಿಕಾ ತಮ್ಮ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರನ್ನೂ ನೀಡಿದ್ದಾರೆ. ಆರೋಪಿಯು ತಲೆಮರೆಸಿಕೊಂಡಿದ್ದು ನ್ಯೂಯಾರ್ಕ್‌ನಲ್ಲಿದ್ದಾನೆ ಎನ್ನಲಾಗಿದೆ. ಈ ಬಗ್ಗೆ ಹಿಂದೂಸ್ತಾನ್ ಟೈಮ್ಸ್ ಸೇರಿದಂತೆ ಹಲವು ಪತ್ರಿಕೆಗಳು ವರದಿ ಮಾಡಿವೆ. ಆದರೆ ಮುಸ್ಲಿಂ ಗೆಳೆಯನಿಂದ ಮಹಿಳೆ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು 'ದಿ ಲಾಜಿಕಲ್ ಇಂಡಿಯನ್' ತಿಳಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕಷ್ಟ ಬೇಕು ಬದುಕಿಗೆ

ದಿವಿಜಸುಧೆ ಬರಿಮಧುವೊ; ಹುಳಿಯುಪ್ಪುಮಿಶ್ರಿತವೊ? |
ಅವನಿಯುಣಿಸಿನಲಿ ಷಡ್ರಸ ತಪ್ಪದಿಹುದು ||
ಲವಲೇಶಮಾನುಮಿರದಿರೆ ಕಯ್ಪು ಜೀವನದಿ |
ಪವಳಿಸಿದನೆ ನರನು? – ಮಂಕುತಿಮ್ಮ || 870 ||

ಪದ-ಅರ್ಥ: ದಿವಿಜಸುಧೆ = ದೇವಲೋಕದ ಅಮೃತ, ಹುಳಿಯುಪ್ಪು ಮಿಶ್ರಿತವೊ = ಹುಳಿ + ಉಪ್ಪು + ಮಿಶ್ರತವೊ, ಅವನಿಯುಣಿಸಿನಲಿ = ಅವನಿಯ(ಭೂಮಿಯ) + ಉಣಿಸಿನಲಿ (ಊಟದಲ್ಲಿ), ಷಡ್ರಸ = ಆರು ರಸಗಳು, ಲವಲೇಶಮಾನುಮಿರದಿರೆ = ಲವಲೇಶಂ(ಸ್ವಲ್ಪವೂ) + ಆನುಂ + ಇರದಿ , ಕಯ್ಪು = ಕಹಿ, ಪವಳಿಸಿರನೆ = ಮಲಗಿರಲಾರನೆ.

ವಾಚ್ಯಾರ್ಥ: ದೇವಲೋಕದಲ್ಲಿ ದೊರೆಯುವ ಅಮೃತ ಕೇವಲ ಸಿಹಿಯೋ, ಹುಳಿ, ಉಪ್ಪು ಮಿಶ್ರಿತವೋ ತಿಳಿಯದು. ಆದರೆ ಭೂಮಿಯಲ್ಲಿಯ ಉಣಿಸಿನಲ್ಲಿ ಆರೂ ರಸಗಳಿವೆ. ಜೀವನದಲ್ಲಿ ಕಷ್ಟಗಳ ಕಹಿ ಒಂದು ಸ್ವಲ್ಪವಾದರೂ ಬರದೆ ಹೋದರೆ ಮನುಷ್ಯ ಆಲಸಿಯಾಗಿ ಮಲಗಿಯೇ ಇರುತ್ತಿದ್ದಿಲ್ಲವೇ?

ವಿವರಣೆ: ದೇವಲೋಕದಲ್ಲಿ ದೇವತೆಗಳು ಅಮೃತವನ್ನು ಕುಡಿಯುತ್ತಾರಂತೆ. ಅದರ ರುಚಿ ಹೇಗಿದೆಯೋ? ಕಂಡವರಾರು? ಅಮೃತವೆಂದರೆ ಅದು ಕೇವಲ ಜೇನುತುಪ್ಪವೋ? ಅದಕ್ಕೇನಾದರೂ ಹುಳಿ, ಉಪ್ಪು ಮಿಶ್ರವಾಗಿದೆಯೋ ತಿಳಿಯದು. ದಿನನಿತ್ಯ ಅದೇ ಅಮೃತವನ್ನು ಕುಡಿದು ಬದುಕುವುದು ಎಂತಹ ಸಂತೋಷ? ಆದರೆ ನಮ್ಮ ಭೂಮಿಯಲ್ಲಿರುವ ತರತರಹದ ಊಟಗಳಲ್ಲಿ ಷಡ್ರಸಗಳಿವೆ. ನಮ್ಮ ದೇಹ ಆರೋಗ್ಯವಾಗಿರಲು ಆಹಾರದಲ್ಲಿ ಆರು ರುಚಿಗಳಿರಬೇಕೆಂದು ಆಯುರ್ವೇದ ಶಾಸ್ತ್ರ ಹೇಳುತ್ತದೆ. ಇವೇ ಷಡ್ರಸಗಳು. ಅವು ಮಧುರ (ಸಿಹಿ), ಆಮ್ಲ (ಹುಳಿ), ಲವಣ (ಉಪ್ಪು), ತಿಕ್ತ(ಕಹಿ), ಕಟು(ಖಾರ), ಕಷಾಯ(ಒಗರು). ಈ ಆರೂ ರಸಗಳನ್ನೊಳಗೊಂಡ ಊಟಕ್ಕೆ 'ಷಡ್ರಸೋಪೇತ ಭೋಜನ' ಎನ್ನುತ್ತಾರೆ. ಕಗ್ಗ ಈ ಮಾತನ್ನು ಏಕೆ ಹೇಳುತ್ತದೆ? ಸ್ವರ್ಗದಲ್ಲಿ ಬರೀ ಅಮೃತ ಕುಡಿದು ಬೇಸರವಾಗುವುದಿಲ್ಲವೇ? ಅದು ಕೇವಲ ಸಿಹಿಯಾದದ್ದು. ಆದರೆ ನಮ್ಮ ಷಡ್ರಸಗಳಲ್ಲಿ ಕಹಿಯೂ ಒಂದು. ಈ ಕಹಿ ರುಚಿಗೆ ಅವಶ್ಯವಾಗುವಂತೆ ಮನುಷ್ಯನಿಗೆ ಬದುಕಿನಲ್ಲಿ ಕೊಂಚ ಕಷ್ಟ ಬರಬೇಕು. ಕಷ್ಟವೇ ಇಲ್ಲದ ಜೀವನ ಸ್ವರ್ಗದ ಅಮೃತದಂತೆ ಬೇಜಾರು ತರಿಸುತ್ತದೆ. ಕಷ್ಟ ಬಂದಾಗಲೇ ಮನುಷ್ಯ ಚುರುಕಾಗುತ್ತಾನೆ. ಅದಿಲ್ಲದೆ ಹೋದರೆ ಸೋಮಾರಿಯಾಗಿ ಮಲಗಿಬಿಡುತ್ತಾನೆ. ಕುರುಕ್ಷೇತ್ರದ ಯುದ್ಧ ಮುಗಿದಿದೆ. ಯುಧಿಷ್ಠಿರನ ಪಟ್ಟಾಭಿಷೇಕವೂ ಆಗಿದೆ. ಎಲ್ಲ ಕರ್ತವ್ಯಗಳನ್ನು ಮುಗಿಸಿ ಕೃಷ್ಣ ದ್ವಾರಕೆಗೆ ಹೊರಟಿದ್ದಾನೆ. ರಥ ಏರುವಾಗ ಕುಂತಿ ಬಂದಳು. ಕೃಷ್ಣ ಆಕೆಗೆ ನಮಸ್ಕಾರ ಮಾಡಿದ. ಕುಂತಿ ಹೇಳಿದಳು, "ಕೃಷ್ಣಾ, ನೀನು ಸಕಲ ಯೋಗಶಕ್ತಿಗಳನ್ನು ಹೊಂದಿದವನು, ನೀನೇ ಸರ್ವಶಕ್ತ. ನಮ್ಮನ್ನೆಲ್ಲ ಜತನ ಕಾಪಾಡಿ ಉಳಿಸಿದ್ದೀಯಾ. ನಿನಗೆ ನನ್ನ ಕೃತಜ್ಞತೆಗಳು" ಕೃಷ್ಣ, "ಅತ್ತೆ, ಅದೆಲ್ಲ ಬೇಡ. ಅವು ನನ್ನ ಕರ್ತವ್ಯದ ಭಾಗ. ನಿನಗೇನು ಬೇಕು ಎಂದು ಕೇಳಲೇ ಇಲ್ಲವಲ್ಲ" ಎಂದಾಗ ಕುಂತಿ ಹೇಳುತ್ತಾಳೆ, "ಕೃಷ್ಣ, ನನಗೆ ದಯವಿಟ್ಟು ಕಷ್ಟಗಳನ್ನೇ ಕೊಡು. ಯಾಕೆಂದರೆ ಕಷ್ಟ ಬಂದಾಗಲೆಲ್ಲ ನೀನು ಬಂದು ದರ್ಶನ ಕೊಡುತ್ತೀಯಾ. ಬರೀ ಸುಖವಿದ್ದರೆ ನಾನು ನಿನ್ನನ್ನೂ ನೆನೆಸಲಿಕ್ಕಿಲ್ಲ, ನಿನ್ನ ದರ್ಶನವೂ ಆಗಲಿಕ್ಕಿಲ್ಲ". ಬಹುಶಃ ಭಗವಂತನ ಹತ್ತಿರ ಕಷ್ಟವನ್ನು ಬೇಡಿಕೊಂಡವಳು ಅವಳೊಬ್ಬಳೇ. ಕಷ್ಟ, ಬದುಕಿನಲ್ಲಿ ಬರಬಹುದಾದ ಸೋಮಾರಿತನವನ್ನು ಕಿತ್ತೊಗೆಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಏಪ್ರಿಲ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಷಷ್ಠಿ ಗಂ. 11-28 ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ಸುಕರ್ಮ ಗಂ. 08-06, ಕರಣ: ತೈತಿಲ ಗಂ. 11-28, ಮೇಷ ಮಾಸದ 12 ನೇ ದಿನ, ಮಳೆನಕ್ಷತ್ರ: ಅಶ್ವಿನಿ 4. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-15 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 05 ಶವ್ವಾಲ್
ದಿನ ವಿಶೇಷ : ಗಂಗೋತ್ಪತ್ತಿ
ಅದೃಷ್ಟ ಸಂಖ್ಯೆ : 3, 4

ಮೇಷ: ನಿಮಗಿರುವ ಸ್ನೇಹಪರ ಸ್ವಭಾವದಿಂದ ಕಾರ್ಯಕ್ಷೇತ್ರದಲ್ಲಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಮುಂದಿನ ದಿನಗಳಲ್ಲಿ ಯೋಜನೆಗಳಲ್ಲಿ ಪ್ರಾಬಲ್ಯ ಸಾಧಿಸುವಿರಿ. ನಿಮ್ಮ ಮೇಲೆ ನಿಮಗೆ ವಿಶ್ವಾಸವಿರಲಿ.

ವೃಷಭ: ಅನಾರೋಗ್ಯದ ಹೊರತಾಗಿ ಕೆಲವು ಜವಾಬ್ದಾರಿಗಳನ್ನು ನಿಭಾಯಿಸಲೇಬೇಕಾದುದು ಮಾನಸಿಕವಾದ ಸಂಕಟಕ್ಕೆ ಕಾರಣವಾಗಬಹುದು. ಒಂದೊಮ್ಮೆಗೆ ಬಂದ ಅತ್ಯಂತ ಸಂತಸದ ವಿಚಾರವನ್ನು ಸ್ವೀಕರಿಸಲು ಕಷ್ಟವಾಗುವುದು.

ಮಿಥುನ: ಇಂದಿನ ದಿನದದಲ್ಲಿ ಆಗುವ ಹಲವು ಘಟನೆಗಳಿಂದ ಪದೇ ಪದೇ ದಿವ್ಯಶಕ್ತಿಯ ಅನುಭೂತಿಯು ಆಗುತ್ತದೆ. ಉಂಟಾಗುತ್ತಿರುವ ದೈಹಿಕ ಬದಲಾವಣೆಗಳು ಔಷಧದ ಅಡ್ಡಪರಿಣಾಮಗಳೇ ಎಂದು ಪರೀಕ್ಷಿಸಿಕೊಳ್ಳಿರಿ.

ಕರ್ಕಾಟಕ: ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ಸುಲಭವಾಗಿ ಸ್ಥಾನಗಳಿಸುವಲ್ಲಿ ಸಫಲರಾಗುವಿರಿ. ಒಡಹುಟ್ಟಿದವರ ಸಮಸ್ಯೆಗೆ ಉಪಕಾರವನ್ನು ಮಾಡುವ ಪ್ರಯತ್ನ ಮಾಡಿ. ಷೇರು ವ್ಯವಹಾರದವರಿಗೆ ಅದೃಷ್ಟದಾಯಕ.

ಸಿಂಹ: ನಿರ್ಮಾಣಕಾರ್ಯದಲ್ಲಿ ತೊಡಗಿರುವವರಿಗೆ ಇಂದು ಒಂದು ಆಶಾಕಿರಣ ದೊರೆಯುತ್ತದೆ. ವೃತ್ತಿ ಜೀವನದಲ್ಲಿನ ಅಡೆತಡೆಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವಿರಿ. ನೆಮ್ಮದಿಯುಕ್ತ ದಿನ ಎನಿಸುವುದು.

ಕನ್ಯಾ: ಹೊರದೇಶದ ಉದ್ಯೋಗ ಅನ್ವೇಷಣೆಯಲ್ಲಿ ಇರುವವರಿಗೆ ಹಾಗೂ ಉನ್ನತ ವಿದ್ಯಾಭ್ಯಾಸಕ್ಕೆ ಬಯಸುವವರಿಗೆ ಇಂದು ಒಳ್ಳೆಯ ದಿನ. ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ನಿಯಂತ್ರಣದಲ್ಲಿ ಇರುವುದು.

ತುಲಾ: ಬದಲಾದ ಕೆಲವು ಗೃಹೋಪಯೋಗಿ ವಸ್ತುಗಳು ಅಡ್ಡಪರಿಣಾಮವನ್ನು ಉಂಟುಮಾಡುವುದು. ಸಾರ್ವಜನಿಕರಿಂದ ನೇರವಾಗಿ ನಿಮ್ಮ ಕೆಲಸಗಳ ಬಗೆಗಿನ ಪ್ರತಿಕ್ರಿಯೆ ಪಡೆಯುವುದರಿಂದ ಗುಣಮಟ್ಟ ವೃದ್ಧಿಸಿಕೊಳ್ಳಲಾಗುತ್ತದೆ.

ವೃಶ್ಚಿಕ: ಸಂಗಾತಿಯ ಅಪರೂಪದ ಹೊಗಳಿಕೆಯ ಮಾತುಗಳನ್ನು ಕೇಳಿ ಬಹಳ ಸಂತೋಷ ಹೊಂದುವಿರಿ. ಹೊಸ ಸ್ಥಳದಲ್ಲಿ ಹೊಂದಣಿಕೆ ಕಷ್ಟಕರವಾಗಿ ಪರಿಣಮಿಸಬಹುದು. ವ್ಯವಹಾರದ ಮೇಲೆ ನಿಗಾ ಇರಲಿ.

ಧನು: ವ್ಯವಸಾಯದಲ್ಲಿ ವಿಪತ್ತನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲು ಬೇಕಾದ ತಯಾರಿ ಮಾಡಿಟ್ಟುಕೊಳ್ಳಿರಿ. ಜೀವನದ ಸಂಕ್ರಮಣ ಕಾಲದಲ್ಲಿ ಎದುರಿಸಬಹುದಾದ ಗೊಂದಲಗಳಲ್ಲಿ ಸಂಗಾತಿ ಬೆನ್ನೆಲುಬಾಗಲಿದ್ದಾರೆ.

ಮಕರ: ಸ್ವಲ್ಪ ದಿನದ ಹಿಂದೆ ಪರಿಹಾರ ಕಾಣದೆ ಕಾಡುತ್ತಿದ್ದ ಒಂದು ಸಮಸ್ಯೆ ಹಿಮದಂತೆ ಕರಗಿಹೋಗುತ್ತದೆ. ಮಿತ್ರರ ಹಾಗೂ ಸಹೋದ್ಯೋಗಿಗಳು ನಿಮ್ಮ ಮೇಲಿಟ್ಟ ಪ್ರೀತಿ ವಿಶ್ವಾಸದ ಅನುಭವ ಬರಲಿದೆ.

ಕುಂಭ: ಭೂಮಿ ಖರೀದಿಯ ತೀರ್ಮಾನದ ಮೊದಲಾಗಿ ಕಾನೂನಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ಕಾರ್ಯವೈಖರಿಯನ್ನು ಒಳ್ಳೆಯ ರೀತಿಯಲ್ಲಿ ಬದಲಾಯಿಸಿಕೊಂಡಲ್ಲಿ ಕೆಲಸ ಸರಾಗವಾಗುವುದು.

ಮೀನ: ಮಕ್ಕಳು ತಪ್ಪು ಮಾಡಿದಾಗ ಸಿಟ್ಟು ಬರುವುದು ಸಹಜವಾದರೂ ತಿಳಿವಳಿಕೆ ಹೇಳುವುದರಿಂದ ಅವರನ್ನು ಸರಿದಾರಿಗೆ ತನ್ನಿ. ನಿಮ್ಮ ಕೆಲವು ಆಲೋಚನಾರಹಿತ ಮಾತುಗಳಿಂದಾಗಿ ಎಲ್ಲರೂ ಆಭಾಸಕ್ಕೆ ಒಳಗಾಗುತ್ತಾರೆ.

ಪದಬಂಧ 5300

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಾಠದ ಅಧ್ಯಾಯ ಕಲಿಸಿಕೊಟ್ಟ ಪ್ರಾಧ್ಯಾಪಕ (4)
3.ಒಳ್ಳೆಯ ಮಾತು (4)
5.ಸವಿಯಾದುದು ಮರದೊಳಗಿದೆ (3)
7.ಮಗಳ ಜೊತೆಯಿರುವ ಸುತ (2)
8.ನಮ್ಮೂರಲ್ಲಿ ಕಾಣಿಸಿದ ಮನುಷ್ಯ (2)
10.ಹುಲ್ಲಿನ ಮೆದೆಯಿದು (3)
11.ಕತ್ತು ಕೊನೆಗಿಟ್ಟು ತೋರಿದ ಬಲ (3)
13.ಜಾಮಿತಿಯಲ್ಲಿನ ಎಲ್ಲೆ ಕಾಣುತ್ತಿದೆಯೇ? (2)
15.ಅಕ್ಷರದಲ್ಲಿಯೇ ನಶ್ವರವಾದುದು ಬಂದಿದೆ (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
18.ಕಲೆಯೊಳಗಿರುವ ಆಹ್ವಾನ (4)
19.ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ
1.ಮರ್ಯಾದೆಯಿಟ್ಟು ಮಾಡಿರುವ ಹೋಲಿಕೆ (4)
2.ಮೃತ್ಯು ದೇವತೆ (2)
3.ಅಸುರನ ಹತ್ತಿರ ಕಾಣಿಸಿರುವ ದೇವತೆ (2)
4.ಲೆಕ್ಕ ಶಾಸ್ತ್ರವಿಲ್ಲಿ ಉಲ್ಟಾ ಕಾಣುತ್ತಿದೆ (3)
6.ಹೊಣೆಯನ್ನು ಹೊತ್ತಿರುವವನು (3)
7.ಮರಳುಗಾಡನ್ನು ಹೀಗೂ ಕರೆವರು (4)
9.ರತ್ನಗಳ ಆಶ್ರಯಸ್ಥಾನ (4)
12.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ (3)
14.ಕಾಣದಂತೆ ಅಡಗಿಸಿಡುವುದು (4)
15.ಕ್ಷಣಕಾಲ ಮಾತ್ರ ಇರುವಂಥದ್ದು (3)
16.ಅಬಲೆ ಬೀಸಿದ ಗಾಳ (2)
17.ವಿರೋಧದ ವಿರುದ್ಧ ಪದ (2)



5299ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಪರಾಕ್ರಮಿ 6.ತಳಮಳ
7.ಪರಾಜಿತ 9.ಆರಾಧಕ
10.ವಸನ 11.ನಿಯಾಮಕ
12.ನವರಂಗ 14.ಕುಡಿನೋಟ
16.ಅನುರಾಗ

ಮೇಲಿಂದ ಕೆಳಕ್ಕೆ:
1.ಅಪರೂಪ 2.ಕ್ರಿಮಿ
3.ಹಂತ .4.ನಳಪಾಕ
8.ತವಕ 9.ಆನನ
11.ನಿರಂಕುಶ 13.ಗರಗಸ
15.ಟಕ್ಕ 16.ಅತ್ತೆ

ಸುಡೊಕು 5686

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5685 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು 74



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	132.50
ಇಂದಿನ ಅಂತ್ಯ	17769
▲	25
ದಿನದ ಗರಿಷ್ಠ	17807

ಕೊಬ್ಬರಿ ಧಾರಣೆ

ಅರಸೀಕೆರೆ	₹9000-9050
ಪುತ್ತೂರು(ಇತರ)	₹4500-7300
ತುರುವೇಕೆರೆ	₹9000-9000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665(1665))
ಸೋಯಾ (ರಿಫೈನ್ಡ್)	₹980(995)
ಸೂರ್ಯಕಾಂತಿ (ರಿಫೈನ್ಡ್)	₹1040(1040)
ಪಾಮೋಲಿನ್	₹940(945)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1,000-1,600
ಮಧ್ಯಮ	₹800-1,000
ಸಣ್ಣ	₹400-800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹ 279-512
ದ್ವಿತಳಿ (ಬಿ.ವಿ)	₹233-648

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹132.50

ಮುಂಬೈ ಧಾರಣೆ

ಶೇಂಗಾ

25-4-2024

ಜಾವಾ 70/80(ಹೊಸ)	11050-11150
ಜಾವಾ 80/90(ಹೊಸ)	10750-10850
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1675(1675)
ಒಂದು ವಾರದ ಡೆಲಿವರಿ	1670(1670)
ಸೋಯಾ ಕಚ್ಚಾ	895(895)
ಪಾಮ್ ವಾರದ ಡೆಲಿವರಿ	938(943)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59950(59875)
ಬೆಳ್ಳಿ ಕೆ.ಜಿ 74200(74730)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕ್ರೋಮಾದಲ್ಲಿ 'ಎವೆರಿಥಿಂಗ್ ಆ್ಯಪಲ್' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಸಮೂಹಕ್ಕೆ ಸೇರಿರುವ, ಎಲೆಕ್ಟ್ರಾನಿಕ್ಸ್ ಉಪಕರಣಗಳ ಮಳಿಗೆ ಕ್ರೋಮಾ 'ಎವೆರಿಥಿಂಗ್ ಆ್ಯಪಲ್' ಅಭಿಯಾನಕ್ಕೆ ಚಾಲನೆ ನೀಡಿದೆ. ಇದು ಮೇ 2ರವರೆಗೆ ಚಾಲ್ತಿಯಲ್ಲಿ ಇರಲಿದ್ದು ಐಫೋನ್ 13 ಮತ್ತು ಐಫೋನ್ 14ಅನ್ನು ಈ ಅವಧಿಯಲ್ಲಿ ಕ್ರಮವಾಗಿ ₹ 1,708 ಹಾಗೂ ₹ 2,125 ಇಎಂಐ ಪಾವತಿಸಿ ಖರೀದಿಸಬಹುದು.

ಗ್ರಾಹಕರು ಆ್ಯಪಲ್ ವಾಚ್‌ಗಳನ್ನು ₹ 25,900ರಿಂದ ಖರೀದಿಸಬಹುದು. ಏರ್‌ಪಾಡ್‌ಗಳನ್ನು ₹ 11,499ಕ್ಕೆ ಖರೀದಿಸಬಹುದು. ಮ್ಯಾಕ್‌ಬುಕ್‌ಗಳ ಆರಂಭಿಕ ಬೆಲೆ ₹ 54,990ರಿಂದ ಲಭ್ಯವಿವೆ. ಐಪ್ಯಾಡ್‌ಗಳನ್ನು ರಿಯಾಯಿತಿ ಬೆಲೆಯಾಗಿರುವ ₹26,900ಕ್ಕೆ ಖರೀದಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

15ನೇ ವರ್ಷದ ಸವಿನೆನಪು



ಶ್ರೀ ಎನ್. ರಮೇಶ್
ಜನನ: 22-11-1966 ಮರಣ: 26-04-2008
ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗುಳಿದಿರುವುದು.
ಇಂತಿ ದುಃಖತಪ್ತರು: ಶ್ರೀಮತಿ ಪಾಪಮ್ಮ ಮತ್ತು ನಂಜಪ್ಪರೆಡ್ಡಿಯವರ ಕುಟುಂಬದವರು ಮಾರತ್ತಹಳ್ಳಿ, ಬೆಂಗಳೂರು-37

ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಸ್ಪಷ್ಟನೆ

ಫ್ಲ್ಯಾಶ್ ಸೇಲ್‌ಗೆ ಕೇಂದ್ರದ ವಿರೋಧವಿಲ್ಲ

ನವದೆಹಲಿ (ಪಿಟಿಐ): ಇ-ವಾಣಿಜ್ಯ ವೇದಿಕೆಗಳಲ್ಲಿ ಆಗಾಗ ನಡೆಯುವ ಫ್ಲ್ಯಾಶ್ ಸೇಲ್ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಯಾವುದೇ ತಕರಾರು ಇಲ್ಲ. ಆದರೆ, ಸ್ಪರ್ಧಾತ್ಮಕತೆಯನ್ನು ಹಾಳುವ ಮಾಡುವ ರೀತಿಯಲ್ಲಿ ಉತ್ಪನ್ನಗಳ ಬೆಲೆ ನಿಗದಿ ಮಾಡುವುದನ್ನು ಮತ್ತು ಇ-ವಾಣಿಜ್ಯ ವೇದಿಕೆಗಳು ಗ್ರಾಹಕರ ಆಯ್ಕೆಗೆ ಮಿತಿ ಹೇರುವಂತಹ ಯಾವುದೇ ಮೋಸದ ಮಾರ್ಗ ಅನುಸರಿಸುವುದನ್ನು ಕೇಂದ್ರ ವಿರೋಧಿಸುತ್ತದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಹೇಳಿದ್ದಾರೆ.

'ಯಾರಿಗಾದರೂ ರಿಯಾಯಿತಿ ಕೊಡಬೇಕು ಎಂದಿದ್ದರೆ ನಾನು ಅದರ ಬಗ್ಗೆ ಏಕೆ ತಕರಾರು ತೆಗೆಯಬೇಕು? ಗ್ರಾಹಕರಿಗೆ ಒಳ್ಳೆಯ ಬೆಲೆಗೆ ಉತ್ಪನ್ನ ಸಿಗುತ್ತದೆ... ಇದಕ್ಕೆ ನಮ್ಮ ತಕರಾರು ಇಲ್ಲ' ಎಂದು ಗೋಯಲ್ ಅವರು ಇಲ್ಲಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಎರಡು ವಿಚಾರಗಳಿಗೆ ತಮ್ಮ ತಕರಾರು ಇದೆ ಎಂದು ಗೋಯಲ್ ಹೇಳಿದ್ದಾರೆ. ಮೊದಲನೆಯದು, ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯನ್ನೇ ಹಾಳುಮಾಡುವ ರೀತಿಯಲ್ಲಿ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡುವುದು. ಇನ್ನೊಂದು, ಗ್ರಾಹಕರ ಪಾಲಿನ ಆಯ್ಕೆಗಳನ್ನು ಮಿತಿಗೊಳಿಸುವುದು. 'ಇ-ವಾಣಿಜ್ಯ ವಹಿವಾಟುಗಳಿಗೆ ಸಂಬಂಧಿಸಿದಂತೆ ನೀತಿಯೊಂದನ್ನು ಕೇಂದ್ರವು ರೂಪಿಸುತ್ತಿದೆ. ಈ ನೀತಿಯು, ಗ್ರಾಹಕರಿಗೆ ವಂಚನೆ ಆಗುವುದನ್ನು ತಡೆಯಲು ಯತ್ನಿಸಲಿದೆ' ಎಂದು ಸಚಿವರು ಹೇಳಿದ್ದಾರೆ.

ಚೀನಾವನ್ನು ಉದಾಹರಿಸಿ ಮಾತನಾಡಿದ ಗೋಯಲ್ ಅವರು, ಅತ್ಯಂತ ಕಡಿಮೆ ಬೆಲೆಗೆ ಸರಕುಗಳನ್ನು ಬಹುಕಾಲ ಮಾರಾಟ ಮಾಡುವುದರಿಂದ ದೇಶಿ ಉತ್ಪಾದನೆಯು ಸಾಯುತ್ತದೆ. ಮುಂದೆ ಅದು ಉತ್ಪನ್ನಗಳನ್ನು ಭಾರಿ ಬೆಲೆಗೆ ಖರೀದಿಸುವುದನ್ನು ಅನಿವಾರ್ಯವಾಗಿಸುತ್ತದೆ ಎಂದು ಹೇಳಿದ್ದಾರೆ.

ವಿದೇಶಿ ಇ-ವಾಣಿಜ್ಯ ವೇದಿಕೆಗಳ ಬಳಿ ಭಾರಿ ಪ್ರಮಾಣದ ಬಂಡವಾಳ ಇದೆ. ಅವು ಭಾರತದಲ್ಲಿ ಒಂದಿಷ್ಟು ಕೋಟಿ ಸುರಿದು, ಇಲ್ಲಿ ನಷ್ಟ ಮಾಡಿಕೊಳ್ಳುವುದರಲ್ಲಿ ವಿಶೇಷವೇನೂ ಇಲ್ಲ. ಅವು ಇಲ್ಲಿ ಯಾವುದೇ ಬೆಲೆ ತೆತ್ತಾದರೂ ಗ್ರಾಹಕರನ್ನು ಸಂಪಾದಿಸಿಕೊಳ್ಳುವ ಹವಣಿಕೆಯಲ್ಲಿ ಇವೆ ಎಂದು ಗೋಯಲ್ ಹೇಳಿದ್ದಾರೆ.

ಒಎನ್‌ಡಿಸಿ ವ್ಯವಸ್ಥೆಗೆ ಆಹ್ವಾನ

ದೇಶದ ಎಲ್ಲ ರಿಟೇಲ್ ವರ್ತಕರು ಒಎನ್‌ಡಿಸಿ ವ್ಯವಸ್ಥೆಯನ್ನು ಸೇರಬೇಕು ಎಂದು ಪೀಯೂಷ್ ಗೋಯಲ್ ಕರೆ ನೀಡಿದ್ದಾರೆ. ಹೀಗೆ ಮಾಡುವುದರಿಂದ ಎಲ್ಲರಿಗೂ ಹೆಚ್ಚಿನ ಅವಕಾಶಗಳು ಸಿಗುತ್ತವೆ ಎಂದು ಅವರು ಹೇಳಿದ್ದಾರೆ.

'ವಾಲ್‌ಮಾರ್ಟ್, ಫ್ಲಿಪ್‌ಕಾರ್ಟ್, ಟಾಟಾ, ರಿಲಯನ್ಸ್ ಸೇರಿದಂತೆ ಎಲ್ಲರಿಗೂ ಒಎನ್‌ಡಿಸಿ ವ್ಯವಸ್ಥೆಯಲ್ಲಿ ತಮ್ಮದೇ ಆದ ಪಾತ್ರವಿದೆ. ಇಲ್ಲಿ ಯಾರಿಗೂ ತಾರತಮ್ಯ ಆಗುವುದಿಲ್ಲ. ಇದು ಎಲ್ಲರಿಗೂ ಮುಕ್ತವಾಗಿದೆ' ಎಂದು ಅವರು ಹೇಳಿದ್ದಾರೆ.

'ಒಎನ್‌ಡಿಸಿ ವ್ಯವಸ್ಥೆಯು ಯಾವ ಪ್ರಭಾವಕ್ಕೂ ಒಳಗಾಗದಂತೆ ನೋಡಿಕೊಳ್ಳಲು ನಾವು ಕೆಲಸ ಮಾಡುತ್ತಿದ್ದೇವೆ. ಇದು ಯಾರಿಗೂ ಬೆದರಿಕೆಯಾಗಿ ಪರಿಣಮಿಸುವುದಿಲ್ಲ. ಇ-ವಾಣಿಜ್ಯ ಲೋಕದ ಬೃಹತ್ ಕಂಪನಿಗಳಿಗೂ ಇದು ಬೆದರಿಕೆ ಅಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000 - 1050
ಹೆರಕಿದ್ದು	1,300-1,400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಚನ್ನಗಿರಿ	
ರಾಶಿ	41979-48500
ಕೊಪ್ಪ	
ಬೆಟ್ಟೆ	47199-51099
ಗೊರಬಲು	30469-33399
ರಾಶಿ	33839-46899
ಸರಕು	51099-78710
ಪುತ್ತೂರು	
ಕೋಕ	11000-25000
ಹೊಸತು	33500-40000
ಸಾಗರ	
ಬಿಳಿಗೋಟು	17869-30699
ಚಾಲಿ	32599-36689
ಕೋಕ	24099-33299
ಕೆಂಪುಗೋಟು	31299-35599
ರಾಶಿ	45399-47669
ಸಿಪ್ಪೆಗೋಟು	18569-21099
ಶಿವಮೊಗ್ಗ	
ಬೆಟ್ಟೆ	37769-52200
ಗೊರಬಲು	18009-35009
ರಾಶಿ	30009-48009
ಸರಕು	48019-81400
ಶಿರಸಿ	
ಬೆಟ್ಟೆ	33899-42899
ಬಿಳಿಗೋಟು	25119-34599
ಚಾಲಿ	34518-37899
ಕೆಂಪುಗೋಟು	27168-34729
ರಾಶಿ	42208-46408
ಯಲ್ಲಾಪುರ	
ಆಪಿ	54765-54765
ಬಿಳಿಗೋಟು	24899-34899
ಕೋಕ	16899-31211
ಹಳೆಚಾಲಿ	38858-39605
ಹೊಸಚಾಲಿ	34319-37399
ಕೆಂಪುಗೋಟು	26899-34666
ರಾಶಿ	40630-48899
ತಟ್ಟಿಬೆಟ್ಟೆ	36369-45199

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ	
	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15450	193.45 ಸೆಂಟ್ಸ್
ಎಸಿ	7700	7700	
ಆರ್‌ಪಿ	10675	10400	ಲಂಡನ್
ಆರ್‌ಸಿ	228	5500	2444 ಡಾಲರ್ಸ್

ಕೃಷಿ ಉತ್ಪಾದನೆ ಕಡೆ ಗಮನ ಬೇಕು: ಹಣಕಾಸು ಸಚಿವಾಲಯ

ನವದೆಹಲಿ (ಪಿಟಿಐ): ದೇಶವು ಕೃಷಿ ಉತ್ಪಾದನೆಯಲ್ಲಿ ಇಳಿಕೆ ಹಾಗೂ ಬೆಲೆ ಹೆಚ್ಚಳದ ವಿಚಾರವಾಗಿ ಎಚ್ಚರಿಕೆಯಿಂದ ಇರಬೇಕು ಎಂದು ಕೇಂದ್ರ ಹಣಕಾಸು ಸಚಿವಾಲಯದ ಮಾಸಿಕ ಆರ್ಥಿಕ ಪರಿಶೀಲನಾ ವರದಿ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 6.5ರಷ್ಟು ಇರಲಿದೆ ಎಂದು ಅಂದಾಜು ಮಾಡಿರುವುದು ವಿಶ್ವ ಬ್ಯಾಂಕ್ ಹಾಗೂ ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಅಂದಾಜುಗಳಿಗೆ ಅನುಗುಣವಾಗಿ ಇದೆಯಾದರೂ, ಬೆಳವಣಿಗೆ ಹಾಗೂ ಹಣದುಬ್ಬರದ ಈಗಿನ ಅಂದಾಜಿನ ಮೇಲೆ ಪರಿಣಾಮ ಬೀರುವ ಇತರ ಅಂಶಗಳು ಹಲವಿವೆ ಎಂದು ವರದಿ ತಿಳಿಸಿದೆ.

'ಎಲ್ ನೀನೊ ಪರಿಸ್ಥಿತಿಯು ದೇಶದಲ್ಲಿ ಅನಾವೃಷ್ಟಿಗೆ ಕಾರಣವಾಗುವುದು, ಕೃಷಿ ಉತ್ಪಾದನೆ ಕಡಿಮೆಯಾಗುವಂತೆ ಮಾಡುವುದು, ಬೆಲೆ ಹೆಚ್ಚಳಕ್ಕೆ ಕಾರಣವಾಗುವುದರ ಮೇಲೆ ನಿಗಾ ಇರಿಸಬೇಕು. ಜಾಗತಿಕ ಮಟ್ಟದಲ್ಲಿ ಆಗುವ ಬೆಳವಣಿಗೆಗಳು ಹಾಗೂ ಜಾಗತಿಕ ಹಣಕಾಸಿನ ಸ್ಥಿರತೆ ಬಗ್ಗೆಯೂ ಗಮನ ಇರಿಸಬೇಕು' ಎಂದು ವರದಿಯಲ್ಲಿ ಹೇಳಲಾಗಿದೆ.

ಭಾರತದ ಬ್ಯಾಂಕ್‌ಗಳಿಂದ ಠೇವಣಿಗಳನ್ನು ಜನರು ತ್ವರಿತವಾಗಿ ಹಿಂದಕ್ಕೆ ಪಡೆಯುವ ಸಾಧ್ಯತೆ ಇಲ್ಲ. ಏಕೆಂದರೆ ಕುಟುಂಬಗಳಿಂದ ಬಂದಿರುವ ಶೇ 63ರಷ್ಟು ಠೇವಣಿಗಳು ಅಸ್ಥಿರವಲ್ಲ ಎಂದು ಪರಿಗಣಿಸಲಾಗಿದೆ. ಹೀಗಾಗಿ, ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು ಅಮೆರಿಕ ಮತ್ತು ಯುರೋಪಿನ ಬ್ಯಾಂಕಿಂಗ್ ವ್ಯವಸ್ಥೆಗಳಿಗಿಂತ ಭಿನ್ನವಾಗಿದೆ ಎಂದು ವರದಿಯು ವಿವರಿಸಿದೆ.

ಎಸ್‌ಸಿಒ ಶೃಂಗ: ಭಾರತಕ್ಕೆ ಚೀನಾ ರಕ್ಷಣಾ ಸಚಿವ ಭೇಟಿ

ಬೀಜಿಂಗ್ (ಪಿಟಿಐ): 'ಇದೇ 27 ಮತ್ತು 28ರಂದು ನವದೆಹಲಿಯಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯಲ್ಲಿ ಭಾಗವಹಿಸಲು ಚೀನಾದ ರಕ್ಷಣಾ ಸಚಿವ ಜನರಲ್ ಲಿ ಶಾಂಗ್‌ಫು ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ಪೂರ್ವ ಲಡಾಖ್ ಬಿಕ್ಕಟ್ಟನ್ನು ಕೊನೆಗೊಳಿಸುವ ಕುರಿತು ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ' ಎಂದು ಚೀನಾ ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ.

2020ರ ಮೇ ತಿಂಗಳಿನಿಂದ ಪೂರ್ವ ಲಡಾಖ್‌ನಲ್ಲಿರುವ ಭಾರತ ಹಾಗೂ ಚೀನಾ ಸೇನೆಗಳ ನಡುವಿನ ಬಿಕ್ಕಟ್ಟು ಉದ್ವಿಗ್ನಗೊಂಡಿರುವ ಹಿನ್ನೆಲೆಯಲ್ಲಿ ಲಿ ಭೇಟಿಗೆ ಮಹತ್ವ ಪಡೆದುಕೊಂಡಿದೆ. ಭೇಟಿಯ ವೇಳೆ ಪೂರ್ವ ಲಡಾಖ್ ಬಿಕ್ಕಟ್ಟು ಕುರಿತು ರಾಜನಾಥ್ ಸಿಂಗ್-ಲಿ ಅವರ ಮಾತುಕತೆ ನಡೆಯಲಿದೆ ಎಂದು ನಿರೀಕ್ಷಿಸಲಾಗಿದೆ. 'ಗಡಿಯಲ್ಲಿ ಶಾಂತಿ ಕಾಪಾಡುವುದರ ಜೊತೆಗೆ, ಬಿಕ್ಕಟ್ಟಿನ ಕುರಿತು ತ್ವರಿಗತಿಯಲ್ಲಿ ನಿರ್ಧಾರ ಕೈಗೊಳ್ಳಲು ಎರಡೂ ದೇಶಗಳು ಒಪ್ಪಿಗೆ ನೀಡಿವೆ' ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಬಿಕ್ಕಟ್ಟು ಬಗೆಹರಿಸಲು ಸಮ್ಮತಿ: 'ಇದೇ 23ರಂದು ಚೀನಾದ ಚುಶುಲ್- ಮೊಲ್ಡೊದಲ್ಲಿ ಉಭಯ ದೇಶಗಳ ನಡುವೆ ನಡೆದ 18ನೇ ಸುತ್ತಿನ ಮಾತುಕತೆ ವೇಳೆ ಬಿಕ್ಕಟ್ಟನ್ನು ತ್ವರಿತವಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಸಕಾರಾತ್ಮಕವಾಗಿ ಚರ್ಚಿಸಲಾಗಿತ್ತು. 'ಸದ್ಯದ ಬಿಕ್ಕಟ್ಟುಗಳ ಕುರಿತು ಉಭಯ ದೇಶಗಳು ನಿಷ್ಪಕ್ಷಪಾತವಾಗಿ ಅಭಿಪ್ರಾಯ ವಿನಿಮಯ ಮಾಡಿಕೊಂಡವು' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗುಂಡಪ್ಪ, ಊರು ಬೇಡ

• **ಪ್ರಶ್ನೆ: ನನ್ನೂರು ಹಳ್ಳಿ. ಯಾವುದೇ ನಗರಸಭಾ ವ್ಯಾಪ್ತಿಗೆ ಬರುವುದಿಲ್ಲ. ನನ್ನ ವಯಸ್ಸು 75 ವರ್ಷ. ವಾರ್ಷಿಕ ಆದಾಯ ₹ 5 ಲಕ್ಷ. ನಾನು ಒಂದು ಎಕರೆಗೆ ಸುಮಾರು ₹ 7 ಲಕ್ಷದಂತೆ ಜಮೀನು ಮಾರಾಟ ಮಾಡಿರುವೆ, ಮಾರಾಟದಿಂದ ನನಗೆ ಒಟ್ಟು ₹ 22.75 ಲಕ್ಷ ಬಂದಿದೆ. 3 ಎಕರೆ 20 ಗುಂಟೆ ಜಮೀನನ್ನು ತಿಂಗಳಿಗೆ ₹ 15 ಸಾವಿರದಂತೆ 29 ವರ್ಷ 11 ತಿಂಗಳಿಗೆ ಪವನ ವಿದ್ಯುತ್ ಕಂಪನಿಗೆ ಲೀಸ್‌ಗೆ ಕೊಟ್ಟಿರುವೆ. ಈ ಹಣವನ್ನು ಕೃಷಿ ಆದಾಯವೆಂದು ಪರಿಗಣಿಸಬಹುದೇ? ಹೌದಾದರೆ ತೆರಿಗೆ ಇದೆಯೇ? ಯಾವುದರಲ್ಲಿ ಹೂಡಿಕೆ ಮಾಡಿದರೆ ತೆರಿಗೆ ಕಡಿಮೆ? ನಾನು ನಗರ ವ್ಯಾಪ್ತಿಯಲ್ಲಿ ಒಂದು ನಿವೇಶನ ಕೊಂಡರೆ ತೆರಿಗೆ ಉಳಿಸಬಹುದೇ?**

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ಎರಡು ವಿಷಯಗಳನ್ನು ಉಲ್ಲೇಖಿಸಲಾಗಿದೆ. ಮೊದಲನೆಯದು, ಜಮೀನು ಮಾರಾಟ. ಎರಡನೆಯದು, ಜಮೀನಿನ ಲೀಸಿಂಗ್. ಕೃಷಿಯಿಂದ ಬಂದ ಆದಾಯಕ್ಕೆ ತೆರಿಗೆ ಇಲ್ಲ ಎನ್ನುವುದು ಸಾಮಾನ್ಯ ನಿಯಮ. ಆದರೆ ಇದಕ್ಕೆ ಜಮೀನು ಕೃಷಿಗಾಗಿಯೇ ಉಪಯೋಗ ಆಗಿರಬೇಕು. ಉದಾಹರಣೆಗೆ, ತೆಂಗು, ಭತ್ತ, ಮಾವು, ತರಕಾರಿ, ಹೂವಿನ ಕೃಷಿ ಇತ್ಯಾದಿ. ನೀವು ಉಲ್ಲೇಖಿಸಿರುವಂತೆ, ನಿಮಗೆ ಪ್ರತಿ ತಿಂಗಳು ಬರುತ್ತಿರುವ ಆದಾಯ ಪವನ ವಿದ್ಯುತ್ ಕಂಪನಿಗೆ ಬಾಡಿಗೆಗೆ ನೀಡಿರುವುದರಿಂದ. ಈ ಆದಾಯವು ಜಮೀನಿನ ಕಾರಣದಿಂದ ಬಂದುದಾದರೂ, ಅದು ವ್ಯವಸಾಯ ಮಾಡಿ ಬಂದದ್ದಲ್ಲ. ಹೀಗಾಗಿ ಇದಕ್ಕೆ ತೆರಿಗೆ ಅನ್ವಯಿಸುತ್ತದೆ.

ಹಳ್ಳಿಯಲ್ಲಿ ಕೃಷಿಗಾಗಿ ಉಪಯೋಗಿಸುವ ಜಮೀನನ್ನು ಮಾರಾಟ ಮಾಡಿದಾಗ ತೆರಿಗೆ ಬರುವುದಿಲ್ಲ. ಕಾರಣ ಅಂತಹ ಜಮೀನು ಬಂಡವಾಳ ಆಸ್ತಿಯ ವ್ಯಾಖ್ಯಾನದಿಂದ ಹೊರತಾಗಿದೆ. ಆದರೆ ಇದರ ಹೊರತಾಗಿ ಯಾವುದೇ ಆಸ್ತಿ ಮಾರಾಟ ಮಾಡಿದಾಗಲೂ ತೆರಿಗೆ ಇರುತ್ತದೆ. ನಿಮ್ಮ ಜಮೀನು ಮಾರಾಟದಿಂದ ಬಂದ ಲಾಭವನ್ನು ನಿಖರವಾಗಿ ತಿಳಿಯಲು ದಾಖಲೆಗಳೊಂದಿಗೆ ಸಮೀಪದ ತೆರಿಗೆ ಸಲಹೆಗಾರರಿಂದ ಸಲಹೆ ಪಡೆದುಕೊಳ್ಳಿ. ನೀವು ತೆರಿಗೆ ಉಳಿಸಲು ಮುಂದಿನ ಮೂರು ವರ್ಷಗಳೊಳಗೆ ಮನೆ ಕಟ್ಟಿಸಬಹುದು. ಅಲ್ಲಿಯತನಕ ನಿಮ್ಮ ಮೊತ್ತವನ್ನು ತಾತ್ಕಾಲಿಕವಾಗಿ ಬಂಡವಾಳ ವೃದ್ಧಿ ಖಾತೆ ಯೋಜನೆಯಲ್ಲಿ ಠೇವಣಿ ಮಾಡಿ.

ವ್ಯವಸಾಯ ಹೊರತುಪಡಿಸಿ ನಿಮ್ಮ ಆದಾಯ ₹ 5 ಲಕ್ಷ. ಇದಲ್ಲದೆ, ನಿಮಗೆ ವಾರ್ಷಿಕವಾಗಿ ₹ 1.80 ಲಕ್ಷ ಬಾಡಿಗೆ ಆದಾಯವಿದೆ. ನೀವು ಹೊಸ ಆದಾಯ ತೆರಿಗೆ ಪದ್ಧತಿ ಆಯ್ಕೆ ಮಾಡಿ ತೆರಿಗೆ ವಿವರ ಸಲ್ಲಿಸಬಹುದು. ₹ 7 ಲಕ್ಷದತನಕ ತೆರಿಗೆ ಹೊರೆ ಇಲ್ಲ ಎನ್ನುವುದು ಈ ವರ್ಷದ ಬಜೆಟ್ ಘೋಷಣೆ.

ಸುಮಂತ್ ಎಂ.ಕೆ.

• **ಪ್ರಶ್ನೆ: ನಾನು ನನ್ನ ಬ್ಯಾಂಕ್ ಖಾತೆಯನ್ನು ಸ್ವೀಪ್ ಖಾತೆಯಾಗಿ ಬದಲಾಯಿಸಬೇಕೆಂದಿದ್ದೇನೆ. ಇದು ಅನುಕೂಲಕರವೇ?**

ಉತ್ತರ: ಸ್ವೀಪ್ ಖಾತೆ ತೆರೆಯುವ ಅವಕಾಶವನ್ನು ಇಂದು ಬಹುತೇಕ ಬ್ಯಾಂಕ್‌ಗಳು ನೀಡುತ್ತಿವೆ. ಇದು ನಿಮ್ಮ ಉಳಿತಾಯ ಖಾತೆಯಲ್ಲಿರುವ ಹಣವು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚಾದಲ್ಲಿ, ಹೆಚ್ಚುವರಿ ಬಡ್ಡಿ ಸಿಗುವ ಖಾತೆಗೆ (ಸ್ವೀಪ್ ಖಾತೆ) ವರ್ಗಾವಣೆ ಮಾಡುವ ಅವಕಾಶ ಕೊಡುತ್ತದೆ. ಮೊಬೈಲ್ ಬ್ಯಾಂಕಿಂಗ್ ಅಥವಾ ನೆಟ್ ಬ್ಯಾಂಕಿಂಗ್ ಮೂಲಕ ಇಂತಹ ಖಾತೆ ತೆರೆಯುವ ಅವಕಾಶವಿದೆ. ಹೀಗಾಗಿ ಬ್ಯಾಂಕ್ ಇಂತಹ ಸೌಲಭ್ಯ ಒದಗಿಸಿದಲ್ಲಿ ಅದನ್ನು ಸರಳ ಹೂಡಿಕೆ ಸೌಲಭ್ಯವನ್ನಾಗಿ ಬಳಸಿಕೊಳ್ಳಬಹುದು.

ಸ್ವೀಪ್ ಖಾತೆಯಲ್ಲಿ ಹಣ ಹೂಡಿಕೆ ಸುಲಭ. ನಿಮ್ಮ ಉಳಿತಾಯ ಖಾತೆಯಲ್ಲಿನ ಹಣವು ನಿರ್ದಿಷ್ಟ ಮೊತ್ತ ತಲುಪಿದ ನಂತರ ಹೆಚ್ಚುವರಿ ಹಣವನ್ನು ಹೂಡಿಕೆಯನ್ನಾಗಿ ಮಾರ್ಪಡಿಸಲಾಗುತ್ತದೆ. ಹೂಡಿಕೆ ಮಾಡಿದ ಹಣವನ್ನು ನಿಮ್ಮ ಅಗತ್ಯಕ್ಕೆ ತಕ್ಕಂತೆ ನೇರವಾಗಿ ಎಟಿಎಂ, ಚೆಕ್, ನೆಫ್ಟ್ ಇತ್ಯಾದಿ ಮೂಲಕ ಹಿಂಪಡೆಯಬಹುದು ಅಥವಾ ಇತರರಿಗೆ ವರ್ಗಾಯಿಸಬಹುದು. ಇದಕ್ಕೆ ಸಾಮಾನ್ಯವಾಗಿ ಯಾವುದೇ ದಂಡ ಇರುವುದಿಲ್ಲ. ಮಾತ್ರವಲ್ಲ, ಸಾಮಾನ್ಯ ನಿಶ್ಚಿತ ಠೇವಣಿಗೆ ಅನ್ವಯವಾಗುವ ಸಮಯ ಮಿತಿ ಇರುವುದಿಲ್ಲ. ಸ್ವೀಪ್ ಖಾತೆ ಬಗೆಗಿನ ನಿಯಮಗಳು ಬ್ಯಾಂಕ್‌ನಿಂದ ಬ್ಯಾಂಕ್‌ಗೆ ತುಸು ಭಿನ್ನವಾಗಿರಬಹುದು. ಈ ಬಗ್ಗೆ ಮೊದಲೇ ತಿಳಿದುಕೊಳ್ಳಿ.

ಸಾಮಾನ್ಯವಾಗಿ ಉಳಿತಾಯ ಖಾತೆಯ ಬಡ್ಡಿ ಶೇ 4ರಷ್ಟಿರುತ್ತದೆ. ಚಾಲ್ತಿ ಖಾತೆಗೆ ಬಡ್ಡಿ ಸಿಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ, ಉಪಯೋಗಿಸದೆ ಖಾತೆಯಲ್ಲೇ ಅನಿರ್ದಿಷ್ಟಾವಧಿಗೆ ಉಳಿದುಕೊಳ್ಳುವ ಮೊತ್ತವನ್ನು ಒಂದೆರಡು ಪ್ರತಿಶತ ಹೆಚ್ಚುವರಿ ಬಡ್ಡಿ ಬರುವ ಖಾತೆಗೆ ವರ್ಗಾಯಿಸುವುದು ಅನುಕೂಲಕರ.

ನಿಮ್ಮ ಸ್ವೀಪ್ ಖಾತೆಗೆ ಜಮಾ ಆಗುವ ಬಡ್ಡಿಗೆ ತೆರಿಗೆ ಕಡಿತ ಇರುತ್ತದೆ. ಸೆಕ್ಷನ್ 194 ಎ ಅನ್ವಯ ವಾರ್ಷಿಕ ಬಡ್ಡಿ ಮೊತ್ತವು ₹ 40,000 ಮೀರಿದಾಗ ಯಾವುದೇ ನಿಶ್ಚಿತ ಠೇವಣಿ- ಸ್ವೀಪ್ ಖಾತೆ ಮೇಲೆ ಶೇ 10ರ ತೆರಿಗೆ ಅನ್ವಯವಾಗುತ್ತದೆ. ಹಿರಿಯ ನಾಗರಿಕರಿಗೆ ಈ ಮಿತಿಯನ್ನು ₹ 50,000ಕ್ಕೆ ನಿಗದಿಪಡಿಸಲಾಗಿದೆ. ಸಿಗುವ ಒಟ್ಟು ವಾರ್ಷಿಕ ಬಡ್ಡಿಯು ಈ ಮಿತಿಯನ್ನು ಮೀರಿದರೆ, ತೆರಿಗೆ ಕಡಿತ ಸಂಪೂರ್ಣ ಮೊತ್ತಕ್ಕೆ ಅನ್ವಯವಾಗುತ್ತದೆ. ಉಳಿತಾಯ ಖಾತೆಗಾದರೆ ಬರುವ ಬಡ್ಡಿಗೆ ತೆರಿಗೆ ಕಡಿತ ಅನ್ವಯವಾಗುವುದಿಲ್ಲ. ಸೆಕ್ಷನ್ 80 ಟಿಟಿಎ ಅನ್ವಯ ₹ 10,000ತನಕ ತೆರಿಗೆ ವಿವರ ಸಲ್ಲಿಸುವಾಗ ವಿನಾಯಿತಿ ಇದೆ. ಅದೇ ರೀತಿ, ಹಿರಿಯ ನಾಗರಿಕರಿಗೆ ಸೆಕ್ಷನ್ 80 ಟಿಟಿಬಿ ಅಡಿ ₹ 50,000ದವರೆಗೆ ತೆರಿಗೆ ವಿನಾಯಿತಿ ಇದೆ. ಯಾವುದೇ ಹೆಚ್ಚಿನ ಮೊತ್ತಕ್ಕೆ ತೆರಿಗೆ ಅನ್ವಯಿಸುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001, ಇ-ಮೇಲ್:businessdesk@prajavani.co.in

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಸ್‌ನಲ್ಲಿ ಹೊರಟವರಲ್ಲಿ 200ಕ್ಕೂ ಹೆಚ್ಚು ಕನ್ನಡಿಗರು

ಸುರಕ್ಷಿತ ಸ್ಥಳದತ್ತ ಭಾರತೀಯರ ಪ್ರಯಾಣ

ಪ್ರಜಾವಾಣಿ ವಾರ್ತೆ

ಸುಡಾನ್ ರಾಜಧಾನಿ ಖಾರ್ಟೂಮ್‌ನಿಂದ ಬಸ್‌ನಲ್ಲಿ ಪ್ರಯಾಣ ಆರಂಭಿಸಿರುವ ಕನ್ನಡಿಗರು.

ದಾವಣಗೆರೆ/ಮೈಸೂರು: ಸುಡಾನ್ ಸಂಘರ್ಷದಲ್ಲಿ ಸಿಲುಕಿದ್ದ ಕರ್ನಾಟಕದ ಹಕ್ಕಿ ಪಿಕ್ಕಿ ಜನ ತಾಯ್ನಾಡಿಗೆ ಮರಳುವ ಸಂಭ್ರಮದಲ್ಲಿದ್ದಾರೆ. ಅಲ್ಲಿ ಸಿಲುಕಿದ್ದ ಭಾರತೀಯರನ್ನು ಕೇಂದ್ರ ಸರ್ಕಾರವುಸುರಕ್ಷಿತ ಸ್ಥಳಗಳತ್ತ ಕರೆದೊಯ್ಯಲು ಮಂಗಳವಾರ ಕ್ರಮ ಕೈಗೊಂಡಿದೆ.

ಸುಡಾನ್‌ನ ರಾಜಧಾನಿ ಖಾರ್ಟೂಮ್‌ನಿಂದ 210 ಜನ ಕನ್ನಡಿಗರು ಒಳಗೊಂಡಂತೆ ಭಾರತೀಯರು ಬಸ್‌ಗಳಲ್ಲಿ ಸುಡಾನ್‌ನ ಬಂದರು ನಗರದತ್ತ ಪ್ರಯಾಣ ಬೆಳೆಸಿದ್ದಾರೆ.

ಮಂಗಳವಾರ ಬೆಳಿಗ್ಗೆ ವ್ಯವಸ್ಥೆ ಮಾಡಿದ್ದ ಬಸ್‌ನಲ್ಲಿ ಪ್ರಯಾಣ ಆರಂಭಿಸಿದ ಸಂದರ್ಭ ಭಾರತೀಯರು 'ಭಾರತ್ ಮಾತಾಕೀ ಜೈ' ಎಂದು ಘೋಷಣೆ ಕೂಗುವ ಮೂಲಕ ಹರ್ಷ ವ್ಯಕ್ತಪಡಿಸಿದರು.

'ಸದ್ಯ ನಮ್ಮ ಪ್ರಯಾಣ ಆರಂಭವಾಗಿದೆ. ಸುರಕ್ಷಿತವಾಗಿ ನಮ್ಮನ್ನು ಕರೆದೊಯ್ಯಲಾಗುತ್ತಿದೆ. ಭಾರತಕ್ಕೆ ಯಾವಾಗ ತಲುಪಲಿದ್ದೇವೆ ಎಂಬ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ' ಎಂದು ಚನ್ನಗಿರಿ ತಾಲ್ಲೂಕಿನ ಗೋಪನಾಳ್ ಗ್ರಾಮದ ನಂದಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಒಂದು ಗುಂಪನ್ನು ಮಂಗಳವಾರ ಬೆಳಿಗ್ಗೆ 5 ಬಸ್‌ಗಳಲ್ಲಿ ಸುಡಾನ್ ಮತ್ತು ಸೌದಿ ಅರೇಬಿಯಾ ಗಡಿಭಾಗವಾದ ಬೂಟ್ ಸುಡಾನ್‌ಗೆ ಕರೆದೊಯ್ಯಲಾಗಿದೆ. ಅಲ್ಲಿಂದ ಹಡಗಿನ ಮೂಲಕ ಅವರು ಪ್ರಯಾಣ ಆರಂಭಿಸಿದ್ದಾರೆ. 850 ಕಿ.ಮೀ ಕ್ರಮಿಸಿದ ಬಳಿಕ ಸೌದಿ ಅರೇಬಿಯಾ ತಲುಪಲಿದ್ದಾರೆ. ನಂತರ ವಿಮಾನದ ಮೂಲಕ ಭಾರತದತ್ತ ಪ್ರಯಾಣ ಬೆಳೆಸುವ ಸಾಧ್ಯತೆ ಇದೆ. ಎಂಟು ದಿನಗಳಿಂದ ಸಂಕಷ್ಟ ಅನುಭವಿಸಿದ್ದ ಕನ್ನಡಿಗರು ಈ ಬೆಳವಣಿಗೆಯಿಂದಾಗಿ ನಿಟ್ಟುಸಿರು ಬಿಟ್ಟಿದ್ದಾರೆ. ಊಟವಿಲ್ಲದೇ ಪರಿತಪಿಸಿದ್ದವರು ಇದೀಗ ತಾಯ್ನಾಡಿಗೆ ಮರಳುವ ಸಂತಸದಲ್ಲಿದ್ದಾರೆ.

'ನಾವು ಸುಡಾನ್‌ನಿಂದ ಹೊರಟಿದ್ದೇವೆ. ಹುಣಸೂರಿನ ಪಕ್ಷಿ ರಾಜದ 24 ಜನರೂ ನಮ್ಮೊಂದಿಗಿದ್ದಾರೆ. ಬಾಂಬ್ ದಾಳಿಯಾಗುವ ಆತಂಕದಿಂದ ನಮ್ಮನ್ನು ಆತುರಾತುರವಾಗಿ ಬಸ್‌ಗೆ ಹತ್ತುವಂತೆ ಹಾಗೂ ಯಾವುದೇ ಕಾರಣಕ್ಕೂ ಗುಂಪಿನಲ್ಲಿ ಹೊರಬಾರದಂತೆ ಸೂಚಿಸಿದ್ದರು. ನಿನ್ನೆ ನಾವು ತಂಗಿದ್ದ ಕಟ್ಟಡದ ಮುಂಭಾಗದಲ್ಲಿಯೇ ಜನರನ್ನು ಹೊಡೆದು ಸಾಯಿಸುತ್ತಿದ್ದರು. ಅದನ್ನು ನೋಡಿ ತಾಯ್ನಾಡಿಗೆ ತೆರಳುವ ಆಸೆ ಕಮರಿತ್ತು. ಆದರೆ ಇಂದು ಬಸ್ ಬಂದ ಬಳಿಕ, ಹೋದ ಜೀವ ಬಂದಂತಾಗಿದೆ' ಎಂದು ಸಂತ್ರಸ್ತರೊಂದಿಗೆ ಇರುವ ಜಯ್ ಸೂರ್, ಟೈಗರ್ ಬ್ಲಾಕ್ ಹಾಡಿಯ ಜನರಿಗೆ ವಾಟ್ಸ್ಆ್ಯಪ್ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

'ಹಡಗಿನಲ್ಲಿ 4 ರಿಂದ 5 ದಿನ ಪ್ರಯಾಣಿಸಿ ಸೌದಿ ಅರೇಬಿಯಾ ತಲುಪಲಿದ್ದೇವೆ. ನಮ್ಮ ರಕ್ಷಣೆಗೆ ಸರ್ಕಾರವು ₹ 4 ಲಕ್ಷ ಕೊಟ್ಟಿದೆ ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದರು. ಉಳಿದವರನ್ನೂ ಸುರಕ್ಷಿತವಾಗಿ ಕರೆತರಲು ಯೋಜನೆಗಳನ್ನು ರೂಪಿಸಿದ್ದಾರೆ' ಎಂದೂ ತಿಳಿಸಿದ್ದಾರೆ.

ಸರ್ಕಾರವು 'ಆಪರೇಷನ್ ಕಾವೇರಿ' ಹೆಸರಿನಲ್ಲಿ ರಕ್ಷಣಾ ಕಾರ್ಯ ಕೈಗೊಂಡ ಎರಡೇ ದಿನದಲ್ಲಿ ತಮ್ಮವರು ಮನೆಗೆ ಮರಳುತ್ತಿದ್ದಾರೆಂಬ ಮಾಹಿತಿ ತಿಳಿದು ಎಚ್.ಡಿ.ಕೋಟೆ ಟೈಗರ್ ಬ್ಲಾಕ್ ಹಾಡಿಯ ಜನ ಹರ್ಷಗೊಂಡಿದ್ದಾರೆ.

'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ಸಂತ್ರಸ್ತರೊಬ್ಬರ ತಂದೆ ದಸ್ತು, 'ಮಕ್ಕಳು ಫೋನ್ ಸಂಪರ್ಕಕ್ಕೂ ಸಿಗದಿದ್ದಾಗ ಆತಂಕ ಹೆಚ್ಚಾಗಿತ್ತು. ಮಗ ಕರೆ ಮಾಡಿ ದೇಶಕ್ಕೆ ಹೊರಟಿದ್ದೇವೆ ಎಂದು ತಿಳಿಸಿದಾಗ ನಿಟ್ಟುಸಿರು ಬಿಟ್ಟಿದ್ದೇವೆ. 10 ದಿನಗಳಲ್ಲಿ ನಮಗೂ ಊಟ, ನೀರು ಸೇರುತ್ತಿರಲಿಲ್ಲ. ರಕ್ಷಣೆ ಮಾಡಿದ ಸರ್ಕಾರಕ್ಕೆ ಧನ್ಯವಾದಗಳು. ಅಲ್ಲಿ ಉಳಿದಿರುವವರನ್ನು ಆದಷ್ಟು ಬೇಗ ಕರೆತನ್ನಿ. ನಮ್ಮ ಮಕ್ಕಳ ಆಗಮನಕ್ಕಾಗಿ ಕಾಯುತ್ತಿದ್ದೇವೆ' ಎಂದು ಗದ್ಗದಿತರಾಗಿ ತಿಳಿಸಿದರು.

> **ಚನ್ನಗಿರಿ ತಾಲ್ಲೂಕಿನ ಗೋಪನಾಳ್ ಗ್ರಾಮದ 33 ಹಾಗೂ ಅಸ್ತಾಫನಹಳ್ಳಿಯ 13 ಜನರು ಸುಡಾನ್ ಬಂದರಿನತ್ತ ಹೊರಟಿದ್ದು, ಎಲ್ಲರೂ ಸುರಕ್ಷಿತವಾಗಿದ್ದಾರೆ.**
> **ಶಿವಾನಂದ ಕಾಪಶಿ**
> ಜಿಲ್ಲಾಧಿಕಾರಿ

> **ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಕರೆತಂದಂತೆ ಸುಡಾನ್‌ನಲ್ಲಿಯ ಭಾರತೀಯರನ್ನೂ ಸುರಕ್ಷಿತವಾಗಿ ವಾಪಸ್ ಕರೆತರಲು ಸರ್ಕಾರ ಪ್ರಯತ್ನ ನಡೆಸಿದೆ.**
> **ಸರ್ವಾನಂದ ಸೋನೋವಾಲ**
> ಕೇಂದ್ರ ಸಚಿವ

ಭರದಿಂದ ಸಾಗಿದ ತೆರವು ಕಾರ್ಯಾಚರಣೆ

ಖಾರ್ಟೂಮ್ (ಎಪಿ, ಎಎಫ್‌ಪಿ): ಸುಡಾನ್‌ನಿಂದ ವಿವಿಧ ದೇಶಗಳ ನಾಗರಿಕರನ್ನು ವಿಮಾನ, ಬಸ್‌ಗಳ ಮೂಲಕ ತೆರವು ಮಾಡುವ ಕೆಲಸ ಮಂಗಳವಾರವೂ ಭರದಿಂದ ಸಾಗಿತು.

2 ಸಾವಿರ ಬ್ರಿಟಿಷ್ ಪ್ರಜೆಗಳನ್ನು ದೇಶದಿಂದ ಹೊರಗೆ ಸುರಕ್ಷಿತವಾಗಿ ಈಗಾಗಲೇ ಕರೆದೊಯ್ಯಲಾಗಿದ್ದರೆ, ಇನ್ನೂ 2 ಸಾವಿರ ಮಂದಿಯ ತೆರವು ಬಾಕಿ ಉಳಿದಿದೆ. ಜರ್ಮನಿ ತನ್ನ 500 ಪ್ರಜೆಗಳ ತೆರವಿಗೆ ವಿಮಾನವನ್ನು ಕಳುಹಿಸಿಕೊಟ್ಟಿದೆ.

ಕೀನ್ಯಾದ ಸೇನಾ ವಿಮಾನ ಸೋಮವಾರ ರಾತ್ರಿ ಸೊಮಾಲಿಯಾದ 19 ಮಂದಿ, ಸೌದಿ ಅರೇಬಿಯಾದ ಒಬ್ಬರ ಸಹಿತ 39 ವಿದ್ಯಾರ್ಥಿಗಳನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿದೆ.

138 ಜನರನ್ನು ರಕ್ಷಣೆ ಮಾಡಿರುವುದಾಗಿ ಉಕ್ರೇನ್ ತಿಳಿಸಿದೆ. ಫ್ರಾನ್ಸ್‌ನಿಂದ ಇತರ ದೇಶಗಳ 36 ಪ್ರಜೆಗಳ ಸಹಿತ 538 ಜನರ ರಕ್ಷಣೆ ಸಾಧ್ಯವಾಗಿದೆ. ನೆದರ್ಲೆಂಡ್, ಜರ್ಮನಿ, ಇಟಲಿ, ಸ್ಪೇನ್, ಜೋರ್ಡನ್ ಹಾಗೂ ಗ್ರೀಸ್ ವಿಮಾನಗಳು ಸಹ ತೆರವು ಕಾರ್ಯಾಚರಣೆ ನಡೆಸಿವೆ.

20 ದೇಶಗಳ 200ಕ್ಕೂ ಹೆಚ್ಚು ಜನರು ಸೋಮವಾರ ರಾತ್ರಿ ಸೌದಿ ಬಂದರು ನಗರ ಜಿದ್ದಾಗೆ ತಲುಪಿದ್ದಾರೆ. ಖಾರ್ಟೂಮ್‌ನಿಂದ ಸುಡಾನ್‌ನ ಬಂದರಿಗೆ 10-11 ಗಂಟೆಗಳ ಪ್ರಯಾಣ ಮಾಡಿದೆವು. ಸುಡಾನ್ ಬಂದರಿನಿಂದ ಜಿದ್ದಾಗೆ ತಲುಪಲು ಹಡಗಿನಲ್ಲಿ 20 ಗಂಟೆಗಳ ಪ್ರಯಾಣ ಮಾಡಿದೆವು ಎಂದು ಲೆಬನಾನ್ ದೇಶದ ಪ್ರಜೆ ಸುಹೈಬ್ ಐಚ್ ಹೇಳಿದರು.

ಹೊರ ಹೋಗಲು ಹರಸಾಹಸ: ವಿದೇಶಿಯರು ಮಾತ್ರವಲ್ಲದೆ, ಸ್ಥಳೀಯರೂ ಖಾರ್ಟೂಮ್‌ನಿಂದ ಪಲಾಯನ ಮಾಡುತ್ತಿದ್ದುದು ಕಂಡುಬಂತು. ಬಸ್ ನಿಲ್ದಾಣಗಳು ತುಂಬಿದ್ದು, ಸುಡಾನ್ ಬಂದರಿಗೆ ಜನರನ್ನು ತಲುಪಿಸಲು ಅಥವಾ ಈಜಿಪ್ಟ್ ಗಡಿ ದಾಟಲು ಚಾಲಕರು ಹತ್ತು ಪಟ್ಟು ದುಡ್ಡು ಕೇಳುತ್ತಿದ್ದಾರೆ ಎಂದು ಖಾರ್ಟೂಮ್ ನಿವಾಸಿಗಳು ಹೇಳಿದ್ದಾರೆ.

ಸುಡಾನ್‌ನಿಂದ ಮ್ಯಾಡ್ರಿಡ್‌ನತ್ತ ಹೊರಟ ಸ್ಪೇನ್‌ನ ಯುದ್ಧ ವಿಮಾನದಲ್ಲಿ ತುಂಬಿದ್ದ ವಿವಿಧ ದೇಶಗಳ ಪ್ರಜೆಗಳು – ಎಪಿ/ ಪಿಟಿಐ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.13,000 - 17,000. ph: 8951315839, 9880120052

Wanted

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. 18ವರ್ಷ ಮೇಲ್ಪಟ್ಟವರಿಗೆ ಉಚಿತ ಊಟ, ವಸತಿಯೊಂದಿಗೆ 13000ರಿಂದ 16000ವರೆಗೆ ಸಂಬಳ. ಫೋ: 8139962883

ಹೊಸ ವಾರಪತ್ರಿಕೆಗೆ ಬೇಕಾಗಿದ್ದಾರೆ. ಮಹಿಳಾ ಅನುವಾದಕರು, ಸಹಾಯಕ ಸಂಪಾದಕರು, ಬರಹಗಾರರು, ಕರಡು ತಿದ್ದುವವರು, ಕನ್ನಡದಲ್ಲಿ ಪರಿಣಿತರು. ಸಂಪರ್ಕಿಸಿ: 93412 88049

Multiple Vacancy

ಬೇಕಾಗಿದ್ದಾರೆ: ಅಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/05 ಕಾಶಿ, ಗಯ, ಅಯೋಧ್ಯ. 08/06 ಚಾರ್ಧಾಮ್ ಯಾತ್ರ ಕೇದಾರನಾಥ, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ 9591017782, 9964527782

CONNECT

ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಟ್ರೈನಿಂಗ್ ಸೆಂಟರ್
3 ತಿಂಗಳ ತರಬೇತಿ ಕೊಡಲಾಗುವುದು
ಅಡ್ಮಿಶನ್ ಪ್ರಾರಂಭಗೊಂಡಿದೆ
ಅಡ್ಮಿಶನ್ ಕೊನೆಯ ದಿನಾಂಕ 05/05/2023
ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.00 ರವರೆಗೆ
ವಿಳಾಸ: ಸ್ವಸ್ತಿಕ್ ಕಾಂಪ್ಲೆಕ್ಸ್, ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು, ಶೇಷಾದ್ರಿಪುರಂ, ಬೆಂಗಳೂರು – 560 020
ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಟ್ರೈನಿಂಗ್ ಪಡೆದವರು , ಈ ಕೆಳಕಂಡ ನೋವುಗಳಿಗೆ ಮಸಾಜ್ ಮಾಡಿ, ನೋವುಗಳನ್ನು ಗುಣಪಡಿಸಬಹುದು.
ಮಂಡಿ, ಬೆನ್ನು, ಕತ್ತುನೋವು, ಕೀಲು ನೋವು, ಲಕ್ವ, ಹಿಮ್ಮಡಿ ನೋವು, ತಲೆನೋವು, ಮೈಗ್ರೇನ್, ಚಿಕನ್‌ಗುನ್ಯ, ಗಂಟು ನೋವು, ರೂಮಟೆಡ್‌ಆರ್ಥ್ರೈಟಿಸ್, ವೆರಿಕೋಸ್ ವೆಯಿನ್ಸ್ ಸಮಸ್ಯೆ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಮಸಾಜ್ ಮಾಡಿ,

ತಿಂಗಳಿಗೆ 3 ರಿಂದ 5 ಲಕ್ಷದವರೆಗೆ ಸಂಪಾದಿಸಬಹುದು
ಹೆಚ್ಚಿನ ಮಾಹಿತಿಗೆ ಕರೆ ಮಾಡಿ : 9019626612

Travel

★ರಿಯಾಯಿತಿ ದರದಲ್ಲಿ★ ರೈಲು,ವಿಮಾನ, AC ಬಸ್ಸಿನಲ್ಲಿ 5.7.2023, 11.7.2023 11ದಿನಗಳು ಕಾಶಿ,ಗಯ,ಪ್ರಯಾಗ ದೆಹಲಿ,ಆಗ್ರಾ,ಮಥುರ,ಅಯೋಧ್ಯ ರೂ.29500 ಒಬ್ಬರಿಗೆ., ಆರ್.ಗಾಂಧಿ ಟೂರ್ಸ್. 9902433500, 9945445809, 08026760367. www.rgandhitours.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9886213331 : 9901641752
9845114560 : 9731810277
080 - 45557163 / 164

ಗಿಲ್, ಮಿಲ್ಲರ್, ಅಭಿನವ್ ಅಬ್ಬರ; ರಶೀದ್, ನೂರ್ ಉತ್ತಮ ಬೌಲಿಂಗ್

ಗುಜರಾತ್‌ಗೆ ಮಣಿದ ಮುಂಬೈ

ಅಹಮದಾಬಾದ್ (ಪಿಟಿಐ): ಶುಭಮನ್ ಗಿಲ್ ಅವರ ಅರ್ಧಶತಕ, ಡೇವಿಡ್ ಮಿಲ್ಲರ್ ಮತ್ತು ಅಭಿನವ್ ಮನೋಹರ್ ಅವರ ಅಬ್ಬರದ ಆಟದಿಂದ ಗುಜರಾತ್ ಟೈಟನ್ಸ್ ತಂಡಕ್ಕೆ ಜಯ ಒಲಿಯಿತು.

ಅಹಮದಾಬಾದ್‌ನಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ತಂಡವು 55 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ನಿಗದಿತ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 207 ರನ್ ಗಳಿಸಿತು. ಇದಕ್ಕುತ್ತರವಾಗಿ ಮುಂಬೈ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 152 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಹಾರ್ದಿಕ್ ಎರಡನೇ ಓವರ್‌ನಲ್ಲಿಯೇ ನಾಯಕ ರೋಹಿತ್ ಶರ್ಮಾ (2) ಅವರನ್ನು ಔಟ್ ಮಾಡಿ ಮುಂಬೈ ತಂಡಕ್ಕೆ ಆಘಾತ ನೀಡಿದರು. ಇಶಾನ್ ಕಿಶನ್ (13) ಹಾಗೂ ಕ್ಯಾಮರಾನ್ ಗ್ರೀನ್ (33) ಎರಡನೇ ವಿಕೆಟ್‌ಗೆ 39 ರನ್ ಸೇರಿಸಿದರು. ಇವರಿಬ್ಬರ ವಿಕೆಟ್‌ಗಳು ಕ್ರಮವಾಗಿ ಅಫ್ಗಾನಿಸ್ತಾನದ ಸ್ಪಿನ್ನರ್‌ಗಳಾದ ರಶೀದ್ ಖಾನ್ (27ಕ್ಕೆ 2) ಹಾಗೂ ನೂರ್ ಅಹಮದ್ (37ಕ್ಕೆ 3) ಪಾಲಾದವು.

ಮಧ್ಯಮ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ (23), ನೇಹಲ್ ವಧೇರಾ (40) ಅವರ ಪ್ರಯತ್ನಕ್ಕೆ ಫಲ ಲಭಿಸಲಿಲ್ಲ.

ಗುಜರಾತ್ ಪರ ಮೋಹಿತ್ ಶರ್ಮಾ ಕೂಡ ಎರಡು ವಿಕೆಟ್ ಗಳಿಸಿದರು.

ಗುಜರಾತ್ ಬ್ಯಾಟರ್‌ಗಳ ಅಬ್ಬರ: ಅಗ್ರ ಕ್ರಮಾಂಕದಲ್ಲಿ ಗಿಲ್ (56 ರನ್, 34 ಎ.) ಅವರು ಇನಿಂಗ್ಸ್‌ಗೆ ಬಲ ತುಂಬಿದರೆ, ಮಿಲ್ಲರ್ (46 ರನ್, 22 ಎ.) ಹಾಗೂ ಅಭಿನವ್ (42 ರನ್, 21 ಎ.) ಅಂತಿಮ ಓವರ್‌ಗಳಲ್ಲಿ ಬೀಸಾಟ ಆಡಿದರು. ಐದು ಎಸೆತಗಳಲ್ಲಿ ಮೂರು ಸಿಕ್ಸರ್‌ಗಳ ನೆರವಿನಿಂದ 20 ರನ್ ಗಳಿಸಿದ ರಾಹುಲ್ ತೆವಾಟಿಯಾ ಅವರೂ ತಂಡದ ಸ್ಕೋರ್ 200ರ ಗಡಿ ದಾಟಲು ನೆರವಾದರು.

ಟಾಸ್ ಗೆದ್ದ ರೋಹಿತ್, ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಅರ್ಜುನ್ ತೆಂಡೂಲ್ಕರ್, ಮೂರನೇ ಓವರ್‌ನಲ್ಲಿ ವೃದ್ಧಿಮಾನ್ ಸಹಾ (4) ವಿಕೆಟ್ ಪಡೆದು ತಂಡಕ್ಕೆ ಮೊದಲ ಯಶಸ್ಸು ತಂದುಕೊಟ್ಟರು. ಗಿಲ್ ಮತ್ತು ಹಾರ್ದಿಕ್ ಎರಡನೇ ವಿಕೆಟ್‌ಗೆ 38 ರನ್ ಸೇರಿಸಿದರು. ಹಾರ್ದಿಕ್ ವಿಕೆಟ್ ಪಡೆದ ಪೀಯೂಷ್ ಚಾವ್ಲಾ ಈ ಜತೆಯಾಟ ಮುರಿದರು. ತಂಡದ ಮೊತ್ತ 91 ಆಗಿದ್ದಾಗ ಗಿಲ್ ಅವರು ಕುಮಾರ ಕಾರ್ತಿಕೇಯ ಅವರಿಗೆ ವಿಕೆಟ್ ಒಪ್ಪಿಸಿದರು. 10 ರನ್ ಸೇರಿಸುವಷ್ಟರಲ್ಲಿ ವಿಜಯ್ ಶಂಕರ್ ಕೂಡಾ ಔಟಾದರು.

ಆದರೆ ಮಿಲ್ಲರ್ ಮತ್ತು ಅಭಿನವ್ ಅವರು ಜತೆಯಾದ ಬಳಿಕ ಎದುರಾಳಿ ಬೌಲರ್‌ಗಳ ದಿಕ್ಕುತಪ್ಪಿತು. ಬೌಂಡರಿ, ಸಿಕ್ಸರ್‌ಗಳ ಮಳೆಗರೆದ ಇಬ್ಬರೂ ಐದನೇ ವಿಕೆಟ್‌ಗೆ 71 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ಕೊನೆಯ 5 ಓವರ್‌ಗಳಲ್ಲಿ 77 ರನ್‌ಗಳು ಬಂದವು.

ಚಾವ್ಲಾ ಅವರ ನಾಲ್ಕನೇ ಓವರ್‌ನಲ್ಲಿ ಅಭಿನವ್ 17 ರನ್ ಗಳಿಸಿದರು. ಅಭಿನವ್ ಮತ್ತು ಮಿಲ್ಲರ್ ಅವರು ಗ್ರೀನ್ ಬೌಲ್ ಮಾಡಿದ 18ನೇ ಓವರ್‌ನಲ್ಲಿ ಮೂರು ಸಿಕ್ಸರ್‌ಗಳ ನೆರವಿನಿಂದ 22 ರನ್ ಸೂರೆಗೈದರು. 34 ರನ್‌ಗಳಿಗೆ ಎರಡು ವಿಕೆಟ್ ಪಡೆದ ಚಾವ್ಲಾ, ಯಶಸ್ವಿ ಬೌಲರ್ ಎನಿಸಿಕೊಂಡರು. ಪಿಎಲ್‌ನಲ್ಲಿ ಸಹಾ ಅವರಿಗೆ ಇದು 150ನೇ ಹಾಗೂ ಮೊಹಮ್ಮದ್ ಶಮಿ ಅವರಿಗೆ 100ನೇ ಪಂದ್ಯ ಆಗಿತ್ತು.

ಗುಜರಾತ್ ತಂಡದ ಅಭಿನವ್ ಮನೋಹರ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 6ಕ್ಕೆ 207 (20 ಓವರ್‌ಗಳಲ್ಲಿ)

ಸಹಾ ಸಿ ಇಶಾನ್ ಬಿ ಅರ್ಜುನ್ 4 (7 ಎ)
ಗಿಲ್ ಸಿ ಯಾದವ್ ಬಿ ಕಾರ್ತಿಕೇಯ 56 (34 ಎ., 4X7, 6X1)
ಹಾರ್ದಿಕ್ ಸಿ ಯಾದವ್ ಬಿ ಚಾವ್ಲಾ 13 (14 ಎ., 4X1)
ವಿಜಯ್ ಸಿ ಡೇವಿಡ್ ಬಿ ಚಾವ್ಲಾ 19 (16 ಎ., 4X1, 6X1)
ಮಿಲ್ಲರ್ ಸಿ ಸೂರ್ಯಕುಮಾರ್ ಬಿ ಬೆಹ್ರನ್‌ಡಾರ್ಫ್ 46 (22 ಎ., 4X2, 6X4)
ಅಭಿನವ್ ಸಿ ಬೆಹ್ರನ್‌ಡಾರ್ಫ್ ಬಿ ಮೆರೆಡಿತ್ 42 (21 ಎ., 4X3, 6X3)
ತೆವಾಟಿಯಾ ಔಟಾಗದೆ 20 (5 ಎ., 6X3)
ರಶೀದ್ ಔಟಾಗದೆ 2 (1 ಎ)
ಇತರೆ: 5 (ವೈಡ್ 5)
ವಿಕೆಟ್ ಪತನ: 1–12 (ವೃದ್ಧಿಮಾನ್ ಸಹಾ; 2.1), 2–50 (ಹಾರ್ದಿಕ್ ಪಾಂಡ್ಯ; 6.1), 3–91 (ಶುಭಮನ್ ಗಿಲ್; 11.1), 4–101 (ವಿಜಯ್ ಶಂಕರ್; 12.2), 5–172 (ಅಭಿನವ್ ಮನೋಹರ್; 18.1), 6–205 (ಡೇವಿಡ್ ಮಿಲ್ಲರ್; 19.5)
ಬೌಲಿಂಗ್: ಅರ್ಜುನ್ ತೆಂಡೂಲ್ಕರ್ 2–0–9–1, ಜೇಸನ್ ಬೆಹ್ರನ್‌ಡಾರ್ಫ್ 4–0–37–1, ರಿಲೇ ಮೆರೆಡಿತ್ 4–0–49–1, ಕ್ಯಾಮರಾನ್ ಗ್ರೀನ್ 2–0–39–0, ಪೀಯೂಷ್ ಚಾವ್ಲಾ 4–0–34–2, ಕುಮಾರ್ ಕಾರ್ತಿಕೇಯ 4–0–39–1

ಮುಂಬೈ ಇಂಡಿಯನ್ಸ್ 9ಕ್ಕೆ 152 (20 ಓವರ್‌ಗಳಲ್ಲಿ)

ರೋಹಿತ್ ಸಿ ಮತ್ತು ಬಿ ಹಾರ್ದಿಕ್ 2 (8 ಎ), ಇಶಾನ್ ಸಿ ಲಿಟ್ಲ್ ಬಿ ರಶೀದ್ 13 (21 ಎ., 4X1)
ಗ್ರೀನ್ ಬಿ ನೂರ್ 33 (26 ಎ., 6X3)
ತಿಲಕ್ ಎಲ್‌ಬಿಡಬ್ಲ್ಯು ಬಿ ರಶೀದ್ 2 (3 ಎ.)
ಸೂರ್ಯಕುಮಾರ್ ಸಿ ಮತ್ತು ಬಿ ನೂರ್ 23 (12 ಎ., 4X3, 6X1)
ಡೇವಿಡ್ ಸಿ ಮನೋಹರ್ ಬಿ ನೂರ್ 0 (2 ಎ)
ವಧೇರಾ ಸಿ ಶಮಿ ಬಿ ಶರ್ಮಾ 40 (21 ಎ., 4X3, 6X3)
ಚಾವ್ಲಾ ರನೌಟ್ (ಸಹಾ/ಶರ್ಮಾ) 18 (12 ಎ., 4X1, 6X1)
ಅರ್ಜುನ್ ಸಿ ಲಿಟ್ಲ್ ಬಿ ಶರ್ಮಾ 13 (9 ಎ., 6X1)
ಬೆಹ್ರನ್‌ಡಾರ್ಫ್ ಔಟಾಗದೆ 3 (4 ಎ)
ಮೆರೆಡಿತ್ ಔಟಾಗದೆ 0 (2 ಎ)
ಇತರೆ: 5 (ಬೈ 4, ವೈಡ್ 1)
ವಿಕೆಟ್ ಪತನ: 1–4 (ರೋಹಿತ್ ಶರ್ಮಾ; 1.6), 2–43 (ಇಶಾನ್ ಕಿಶನ್; 7.3), 3–45 (ತಿಲಕ್ ವರ್ಮಾ; 7.6), 4–59 (ಕ್ಯಾಮರಾನ್ ಗ್ರೀನ್; 10.2), 5–59 (ಟಿಮ್ ಡೇವಿಡ್; 10.4), 6–90 (ಸೂರ್ಯಕುಮಾರ್ ಯಾದವ್; 12.6), 7–135 (ಪೀಯೂಷ್ ಚಾವ್ಲಾ; 17.1), 8–137 (ನೇಹಲ್ ವಧೇರಾ; 17.4), 9–152 (ಅರ್ಜುನ್ ತೆಂಡೂಲ್ಕರ್; 19.4)
ಬೌಲಿಂಗ್: ಮೊಹಮ್ಮದ್ ಶಮಿ 4–0–18–0, ಹಾರ್ದಿಕ್ ಪಾಂಡ್ಯ 2–0–10–1, ರಶೀದ್ ಖಾನ್ 4–0–27–2, ನೂರ್ ಅಹಮದ್ 4–0–37–3, ಮೋಹಿತ್ ಶರ್ಮಾ 4–0–38–2, ಜೋಶ್ ಲಿಟ್ಲ್ 2–0–18–0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 55 ರನ್ ಗೆಲುವು

ಆರ್‌ಸಿಬಿಗೆ ನೈಟ್ ರೈಡರ್ಸ್ ಸವಾಲು

ಫಫ್ ಡುಪ್ಲೆಸಿ, ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಮೇಲೆ ಎಲ್ಲರ ಚಿತ್ತ

• ಮಹಮ್ಮದ್ ನೂಮಾನ್

ಬೆಂಗಳೂರು: ಏಳು ಪಂದ್ಯಗಳಲ್ಲಿ ನಾಲ್ಕು ಗೆಲುವು, ಮೂರು ಸೋಲು. ಕೈಯಲ್ಲಿ ಎಂಟು ಪಾಯಿಂಟ್ಸ್. ಐಪಿಎಲ್ ಟೂರ್ನಿಯ ಲೀಗ್ ಹಂತದಲ್ಲಿ ಅರ್ಧ ಹಾದಿ ಕ್ರಮಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಾಧನೆಯಿದು.

ಲೀಗ್‌ನ ದ್ವಿತೀಯಾರ್ಧದ ಸವಾಲಿಗೆ ಸಜ್ಜಾಗಿರುವ ಆರ್‌ಸಿಬಿ ತಂಡ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ.

ಫಫ್ ಡುಪ್ಲೆಸಿ ಬಳಗಕ್ಕೆ ಇನ್ನೂ ಏಳು ಪಂದ್ಯಗಳನ್ನು ಆಡಬೇಕಿದೆ. ಆದರೆ ಬುಧವಾರದ ಪಂದ್ಯ ಸೇರಿದಂತೆ ತವರು ಅಂಗಳದಲ್ಲಿ ಆಡಲು ಬಾಕಿಯಿರುವುದು ಎರಡು ಪಂದ್ಯಗಳು ಮಾತ್ರ. ಇತರ ಐದು ಹಣಾಹಣಿಗಳು 'ಅವೇ' (ಹೊರಗಡೆ) ಪಂದ್ಯಗಳು ಆಗಿವೆ. ಆದ್ದರಿಂದ ಕೆಕೆಆರ್ ತಂಡವನ್ನು ಮಣಿಸಿ 'ಹ್ಯಾಟ್ರಿಕ್' ಗೆಲುವಿನ ಸಾಧನೆಯೊಂದಿಗೆ 'ಅವೇ' ಪಂದ್ಯಗಳಿಗೆ ತೆರಳುವ ಗುರಿಯನ್ನು ಆರ್‌ಸಿಬಿ ಹಾಕಿಕೊಂಡಿದೆ.

ಡುಪ್ಲೆಸಿ ಬಳಗ ಹಿಂದಿನ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಏಳು ರನ್‌ಗಳಿಂದ ಮಣಿಸಿತ್ತು. ಬೆಂಗಳೂರಿನ ತಂಡವು ಬ್ಯಾಟಿಂಗ್‌ನಲ್ಲಿ ನಾಯಕ ಡುಪ್ಲೆಸಿ, ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನೇ ಅತಿಯಾಗಿ ಅವಲಂಬಿಸಿದೆ. ತಂಡದ ನಾಲ್ಕು ಗೆಲುವುಗಳಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು.

ಡುಪ್ಲೆಸಿ ಒಟ್ಟು 405 ರನ್ ಕಲೆ ಹಾಕಿದ್ದರೆ, ವಿರಾಟ್ ಕೊಹ್ಲಿ (279) ಮತ್ತು ಮ್ಯಾಕ್ಸ್‌ವೆಲ್ (253) ಅವರೂ ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸುತ್ತಿದ್ದಾರೆ. ಇವರು ಮಿಂಚುತ್ತಿರುವ ಕಾರಣ ದಿನೇಶ್ ಕಾರ್ತಿಕ್, ಮಹಿಪಾಲ್ ಲೊಮ್ರೊರ್, ಶಹಬಾಜ್ ಅಹಮದ್ ಮತ್ತು ಸುಯಶ್ ಪ್ರಭುದೇಸಾಯಿ ಅವರನ್ನೊಳಗೊಂಡ ಮಧ್ಯಮ ಕ್ರಮಾಂಕಕ್ಕೆ ಇನ್ನೂ ನಿಜವಾದ ಅಗ್ನಿಪರೀಕ್ಷೆ ಎದುರಾಗಿಲ್ಲ.

ಏ.6 ರಂದು ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಇವೆರಡು ತಂಡಗಳು ಎದುರಾಗಿದ್ದಾಗ ಆರ್‌ಸಿಬಿಗೆ 81 ರನ್‌ಗಳ ಸೋಲು ಎದುರಾಗಿತ್ತು. ವರುಣ್ ಚಕ್ರವರ್ತಿ, ಸುಯಶ್ ಶರ್ಮಾ ಮತ್ತು ಸುನಿಲ್ ನಾರಾಯಣ ಅವರನ್ನೊಳಗೊಂಡ ಕೆಕೆಆರ್ ಸ್ಪಿನ್ ದಾಳಿಯನ್ನು ಎದುರಿಸುವಲ್ಲಿ ಎಡವಿತ್ತು. ಆದ್ದರಿಂದ ಈ ಬಾರಿ ಸ್ಪಿನ್ನರ್‌ಗಳ ವಿರುದ್ಧ ಎಚ್ಚರಿಕೆಯಿಂದ ಆಡಬೇಕಾಗಿದೆ.

ಕೆಕೆಆರ್‌ಗೆ ಜಯ ಅನಿವಾರ್ಯ: ಕೆಕೆಆರ್ ತಂಡ ಗೆಲ್ಲಲೇಬೇಕಾದ ಒತ್ತಡದೊಂದಿಗೆ ಆಡಲಿದೆ. ನಿತೀಶ್ ರಾಣಾ ನೇತೃತ್ವದ ಬಳಗ, ಏಳು ಪಂದ್ಯಗಳಿಂದ ಕಲೆಹಾಕಿರುವುದು ನಾಲ್ಕು ಪಾಯಿಂಟ್ಸ್ ಮಾತ್ರ. ಐದು ಪಂದ್ಯಗಳಲ್ಲಿ ಎಡವಿರುವ ತಂಡಕ್ಕೆ ಇನ್ನೊಂದು ಸೋಲು ಎದುರಾದರೆ, 'ಪ್ಲೇ ಆಫ್' ಪ್ರವೇಶದ ಹಾದಿ ಇನ್ನಷ್ಟು ಕಠಿಣವಾಗಲಿದೆ. ಸತತ ನಾಲ್ಕು ಪಂದ್ಯಗಳ ಸೋಲಿನ ಸರಪಳಿಯನ್ನು ತುಂಡರಿಸುವ ವಿಶ್ವಾಸದೊಂದಿಗೆ ಕೋಲ್ಕತ್ತದ ತಂಡ, ಕಣಕ್ಕಿಳಿಯಲಿದೆ. ಭಾನುವಾರ ನಡೆದಿದ್ದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು 49 ರನ್‌ಗಳಿಂದ ಪರಾಭವಗೊಂಡಿತ್ತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಅಸ್ಥಿರ ಪ್ರದರ್ಶನ ತಂಡವನ್ನು ಕಾಡುತ್ತಿದೆ.

ನಾಯಕ ನಿತೀಶ್ ಅಲ್ಲದೆ ನಾರಾಯಣ್ ಜಗದೀಶನ್, ವೆಂಕಟೇಶ್ ಅಯ್ಯರ್ ಮತ್ತು ರಿಂಕು ಸಿಂಗ್ ಅವರಿಂದ ಛಲದ ಆಟ ಮೂಡಿಬರಬೇಕಿದೆ. ವೆಸ್ಟ್ ಇಂಡೀಸ್‌ನ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಲಯ ಕಂಡುಕೊಳ್ಳಲು ವಿಫಲರಾಗಿರುವುದು ಕೂಡಾ ಕೋಲ್ಕತ್ತ ತಂಡದ ಯೋಜನೆಗಳು ತಲೆಕೆಳಗಾಗಲು ಕಾರಣ. ಮೊಹಮ್ಮದ್ ಸಿರಾಜ್, ವೇಯ್ನ್ ಪಾರ್ನೆಲ್ ಮತ್ತು ಹರ್ಷಲ್ ಪಟೇಲ್ ಅವರನ್ನೊಳಗೊಂಡ ಆರ್‌ಸಿಬಿ ಬೌಲಿಂಗ್ ವಿಭಾಗ ಒಡ್ಡುವ ಸವಾಲನ್ನು ಕೆಕೆಆರ್ ಬ್ಯಾಟರ್‌ಗಳು ಎಷ್ಟರಮಟ್ಟಿಗೆ ಎದುರಿಸಿ ನಿಲ್ಲುವರು ಎಂಬುದನ್ನು ನೋಡಬೇಕು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಕೆಕೆಆರ್ ತಂಡದ ಉಮೇಶ್ ಯಾದವ್ (ಎಡ) ಮತ್ತು ಆರ್‌ಸಿಬಿ ತಂಡದ ಮೊಹಮ್ಮದ್ ಸಿರಾಜ್ ಅವರು ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸದ ವೇಳೆ ಪರಸ್ಪರ ಶುಭ ಹಾರೈಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಮುಖ್ಯಾಂಶಗಳು

- ಆರ್‌ಸಿಬಿಗೆ ಹ್ಯಾಟ್ರಿಕ್ ಜಯದ ನಿರೀಕ್ಷೆ
- ಹಿಂದಿನ ಸೋಲಿಗೆ ಮುಯ್ಯಿ ತೀರಿಸುವ ತವಕ
- ಸತತ ನಾಲ್ಕು ಪಂದ್ಯಗಳನ್ನು ಸೋತಿರುವ ಕೆಕೆಆರ್

ಬಲಾಬಲ

31	ಒಟ್ಟು ಪಂದ್ಯ
17	ಕೆಕೆಆರ್ ಗೆಲುವು
14	ಆರ್‌ಸಿಬಿ ಗೆಲುವು

ಐಪಿಎಲ್‌ನ ಕೆಲ ಪಂದ್ಯಗಳಿಗೆ ವುಡ್ ಅಲಭ್ಯ

ನವದೆಹಲಿ (ಪಿಟಿಐ): ಲಖನೌ ಸೂಪರ್‌ಜೈಂಟ್ಸ್ ತಂಡದ ವೇಗದ ಬೌಲರ್ ಮಾರ್ಕ್ ವುಡ್ ಐಪಿಎಲ್‌ನ ಕೆಲವು ಪಂದ್ಯಗಳನ್ನು ಕಳೆದುಕೊಳ್ಳಲಿದ್ದಾರೆ.

ಮುಂದಿನ ತಿಂಗಳು ಅವರ ಪತ್ನಿ ಸಾರಾ ಎರಡನೇ ಮಗುವಿನ ಜನ್ಮನೀಡಲಿದ್ದು, ಆ ಸಂದರ್ಭದಲ್ಲಿ ಜೊತೆಗಿರಲು ವುಡ್ ಇಂಗ್ಲೆಂಡ್‌ಗೆ ತೆರಳಲಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ವುಡ್ ನಾಲ್ಕು ಪಂದ್ಯಗಳನ್ನು ಆಡಿದ್ದು 8.12ರ ಇಕಾನಮಿಯಲ್ಲಿ 11 ವಿಕೆಟ್‌ಗಳನ್ನು ಪಡೆದಿದ್ದಾರೆ. ಆದರೆ ಅನಾರೋಗ್ಯದ ಕಾರಣ ಕಳೆದ ಎರಡು ಪಂದ್ಯಗಳನ್ನು ಆಡಿರಲಿಲ್ಲ.

ಅವರು ಮುಂದಿನ ವಾರ ತವರಿಗೆ ತೆರಳುವ ಸಾಧ್ಯತೆಯಿದೆ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೋ ವರದಿ ತಿಳಿಸಿದೆ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಚೆನ್ನೈ	7	5	2	0	10	0.662
ಗುಜರಾತ್	7	5	2	0	10	0.580
ರಾಜಸ್ಥಾನ	7	4	3	0	8	0.844
ಲಖನೌ	7	4	3	0	8	0.547
ಬೆಂಗಳೂರು	7	4	3	0	8	-0.008
ಪಂಜಾಬ್	7	4	3	0	8	-0.162
ಮುಂಬೈ	7	3	4	0	6	-0.620
ಕೋಲ್ಕತ್ತ	7	2	5	0	4	-0.186
ಹೈದರಾಬಾದ್	7	2	5	0	4	-0.725
ಡೆಲ್ಲಿ	7	2	5	0	4	-0.961

ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	405

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ರಶೀದ್	ಗುಜರಾತ್	14

ವಾರ್ನರ್‌ಗೆ ದಂಡ

ಹೈದರಾಬಾದ್ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಿಧಾನಗತಿಯ ಓವರುಗಳಿಗಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಡೇವಿಡ್ ವಾರ್ನರ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಅಲ್ಪ ಸ್ಕೋರುಗಳನ್ನು ಕಂಡ ಈ ಪಂದ್ಯದಲ್ಲಿ ಡೆಲ್ಲಿ ತಂಡ ಏಳು ರನ್‌ಗಳಿಂದ ಸನ್‌ರೈಸರ್ಸ್ ವಿರುದ್ಧ ರೋಚಕ ಗೆಲುವು ದಾಖಲಿಸಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ತಂಡವು 9 ವಿಕೆಟ್‌ಗೆ 144 ರನ್ ಗಳಿಸಿದ್ದರೆ, ಸನ್‌ರೈಸರ್ಸ್ ತಂಡ ತನ್ನ ಪಾಲಿನ ಓವರುಗಳಲ್ಲಿ 6 ವಿಕೆಟ್‌ಗೆ 137 ರನ್ ಗಳಿಸಲಷ್ಟೇ ಶಕ್ತವಾಗಿತ್ತು.

ಫುಟ್‌ಬಾಲ್: ಒಡಿಶಾ ಎಫ್‌ಸಿಗೆ ಸೂಪರ್ ಕಪ್ ಗರಿ

ಫೈನಲ್‌ನಲ್ಲಿ ಎಡವಿದ ಬಿಎಫ್‌ಸಿ

ಕೋಯಿಕ್ಕೋಡ್: ಬೆಂಗಳೂರು ಎಫ್‌ಸಿ ತಂಡದವರು ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಎಡವಿ 'ರನ್ನರ್ಸ್ ಅಪ್' ಆದರು.

ಇಲ್ಲಿನ ಇಎಂಎಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯನ್ನು 2–1 ರಲ್ಲಿ ಜಯಿಸಿದ ಒಡಿಶಾ ಎಫ್‌ಸಿ ತಂಡ ಕಿರೀಟ ಮುಡಿಗೇರಿಸಿಕೊಂಡಿತು.

ಒಡಿಶಾ ತಂಡದ ಎರಡೂ ಗೋಲುಗಳನ್ನು ಗಳಿಸಿದ ಡೀಗೊ ಮೌರಿಸಿಯೊ ಅವರು ಗೆಲುವಿನ ರೂವಾರಿ ಆದರು. ಬಿಎಫ್‌ಸಿ ತಂಡದ ಏಕೈಕ ಗೋಲನ್ನು ಸುನಿಲ್ ಚೆಟ್ರಿ ಅವರು 89ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಗಳಿಸಿದರು.

ಬ್ರೆಜಿಲ್‌ನ ಆಟಗಾರ ಮೌರಿಸಿಯೊ 23ನೇ ನಿಮಿಷದಲ್ಲಿ ಒಡಿಶಾ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಅವರು ಫ್ರೀಕಿಕ್‌ನಲ್ಲಿ ಒದ್ದ ಚೆಂಡನ್ನು ಬಿಎಫ್‌ಸಿ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಹಿಡಿತಕ್ಕೆ ಪಡೆಯಲು ವಿಫಲರಾದರು. ಅವರ ಕೈಜಾರಿದ ಚೆಂಡು ಗೋಲು ಲೈನ್ ದಾಟಿತು. ಮತ್ತೆ ಕಾಲ್ಚಳಕ ಮೆರೆದ ಮೌರಿಸಿಯೊ 38ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಮೊದಲ ಅವಧಿಯ ಆಟದಲ್ಲಿ ಒಡಿಶಾ ತಂಡ ಪೂರ್ಣ ಪ್ರಾಬಲ್ಯ ಮೆರೆಯಿತು.

89ನೇ ನಿಮಿಷದಲ್ಲಿ ಚೆಟ್ರಿ ಗೋಲು ಗಳಿಸಿ ಸೋಲಿನ ಅಂತರ ತಗ್ಗಿಸಿದರು.

ಒಡಿಶಾ ಎಫ್‌ಸಿ ಆಟಗಾರರ ಗೆಲುವಿನ ಸಂಭ್ರಮ –ಟ್ವಿಟರ್ ಚಿತ್ರ

ವಿಶ್ವ 10ಕೆ: ಸಾನ್ಯಾ ಪ್ರಚಾರ ರಾಯಭಾರಿ

ಬೆಂಗಳೂರು: 400 ಮೀಟರ್ಸ್ ಓಟದಲ್ಲಿ ಮಾಜಿ ಒಲಿಂಪಿಕ್ ಹಾಗೂ ವಿಶ್ವ ಚಾಂಪಿಯನ್ ಸಾನ್ಯಾ ರಿಚರ್ಡ್ಸ್ ರಾಸ್ ಅವರು ಬೆಂಗಳೂರು ವಿಶ್ವ 10ಕೆ ಸ್ಪರ್ಧೆಯ ಅಂತರರಾಷ್ಟ್ರೀಯ ಪ್ರಚಾರ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ. 15ನೇ ಆವೃತ್ತಿಯ 10ಕೆ ಸ್ಪರ್ಧೆಯು ಮೇ 21ರಂದು ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ನಿಗದಿಯಾಗಿದೆ. ಸಾನ್ಯಾ ಅಮೆರಿಕದ ಅಥ್ಲೀಟ್ ಆಗಿದ್ದಾರೆ.

ಸ್ಟರ್ಲಿಂಗ್, ಕ್ಯಾಂಫರ್ ಶತಕ: ಐರ್ಲೆಂಡ್ ದಾಖಲೆ ಮೊತ್ತ

ಗಾಲೆ, ಶ್ರೀಲಂಕಾ (ಎಎಫ್‌ಪಿ): ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಪಾಲ್ ಸ್ಟರ್ಲಿಂಗ್ (103) ಮತ್ತು ಕರ್ಟಿಸ್ ಕ್ಯಾಂಫರ್ (111) ಅವರ ಶತಕಗಳ ನೆರವಿನಿಂದ ಐರ್ಲೆಂಡ್ ತಂಡ ಟೆಸ್ಟ್ ಕ್ರಿಕೆಟ್‌ನಲ್ಲಿ ತನ್ನ ಅತೀ ಹೆಚ್ಚಿನ ಮೊತ್ತ ದಾಖಲಿಸಿತು. ಶ್ರೀಲಂಕಾ ವಿರುದ್ಧ ಎರಡನೇ ಟೆಸ್ಟ್‌ನ ಎರಡನೇ ದಿನವಾದ ಮಂಗಳವಾರ ಐರ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 492 ರನ್‌ಗಳ ದಾಖಲೆ ಮೊತ್ತ ಗಳಿಸಿತು.

ಇವರಿಬ್ಬರು ಐರ್ಲೆಂಡ್ ಪರ ಶತಕ ಹೊಡೆದ ಮೂರು ಮತ್ತು ನಾಲ್ಕನೇ ಆಟಗಾರರೆನಿಸಿದರು. ಶ್ರೀಲಂಕಾ ವಿಕೆಟ್ ನಷ್ಟವಿಲ್ಲದೇ 81 ರನ್ ಗಳಿಸಿ ದಿನದಾಟ ಪೂರೈಸಿತು. ನಿಶಾನ್ ಮದುಷ್ಕ ಮತ್ತು ದಿಮುತ್ ಕರುಣಾರತ್ನ ಕ್ರಮವಾಗಿ 41 ಮತ್ತು 39 ರನ್ ಗಳಿಸಿ ಆಟವಾಡುತ್ತಿದ್ದಾರೆ. 2017ರಲ್ಲಿ ಐರ್ಲೆಂಡ್ ಟೆಸ್ಟ್ ಮಾನ್ಯತೆ ಪಡೆದಿತ್ತು. 2018ರಲ್ಲಿ ಪಾಕಿಸ್ತಾನ ವಿರುದ್ಧ ತನ್ನ ಮೊದಲ ಟೆಸ್ಟ್ ಪಂದ್ಯದಲ್ಲಿ ಐರ್ಲೆಂಡ್ ಈ ಹಿಂದಿನ ಅತ್ಯಧಿಕ ಮೊತ್ತ (339) ದಾಖಲಿಸಿತ್ತು. ಸೋಮವಾರ, ಮೊದಲ ದಿನದಾಟ ಮುಗಿದಾಗ ಐರ್ಲೆಂಡ್ 4 ವಿಕೆಟ್‌ಗೆ 319 ರನ್ ಗಳಿಸಿತ್ತು. ಈ ಪಂದ್ಯದಲ್ಲಿ ಸ್ಟರ್ಲಿಂಗ್ ಅವರು ಮೂರೂ ಮಾದರಿಗಳಲ್ಲಿ ಶತಕ ಹೊಡೆದ ಆಟಗಾರ ಎನಿಸಿದರು.

ಕುಸ್ತಿಪಟುಗಳ ಪ್ರತಿಭಟನೆ: ಪೊಲೀಸರಿಗೆ 'ಸುಪ್ರೀಂ' ನೋಟಿಸ್

ಬ್ರಿಜ್‌ಭೂಷಣ್ ಬಂಧನಕ್ಕೆ ಪಟ್ಟು

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ (ಡಬ್ಲ್ಯುಎಫ್‌ಐ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದೇಶದ ಪ್ರಮುಖ ಕುಸ್ತಿಪಟುಗಳು ಪ್ರತಿಭಟನೆ ತೀವ್ರಗೊಳಿಸಿದ್ದಾರೆ.

ಬ್ರಿಜ್‌ಭೂಷಣ್ ಬಂಧಿಸುವವರೆಗೆ ತಾವು ಹಿಂದೆ ಸರಿಯುವುದಿಲ್ಲ ಎಂದು ಪ್ರತಿಭಟನನಿರತರು ಪಟ್ಟುಹಿಡಿದಿದ್ದಾರೆ.

ಬ್ರಿಜ್‌ಭೂಷಣ್ ಅವರು ತೋಳ್ಬಲ ಪ್ರದರ್ಶನ ಮತ್ತು ಲಂಚ ನೀಡುವ ಮೂಲಕ ಸಂತ್ರಸ್ತರನ್ನು ಮಣಿಸುವ ಯತ್ನ ನಡೆಸಿದ್ದಾರೆ ಎಂದು ಕುಸ್ತಿಪಟುಗಳಾದ ವಿನೇಶಾ ಪೋಗಟ್, ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪೂನಿಯಾ ಆಪಾದಿಸಿದ್ದಾರೆ.

'ಸಂತ್ರಸ್ತರ ಹೆಸರುಗಳನ್ನು ದೆಹಲಿ ಪೊಲೀಸರು ಬ್ರಿಜ್‌ಭೂಷಣ್ ಅವರಿಗೆ ಗೊತ್ತಾಗುವಂತೆ ಸೋರಿಕೆ ಮಾಡಿದ್ದಾರೆ. ಹರಿಯಾಣ ಕುಸ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಕೇಶ್ ಮತ್ತು ಕೋಚ್ ಮಹಾವೀರ್ ಪ್ರಸಾದ್ ಬಿಷ್ಣೋಯಿ ಅವರನ್ನು ಬಳಸಿಕೊಂಡು ಬ್ರಿಜ್‌ಭೂಷಣ್, ದೂರು ನೀಡಿರುವ ಮಹಿಳಾ ಕುಸ್ತಿಪಟುಗಳ ಕುಟುಂಬಗಳನ್ನು ಹೆದರಿಸುತ್ತಿದ್ದಾರೆ' ಎಂದು ವಿನೇಶಾ ಆರೋಪಿಸಿದ್ದಾರೆ.

ಆದರೆ ಮಹಾವೀರ್ ಪ್ರಸಾದ್ ಈ ಆರೋಪವನ್ನು ಅಲ್ಲಗಳೆದಿದ್ದಾರೆ.

'ಕೇವಲ ಎಫ್‌ಐಆರ್ ದಾಖಲಿಸಿದ ಮಾತ್ರಕ್ಕೆ ನಾವು ಇಲ್ಲಿಂದ ಹೋಗುವುದಿಲ್ಲ. ಆತನನ್ನು (ಬ್ರಿಜ್‌ಭೂಷಣ್) ಬಂಧಿಸಬೇಕು. ಆತ ಹೊರಗಿದ್ದರೆ ನಾವು ಸುರಕ್ಷಿತವಾಗಿರುವುದಿಲ್ಲ. ಆತ ರಾಜಾರೋಷವಾಗಿ ಓಡಾಡಿಕೊಂಡಿದ್ದರೆ ನಾವು ಹೇಗೆ ತರಬೇತಿ ನಡೆಸುವುದು' ಎಂದು ವಿನೇಶಾ ಪ್ರಶ್ನಿಸಿದ್ದಾರೆ.

ರಾಜಕೀಯ ಬೆಂಬಲ: ಹರಿಯಾಣದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಮುಖಂಡರಾದ ಭೂಪಿಂದರ್ ಸಿಂಗ್ ಹೂಡಾ, ಉದಿತ್ ರಾಜ್, ಸಿಪಿಎಂ ನಾಯಕಿ ಬೃಂದಾ ಕಾರಟ್, ಭಾರತ ಕಿಸಾನ್ ಯೂನಿಯನ್ (ಬಿಕೆಯು) ಪ್ರತಿನಿಧಿ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿದ ಪ್ರಮುಖರಲ್ಲಿ ಸೇರಿದ್ದಾರೆ.

ದೆಹಲಿ ಪೊಲೀಸರಿಗೆ ನೋಟಿಸ್: ಸಿಂಗ್ ತಮಗೆ ಕಿರುಕುಳ ನೀಡಿದ್ದಾರೆಂದು ಏಳು ಮಂದಿ ಮಹಿಳಾ ಕುಸ್ತಿಪಟುಗಳು ನೀಡಿರುವ ದೂರು ಕುರಿತು ಎಫ್‌ಐಆರ್ ದಾಖಲಿಸಿಕೊಳ್ಳದಿರುವುದಕ್ಕೆ ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ. ಇವುಗಳನ್ನು 'ಆರೋಪಗಳು ಗಂಭೀರ ಸ್ವರೂಪದ್ದೆಂದು' ಪರಿಗಣಿಸಬೇಕು ಎಂದು ಕೋರ್ಟ್ ಹೇಳಿದೆ.

ಕುಸ್ತಿಪಟುಗಳಾದ ವಿನೇಶಾ ಪೋಗಟ್ ಮತ್ತು ಸಾಕ್ಷಿ ಮಲಿಕ್– ಪಿಟಿಐ ಚಿತ್ರ

ಡಬ್ಲ್ಯುಟಿಸಿ ಫೈನಲ್‌ಗೆ ಭಾರತ ತಂಡ: ಮರಳಿದ ರಹಾನೆ– ಸೂರ್ಯಗೆ ಕೊಕ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಜೂನ್ ಆರಂಭದಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್ ಷಿಪ್ (ಡಬ್ಲ್ಯುಟಿಸಿ) ಫೈನಲ್‌ಗೆ ಬಿಸಿಸಿಐ ಮಂಗಳವಾರ 15 ಆಟಗಾರರ ಭಾರತ ತಂಡವನ್ನು ಪ್ರಕಟಿಸಿದೆ.

ಅಜಿಂಕ್ಯ ರಹಾನೆ

ಐಪಿಎಲ್‌ನಲ್ಲಿ ಆಕ್ರಮಣಕಾರಿ ಆಟದ ಪ್ರದರ್ಶನ ನೀಡಿರುವ ಅಜಿಂಕ್ಯ ರಹಾನೆ ಅವರು ಭಾರತ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

ಡಬ್ಲ್ಯುಟಿಸಿ ಫೈನಲ್ ಪಂದ್ಯ ಜೂನ್ 7ರಿಂದ 11ರವರೆಗೆ ನಡೆಯಲಿದೆ. ಪ್ರವಾಸಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯಲ್ಲಿ ಆಡಿದ್ದ ಬಿರುಸಿನ ಆಟಗಾರ ಸೂರ್ಯಕುಮಾರ್ ಯಾದವ್, ಸ್ಪಿನ್ನರ್ ಕುಲದೀಪ್ ಯಾದವ್, ಯುವ ವಿಕೆಟ್ ಕೀಪರ್ ಇಶಾನ್ ಕಿಶನ್ ಅವರನ್ನು ಕೈಬಿಡಲಾಗಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಯ್ಕೆ ಸಮಿತಿ, ಕಾರ್ಯದರ್ಶಿ ಜಯ್ ಶಾ ಮತ್ತು ನಾಯಕ ರೋಹಿತ್ ಶರ್ಮಾ, ಕೋಚ್ ರಾಹುಲ್ ದ್ರಾವಿಡ್ ಅವರು ತಂಡದ ಆಯ್ಕೆಗೆ ಸೋಮವಾರ ಸಂಜೆ ಸಭೆ ಸೇರಿದ್ದರು.

ಶ್ರೇಯಸ್ ಅಯ್ಯರ್ ಬೆನ್ನು ನೋವಿನಿಂದ ಬಳಲುತ್ತಿದ್ದು, ಡಬ್ಲ್ಯುಟಿಸಿ ಫೈನಲ್‌ಗೆ ಅಲಭ್ಯವಾಗಿರುವ ಕಾರಣ ರಹಾನೆ ಅವರ ಪುನರಾಗಮ ನಿರೀಕ್ಷಿತವಾಗಿತ್ತು. ಬೆನ್ನಿನ ಕೆಳಭಾಗದ ನೋವಿನಿಂದಾಗಿ ಅವರು ಇಂಗ್ಲೆಂಡ್‌ನಲ್ಲಿ ಇತ್ತೀಚೆಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

34 ವರ್ಷದ ರಹಾನೆ 2002ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾ ಕೇಪ್‌ಟೌನ್‌ನಲ್ಲಿ ಕೊನೆಯ ಬಾರಿ ಟೆಸ್ಟ್ ಪಂದ್ಯ ಆಡಿದ್ದರು. ತಂಡದಲ್ಲಿ ಅನುಭವಕ್ಕೆ ಆದ್ಯತೆ ನೀಡಲೂ ರಹಾನೆ ಅವರನ್ನು ಆಯ್ಕೆ ಮಾಡಲಾಗಿದೆ. ಐಪಿಎಲ್‌ನಲ್ಲಿ ಅವರು ಏಳು ಪಂದ್ಯಗಳಲ್ಲಿ 190ರ ಸ್ಟ್ರೈಕ್‌ರೇಟ್‌ನಲ್ಲಿ ಆಟವಾಡಿದ್ದು, ಗಮನ ಸೆಳೆದಿದೆ.

ತಂಡಕ್ಕೆ ಉಪನಾಯಕನನ್ನು ಹೆಸರಿಸಿಲ್ಲ. ಆದರೆ ಆಸ್ಟ್ರೇಲಿಯಾ ವಿರುದ್ಧ ಕೊನೆಯ ಎರಡು ಟೆಸ್ಟ್‌ಗಳಿಗೆ ಉಪನಾಯಕರಾಗಿದ್ದ ಚೇತೇಶ್ವರ ಪೂಜಾರ ಅವರಿಗೆ ಈ ಹೊಣೆಯನ್ನು ಮತ್ತೆ ನೀಡುವ ಸಾಧ್ಯತೆ ಇದೆ.

ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಚೇತೇಶ್ವರ ಪೂಜಾರ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ಕೆ.ಎಲ್.ರಾಹುಲ್, ಕೆ.ಎಸ್.ಭರತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್ ಮತ್ತು ಜಯದೇವ ಉನದ್ಕತ್.

ಟಿಟಿ: ಭಾರತ ತಂಡದಲ್ಲಿ ಅರ್ಚನಾ

ಜಲಂಧರ್ (ಪಿಟಿಐ): ಶರತ್ ಕಮಲ್ ಮತ್ತು ಮಣಿಕಾ ಬಾತ್ರ ಅವರು ಡರ್ಬನ್‌ನಲ್ಲಿ ಮೇ 20 ರಿಂದ 28ರ ವರೆಗೆ ನಡೆಯಲಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಅರ್ಚನಾ

ಟೇಬಲ್ ಟೆನಿಸ್ ಫೆಡರೇಷನ್ ಆಫ್ ಇಂಡಿಯಾ (ಟಿಟಿಎಫ್‌ಐ) ಆಯ್ಕೆ ಸಮಿತಿಯು 59ನೇ ಆವೃತ್ತಿಯ ಚಾಂಪಿಯನ್‌ಷಿಪ್‌ಗೆ 11 ಸದಸ್ಯರ ಭಾರತ ತಂಡವನ್ನು ಮಂಗಳವಾರ ಪ್ರಕಟಿಸಿತು.

ಐವರು ಪುರುಷರು ಮತ್ತು ಆರು ಮಂದಿ ಮಹಿಳೆಯರು ತಂಡದಲ್ಲಿದ್ದಾರೆ. ಕರ್ನಾಟಕದ ಅರ್ಚನಾ ಕಾಮತ್ ಅವರು ಸ್ಥಾನ ಪಡೆದಿದ್ದಾರೆ.

ಪುರುಷರ ವಿಭಾಗದಲ್ಲಿ ಶರತ್ ಅಲ್ಲದೆ ಜಿ.ಸತ್ಯನ್, ಮಾನುಷ್ ಶಾ, ಹರ್ಮೀತ್ ದೇಸಾಯಿ ಮತ್ತು ಮಾನವ್ ಠಾಕರ್ ಇದ್ದಾರೆ. ಮಹಿಳೆಯರ ವಿಭಾಗದಲ್ಲಿ ಮಣಿಕಾ ಮತ್ತು ಅರ್ಚನಾ ಜತೆಗೆ ಶ್ರೀಜಾ ಅಕುಲಾ, ಸುತೀರ್ಥಾ ಮುಖರ್ಜಿ, ರೀತ್ ರಿಷ್ಯಾ ಮತ್ತು ದಿಯಾ ಚಿತಾಳೆ ಅವರು ಕಣಕ್ಕಿಳಿಯಲಿದ್ದಾರೆ.

ಸುಭಜಿತ್ ಸಹಾ ಮತ್ತು ಮಮತಾ ಪ್ರಭು ಅವರು ಕ್ರಮವಾಗಿ ಪುರುಷ ಹಾಗೂ ಮಹಿಳಾ ತಂಡಗಳ ಕೋಚ್ ಆಗಿದ್ದಾರೆ.

ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಇಂದಿನಿಂದ

ಸಿಂಧು, ಲಕ್ಷ್ಯ ಸೇನ್ ಕಣಕ್ಕೆ

ದುಬೈ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಸೇರಿದಂತೆ ಭಾರತದ ಪ್ರಮುಖ ತಾರೆಗಳು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದು, ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿದ್ದಾರೆ.

40ನೇ ಆವೃತ್ತಿಯ, ಪ್ರತಿಷ್ಠಿತ ಚಾಂಪಿಯನ್‌ಷಿಪ್‌ನ ಮುಖ್ಯ ಸುತ್ತಿನ ಪಂದ್ಯಗಳು ಬುಧವಾರ ಇಲ್ಲಿ ಆರಂಭವಾಗಲಿವೆ.

ಪ್ರಮುಖ ಆಟಗಾರರು ಲಯದಲ್ಲಿರದ ಕಾರಣ ಭಾರತ ಈ ಬಾರಿ ಪದಕದೊಂದಿಗೆ ಮರಳುವ ಸಾಧ್ಯತೆ ಕಡಿಮೆ ಎನಿಸಿದೆ.

ಟೂರ್ನಿಯಲ್ಲಿ ಭಾರತ ಇದುವರೆಗೆ 17 ಪದಕಗಳನ್ನು ಜಯಿಸಿದೆ. ಅವುಗಳ ಪೈಕಿ ಏಕೈಕ ಚಿನ್ನದ ಪದಕ ದಕ್ಕಿದ್ದು 1965ರಲ್ಲಿ ದಿನೇಶ್ ಖನ್ನಾ ಅವರಿಂದ.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಸಿಂಧು ಅವರಿಗೆ ತೈವಾನ್‌ನ ವೆನ್ ಚಿ ಸು ಸವಾಲು ಎದುರಾಗಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಪ್ರಣಯ್ ಅವರು ಮ್ಯಾನ್ಮಾರ್‌ನ ಫೋನ್ ಪಯೆ ನೈಂಗ್ ಎದುರು, ಕಿದಂಬಿ ಶ್ರೀಕಾಂತ್ ಬಹ್ರೇನ್‌ನ ಅದ್ನಾನ್ ಇಬ್ರಾಹಿಂ ಎದುರು ಆಡಲಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಅವರಿಗೆ ಕಠಿಣ ಸವಾಲು ಎದುರಾಗಿದ್ದು, ಸಿಂಗಪುರದ ಲೋಹ್ ಕೀನ್ ಯೆವ್ ಎದುರು ಕಣಕ್ಕಿಳಿಯಬೇಕಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋದ್, ಆಕರ್ಷಿ ಕಶ್ಯಪ್, ಡಬಲ್ಸ್‌ನಲ್ಲಿ ತ್ರಿಶಾ ಜೋಲಿ–ಗಾಯತ್ರಿ ಗೋಪಿಚಂದ್, ಅಶ್ವಿನಿ ಭಟ್– ಶಿಖಾ ಗೌತಮ್, ಹರಿತಾ–ಮನಳಿಯಿಲ್–ಆಶ್ನಾ ರಾಯ್, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಎಂ.ಆರ್. ಅರ್ಜುನ್–ಧ್ರುವ ಕಪಿಲ, ಕೃಷ್ಣಪ್ರಸಾದ್ ಗರಗ–ವಿಷ್ಣುವರ್ಧನ ಗೌಡ್ ಪಂಜಾಲ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಪಿ.ವಿ. ಸಿಂಧು

ಸಿಕ್ಸ್ ಕ್ರಿಕೆಟ್ ಅಕಾಡೆಮಿಗೆ ಜಯ

ಬೆಂಗಳೂರು: ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡ ಟೈಗರ್ ಕಪ್ (14 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಸ್ಟ್ ಕ್ರಿಕೆಟ್ ಅಕಾಡೆಮಿ ತಂಡದ ಮೇಲೆ ಮಂಗಳವಾರ 10 ವಿಕೆಟ್‌ಗಳ ಸುಲಭ ಜಯ ಪಡೆಯಿತು.

ಇನ್ನೊಂದು ಪಂದ್ಯದಲ್ಲಿ ಕಪಿಲ್ ಸಿ.ಸಿ. ತಂಡ 2 ವಿಕೆಟ್‌ಗಳಿಂದ ಆರ್‌ಎಕ್ಸ್‌ಸಿಎ ವಿರುದ್ಧ ಗೆದ್ದಿತು.

ಸ್ಕೋರುಗಳು: ಜಸ್ಟ್ ಕ್ರಿಕೆಟ್ ಅಕಾಡೆಮಿ: 15.4 ಓವರುಗಳಲ್ಲಿ 52 (ಪಾರ್ಥ ಮದನ್ 12ಕ್ಕೆ5); ಸಿಕ್ಸ್ ಕ್ರಿಕೆಟ್ ಅಕಾಡೆಮಿ: 5.4 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 54 (ಕೃಷ್ ಧಾಮಿ 26).
ಆರ್‌ಎಕ್ಸ್‌ಸಿಎ: 25.2 ಓವರುಗಳಲ್ಲಿ 105 (ರಜತ್ ಎಸ್. 26ಕ್ಕೆ3); ಕಪಿಲ್ ಸಿ.ಸಿ: 22.5 ಓವರುಗಳಲ್ಲಿ 8 ವಿಕೆಟ್‌ಗೆ 108 (ಬಿ.ಹರಿಹರನ್ 34; ಅದ್ವಯ ದೇಷ್ಕರ್ 21ಕ್ಕೆ3).

ಬ್ಯಾಡ್ಮಿಂಟನ್ ತಂಡದ ಆಯ್ಕೆಗೆ ಟ್ರಯಲ್ಸ್

ನವದೆಹಲಿ (ಪಿಟಿಐ): ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತ ಬ್ಯಾಡ್ಮಿಂಟನ್ ತಂಡವನ್ನು ಆಯ್ಕೆ ಮಾಡಲು ಭಾರತ ಬ್ಯಾಡ್ಮಿಂಟನ್ ಸಂಸ್ಥೆ ಮೇ 4 ರಿಂದ 7ರವರೆಗೆ ಆಯ್ಕೆ ಟ್ರಯಲ್ಸ್ ನಡೆಯಲಿದೆ.

ತೆಲಂಗಾಣದ ಜ್ವಾಲಾ ಗುಟ್ಟಾ ಅಕಾಡೆಮಿ ಆಫ್ ಎಕ್ಸಲೆನ್ಸ್‌ನಲ್ಲಿ ಟ್ರಯಲ್ಸ್ ನಿಗದಿಯಾಗಿದೆ.

ಏಷ್ಯನ್ ಕ್ರೀಡಾಕೂಟ ಸೆ. 23 ರಿಂದ ಅ. 8ರವರೆಗೆ ಚೀನಾ ಹಾಂಗ್‌ಝೌನಲ್ಲಿ ನಡೆಯಲಿದೆ. ವಿಶ್ವದ 11ನೇ ಕ್ರಮಾಂಕದ ಆಟಗಾರ್ತಿ ಪಿ.ವಿ. ಸಿಂಧು, 9ನೇ ಕ್ರಮಾಂಕದ ಆಟಗಾರ ಎಚ್.ಎಸ್.ಪ್ರಣಯ್, ಡಬಲ್ಸ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ವಿಶ್ವದ 6ನೇ ಕ್ರಮಾಂಕ), ತ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ (19) ಅವರು ನೇರವಾಗಿ ಆಯ್ಕೆಯಾಗಿದ್ದಾರೆ. ಏಪ್ರಿಲ್ 18ರ ಬಿಡಬ್ಲ್ಯುಎಫ್ ಕ್ರಮಾಂಕಪಟ್ಟಿಯ ಪ್ರಕಾರ ಮೊದಲ 20 ಸ್ಥಾನಗಳ ಒಳಗಿರುವವರಿಗೆ ಈ ಅವಕಾಶವಿದೆ. ವಿಶ್ವದ 23ನೇ ನಂಬರ್ ಆಟಗಾರ ಕಿಡಂಬಿ ಶ್ರೀಕಾಂತ್, ಕಾಮನ್‌ವೆಲ್ತ್ ಗೇಮ್ಸ್ ವಿಜೇತ ಲಕ್ಷ್ಯ ಸೇನ್ (24ನೇ ಕ್ರಮಾಂಕ), ಪ್ರಿಯಾಂಶು ರಾಜಾವತ್, ರಾಷ್ಟ್ರೀಯ ಚಾಂಪಿಯನ್ ಮಿಥುನ್ ಮಂಜುನಾಥ್, ಟೋಕಿಯೊ ಒಲಿಂಪಿಕ್ಸ್ ಚಾಂಪಿಯನ್ ಬಿ.ಸಾಯಿ ಪ್ರಣೀತ್ ಪುರುಷರ ಸಿಂಗಲ್ಸ್ ಟ್ರಯಲ್ಸ್‌ನಲ್ಲಿ, ಸೈನಾ ನೆಹ್ವಾಲ್, ಆಕರ್ಷಿ ಕಶ್ಯಪ್, ಮಾಳವಿಕಾ ಬನ್ಸೋಡ್, ಅಶ್ಮಿತಾ ಚಲಿಹಾ, ಉನ್ನತಿ ಹೂಡ ಮಹಿಳೆಯರ ಟ್ರಯಲ್ಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

1.0L Turbo Boosterjet Engine with Progressive Smart Hybrid

360 View Camera

Head Up Display

NEXTre' Rear Combination Lights

In-Built Suzuki Connect

Wireless Charger

VISIT YOUR NEAREST NEXA DEALERSHIP OR LOG ON TO WWW.NEXAEXPERIENCE.COM TO BOOK YOUR TEST DRIVE.

Contact us at
1800-200-[6392]
1800-102-[NEXA]
www.nexaexperience.com
NOW YOU CAN ALSO BOOK ONLINE

CONTACT YOUR NEAREST NEXA DEALER: WEST BANGALORE: NEXA NAGARBHAVI (BIMAL AUTO AGENCY PH: 08030693069), **NEXA RAJAJINAGAR** (VARUN MOTORS PVT. LTD. PH: 8884000042), **NEXA RR NAGAR** (KALYANI MOTORS PH: 9590990011), **NORTH BANGALORE: NEXA HEBBAL ORR** (VARUN MOTORS PVT. LTD. PH: 9513838777), **NEXA YELAHANKA** (MANDOVI MOTORS PVT. LTD. PH: 9916805500), **EAST BANGALORE: NEXA ORR MARATHALLI** (BIMAL AUTO AGENCY PH: 08030693069), **NEXA BANASWADI** (KALYANI MOTORS PH: 9590990011), **CENTRAL BANGALORE: NEXA MUSEUM ROAD** (PRATHAM MOTORS PH: 9880006006), **NEXA PALACE** (MANDOVI MOTORS PH: 7022623068), **SOUTH BANGALORE: NEXA ELECTRONIC CITY** (SURAKSHAA CAR CARE PVT. LTD. PH: 80-25732229, 8884442229), **NEXA JP NAGAR** (KALYANI MOTORS PH: 9590990011), **NEXA SARJAPUR ROAD** (PRATHAM MOTORS PH: 9008455550), **NEXA KORAMANGALA** (KATARIA AUTOMOBILES PVT. LTD. PH: 8046837002), **TUMKUR: NEXA SIRA ROAD** (SAKETH AUTOMOBILES PH: 9900500051).

Accessories and features shown may not be part of standard equipment. Black glass on the vehicle is due to lighting effect. Images used are for illustration purposes only.